# ಮೋಟಾರು ವಾಹನಗಳ ಅಧಿನಿಯಮ, 1988

ವಿಷಯಾನುಕ್ರಮಣಿಕೆ

ಪ್ರಕರಣಗಳು : **ಪುಟ ಸಂಖ್ಯೆ**

ಅಧ್ಯಾಯ - **I**

ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1

2. ಪರಿಭಾಷೆಗಳು 1


ಅಧ್ಯಾಯ - **II**

ಮೋಟಾರು ವಾಹನಗಳ ಚಾಲಕರಿಗೆ ಲೈಸೆನ್ಸು ನೀಡಿಕೆ


3. ಚಾಲನ ಲೈಸನ್ಸಿನ ಅವಶ್ಯಕತೆ 5

4. ಮೋಟಾರು ವಾಹನಗಳನ್ನು ನಡೆಸುವ ಬಗ್ಗೆ ವಯೋಮಿತಿ 5

5. 3 ಮತ್ತು 4ನೇ ಪ್ರಕರಣಗಳ ಉಲ್ಲಂಘನೆಯ ಬಗ್ಗೆ ಮೋಟಾರು ವಾಹನಗಳ ಮಾಲೀಕರ ಜವಾಬ್ದಾರಿ 6

6. ಚಾಲನ ಲೈಸನ್ಸುಗಳನ್ನು ಹೊಂದಿರುವ ಬಗ್ಗೆ ನಿರ್ಬಂಧಗಳು 6

7. ಕೆಲವು ವಾಹನಗಳಿಗೆ ಕಲಿಕೆಯ ಲೈಸನ್ಸುಗಳನ್ನು ನೀಡುವ ಬಗ್ಗೆ ನಿರ್ಬಂಧಗಳು 6

8. ಕಲಿಕೆಯ ಲೈಸನ್ಸ್ ನೀಡಿಕೆ 6

9. ಚಾಲನ ಲೈಸನ್ಸು ನೀಡಿಕೆ 7

10. ಚಾಲನ ಲೈಸನ್ಸಿನ ನಮೂನೆ ಮತ್ತು ಒಳಾಂಶಗಳು 9

11. ಚಾಲನ ಲೈಸನ್ಸಿಗೆ ಸೇರ್ಪಡೆಗಳು 10

12. ಮೋಟಾರು ವಾಹನಗಳ ಚಾಲನೆಯಲ್ಲಿ ಶಿಕ್ಷಣ ನೀಡಲು ಶಾಲೆಗಳು ಅಥವಾ ಸಂಸ್ಥೆಗಳಿಗೆ ಲೈಸನ್ಸ್ ನೀಡಿಕೆ ಮತ್ತು ಅವುಗಳ ವಿನಿಯಮನ 10

13. ಮೋಟಾರು ವಾಹನಗಳ ಚಾಲನ ಲೈಸನ್ಸ್‌ಗಳ ಪರಿಣಾಮದ ವ್ಯಾಪ್ತಿ 11

14. ಮೋಟಾರು ವಾಹನಗಳ ಚಾಲನೆ ಲೈಸನ್ಸ್‌ಗಳ ಚಲಾವಣೆ 11

15. ಚಾಲನ ಲೈಸನ್ಸುಗಳ ನವೀಕರಣ 12

16. ಕಾಯಿಲೆ ಅಥವಾ ಅಸಮರ್ಥತೆಯ ಆಧಾರದ ಮೇರೆಗೆ ಚಾಲನ ಲೈಸನ್ಸನ್ನು ರದ್ದುಗೊಳಿಸುವುದು 12

17. ಚಾಲನ ಲೈಸನ್ಸನ್ನು ನಿರಾಕರಿಸುವ ಅಥವಾ ರದ್ದುಗೊಳಿಸುವ ಆದೇಶಗಳು ಮತ್ತು ಅದರ ಮೇಲಿನ ಅಪೀಲುಗಳು 13

18. ಕೇಂದ್ರ ಸರ್ಕಾರಕ್ಕೆ ಸೇರಿದ ಮೋಟಾರು ವಾಹನಗಳ ಚಾಲನೆಗೆ ಚಾಲನ ಲೈಸನ್ಸ್ 13

19. ಚಾಲನ ಲೈಸನ್ಸನ್ನು ಧಾರಣ ಮಾಡದಂತೆ ಅನರ್ಹಗೊಳಿಸಲು ಅಥವಾ ಅಂಥ ಲೈಸನ್ಸನ್ನು ರದ್ದುಗೊಳಿಸಲು ಲೈಸನ್ಸ್ ನೀಡಿಕೆ ಪ್ರಾಧಿಕಾರದ ಅಧಿಕಾರ 13

20. ಅನರ್ಹಗೊಳಿಸಲು ನ್ಯಾಯಾಲಯದ ಅಧಿಕಾರ 14

21. ಕೆಲವು ಸಂದರ್ಭಗಳಲ್ಲಿ ಚಾಲನ ಲೈಸನ್ಸನ್ನು ಅಮಾನತುಗೊಳಿಸುವುದು 15

22. ಅಪರಾಧ ನಿರ್ಣಯವಾದ ಮೇಲೆ ಚಾಲನ ಲೈಸನ್ಸಿನ ಅಮಾನತು ಅಥವಾ ರದ್ದಿಯಾತಿ 16

23. ಅನರ್ಹತೆಯ ಆದೇಶದ ಪರಿಣಾಮ 17

24. ಹಿಂಬರಹ 17

25. ಹಿಂಬರಹದ ವರ್ಗಾವಣೆ ಮತ್ತು ಹಿಂಬರಹವಿಲ್ಲದೆ ಚಾಲನ ಲೈಸನ್ಸು ನೀಡಿಕೆ 18

26. ಚಾಲನ ಲೈಸನ್ಸ್‌ಗಳ ರಾಜ್ಯ ರಿಜಿಸ್ಟರುಗಳ ನಿರ್ವಹಣೆ 18

27. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ 19

28. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 20

ಅಧ್ಯಾಯ - **III**

ಮಜಲು ವಾಹನಗಳ ನಿರ್ವಾಹಕರಿಗೆ ಲೈಸನ್ಸು ನೀಡಿಕೆ

29. ನಿರ್ವಾಹಕರ ಲೈಸನ್ಸಿನ ಅವಶ್ಯಕತೆ 21

30. ನಿರ್ವಾಹಕನ ಲೈಸನ್ಸು ನೀಡಿಕೆ 21

31. ನಿರ್ವಾಹಕನ ಲೈಸನ್ಸು ನೀಡಿಕೆಗೆ ಅನರ್ಹತೆಗಳು 21

32. ಕಾಯಿಲೆ ಅಥವಾ ಅಶಕ್ತತೆಯ ಕಾರಣಗಳಿಗಾಗಿ ನಿರ್ವಾಹಕನ ಲೈಸನ್ಸಿನ ರದ್ದಿಯಾತಿ 22

33. ನಿರ್ವಾಹಕನ ಲೈಸನ್ಸುಗಳನ್ನು ನಿರಾಕರಿಸುವುದು, ಮುಂತಾದ ಆದೇಶಗಳು ಮತ್ತು ಅವುಗಳ ಮೇಲಣ ಅಪೀಲುಗಳು 22

34. ಅನರ್ಹಗೊಳಿಸಲು ಲೈಸನ್ಸು ನೀಡಿಕೆ ಪ್ರಾಧಿಕಾರದ ಅಧಿಕಾರ 22

35. ಅನರ್ಹಗೊಳಿಸಲು ನ್ಯಾಯಾಲಯದ ಅಧಿಕಾರ 23

36. ಅಧ್ಯಾಯ-II ರ ಕೆಲವು ಉಪಬಂಧಗಳು ನಿರ್ವಾಹಕನ ಲೈಸೆನ್ಸಿಗೆ ಅನ್ವಯವಾಗುವುದು 23

37. ಉಳಿಸುವಿಕೆಗಳು 23

38. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 23

ಅಧ್ಯಾಯ - **IV**

ಮೋಟಾರು ವಾಹನಗಳ ನೋಂದಣಿ

39. ನೋಂದಣಿಯ ಅವಶ್ಯಕತೆ 24

40. ನೋಂದಣಿಯನ್ನು ಎಲ್ಲಿ ಮಾಡುವುದು 24

41. ನೋಂದಣಿ ಹೇಗೆ ಮಾಡುವುದು 24

42. ರಾಜತಾಂತ್ರಿಕ ಅಧಿಕಾರಿಗಳು, ಮುಂತಾದವರ ಮೋಟಾರು ವಾಹನಗಳ ನೋಂದಣಿಯ ಬಗ್ಗೆ ವಿಶೇಷ ಉಪಬಂಧ 26

43. ತಾತ್ಕಾಲಿಕ ನೋಂದಣಿ 26

44. ನೋಂದಣಿ ಸಮಯದಲ್ಲಿ ವಾಹನವನ್ನು ಹಾಜರುಪಡಿಸುವುದು 27

45. ನೋಂದಣಿ ಮಾಡಲು ಅಥವಾ ನೋಂದಣಿ ಪ್ರಮಾಣ ಪತ್ರವನ್ನು ನವೀಕರಿಸಲು ನಿರಾಕರಿಸುವುದು 27

46. ಭಾರತದಲ್ಲಿ ನೋಂದಣಿಯು ಪರಿಣಾಮಕಾರಿಯಾಗಿರುವುದು 27

47. ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸಿದ ತರುವಾಯ ಹೊಸ ನೋಂದಣಿ ಗುರುತನ್ನು ನೀಡುವುದು 27

48. ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರ 28

49. ವಾಸಸ್ಥಳ ಅಥವಾ ವ್ಯವಹಾರ ಸ್ಥಳದ ಬದಲಾವಣೆ 29

50. ಒಡೆತನದ ವರ್ಗಾವಣೆ 30

51. ಕಂತು ಖರೀದಿ ಒಪ್ಪಂದ, ಮುಂತಾದವುಗಳಿಗೆ ಒಳಪಟ್ಟ ಮೋಟಾರು ವಾಹನಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು 31

52. ಮೋಟಾರು ವಾಹನದಲ್ಲಿ ಬದಲಾವಣೆ 34

53. ನೋಂದಣಿಯ ಅಮಾನತು 35

54. 53ನೇ ಪ್ರಕರಣದ ಮೇರೆಗೆ ಅಮಾನತುಗೊಳಿಸಿದ ನೋಂದಣಿಯ ರದ್ದಿಯಾತಿ 35

55. ನೋಂದಣಿಯ ರದ್ದಿಯಾತಿ 36

56. ಸಾರಿಗೆ ವಾಹನಗಳ ಅರ್ಹತಾ ಪ್ರಮಾಣ ಪತ್ರ 37

57. ಅಪೀಲುಗಳು 37

58. ಸಾರಿಗೆ ವಾಹನಗಳ ಸಂಬಂಧವಾಗಿ ವಿಶೇಷ ಉಪಬಂಧಗಳು 37

59. ಮೋಟಾರು ವಾಹನದ ವಯೋಮಿತಿಯನ್ನು ನಿಗದಿಪಡಿಸಲು ಅಧಿಕಾರ 38

60. ಕೇಂದ್ರ ಸರ್ಕಾರಕ್ಕೆ ಸೇರಿದ ವಾಹನಗಳ ನೋಂದಣಿ 39

61. ಹಿಂಬಂಡಿಗಳಿಗೆ ಈ ಅಧ್ಯಾಯದ ಅನ್ವಯ 39

62. ಕಳುವಾದ ಮತ್ತು ವಶಪಡಿಸಿಕೊಂಡ ಮೋಟಾರು ವಾಹನಗಳಿಗೆ ಸಂಬಂಧಿಸಿ ಪೊಲೀಸಿನವರು ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸುವುದು 39

63. ರಾಜ್ಯದ ಮೋಟಾರು ವಾಹನಗಳ ರಿಜಿಸ್ಟರುಗಳನ್ನು ಇಡುವುದು 39

64. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ 40

65. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ 41

## ಅಧ್ಯಾಯ - V

## ಸಾರಿಗೆ ವಾಹನಗಳ ನಿಯಂತ್ರಣ

66. ಪರ್ಮಿಟ್ಟುಗಳ ಅವಶ್ಯಕತೆ 42

67. ರಸ್ತೆ ಸಾರಿಗೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಅಧಿಕಾರ 44

68. ಸಾರಿಗೆ ಪ್ರಾಧಿಕಾರಗಳು 44

69. ಪರ್ಮಿಟ್ಟುಗಳ ಅರ್ಜಿಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧ 46

70. ಮಜಲು ವಾಹನದ ಪರ್ಮಿಟ್ಟಿಗಾಗಿ ಅರ್ಜಿ 46

71. ಮಜಲು ವಾಹನದ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುವಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ 47

72. ಮಜಲು ವಾಹನದ ಪರ್ಮಿಟ್ಟಿನ ನೀಡಿಕೆ 48

73. ಕರಾರು ವಾಹನದ ಪರ್ಮಿಟ್ಟಿಗೆ ಅರ್ಜಿ 50

74. ಕರಾರು ವಾಹನದ ಪರ್ಮಿಟ್ಟು ನೀಡಿಕೆ 50

75. ಮೋಟಾರು ಕ್ಯಾಬ್‌ಗಳನ್ನು ಬಾಡಿಗೆಗೆ ಕೊಡುವ ಯೋಜನೆ 51
76. ಖಾಸಗಿ ಸೇವಾ ವಾಹನದ ಪರ್ಮಿಟ್ಟಿಗೆ ಅರ್ಜಿ 52
77. ಸರಕು ವಾಹನದ ಪರ್ಮಿಟ್ಟಿಗೆ ಅರ್ಜಿ 53
78. ಸರಕು ವಾಹನ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯ ಪರಿಶೀಲನೆ 53
79. ಸರಕು ವಾಹನ ಪರ್ಮಿಟ್ಟು ನೀಡಿಕೆ 53
80. ಪರ್ಮಿಟ್ಟುಗಳಿಗಾಗಿ ಅರ್ಜಿ ಸಲ್ಲಿಸುವ ಮತ್ತು ಅವುಗಳ ನೀಡಿಕೆಯ ಪ್ರಕ್ರಿಯೆ 54
81. ಪರ್ಮಿಟ್ಟುಗಳ ಅವಧಿ ಮತ್ತು ನವೀಕರಣ 55
82. ಪರ್ಮಿಟ್ಟಿನ ವರ್ಗಾವಣೆ 56
83. ವಾಹನಗಳ ಬದಲಾವಣೆ 57
84. ಎಲ್ಲ ಪರ್ಮಿಟ್ಟುಗಳಿಗೆ ಲಗತ್ತಿಸುವ ಸಾಮಾನ್ಯ ಷರತ್ತುಗಳು 57
85. ಪರ್ಮಿಟ್ಟುಗಳ ಸಾಮಾನ್ಯ ನಮೂನೆ 57
86. ಪರ್ಮಿಟ್ಟುಗಳ ರದ್ದಿಯಾತಿ ಮತ್ತು ಅಮಾನತು 57
87. ತಾತ್ಕಾಲಿಕ ಪರ್ಮಿಟ್ಟುಗಳು 58
88. ಪರ್ಮಿಟ್ಟುಗಳನ್ನು ನೀಡಿರುವ ಪ್ರದೇಶದ ಹೊರಗೆ ಉಪಯೋಗಕ್ಕಾಗಿ ಅವುಗಳನ್ನು ಸಿಂಧುಗೊಳಿಸುವುದು 59
89. ಅಪೀಲುಗಳು 62
90. ಪುನರೀಕ್ಷಣೆ 63
91. ಚಾಲಕರ ಕೆಲಸದ ವೇಳೆಯ ಬಗ್ಗೆ ನಿರ್ಬಂಧ 63
92. ಹೊಣೆಗಾರಿಕೆಯನ್ನು ನಿರ್ಬಂಧಿಸುವ ಕರಾರುಗಳು ಶೂನ್ಯವಾಗಿರುವುದು 64
93. ಏಜೆಂಟನು ಅಥವಾ ಪ್ರಚಾರಕನು ಲೈಸನ್ಸು ಪಡೆದಿರುವುದು 64
94. ಸಿವಿಲ್ ನ್ಯಾಯಾಲಯಗಳ ಪ್ರತಿಷೇಧ ಅಥವಾ ಅಧಿಕಾರ ವ್ಯಾಪ್ತಿ 65
95. ಮಜಲು ವಾಹನಗಳು ಮತ್ತು ಕರಾರು ವಾಹನಗಳ ಬಗ್ಗೆ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 65
96. ಈ ಅಧ್ಯಾಯದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 65

## ಅಧ್ಯಾಯ - VI

### ರಾಜ್ಯ ಸಾರಿಗೆ ಉದ್ಯಮಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

97. ಪರಿಭಾಷೆ 68
98. Vನೇ ಅಧ್ಯಾಯ ಮತ್ತು ಇತರ ಕಾನೂನುಗಳನ್ನು ಅಧ್ಯಾರೋಹಿಸುವ ಅಧ್ಯಾಯ 68
99. ರಾಜ್ಯ ಸಾರಿಗೆ ಉದ್ಯಮದ ರಸ್ತೆ ಸಾರಿಗೆ ಸೇವೆಗೆ ಸಂಬಂಧಿಸಿದ ಪ್ರಸ್ತಾವದ ತಯಾರಿಕೆ ಮತ್ತು ಪ್ರಕಟಣೆ 68
100. ಪ್ರಸ್ತಾವಕ್ಕೆ ಆಕ್ಷೇಪಣೆ 68
101. ಕೆಲವು ಸಂದರ್ಭಗಳಲ್ಲಿ ರಾಜ್ಯ ಸಾರಿಗೆ ಉದ್ಯಮವು ಹೆಚ್ಚಿನ ಸೇವೆಗಳ ಸಂಚಾಲನ ಮಾಡುವುದು 69
102. ಯೋಜನೆಯ ರದ್ದಿಯಾತಿ ಅಥವಾ ಮಾರ್ಪಾಟು 69
103. ರಾಜ್ಯ ಸಾರಿಗೆ ಉದ್ಯಮಗಳಿಗೆ ಪರ್ಮಿಟ್ಟುಗಳ ನೀಡಿಕೆ 69

104. ಅಧಿಸೂಚಿತ ಪ್ರದೇಶ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ ಪರ್ಮಿಟ್ಟುಗಳನ್ನು ನೀಡುವುದಕ್ಕೆ ನಿರ್ಬಂಧ 70

105. ಪರಿಹಾರವನ್ನು ನಿರ್ಧರಿಸುವ ಮತ್ತು ಅದರ ಸಂದಾಯದ ಸೂತ್ರಗಳು ಮತ್ತು ವಿಧಾನ 70

106. ವಾಹನಗಳಲ್ಲಿ ಕಂಡುಬಂದ ವಸ್ತುಗಳ ವಿಲೆ 71

107. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 72

108. ರಾಜ್ಯ ಸರ್ಕಾರದ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರವು ಚಲಾಯಿಸುವುದು 72

## ಅಧ್ಯಾಯ - VII

### ಮೋಟಾರು ವಾಹನಗಳ ನಿರ್ಮಾಣ, ಸಜ್ಜು ಸಲಕರಣೆ ಮತ್ತು ನಿರ್ವಹಣೆ

109. ವಾಹನಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಾಮಾನ್ಯ ಉಪಬಂಧ 72

110. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ 72

111. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 73

## ಅಧ್ಯಾಯ - VIII

### ಸಂಚಾರ ನಿಯಂತ್ರಣ

112. ವೇಗ ಮಿತಿ 74

113. ತೂಕದ ಮಿತಿಗಳು ಮತ್ತು ಬಳಕೆಯ ಮೇಲಿನ ಪರಿಮಿತಿಗಳು 75

114. ವಾಹನವನ್ನು ತೂಕ ಮಾಡಿಸಲು ಅಧಿಕಾರ 75

115. ವಾಹನಗಳ ಉಪಯೋಗವನ್ನು ನಿರ್ಬಂಧಿಸುವ ಅಧಿಕಾರ 75

116. ಸಂಚಾರ ಚಿಹ್ನೆಗಳನ್ನು ಸ್ಥಾಪಿಸುವ ಅಧಿಕಾರ 76

117. ವಾಹನ ನಿಲ್ಲಿಸುವ ಸ್ಥಳಗಳು ಮತ್ತು ನಿಲ್ದಾಣಗಳು 77

118. ಚಾಲನ ವಿನಿಯಮಗಳು 77

119. ಸಂಚಾರ ಚಿಹ್ನೆಗಳನ್ನು ಪಾಲಿಸುವ ಕರ್ತವ್ಯ 77

120. ಎಡಭಾಗದಲ್ಲಿ ನಿಯಂತ್ರಣವನ್ನು ಹೊಂದಿರುವ ವಾಹನಗಳು 77

121. ಸಂಕೇತಗಳು ಮತ್ತು ಸಂಕೇತ ಸಾಧನಗಳು 77

122. ವಾಹನವನ್ನು ಅಪಾಯಕಾರಿ ಸ್ಥಿತಿಯಲ್ಲಿ ಬಿಡುವುದು 78

123. ವಾಹನದ ಹತ್ತುವ ಇಳಿಯುವ ಮೆಟ್ಟಿಲು, ಇತ್ಯಾದಿಗಳ ಮೇಲೆ ಪ್ರಯಾಣ 78

124. ಪಾಸು ಅಥವಾ ಟಿಕೇಟ್ ಇಲ್ಲದೆ ಪ್ರಯಾಣ ಮಾಡುವುದರ ವಿರುದ್ಧ ನಿಷೇಧ 78

125. ಚಾಲಕನಿಗೆ ಅಡಚಣೆ 78

126. ನಿಂತಿರುವ ವಾಹನಗಳು 78

127. ಸಾರ್ವಜನಿಕ ಸ್ಥಳದಲ್ಲಿ ಬಿಟ್ಟುಹೋದ ಅಥವಾ ಅಲಕ್ಷಿಸಲ್ಪಟ್ಟ ಮೋಟಾರು ವಾಹನಗಳನ್ನು ಸ್ಥಳಾಂತರಿಸುವುದು 78

128. ಚಾಲಕರು ಮತ್ತು ಹಿಂಬದಿ ಸವಾರರಿಗೆ ಸುರಕ್ಷಾ ಕ್ರಮಗಳು 79

129. ರಕ್ಷಕ ಶಿರಸ್ತ್ರಾಣವನ್ನು ಧರಿಸುವುದು 79

130. ಲೈಸನ್ಸನ್ನು ಮತ್ತು ನೋಂದಣಿ ಪ್ರಮಾಣ ಪತ್ರವನ್ನು ಹಾಜರುಪಡಿಸುವ ಕರ್ತವ್ಯ 79

131. ಕಾವಲಿಲ್ಲದ ರೈಲ್ವೆ ಹಳಿ ದಾಟುಗಳಲ್ಲಿ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸುವುದು ಚಾಲಕನ ಕರ್ತವ್ಯ 80

132. ಕೆಲವು ಸಂದರ್ಭಗಳಲ್ಲಿ ವಾಹನವನ್ನು ನಿಲ್ಲಿಸುವುದು ಚಾಲಕನ ಕರ್ತವ್ಯ 80

133. ಮಾಹಿತಿಯನ್ನು ಕೊಡುವುದು ಮೋಟಾರು ವಾಹನದ ಒಡೆಯನ ಕರ್ತವ್ಯ 81

134. ಒಬ್ಬ ವ್ಯಕ್ತಿಗೆ ಅಪಘಾತ ಮತ್ತು ಕ್ಷತಿಯುಂಟಾದ ಸಂದರ್ಭದಲ್ಲಿ ಚಾಲಕನ ಕರ್ತವ್ಯ 81

135. ಅಪಘಾತದ ಸಂದರ್ಭಗಳ ತನಿಖೆಗಾಗಿ ಮತ್ತು ಮಾರ್ಗದಲ್ಲಿ ಸೌಕರ್ಯ, ಇತ್ಯಾದಿ ಒದಗಿಸುವ ಯೋಜನೆಗಳನ್ನು ರೂಪಿಸುವುದು 81

136. ಅಪಘಾತಕ್ಕೀಡಾದ ವಾಹನದ ಪರಿಶೀಲನೆ 82

137. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ 82

138. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ 82

## ಅಧ್ಯಾಯ - IX

### ತಾತ್ಕಾಲಿಕವಾಗಿ ಭಾರತವನ್ನು ಬಿಡುವ ಅಥವಾ ಭಾರತಕ್ಕೆ ಬರುವ ಮೋಟಾರು ವಾಹನಗಳು

139. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ 83

## ಅಧ್ಯಾಯ - X

### ಕೆಲವು ಸಂದರ್ಭಗಳಲ್ಲಿ ತಪ್ಪಿಲ್ಲದೆಯೇ ಹೊಣೆಗಾರಿಕೆ

140. ಕೆಲವೊಂದು ಸಂದರ್ಭಗಳಲ್ಲಿ ತಪ್ಪಿಲ್ಲದ ತತ್ವದ ಆಧಾರದ ಮೇಲೆ ನಷ್ಟ ಪರಿಹಾರ ಸಂದಾಯ ಮಾಡಲು ಹೊಣೆಗಾರಿಕೆ 84

141. ಮರಣ ಅಥವಾ ಖಾಯಂ ಅಸಮರ್ಥತೆಗಾಗಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಇತರ ಹಕ್ಕಿಗೆ ಸಂಬಂಧಿಸಿದ ಉಪಬಂಧಗಳು 85

142. ಖಾಯಂ ಅಸಮರ್ಥತೆ 85

143. 1923ರ 8ನೇ ಅಧಿನಿಯಮದ ಮೇರೆಗಿನ ಕೆಲವು ಕ್ಲೇಮುಗಳಿಗೆ ಈ ಅಧ್ಯಾಯದ ಅನ್ವಯ 86

144. ಅಧ್ಯಾರೋಹಿ ಪರಿಣಾಮ 86

## ಅಧ್ಯಾಯ - XI

### ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯದ ಸಂಬಂಧದಲ್ಲಿ ಮೋಟಾರು ವಾಹನಗಳ ವಿಮೆ

145. ಪರಿಭಾಷೆಗಳು 86

146. ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯದ ಬಗ್ಗೆ ವಿಮೆಯ ಅವಶ್ಯಕತೆ 87

147. ವಿಮಾ ಪಾಲಿಸಿಗಳ ಅಗತ್ಯತೆಗಳು ಮತ್ತು ಹೊಣೆಗಾರಿಕೆಯ ಪರಿಮಿತಿಗಳು 87

148. ಪರಸ್ಪರ ಸಂಬಂಧವುಳ್ಳ ದೇಶಗಳಲ್ಲಿ ಕೊಡಲಾದ ವಿಮಾ ಪಾಲಿಸಿಗಳ ಕಾನೂನು ಮಾನ್ಯತೆ 89

149. ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯಗಳಿಗೆ ಸಂಬಂಧಿಸಿದಂತೆ ವಿಮೆ ಮಾಡಿರುವ ವ್ಯಕ್ತಿಗಳ ವಿರುದ್ಧ ನೀಡಿದ ತೀರ್ಪನ್ನು ಪಾಲಿಸುವಲ್ಲಿ ವಿಮಾಕಾರನ ಕರ್ತವ್ಯ 89

150. ವಿಮಾದಾರರ ದಿವಾಳಿಯ ಬಗ್ಗೆ ವಿಮಾಕಾರರ ವಿರುದ್ಧ ಮೂರನೇ ಪಕ್ಷಕಾರರ ಅಧಿಕಾರಗಳು 91

151. ವಿಮೆಗೆ ಸಂಬಂಧಿಸಿ ಮಾಹಿತಿಯನ್ನು ಒದಗಿಸುವ ಕರ್ತವ್ಯ 92

152. ವಿಮಾಕಾರರು ಮತ್ತು ವಿಮಾದಾರ ವ್ಯಕ್ತಿಗಳ ನಡುವಣ ಒಡಂಬಡಿಕೆ 93

153. 150, 151 ಮತ್ತು 152ನೇ ಪ್ರಕರಣಗಳ ಸಂಬಂಧದಲ್ಲಿ ಉಳಿಸುವಿಕೆ 93

154. ವಿಮಾದಾರ ವ್ಯಕ್ತಿಗಳ ದಿವಾಳಿಯು ವಿಮಾದಾರರ ಹೊಣೆಗಾರಿಕೆಗೆ ಅಥವಾ ಮೂರನೇ ಪಕ್ಷಕಾರರ ಕ್ಲೇಮುಗಳಿಗೆ ಬಾಧಕವಾಗದಿರುವುದು 93

155. ಕೆಲವು ವ್ಯಾಜ್ಯ ಕಾರಣಗಳ ಮೇಲೆ ಮರಣದ ಪರಿಣಾಮ 93

156. ವಿಮಾ ಪ್ರಮಾಣ ಪತ್ರದ ಪರಿಣಾಮ 94

157. ವಿಮಾ ಪ್ರಮಾಣ ಪತ್ರದ ವರ್ಗಾವಣೆ 94

158. ಕೆಲವು ಪ್ರಕರಣಗಳಲ್ಲಿ ಕೆಲವು ಪ್ರಮಾಣ ಪತ್ರಗಳು, ಲೈಸನ್ಸು ಮತ್ತು ಪರ್ಮಿಟ್ಟುಗಳನ್ನು ಹಾಜರುಪಡಿಸುವುದು 94

159. ವಾಹನವನ್ನು ಉಪಯೋಗಿಸಲು ಅಧಿಕಾರ ಕೋರುವ ಅರ್ಜಿ ಸಲ್ಲಿಸುವಾಗ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು 95

160. ಅಪಘಾತಕ್ಕೆ ಒಳಗಾದ ವಾಹನದ ವಿವರಗಳನ್ನು ಒದಗಿಸುವ ಕರ್ತವ್ಯ 95

161. ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತದ ಸಂದರ್ಭದಲ್ಲಿ ಪರಿಹಾರಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು 96

162. 161ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಪರಿಹಾರವನ್ನು ಕೆಲವು ಸಂದರ್ಭಗಳಲ್ಲಿ ಮರುಪಾವತಿ ಮಾಡುವುದು 96

163. ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತಗಳ ಸಂಬಂಧದಲ್ಲಿ ಪರಿಹಾರ ಸಂದಾಯದ ಯೋಜನೆ 97

163ಎ. ರೂಪಿಸಲಾದ ಸೂತ್ರದ ಆಧಾರದ ಮೇಲೆ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಬಗ್ಗೆ ವಿಶೇಷ ಉಪಬಂಧಗಳು 97

163ಬಿ. ಕೆಲವು ಪ್ರಕರಣಗಳಲ್ಲಿ ಕ್ಲೇಮನ್ನು ದಾಖಲ್ಮಾಡಲು ಆಯ್ಕೆಯ ಅವಕಾಶ 98

164. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ 98


## ಅಧ್ಯಾಯ - XII

### ಕ್ಲೇಮುಗಳ ನ್ಯಾಯಾಧಿಕರಣಗಳು


165. ಕ್ಲೇಮುಗಳ ನ್ಯಾಯಾಧಿಕರಣಗಳು 99

166. ಪರಿಹಾರಕ್ಕಾಗಿ ಅರ್ಜಿ 99

167. ಕೆಲವು ಸಂದರ್ಭಗಳಲ್ಲಿ ಪರಿಹಾರದ ಕ್ಲೇಮುಗಳ ಬಗ್ಗೆ ಆಯ್ಕೆ 100

168. ಕ್ಲೇಮುಗಳ ನ್ಯಾಯಾಧಿಕರಣದ ಐತೀರ್ಪು 100

169. ಕ್ಲೇಮು ನ್ಯಾಯ ಮಂಡಲಿಯ ಪ್ರಕ್ರಿಯೆ ಮತ್ತು ಅಧಿಕಾರಗಳು 100

170. ಕೆಲವು ಸಂದರ್ಭಗಳಲ್ಲಿ ವಿಮಾಕಾರನನ್ನು ಪಕ್ಷಕಾರನನ್ನಾಗಿ ಸೇರಿಸುವುದು 101

171. ಯಾವುದೇ ಕ್ಲೇಮನ್ನು ಅಂಗೀಕರಿಸಿದಲ್ಲಿ ಬಡ್ಡಿ ಪಾವತಿಗೆ ಐತೀರ್ಪು ನೀಡುವುದು 101

172. ಕೆಲವು ಸಂದರ್ಭಗಳಲ್ಲಿ ನಷ್ಟ ಪರಿಹಾರ ಸಂಬಂಧವಾದ ಖರ್ಚುಗಳ ಬಗ್ಗೆ ಐತೀರ್ಪು ನೀಡುವುದು 101

173. ಅಪೀಲುಗಳು 102

174. ವಿಮಾಕಾರನಿಂದ ಹಣವನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವುದು 102

175. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ 102

176. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ 102

## ಅಧ್ಯಾಯ - XIII

## ಅಪರಾಧಗಳು, ದಂಡನೆಗಳು ಮತ್ತು ಪ್ರಕ್ರಿಯೆ


| | | |
|---|---|---|
| 177. | ಅಪರಾಧಗಳ ಬಗ್ಗೆ ದಂಡನೆಗಾಗಿ ಸಾಮಾನ್ಯ ಉಪಬಂಧಗಳು | 103 |
| 178. | ಪಾಸು ಅಥವಾ ಟಿಕೇಟು ಇಲ್ಲದೆ ಪ್ರಯಾಣ ಮಾಡುವುದಕ್ಕೆ ಮತ್ತು ನಿರ್ವಾಹಕನ ಕರ್ತವ್ಯ ಲೋಪಕ್ಕೆ ಮತ್ತು ಕರಾರು ವಾಹನ ಮುಂತಾದವುಗಳನ್ನು ನಡೆಸಲು ತಿರಸ್ಕರಿಸುವುದಕ್ಕೆ ದಂಡ | 103 |
| 179. | ಆದೇಶಗಳ ಉಲ್ಲಂಘನೆ, ಅಡ್ಡಿಪಡಿಸುವುದು ಮತ್ತು ಮಾಹಿತಿಯನ್ನು ಕೊಡಲು ನಿರಾಕರಿಸುವುದು | 103 |
| 180. | ವಾಹನವನ್ನು ನಡೆಸುವುದಕ್ಕೆ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ಕೊಡುವುದು | 104 |
| 181. | 3ನೇ ಪ್ರಕರಣ ಅಥವಾ 4ನೇ ಪ್ರಕರಣವನ್ನು ಉಲ್ಲಂಘಿಸಿ ವಾಹನಗಳನ್ನು ನಡೆಸುವುದು | 104 |
| 182. | ಲೈಸನ್ಸುಗಳಿಗೆ ಸಂಬಂಧಿಸಿದ ಅಪರಾಧಗಳು | 104 |
| 182ಎ. | ವಾಹನಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಪಟ್ಟ ಅಪರಾಧಗಳಿಗೆ ದಂಡನೆ | 104 |
| 183. | ಮಿತಿಮೀರಿದ ವೇಗದಲ್ಲಿ ವಾಹನವನ್ನು ನಡೆಸುವುದು, ಇತ್ಯಾದಿ | 104 |
| 184. | ಅಪಾಯಕರ ರೀತಿಯಲ್ಲಿ ವಾಹನವನ್ನು ನಡೆಸುವುದು | 105 |
| 185. | ಅಮಲೇರಿದ ವ್ಯಕ್ತಿಯು ಅಥವಾ ಔಷಧಗಳ ಪ್ರಭಾರದಲ್ಲಿರುವ ವ್ಯಕ್ತಿಯು ವಾಹನವನ್ನು ನಡೆಸುವುದು | 105 |
| 186. | ವಾಹನವನ್ನು ನಡೆಸಲು ಮಾನಸಿಕವಾಗಿ ಅಥವಾ ದೈಹಿಕವಾಗಿ ಅನರ್ಹನಾಗಿರುವಾಗ ವಾಹನವನ್ನು ನಡೆಸುವುದು | 106 |
| 187. | ಅಪಘಾತಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ದಂಡನೆ | 106 |
| 188. | ಕೆಲವು ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ | 106 |
| 189. | ವೇಗ ಸ್ಪರ್ಧೆ ಮತ್ತು ವೇಗ ಪರೀಕ್ಷೆ | 106 |
| 190. | ಸುರಕ್ಷಿತವಲ್ಲದ ಸ್ಥಿತಿಯಲ್ಲಿ ವಾಹನವನ್ನು ಉಪಯೋಗಿಸುವುದು | 106 |
| 191. | ಈ ಅಧಿನಿಯಮವನ್ನು ಉಲ್ಲಂಘಿಸುವ ಸ್ಥಿತಿಯಲ್ಲಿರುವ ವಾಹನದ ಮಾರಾಟ ಅಥವಾ ಆ ಸ್ಥಿತಿಗೆ ಬರುವಂತೆ ವಾಹನದಲ್ಲಿ ಮಾರ್ಪಾಟು ಮಾಡುವುದು | 107 |
| 192. | ನೋಂದಣಿಯಿಲ್ಲದೆ ವಾಹನವನ್ನು ಬಳಸುವುದು | 107 |
| 192ಎ. | ಪರ್ಮಿಟ್ಟಿಲ್ಲದೆ ವಾಹನವನ್ನು ಬಳಸುವುದು | 107 |
| 193. | ಯುಕ್ತ ಅಧಿಕಾರವಿಲ್ಲದ ಏಜೆಂಟರುಗಳಿಗೆ ಮತ್ತು ಪ್ರಚಾರಕರಿಗೆ ದಂಡನೆ | 108 |
| 194. | ಅನುಮತಿಸಲಾದ ತೂಕಕ್ಕೆ ಮೀರಿದ ವಾಹನವನ್ನು ನಡೆಸುವುದು | 108 |
| 195. | ಕೆಲವು ಸಂದರ್ಭಗಳಲ್ಲಿ ಕನಿಷ್ಠ ಜುಲ್ಮಾನೆಯನ್ನು ವಿಧಿಸುವುದು | 108 |
| 196. | ವಿಮೆ ಮಾಡದ ವಾಹನವನ್ನು ನಡೆಸುವುದು | 108 |
| 197. | ಅಧಿಕಾರವಿಲ್ಲದೆ ವಾಹನವನ್ನು ತೆಗೆದುಕೊಳ್ಳುವುದು | 109 |
| 198. | ವಾಹನದಲ್ಲಿ ಅನಧಿಕೃತ ಹಸ್ತಕ್ಷೇಪ | 109 |
| 199. | ಕಂಪನಿಗಳಿಂದ ಅಪರಾಧಗಳು | 109 |
| 200. | ಕೆಲವು ಅಪರಾಧಗಳ ಬಗ್ಗೆ ರಾಜಿ | 110 |
| 201. | ಮುಕ್ತ ಸಂಚಾರಕ್ಕೆ ಅಡ್ಡಿಯುಂಟು ಮಾಡುವುದಕ್ಕೆ ದಂಡನೆ | 110 |

202. ವಾರೆಂಟಿಲ್ಲದೆ ದಸ್ತಗಿರಿ ಮಾಡುವ ಅಧಿಕಾರ 110

203. ಉಸಿರಾಟದ ಪರೀಕ್ಷೆ 110

204. ಪ್ರಯೋಗಶಾಲಾ ಪರೀಕ್ಷೆ 111

205. ವಾಹನ ನಡೆಸಲು ಅಸಮರ್ಥತೆಯ ಬಗ್ಗೆ ಪೂರ್ವಭಾವನೆ 112

206. ದಸ್ತಾವೇಜನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಯ ಅಧಿಕಾರ 112

207. ನೋಂದಣಿ ಪ್ರಮಾಣ ಪತ್ರ, ಪರ್ಮಿಟ್ಟು, ಇತ್ಯಾದಿಗಳು ಇಲ್ಲದೆ ಉಪಯೋಗಿಸಲಾದ ವಾಹನಗಳನ್ನು ತಡೆಹಿಡಿದಿಡುವ ಅಧಿಕಾರ 113

208. ಪ್ರಕರಣಗಳ ಕ್ಷಿಪ್ರ ವಿಲೆ 114

209. ಅಪರಾಧ ನಿರ್ಣಯದ ಮೇಲೆ ನಿರ್ಬಂಧ 114

210. ಅಪರಾಧ ನಿರ್ಣಯದ ಬಗ್ಗೆ ನ್ಯಾಯಾಲಯಗಳು ಮಾಹಿತಿಗಳನ್ನು ಕಳುಹಿಸುವುದು 115

## ಅಧ್ಯಾಯ - **XIV**

### ಸಂಕೀರ್ಣ

211. ಫೀಜನ್ನು ವಿಧಿಸುವ ಅಧಿಕಾರ 115

212. ನಿಯಮಗಳ ಮತ್ತು ಅಧಿಸೂಚನೆಗಳ ಪ್ರಕಟಣೆ ಮತ್ತು ಪ್ರಾರಂಭ ಮತ್ತು ಮಂಡನೆ 115

213. ಮೋಟಾರು ವಾಹನ ಅಧಿಕಾರಿಗಳ ನೇಮಕ 116

214. ಮೂಲ ಪ್ರಾಧಿಕಾರವು ಮಾಡಿದ ಆದೇಶಗಳ ಮೇಲೆ ಅಪೀಲಿನ ಮತ್ತು ಪುನರೀಕ್ಷಣೆಯ ಪರಿಣಾಮ 117

215. ರಸ್ತೆ ಸುರಕ್ಷತಾ ಪರಿಷತ್ತುಗಳು ಮತ್ತು ಸಮಿತಿಗಳು 118

216. ತೊಂದರೆಗಳನ್ನು ನಿವಾರಿಸುವ ಅಧಿಕಾರ 118

217. ನಿರಸನ ಮತ್ತು ಉಳಿಸುವಿಕೆಗಳು 118

217ಎ. ಮೋಟಾರು ವಾಹನಗಳ ಅಧಿನಿಯಮ, 1939ರ ಮೇರೆಗೆ ಮಂಜೂರು ಮಾಡಲಾದ ಪರ್ಮಿಟ್‌ಗಳ, ಚಾಲನಾ ಲೈಸೆನ್ಸ್‌ಗಳ ಮತ್ತು ನೋಂದಣಿಯ ನವೀಕರಣ 119

ಮೊದಲನೇ ಅನುಸೂಚಿ 120

ಎರಡನೇ ಅನುಸೂಚಿ 128

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮೋಟಾರು ವಾಹನಗಳ ಅಧಿನಿಯಮ, 1988

(1988 ರ ಅಧಿನಿಯಮ ಸಂಖ್ಯೆ 59)

[ಜನವರಿ 7, 2005 ರಂದು ಜಾರಿಯಲ್ಲಿದ್ದಂತೆ]

# THE MOTOR VEHICLES ACT, 1988

(Act No. 59 of 1988)

[As on 7th January 2005]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2005

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮೋಟಾರು ವಾಹನಗಳ ಅಧಿನಿಯಮ, 1988

(1988 ರ ಅಧಿನಿಯಮ ಸಂಖ್ಯೆ 59)

[ಜನವರಿ 7, 2005 ರಂದು ಜಾರಿಯಲ್ಲಿದ್ದಂತೆ]

# THE MOTOR VEHICLES ACT, 1988

(Act No. 59 of 1988)

[As on 7th January 2005]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2005

ಮುನ್ನುಡಿ

ಜನವರಿ 7, 2005 ರಂದು ಜಾರಿಯಲ್ಲಿದ್ದಂತೆ ದಿ ಮೋಟಾರ್ ವೆಹಿಕಲ್ಸ್ ಆ್ಯಕ್ಟ್, 1988 (1988ರ 59) ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 7.1.2005 ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 31 ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 66 ರಿಂದ 194 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 ರ 2 ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಟಿ.ಕೆ. ವಿಶ್ವನಾಥನ್
ಕಾರ್ಯದರ್ಶಿ,
ಭಾರತ ಸರ್ಕಾರ.

ನವದೆಹಲಿ

## PREFACE

This edition of the Motor Vehicles Act, 1988 (59 of 1988) as on the 7th January, 2005 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Volume 31, dated 07.01.2005 on pages 66 to 194.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**T.K. Viswanathan**
Secretary,
Government of India.

New Delhi

# ಮೋಟಾರು ವಾಹನಗಳ ಅಧಿನಿಯಮ, 1988

## (1988 ರ ಅಧಿನಿಯಮ ಸಂಖ್ಯೆ 59)

[14ನೇ ಅಕ್ಟೋಬರ್, 1988]

*ಮೋಟಾರು ವಾಹನಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.*

ಇದು ಭಾರತ ಗಣರಾಜ್ಯದ ಮೂವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಮೋಟಾರು ವಾಹನಗಳ ಅಧಿನಿಯಮ, 1988 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಒಂದು ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) ಈ ಅಧಿನಿಯಮದ ಯಾವುದೇ ಉಪಬಂಧಕ್ಕೆ ಸಂಬಂಧಿಸಿದಂತೆ "ಪ್ರದೇಶ" ಎಂದರೆ ರಾಜ್ಯ ಸರ್ಕಾರವು ಆ ಉಪಬಂಧದ ಅಗತ್ಯತೆಗಳನ್ನು ಗಮನಿಸಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ;

(2) "ಕೀಲು ಜೋಡಿಸಿದ ವಾಹನ" ಎಂದರೆ ಅರೆ ಹಿಂಬಂಡಿಯನ್ನು ಜೋಡಿಸಿರುವ ಮೋಟಾರು ವಾಹನ;

(3) "ಅಚ್ಚುಭಾರ" ಎಂದರೆ ಯಾವುದೇ ವಾಹನದ ಅಚ್ಚಿಗೆ ಸಂಬಂಧಿಸಿ, ಆ ಅಚ್ಚಿಗೆ ಜೋಡಿಸಿದ ಬೇರೆ ಬೇರೆ ಚಕ್ರಗಳಿಂದ ವಾಹನವು ವಿರಮಿಸುವ ತಲಭಾಗಕ್ಕೆ ಸಾಗಿಸಲಾಗುವ ಒಟ್ಟು ಭಾರ;

(4) "ನೋಂದಣಿ ಪ್ರಮಾಣಪತ್ರ" ಎಂದರೆ IVನೇ ಅಧ್ಯಾಯದ ಉಪಬಂಧಗಳಿಗೆ ಅನುಸಾರ ಮೋಟಾರು ವಾಹನವನ್ನು ಯುಕ್ತವಾಗಿ ನೋಂದಾಯಿಸಲಾಗಿದೆ ಎಂಬುದಾಗಿ ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರ;

(5) ಮಜಲು ವಾಹನಕ್ಕೆ ಸಂಬಂಧಿಸಿ "ನಿರ್ವಾಹಕ" ಎಂದರೆ ಪ್ರಯಾಣಿಕರಿಂದ ಪ್ರಯಾಣ ದರಗಳನ್ನು ವಸೂಲು ಮಾಡುವ, ಮಜಲು ವಾಹನದೊಳಕ್ಕೆ ಅವರ ಪ್ರವೇಶ ಅಥವಾ ಅದರಿಂದ ಅವರ ನಿರ್ಗಮನವನ್ನು ನಿಯಂತ್ರಿಸುವ ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸಲು ತೊಡಗಿರುವ ವ್ಯಕ್ತಿ;

(6) "ನಿರ್ವಾಹಕನ ಲೈಸನ್ಸು" ಎಂದರೆ III ನೇ ಅಧ್ಯಾಯದ ಮೇರೆಗೆ, ಅದರಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಯನ್ನು ನಿರ್ವಾಹಕನಾಗಿ ಕಾರ್ಯನಿರ್ವಹಿಸಲು ಅಧಿಕೃತಗೊಳಿಸಿ ಸಕ್ಷಮ ಪ್ರಾಧಿಕಾರವು ಕೊಟ್ಟ ಲೈಸನ್ಸು;

(7) "ಕರಾರು ವಾಹನ" ಎಂದರೆ ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಪ್ರಯಾಣಿಕನನ್ನು ಅಥವಾ ಪ್ರಯಾಣಿಕರನ್ನು ಕರೆದೊಯ್ಯುವ ಮತ್ತು ವ್ಯಕ್ತ ಅಥವಾ ಇಂಗಿತ ಕರಾರಿನ ಮೇರೆಗೆ ಅದರಲ್ಲಿ ನಮೂದಿಸಲಾದ ಪ್ರಯಾಣಿಕರನ್ನು ಸಾಗಿಸಲು ಆ ವಾಹನವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಗೊತ್ತುಮಾಡಿದ ಮತ್ತು ಯಾವೊಬ್ಬ ವ್ಯಕ್ತಿಯು ಅಂಥ ವಾಹನಕ್ಕೆ ಸಂಬಂಧಿಸಿದ ಪರ್ಮಿಟ್ಟಿನ ಧಾರಕನೊಂದಿಗೆ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯೊಂದಿಗೆ, ನಿಗದಿಪಡಿಸಿದ ಅಥವಾ ಒಪ್ಪಿಕೊಂಡ ದರದಲ್ಲಿ ಅಥವಾ ಮೊತ್ತಕ್ಕೆ,-

(ಎ) ಯಾವುದೇ ಮಾರ್ಗ ಅಥವಾ ದೂರಕ್ಕೆ ಸಂಬಂಧಿಸಿ ಅಥವಾ ಸಂಬಂಧಿಸದೆ ಸಮಯದ ಆಧಾರದ ಮೇಲೆ; ಅಥವಾ

(ಬಿ) ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ

- ಆದರೆ ಎರಡೂ ಸಂದರ್ಭಗಳಲ್ಲಿ ಪ್ರಯಾಣದ ಅವಧಿಯಲ್ಲಿ ಎಲ್ಲಿಯೇ ಆಗಲಿ ಕರಾರಿನಲ್ಲಿ ಸೇರಿಸಿಲ್ಲದ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಅಥವಾ ಇಳಿಸಲು ನಿಲ್ಲಿಸದೆ ಕರೆದೊಯ್ಯಲು ಕರಾರು ಮಾಡಿಕೊಂಡ ಮೋಟಾರು ವಾಹನ ಮತ್ತು ಇದು,-

(i) ಮ್ಯಾಕ್ಸಿ ಕ್ಯಾಬ್; ಮತ್ತು

(ii) ಪ್ರಯಾಣಿಕರಿಗೆ ಪ್ರತ್ಯೇಕ ಪ್ರಯಾಣ ದರಗಳನ್ನು ವಿಧಿಸುವುದು ಏನೇ ಇದ್ದರೂ - ಮೋಟಾರು ಕ್ಯಾಬನ್ನು ಒಳಗೊಳ್ಳುತ್ತದೆ;

(8) "ವ್ಯಾಪಾರಿ" ಎಂಬ ಪದವು,-

(ಎ) [ x x x x ]

(ಬಿ) ಅಡಿಗಟ್ಟಿಗೆ ಲಗತ್ತಿಸಲು ಒಡಲುಗಳನ್ನು ನಿರ್ಮಿಸುವಲ್ಲಿ; ಅಥವಾ

(ಸಿ) ಮೋಟಾರು ವಾಹನಗಳನ್ನು ರಿಪೇರಿ ಮಾಡುವಲ್ಲಿ; ಅಥವಾ

(ಡಿ) ಮೋಟಾರು ವಾಹನಗಳ ಆಧಾರ, ಗುತ್ತಿಗೆ ಅಥವಾ ಕಂತು ಖರೀದಿಯ ವ್ಯವಹಾರದಲ್ಲಿ

- ತೊಡಗಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(9) ಇನ್ನೊಂದು ಮೋಟಾರು ವಾಹನದ ಸಹಾಯದಿಂದ ಎಳೆಯಲ್ಪಡುವ ಮೋಟಾರು ವಾಹನದ ಸಂಬಂಧದಲ್ಲಿ "ಚಾಲಕ" ಎಂದರೆ ಎಳೆಯಲ್ಪಡುವ ವಾಹನದ ಚಾಲಕನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(10) "ಚಾಲನೆಯ ಲೈಸೆನ್ಸು" ಎಂದರೆ IIನೇ ಅಧ್ಯಾಯದ ಮೇರೆಗೆ ಒಂದು ಮೋಟಾರು ವಾಹನವನ್ನು ಅಥವಾ ಯಾವುದೇ ನಿರ್ದಿಷ್ಟ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನವನ್ನು ನಡೆಸುವುದನ್ನು ಕಲಿಯುತ್ತಿರುವವನಾಗಿ ಅಲ್ಲದೆ, ಅದರಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಯನ್ನು ಚಾಲನೆ ಮಾಡಲು ಅಧಿಕೃತಗೊಳಿಸುವ ಸಕ್ಷಮ ಪ್ರಾಧಿಕಾರವು ನೀಡಿದ ಲೈಸನ್ಸು;

(11) "ಶಿಕ್ಷಣ ಸಂಸ್ಥೆ ಬಸ್" ಎಂದರೆ ಕಾಲೇಜು, ಶಾಲೆ ಅಥವಾ ಇತರ ಶಿಕ್ಷಣ ಸಂಸ್ಥೆಯು ಹೊಂದಿರುವ ಮತ್ತು ಆ ಶಿಕ್ಷಣ ಸಂಸ್ಥೆಯ ಯಾವುದೇ ಚಟುವಟಿಕೆಗಳ ಸಂಬಂಧದಲ್ಲಿ ಅದರ ವಿದ್ಯಾರ್ಥಿಗಳನ್ನು ಅಥವಾ ಸಿಬ್ಬಂದಿಯನ್ನು ಸಾಗಿಸುವ ಏಕೋದ್ದೇಶಕ್ಕಾಗಿ ಉಪಯೋಗಿಸುವ ಆಮ್ನಿ ಬಸ್;

(12) "ಪ್ರಯಾಣದರಗಳು" ಎಂಬುದು ಸೀಸನ್ ಟಿಕೆಟ್‌ಗಾಗಿ ಅಥವಾ ಕರಾರು ವಾಹನದ ಬಾಡಿಗೆ ಸಂಬಂಧದಲ್ಲಿ ಸಂದಾಯವಾಗತಕ್ಕ ಮೊತ್ತಗಳನ್ನು ಒಳಗೊಳ್ಳುತ್ತದೆ;

(13) "ಸರಕುಗಳು" ಎಂಬುದು ಜಾನುವಾರುಗಳನ್ನು, ಜೀವಂತ ವ್ಯಕ್ತಿಗಳನ್ನು ಹೊರತುಪಡಿಸಿ, ವಾಹನವು ಸಾಗಿಸುವ (ವಾಹನದಲ್ಲಿ ವಾಡಿಕೆಯಾಗಿ ಬಳಸುವ ಸಾಧನ ಸಾಮಗ್ರಿಗಳ ಹೊರತಾದ) ಯಾವುದೇ ವಸ್ತುವನ್ನು ಒಳಗೊಳ್ಳುತ್ತದೆ. ಆದರೆ ಮೋಟಾರು ಕಾರಿನಲ್ಲಿ ಅಥವಾ ಮೋಟಾರು ಕಾರಿಗೆ ಜೋಡಿಸಿದ ಹಿಂಬಂಡಿಯಲ್ಲಿ ಸಾಗಿಸುವ ಸಾಮಾನು ಸರಂಜಾಮು ಅಥವಾ ವೈಯಕ್ತಿಕ ವಸ್ತುಗಳನ್ನು ಅಥವಾ ಆ ವಾಹನದಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರ ವೈಯಕ್ತಿಕ ಸಾಮಾನು ಸರಂಜಾಮುಗಳನ್ನು ಒಳಗೊಳ್ಳುವುದಿಲ್ಲ;

(14) "ಸರಕು ವಾಹನ" ಎಂದರೆ ಸರಕುಗಳನ್ನು ಸಾಗಿಸುವುದಕ್ಕಾಗಿ ಮಾತ್ರ ಉಪಯೋಗಿಸಲು ನಿರ್ಮಿಸಿರುವ ಅಥವಾ ಅಳವಡಿಸಿಕೊಂಡಿರುವ ಯಾವುದೇ ಮೋಟಾರು ವಾಹನ ಅಥವಾ ಹಾಗೆ ನಿರ್ಮಿಸದಿರುವ ಅಥವಾ ಅಳವಡಿಸದಿರುವ ವಾಹನವನ್ನು ಸರಕು ಸಾಗಣೆಗೆ ಬಳಸಿದಾಗ ಆ ಮೋಟಾರು ವಾಹನ;

(15) ಯಾವುದೇ ವಾಹನಕ್ಕೆ ಸಂಬಂಧಿಸಿ "ವಾಹನದ ಒಟ್ಟು ಭಾರ" ಎಂದರೆ ಆ ವಾಹನಕ್ಕೆ ಅನುಮತಿಸಬಹುದಾದಂತೆ ನೋಂದಣಿ ಪ್ರಾಧಿಕಾರವು ಪ್ರಮಾಣೀಕರಿಸಿ ನೋಂದಾಯಿಸಿದ ವಾಹನದ ಮತ್ತು ಹೇರಿನ ಒಟ್ಟು ತೂಕ;

(16) "ಭಾರಿ ಸರಕು ವಾಹನ" ಎಂದರೆ ಯಾವ ವಾಹನದ ಒಟ್ಟು ಭಾರವು ಅಥವಾ ಯಾವ ಟ್ರಾಕ್ಟರಿನ ಅಥವಾ ರೋಡ್ ರೋಲರಿನ ಪೈಕಿ ಯಾವುದೇ ಒಂದು ಖಾಲಿ ತೂಕವು 12,000 ಕಿಲೋ ಗ್ರಾಂಗಳನ್ನು ಮೀರುವುದೋ ಆ ಯಾವುದೇ ಸರಕು ವಾಹನ ಅಥವಾ ಟ್ರಾಕ್ಟರು ಅಥವಾ ರೋಡ್ ರೋಲರ್;

(17) "ಪ್ರಯಾಣಿಕರ ಭಾರಿ ಮೋಟಾರು ವಾಹನ" ಎಂದರೆ ಯಾವ ವಾಹನದ ಅಥವಾ ಯಾವ ಮೋಟಾರು ಕಾರಿನ ಖಾಲಿ ತೂಕವು 12,000 ಕಿಲೋ ಗ್ರಾಂಗಳನ್ನು ಮೀರುವುದೋ ಆ ಯಾವುದೇ ಸಾರ್ವಜನಿಕ ಸೇವಾ ವಾಹನ ಅಥವಾ ಖಾಸಗಿ ಸೇವಾ ವಾಹನ ಅಥವಾ ಶಿಕ್ಷಣ ಸಂಸ್ಥೆಯ ಬಸ್ ಅಥವಾ ಆಮ್ನಿ ಬಸ್ ಅಥವಾ ಒಂದು ಮೋಟಾರು ಕಾರು;

(18) ''ಅಶಕ್ತರ ವಾಹನ'' ಎಂದರೆ ಯಾವುದೇ ದೈಹಿಕ ನ್ಯೂನತೆ ಅಥವಾ ಅಶಕ್ತತೆಯಿಂದ ಬಳಲುತ್ತಿರುವ ವ್ಯಕ್ತಿಯ ಉಪಯೋಗಕ್ಕಾಗಿ ವಿಶೇಷವಾಗಿ ರೂಪಿಸಿದ ಮತ್ತು ನಿರ್ಮಿಸಿದ, ಆದರೆ ಕೇವಲ ಅಳವಡಿಸಿಕೊಂಡಿಲ್ಲದ ಮತ್ತು ಆ ವ್ಯಕ್ತಿಯು ಅಥವಾ ಅವನ ಸಲುವಾಗಿ ಮಾತ್ರ ಉಪಯೋಗಿಸಲಾಗುವ ಮೋಟಾರು ವಾಹನ;

(19) ''ಕಲಿಕೆ ಲೈಸೆನ್ಸು'' ಎಂದರೆ II ನೇ ಅಧ್ಯಾಯದ ಮೇರೆಗೆ ಸಕ್ಷಮ ಪ್ರಾಧಿಕಾರವು ಒಂದು ಮೋಟಾರು ವಾಹನವನ್ನು ಅಥವಾ ಯಾವುದೇ ನಿರ್ದಿಷ್ಟ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನವನ್ನು ಕಲಿಯುತ್ತಿರುವವನಾಗಿ ನಡೆಸುವುದಕ್ಕೆ ಅಂಥ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಯನ್ನು ಅಧಿಕೃತಗೊಳಿಸಿ ನೀಡಿದ ಲೈಸೆನ್ಸು;

(20) ''ಲೈಸೆನ್ಸು ನೀಡಿಕೆ ಪ್ರಾಧಿಕಾರಿ'' ಎಂದರೆ IIನೇ ಅಧ್ಯಾಯ ಅಥವಾ ಸಂದರ್ಭಾನುಸಾರ IIIನೇ ಅಧ್ಯಾಯದ ಮೇರೆಗೆ ಲೈಸೆನ್ಸುಗಳನ್ನು ನೀಡಲು ಅಧಿಕೃತನಾದ ಪ್ರಾಧಿಕಾರಿ;

(21) ''ಲಘು ಮೋಟಾರು ವಾಹನ '' ಎಂದರೆ ಯಾವ ಸಾರಿಗೆ ವಾಹನ ಅಥವಾ ಯಾವ ಆಮ್ನಿ ಬಸ್ಸಿನ ಪೈಕಿ ಯಾವೊಂದರ ಒಟ್ಟು ವಾಹನ ಭಾರವು ಅಥವಾ ಯಾವ ಮೋಟಾರು ಕಾರು ಅಥವಾ ಟ್ರಾಕ್ಟರು ಅಥವಾ ರೋಡ್ ರೋಲರಿನ ಖಾಲಿ ತೂಕವು 7,500 ಕಿಲೋ ಗ್ರಾಂಗಳಿಗೆ ಮೀರುವುದಿಲ್ಲವೋ ಆ ಯಾವುದೇ ಸಾರಿಗೆ ವಾಹನ ಅಥವಾ ಆಮ್ನಿ ಬಸ್ ಅಥವಾ ಮೋಟಾರು ಕಾರು ಅಥವಾ ಟ್ರಾಕ್ಟರ್ ಅಥವಾ ರೋಡ್ ರೋಲರ್;

(21ಎ) ''ತಯಾರಕ'' ಎಂದರೆ ಮೋಟಾರು ವಾಹನಗಳ ತಯಾರಿಕೆಯಲ್ಲಿ ನಿರತನಾಗಿರುವ ವ್ಯಕ್ತಿ;

(22) ''ಮ್ಯಾಕ್ಸಿಕ್ಯಾಬ್'' ಎಂದರೆ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ, ಚಾಲಕನನ್ನು ಬಿಟ್ಟು ಆರಕ್ಕಿಂತ ಹೆಚ್ಚು ಪ್ರಯಾಣಿಕರನ್ನು, ಆದರೆ ಹನ್ನೆರಡಕ್ಕಿಂತ ಹೆಚ್ಚಿಲ್ಲದ ಪ್ರಯಾಣಿಕರನ್ನು ಸಾಗಿಸಲು ನಿರ್ಮಿಸಿದ ಅಥವಾ ಅಳವಡಿಸಿಕೊಂಡ ಯಾವುದೇ ಮೋಟಾರು ವಾಹನ;

(23) ''ಮಧ್ಯಮ ಸರಕು ವಾಹನ'' ಎಂದರೆ ಲಘು ಮೋಟಾರು ವಾಹನ ಅಥವಾ ಭಾರಿ ಸರಕು ವಾಹನವಲ್ಲದ ಯಾವುದೇ ಸರಕು ವಾಹನ;

(24) ''ಪ್ರಯಾಣಿಕರ ಮಧ್ಯಮ ಮೋಟಾರು ವಾಹನ'' ಎಂದರೆ ಮೋಟಾರು ಸೈಕಲ್, ಅಶಕ್ತರ ವಾಹನ, ಲಘು ಮೋಟಾರು ವಾಹನ ಅಥವಾ ಪ್ರಯಾಣಿಕರ ಭಾರಿ ಮೋಟಾರು ವಾಹನ - ಇವುಗಳ ಹೊರತಾದ ಯಾವುದೇ ಸಾರ್ವಜನಿಕ ಸೇವಾ ವಾಹನ ಅಥವಾ ಖಾಸಗಿ ಸೇವಾ ವಾಹನ ಅಥವಾ ಶಿಕ್ಷಣ ಸಂಸ್ಥೆ ಬಸ್;

(25) ''ಮೋಟಾರು ಕ್ಯಾಬ್'' ಎಂದರೆ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ, ಚಾಲಕನನ್ನು ಬಿಟ್ಟು ಆರಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸಲು ನಿರ್ಮಿಸಲಾದ ಅಥವಾ ಅಳವಡಿಸಲಾದ ಯಾವುದೇ ಮೋಟಾರು ವಾಹನ;

(26) ''ಮೋಟಾರು ಕಾರು'' ಎಂದರೆ ಸಾರಿಗೆ ವಾಹನ, ಆಮ್ನಿ ಬಸ್, ರೋಡ್ ರೋಲರ್, ಟ್ರಾಕ್ಟರ್, ಮೋಟಾರು ಸೈಕಲ್ ಅಥವಾ ಅಶಕ್ತರ ವಾಹನ - ಇವುಗಳ ಹೊರತಾದ ಯಾವುದೇ ಮೋಟಾರು ವಾಹನ;

(27) ''ಮೋಟಾರು ಸೈಕಲ್'' ಎಂದರೆ ಮೋಟಾರು ವಾಹನಕ್ಕೆ ಜೋಡಿಸಲಾದ ಒಂದು ಹೆಚ್ಚಿನ ಚಕ್ರವನ್ನುಳ್ಳ, ಬೇರ್ಪಡಿಸಬಹುದಾದ ಯಾವುದೇ ಪಕ್ಕ ಕಾರನ್ನು ಒಳಗೊಂಡ ಎರಡು ಚಕ್ರಗಳ ಮೋಟಾರು ವಾಹನ;

(28) ''ಮೋಟಾರು ವಾಹನ'' ಅಥವಾ ''ವಾಹನ'' ಎಂದರೆ ಬಾಹ್ಯ ಅಥವಾ ಆಂತರಿಕ ಮೂಲದಿಂದ ಆದರೆ ಚಲನಶಕ್ತಿಯನ್ನು ರವಾನಿಸಿದ ಮತ್ತು ರಸ್ತೆಗಳ ಮೇಲೆ ಬಳಕೆಗಾಗಿ ಅಳವಡಿಸಲಾದ ಯಾಂತ್ರಿಕವಾಗಿ ಚಲಿಸುವ ಯಾವುದೇ ವಾಹನ ಮತ್ತು ಅದು, ಒಡಲನ್ನು ಜೋಡಿಸಿಲ್ಲದ ಒಂದು ಅಡಿಗಟ್ಟನ್ನು ಮತ್ತು ಒಂದು ಹಿಂಬಂಡಿಯನ್ನು ಒಳಗೊಳ್ಳುತ್ತದೆ. ಆದರೆ ಜೋಡಿಸಿದ ಕಂಬಿಗಳ ಮೇಲೆ ಓಡಾಡುವ ವಾಹನವನ್ನು ಅಥವಾ ಒಂದು ಕಾರ್ಖಾನೆಯಲ್ಲಿ ಅಥವಾ ಇನ್ನಾವುದೇ ಆವೃತ ಆವರಣಗಳಲ್ಲಿ ಮಾತ್ರ ಉಪಯೋಗಿಸಲು ಅಳವಡಿಸಲಾದ ವಿಶೇಷ ಪ್ರಕಾರದ ವಾಹನವನ್ನು ಅಥವಾ ಇಪ್ಪತ್ತೈದು ಘನ ಸೆಂಟಿಮೀಟರುಗಳನ್ನು ಮೀರದ ಸಾಮರ್ಥ್ಯದ ಇಂಜಿನ್‌ನ್ನು ಜೋಡಿಸಿದ ನಾಲ್ಕಕ್ಕಿಂತ ಕಡಿಮೆ ಚಕ್ರಗಳನ್ನು ಹೊಂದಿರುವ ವಾಹನವನ್ನು ಒಳಗೊಳ್ಳುವುದಿಲ್ಲ;

(29) ''ಆಮ್ನಿ ಬಸ್'' ಎಂದರೆ ಚಾಲಕನನ್ನು ಬಿಟ್ಟು ಆರಕ್ಕಿಂತ ಹೆಚ್ಚು ಜನರನ್ನು ಸಾಗಿಸಲು ನಿರ್ಮಿಸಿದ ಅಥವಾ ಅಳವಡಿಸಿದ ಯಾವುದೇ ಮೋಟಾರು ವಾಹನ;

(30) ''ಮಾಲೀಕ'' ಎಂದರೆ ಯಾವ ವ್ಯಕ್ತಿಯ ಹೆಸರಿನಲ್ಲಿ ಮೋಟಾರು ವಾಹನವು ನೋಂದಾಯಿತವಾಗಿದೆಯೋ ಆ ವ್ಯಕ್ತಿ ಮತ್ತು ಅಂಥ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ಅಂಥ ಅಪ್ರಾಪ್ತ ವಯಸ್ಕನ ಪಾಲಕ ಮತ್ತು ಬಾಡಿಗೆ ಖರೀದಿ ಒಪ್ಪಂದ

ಅಥವಾ ಗುತ್ತಿಗೆ ಒಪ್ಪಂದ ಅಥವಾ ಆಧಾರ ಒಪ್ಪಂದಕ್ಕೆ ಒಳಪಟ್ಟಿರುವ ಮೋಟಾರು ವಾಹನದ ಸಂಬಂಧದಲ್ಲಿ, ಆ ಒಪ್ಪಂದದ ಮೇರೆಗೆ ವಾಹನದ ಸ್ವಾಧೀನ ಹೊಂದಿರುವ ವ್ಯಕ್ತಿ;

(31) "ಪರ್ಮಿಟ್ಟು" ಎಂದರೆ ಮೋಟಾರು ವಾಹನವನ್ನು ಸಾರಿಗೆ ವಾಹನವನ್ನಾಗಿ ಉಪಯೋಗಿಸಲು ಅಧಿಕೃತಗೊಳಿಸಿ ರಾಜ್ಯ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಯು ಅಥವಾ ಈ ಅಧಿನಿಯಮದ ಮೇರೆಗೆ ಈ ಬಗ್ಗೆ ನಿಯಮಿಸಲಾದ ಪ್ರಾಧಿಕಾರಿಯು ಕೊಟ್ಟ ಪರ್ಮಿಟ್ಟು;

(32) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(33) "ಖಾಸಗಿ ಸೇವಾ ವಾಹನ" ಎಂದರೆ ಚಾಲಕನನ್ನು ಹೊರತುಪಡಿಸಿ ಆರಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಸಾಗಿಸಲು ಮತ್ತು ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಅಲ್ಲದೆ ಅನ್ಯಥಾ ಅಂಥ ವಾಹನದ ಮಾಲೀಕನು ಅಥವಾ ಅವನ ಪರವಾಗಿ ಅವನ ವ್ಯಾಪಾರ ಅಥವಾ ವ್ಯವಹಾರಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ವ್ಯಕ್ತಿಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಸಾಮಾನ್ಯವಾಗಿ ಉಪಯೋಗಿಸಲು ನಿರ್ಮಿಸಿದ ಅಥವಾ ಅಳವಡಿಸಿದ ಮೋಟಾರು ವಾಹನ, ಆದರೆ ಇದು ಸಾರ್ವಜನಿಕ ಉದ್ದೇಶಗಳಿಗಾಗಿ ಉಪಯೋಗಿಸಲಾಗುವ ಮೋಟಾರು ವಾಹನವನ್ನು ಒಳಗೊಳ್ಳುವುದಿಲ್ಲ;

(34) "ಸಾರ್ವಜನಿಕ ಸ್ಥಳ" ಎಂದರೆ ಸಾರ್ವಜನಿಕರಿಗೆ ಪ್ರವೇಶಾಧಿಕಾರವಿರುವ, ರಾಜಮಾರ್ಗವಾಗಿರುವ ಅಥವಾ ಆಗಿಲ್ಲದಿರುವ ರಸ್ತೆ, ಬೀದಿ, ಮಾರ್ಗ ಅಥವಾ ಇತರ ಸ್ಥಳ ಮತ್ತು ಇದು ಮಜಲು ವಾಹನವು ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಅಥವಾ ಇಳಿಸುವಂಥ ಯಾವುದೇ ಸ್ಥಳ ಅಥವಾ ನಿಲ್ದಾಣವನ್ನು ಒಳಗೊಳ್ಳುತ್ತದೆ;

(35) "ಸಾರ್ವಜನಿಕ ಸೇವಾ ವಾಹನ" ಎಂದರೆ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಪ್ರಯಾಣಿಕರನ್ನು ಸಾಗಿಸಲು ಉಪಯೋಗಿಸುವ ಅಥವಾ ಉಪಯೋಗಿಸಲು ಅಳವಡಿಸಲಾದ ಯಾವುದೇ ಮೋಟಾರು ವಾಹನ ಮತ್ತು ಇದು ಮ್ಯಾಕ್ಸಿಕ್ಯಾಬ್, ಮೋಟಾರು ಕ್ಯಾಬ್, ಕರಾರು ವಾಹನ ಮತ್ತು ಮಜಲು ವಾಹನವನ್ನೂ ಒಳಗೊಳ್ಳುತ್ತದೆ;

(36) ಯಾವುದೇ ವಾಹನದ ಅಚ್ಚಿಗೆ ಸಂಬಂಧಿಸಿ, "ನೋಂದಾಯಿತ ಅಚ್ಚುಭಾರ" ಎಂದರೆ ಆ ಅಚ್ಚಿನ ಬಗ್ಗೆ ಅನುಮತಿಸಬಹುದಾದಂತೆ ನೋಂದಣಿ ಪ್ರಾಧಿಕಾರಿಯು ಪ್ರಮಾಣೀಕರಿಸಿದ ಮತ್ತು ನೋಂದಾಯಿಸಿದ ಅಚ್ಚುಭಾರ;

(37) "ನೋಂದಣಿ ಪ್ರಾಧಿಕಾರಿ" ಎಂದರೆ IVನೇ ಅಧ್ಯಾಯದ ಮೇರೆಗೆ ಮೋಟಾರು ವಾಹನಗಳನ್ನು ನೋಂದಾಯಿಸಲು ಅಧಿಕೃತನಾದ ಪ್ರಾಧಿಕಾರಿ;

(38) "ಮಾರ್ಗ" ಎಂದರೆ ಒಂದು ಮೋಟಾರು ವಾಹನವು ಒಂದು ಕೊನೆಯಿಂದ ಇನ್ನೊಂದು ಕೊನೆಯ ನಡುವೆ ಕ್ರಮಿಸಬಹುದಾದ ಹೆದ್ದಾರಿಯನ್ನು ನಿರ್ದಿಷ್ಟಪಡಿಸುವ ಒಂದು ಪ್ರಯಾಣ ಪಥ;

(39) "ಸೆಮಿ ಟ್ರೇಲರ್" ಎಂದರೆ (ಟ್ರೇಲರನ್ನು ಹೊರತುಪಡಿಸಿ) ಯಾಂತ್ರಿಕವಾಗಿ ಚಾಲಿತವಲ್ಲದ ಮೋಟಾರು ವಾಹನಕ್ಕೆ ಜೋಡಿಸಲು ಉದ್ದೇಶಿಸಿರುವ ಮತ್ತು ಅದರ ಒಂದು ಭಾಗವನ್ನು ಮೋಟಾರು ವಾಹನದ ಮೇಲೆ ಇರುವಂತೆ ಮತ್ತು ಅದರ ಭಾರದ ಒಂದು ಭಾಗವನ್ನು ಮೋಟಾರು ವಾಹನವು ಒಯ್ಯುವಂತೆ ರಚಿಸಲಾಗಿರುವ ವಾಹನ;

(40) "ಮಜಲು ವಾಹನ" ಎಂದರೆ ಪೂರ್ಣ ಪ್ರಯಾಣಕ್ಕೆ ಅಥವಾ ಪ್ರಯಾಣದ ಮಜಲುಗಳಿಗೆ ಪ್ರತ್ಯೇಕ ಪ್ರಯಾಣಿಕರು ಸಂದಾಯ ಮಾಡಿದ ಅಥವಾ ಅವರ ಪರವಾಗಿ ಸಂದಾಯ ಮಾಡಲಾದ ಪ್ರತ್ಯೇಕ ಪ್ರಯಾಣ ದರಗಳಲ್ಲಿ, ಬಾಡಿಗೆಗೆ ಅಥವಾ ಪ್ರತಿಫಲಕ್ಕೆ, ಚಾಲಕನನ್ನು ಹೊರತುಪಡಿಸಿ ಆರಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸಲು ನಿರ್ಮಿಸಿದ ಅಥವಾ ಅಳವಡಿಸಿದ ಮೋಟಾರು ವಾಹನ;

(41) ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿ "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ;

(42) "ರಾಜ್ಯ ಸಾರಿಗೆ ಉದ್ಯಮ" ಎಂದರೆ,-

(i) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ;

(ii) ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ, 1950ರ (1950ರ 64) 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಯಾವುದೇ ರಸ್ತೆ ಸಾರಿಗೆ ನಿಗಮ;

(iii) ಯಾವುದೇ ಪೌರಸಭೆ ಅಥವಾ ಯಾವುದೇ ನಿಗಮ ಅಥವಾ ಕೇಂದ್ರ ಸರ್ಕಾರದ ಅಥವಾ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳ ಒಡೆತನಕ್ಕೆ ಸೇರಿದ ಅಥವಾ ನಿಯಂತ್ರಣಕ್ಕೆ ಒಳಪಟ್ಟ ಕಂಪನಿ;

(iv) ಜಿಲ್ಲಾ ಪರಿಷತ್ತು ಅಥವಾ ಇತರ ಯಾವುದೇ ಅಂಥ ಸ್ಥಳೀಯ ಪ್ರಾಧಿಕಾರ

- ಇವುಗಳು ನಡೆಸುವ ಉದ್ಯಮವಾಗಿರುವಾಗ ರಸ್ತೆ ಸಾರಿಗೆ ಸೇವೆಯನ್ನು ಒದಗಿಸುವ ಯಾವುದೇ ಅಂಥ ಉದ್ಯಮ;

ವಿವರಣೆ:- ಈ ಖಂಡದ ಉದ್ದೇಶಕ್ಕಾಗಿ "ರಸ್ತೆ ಸಾರಿಗೆ ಸೇವೆ" ಎಂದರೆ ಬಾಡಿಗೆ ಅಥವಾ ಪ್ರತಿಫಲಕ್ಕೆ ರಸ್ತೆಯ ಮೂಲಕ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಅವೆರಡನ್ನೂ ಸಾಗಿಸುವ ಮೋಟಾರು ವಾಹನಗಳ ಸೇವೆ;

(43) "ಪ್ರವಾಸಿ ವಾಹನ" ಎಂದರೆ ಈ ಬಗ್ಗೆ ನಿಯಮಿಸಬಹುದಾದಂಥ ವಿಶಿಷ್ಟ ವಿವರಣೆಗಳಿಗನುಸಾರವಾಗಿ ನಿರ್ಮಿಸಿದ ಅಥವಾ ಅಳವಡಿಸಿದ ಮತ್ತು ಸಜ್ಜುಗೊಳಿಸಿದ ಮತ್ತು ಸುಸ್ಥಿತಿಯಲ್ಲಿಟ್ಟುಕೊಂಡು ಬಂದ ಕರಾರು ವಾಹನ;

(44) "ಟ್ರಾಕ್ಟರ್" ಎಂದರೆ (ಮುನ್ನೂಕುವ ಶಕ್ತಿಯ ಉದ್ದೇಶಕ್ಕಾಗಿ ಉಪಯೋಗಿಸಿದ ಸಾಧನವನ್ನು ಹೊರತುಪಡಿಸಿ) ಯಾವುದೇ ಹೊರೆಯನ್ನು ಸಾಗಿಸಲು ಮಾತ್ರವೇ ನಿರ್ಮಿಸದಿರುವ ಮೋಟಾರು ವಾಹನ; ಆದರೆ ಇದರಲ್ಲಿ ರೋಡ್ ರೋಲರು ಒಳಗೊಳ್ಳುವುದಿಲ್ಲ;

(45) "ಸಂಚಾರ ಚಿಹ್ನೆಗಳು" ಎಂಬುದು ಮೋಟಾರು ವಾಹನಗಳ ಚಾಲಕರ ಮಾಹಿತಿ, ಮಾರ್ಗದರ್ಶನ ಅಥವಾ ನಿರ್ದೇಶನಕ್ಕಾಗಿ ಇರುವ ಎಲ್ಲಾ ಸಂಕೇತಗಳು, ಎಚ್ಚರಿಕೆ ಸೂಚಕ ಕಂಬಗಳು, ನಿರ್ದೇಶಕ ಕಂಬಗಳು, ರಸ್ತೆಯ ಮೇಲಿನ ಗುರುತುಗಳು ಅಥವಾ ಇತರ ಸಾಧನಗಳನ್ನು ಒಳಗೊಳ್ಳುತ್ತದೆ;

(46) "ಹಿಂಬಂಡಿ" ಎಂದರೆ ಒಂದು ಮೋಟಾರು ವಾಹನದಿಂದ ಎಳೆಯಲ್ಪಡುವ ಅಥವಾ ಎಳೆಯಲ್ಪಡಲು ಉದ್ದೇಶಿಸಿದ ಅರೆ ಹಿಂಬಂಡಿ ಮತ್ತು ಸೈಡ್ ಕಾರನ್ನು ಹೊರತುಪಡಿಸಿ ಯಾವುದೇ ಇತರ ವಾಹನ;

(47) "ಸಾರಿಗೆ ವಾಹನ" ಎಂದರೆ ಸಾರ್ವಜನಿಕ ಸೇವಾ ವಾಹನ, ಸರಕು ವಾಹನ, ಶಿಕ್ಷಣ ಸಂಸ್ಥೆ ಬಸ್ ಅಥವಾ ಖಾಸಗಿ ಸೇವಾ ವಾಹನ;

(48) "ಖಾಲಿ ತೂಕ" ಎಂದರೆ ವಾಹನ ಅಥವಾ ಹಿಂಬಂಡಿಯು ಕಾರ್ಯನಿರತವಾಗಿರುವಾಗ ಸಾಮಾನ್ಯವಾಗಿ ಉಪಯೋಗಿಸಲಾಗುವ ಎಲ್ಲ ಸಾಧನಗಳನ್ನು ಒಳಗೊಂಡು, ಆದರೆ ಚಾಲಕ ಅಥವಾ ಸಹಾಯಕನ ತೂಕವನ್ನು ಬಿಟ್ಟು ವಾಹನದ ಅಥವಾ ಹಿಂಬಂಡಿಯ ತೂಕ ಮತ್ತು ಬದಲಿ ಭಾಗಗಳನ್ನು ಅಥವಾ ಅಂಗಗಳನ್ನು ಉಪಯೋಗಿಸುವಲ್ಲಿ ವಾಹನದ ಖಾಲಿ ತೂಕ ಎಂದರೆ, ಅಂಥ ಬದಲಿ ಭಾಗ ಅಥವಾ ಅಂಗದ ಅತಿ ಹೆಚ್ಚಿನ ತೂಕವೂ ಸೇರಿದಂತೆ ವಾಹನದ ತೂಕ;

(49) "ತೂಕ" ಎಂದರೆ ವಾಹನವು ನಿಂತಿರುವ ತಲಕ್ಕೆ ವಾಹನದ ಚಕ್ರಗಳ ಮೂಲಕ ತತ್ಕಾಲದಲ್ಲಿ ರವಾನಿಸಿದ ಒಟ್ಟು ತೂಕ.

## ಅಧ್ಯಾಯ - II

## ಮೋಟಾರು ವಾಹನಗಳ ಚಾಲಕರಿಗೆ ಲೈಸೆನ್ಸು ನೀಡಿಕೆ

3. ಚಾಲನ ಲೈಸೆನ್ಸಿನ ಅವಶ್ಯಕತೆ:- (1) ವಾಹನವನ್ನು ನಡೆಸುವುದಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಧಿಕೃತಗೊಳಿಸಿ ನೀಡಿರುವ, ಚಾಲ್ತಿಯಲ್ಲಿರುವ ಚಾಲನ ಲೈಸೆನ್ಸನ್ನು ಹೊಂದಿದ್ದ ಹೊರತು, ಆ ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸತಕ್ಕದ್ದಲ್ಲ; ಮತ್ತು ಯಾರೇ ವ್ಯಕ್ತಿಯು 75ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಯೋಜನೆಯ ಮೇರೆಗೆ ಸ್ವಂತ ಉಪಯೋಗಕ್ಕಾಗಿ ಬಾಡಿಗೆಗೆ ಪಡೆದ ಅಥವಾ ಬಾಡಿಗೆಗೆ ಒದಗಿಸಿದ ಮೋಟಾರು ಕ್ಯಾಬ್ ಅಥವಾ ಮೋಟಾರು ಸೈಕಲ್ ಅಲ್ಲದ ಸಾರಿಗೆ ವಾಹನವನ್ನು ನಡೆಸಲು ಚಾಲನೆಯ ಲೈಸೆನ್ಸನ್ನು ಅವನಿಗೆ ವಿಶೇಷವಾಗಿ ನೀಡಲಾಗಿದ್ದ ಹೊರತು ನಡೆಸತಕ್ಕದ್ದಲ್ಲ.

(2) ಮೋಟಾರು ವಾಹನವನ್ನು ನಡೆಸುವ ಬಗ್ಗೆ ಶಿಕ್ಷಣ ಪಡೆಯುತ್ತಿರುವ ಒಬ್ಬ ವ್ಯಕ್ತಿಗೆ ಯಾವ ಷರತ್ತುಗಳಿಗೊಳಪಟ್ಟು (1) ನೇ ಉಪಪ್ರಕರಣವು ಅನ್ವಯಿಸತಕ್ಕದ್ದಲ್ಲವೋ ಆ ಷರತ್ತುಗಳನ್ನು ಕೇಂದ್ರ ಸರ್ಕಾರವು ನಿಯಮಿಸಬಹುದು.

4. ಮೋಟಾರು ವಾಹನಗಳನ್ನು ನಡೆಸುವ ಬಗ್ಗೆ ವಯೋಮಿತಿ:- (1) ಹದಿನೆಂಟು ವರ್ಷ ತುಂಬದ ಯಾರೇ ವ್ಯಕ್ತಿಯೂ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸತಕ್ಕದ್ದಲ್ಲ :

ಪರಂತು, ಹದಿನಾರು ವರ್ಷ ತುಂಬಿದ ಯಾರೇ ವ್ಯಕ್ತಿಯು ಗೇರ್ 50 ಸಿಸಿ ಮೀರದ ಇಂಜಿನ್ ಸಾಮರ್ಥ್ಯವುಳ್ಳ ಮೋಟಾರು ಸೈಕಲನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆಸಬಹುದು.

(2) 18ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಇಪ್ಪತ್ತು ವರ್ಷ ತುಂಬದ ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಾರಿಗೆ ವಾಹನವನ್ನು ನಡೆಸತಕ್ಕದ್ದಲ್ಲ.

(3) ಯಾವ ವರ್ಗದ ವಾಹನವನ್ನು ನಡೆಸಲು ಒಬ್ಬ ವ್ಯಕ್ತಿಯು ಅರ್ಜಿ ಸಲ್ಲಿಸಿದ್ದಾನೋ ಆ ವ್ಯಕ್ತಿಯು ಈ ಪ್ರಕರಣದ ಮೇರೆಗೆ ಆ ವರ್ಗದ ವಾಹನವನ್ನು ನಡೆಸಲು ಅರ್ಹನಾಗಿದ್ದ ಹೊರತು ಕಲಿಯುವ ಅಥವಾ ನಡೆಸುವ ಯಾವುದೇ ಲೈಸೆನ್ಸನ್ನು ಅಂಥ ವ್ಯಕ್ತಿಗೆ ನೀಡತಕ್ಕದ್ದಲ್ಲ.

5. 3 ಮತ್ತು 4ನೇ ಪ್ರಕರಣಗಳ ಉಲ್ಲಂಘನೆಯ ಬಗ್ಗೆ ಮೋಟಾರು ವಾಹನಗಳ ಮಾಲೀಕರ ಜವಾಬ್ದಾರಿ:- ಮೋಟಾರು ವಾಹನದ ಯಾರೇ ಮಾಲೀಕ ಅಥವಾ ಅದನ್ನು ಹೊಂದಿರುವ ವ್ಯಕ್ತಿಯು, 3ನೇ ಪ್ರಕರಣದ ಅಥವಾ 4ನೇ ಪ್ರಕರಣದ ಉಪಬಂಧಗಳನ್ನು ಪೂರೈಸದಿರುವ ಯಾರೇ ವ್ಯಕ್ತಿಗೆ ವಾಹನವನ್ನು ನಡೆಸಲು ಬಿಡತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿ ನೀಡತಕ್ಕದ್ದಲ್ಲ.

6. ಚಾಲನ ಲೈಸೆನ್ಸುಗಳನ್ನು ಹೊಂದಿರುವ ಬಗ್ಗೆ ನಿರ್ಬಂಧಗಳು:- (1) ಒಂದು ಮೋಟಾರು ವಾಹನವನ್ನು ನಡೆಸಲು 18ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ನೀಡಲಾದ ಕಲಿಕೆಯ ಅಥವಾ ನಡೆಸುವ ಲೈಸೆನ್ಸಿನ ಅಥವಾ 139 ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಅಧಿಕೃತಗೊಳಿಸಿದ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದಂಥ ವ್ಯಕ್ತಿಯನ್ನು ಹೊರತುಪಡಿಸಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಚಾಲನ ಲೈಸೆನ್ಸನ್ನು ಹೊಂದಿರುವ ಯಾರೇ ವ್ಯಕ್ತಿಯು ಇತರ ಚಾಲನ ಲೈಸನ್ಸನ್ನು ಹೊಂದಿರತಕ್ಕದ್ದಲ್ಲ.

(2) ಚಾಲನ ಲೈಸೆನ್ಸು ಅಥವಾ ಕಲಿಕೆಯ ಲೈಸೆನ್ಸನ್ನು ಪಡೆದಿರುವ ಯಾರೇ ವ್ಯಕ್ತಿಯು ಅದನ್ನು ಉಪಯೋಗಿಸಲು ಇತರ ವ್ಯಕ್ತಿಗೆ ಅನುಮತಿ ನೀಡತಕ್ಕದ್ದಲ್ಲ.

(3) ಚಾಲನ ಲೈಸೆನ್ಸು ಯಾವ ವರ್ಗದ ವಾಹನಗಳನ್ನು ನಡೆಸಲು ಲೈಸೆನ್ಸು ಧಾರಕನನ್ನು ಅಧಿಕೃತಗೊಳಿಸುವುದೋ ಆ ವಾಹನ ವರ್ಗಗಳಿಗೆ ಮತ್ತಷ್ಟು ವಾಹನಗಳನ್ನು ಸೇರಿಸದಂತೆ 9ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸು ನೀಡಿಕೆ ಪ್ರಾಧಿಕಾರಿಯನ್ನು ಈ ಪ್ರಕರಣದಲ್ಲಿರುವುದು ಯಾವುದೂ ಪ್ರತಿಬಂಧಿಸತಕ್ಕದ್ದಲ್ಲ.

7. ಕೆಲವು ವಾಹನಗಳಿಗೆ ಕಲಿಕೆಯ ಲೈಸೆನ್ಸುಗಳನ್ನು ನೀಡುವ ಬಗ್ಗೆ ನಿರ್ಬಂಧಗಳು:- (1) ಯಾರೇ ವ್ಯಕ್ತಿಯು, ಕನಿಷ್ಠ ಒಂದು ವರ್ಷದವರೆಗೆ ಲಘು ಮೋಟಾರು ವಾಹನವನ್ನು ನಡೆಸಲು ಚಾಲನ ಲೈಸೆನ್ಸನ್ನು ಹೊಂದಿದ್ದ ಹೊರತು ಅವನಿಗೆ ಕಲಿಕೆ ಲೈಸೆನ್ಸನ್ನು ನೀಡತಕ್ಕದ್ದಲ್ಲ.

(2) ಕಲಿಕೆಯ ಲೈಸೆನ್ಸನ್ನು ಪಡೆದುಕೊಳ್ಳಲು ಅಪೇಕ್ಷಿಸುವ ವ್ಯಕ್ತಿಯ ಪಾಲನೆಯನ್ನು ನೋಡಿಕೊಳ್ಳುವ ವ್ಯಕ್ತಿಯು ಬರಹದಲ್ಲಿ ಒಪ್ಪಿಗೆಯನ್ನು ಕೊಟ್ಟ ಹೊರತು, ಹದಿನೆಂಟು ವರ್ಷ ತುಂಬದ ಯಾರೇ ವ್ಯಕ್ತಿಗೆ ಗೇರ್ ಇಲ್ಲದ ಮೋಟಾರು ಸೈಕಲ್ಲನ್ನು ನಡೆಸಲು ಕಲಿಕೆಯ ಲೈಸೆನ್ಸನ್ನು ನೀಡತಕ್ಕದ್ದಲ್ಲ.

8. ಕಲಿಕೆಯ ಲೈಸೆನ್ಸ್ ನೀಡಿಕೆ:- (1) ಒಂದು ಮೋಟಾರು ವಾಹನವನ್ನು ನಡೆಸಲು 4ನೇ ಪ್ರಕರಣದ ಮೇರೆಗೆ ಅನರ್ಹನಾಗಿರದ ಮತ್ತು ಒಂದು ಚಾಲನ ಲೈಸೆನ್ಸನ್ನು ಹೊಂದಲು ಅಥವಾ ಪಡೆಯಲು ತತ್ಕಾಲದಲ್ಲಿ ಅನರ್ಹನಾಗಿರದ ಯಾರೇ ವ್ಯಕ್ತಿಯು, 7ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು,-

(i) ಅವನು ಸಾಮಾನ್ಯವಾಗಿ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುವ, ಅಥವಾ

(ii) ಅವನು ಮೋಟಾರು ವಾಹನವನ್ನು ನಡೆಸುವ ಬಗ್ಗೆ ಶಿಕ್ಷಣವನ್ನು ಪಡೆಯಲು ಉದ್ದೇಶಿಸಿರುವ 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಶಾಲೆ ಅಥವಾ ಸಂಸ್ಥೆಯು ಇರುವ

- ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸು ಪ್ರಾಧಿಕಾರಿಗೆ ತನಗೆ ಕಲಿಕೆ ಲೈಸೆನ್ಸು ನೀಡಬೇಕೆಂದು ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದರ ಜೊತೆಗೆ ನಿಯಮಿಸಬಹುದಾದಂಥ ದಸ್ತಾವೇಜುಗಳು ಮತ್ತು ಫೀಜು ಇರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯ ಜೊತೆಗೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರುವ ಮತ್ತು ರಾಜ್ಯ ಸರ್ಕಾರವು ಈ ಉದ್ದೇಶಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಿಸಬಹುದಾದಂಥ ನೋಂದಾಯಿತ ವೈದ್ಯಕೀಯ ವೃತ್ತಿಗಾರ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿರುವ ವೈದ್ಯಕೀಯ ಪ್ರಮಾಣ ಪತ್ರವು ಇರತಕ್ಕದ್ದು :

ಪರಂತು, ಸಾರಿಗೆ ವಾಹನವನ್ನು ಹೊರತುಪಡಿಸಿ, ವಾಹನವನ್ನು ನಡೆಸುವ ಲೈಸೆನ್ಸನ್ನು ಪಡೆಯುವ ಸಲುವಾಗಿ ಅಂಥ ಯಾವುದೇ ವೈದ್ಯಕೀಯ ಪ್ರಮಾಣ ಪತ್ರದ ಅವಶ್ಯಕತೆಯಿಲ್ಲ.

(4) ಆ ಅರ್ಜಿಯಿಂದ ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವೈದ್ಯಕೀಯ ಪ್ರಮಾಣ ಪತ್ರದಿಂದ, ಅರ್ಜಿದಾರನು ಯಾವುದೇ ರೋಗ ಅಥವಾ ಅಶಕ್ತತೆಯಿಂದ ನರಳುತ್ತಿದ್ದು ಇದರಿಂದ ಯಾವ ವಾಹನವನ್ನು ನಡೆಸುವುದಕ್ಕಾಗಿ ಅವನು ಕಲಿಕೆಯ ಲೈಸೆನ್ಸನ್ನು ಪಡೆಯಲು ಅರ್ಜಿ ಸಲ್ಲಿಸಿದ್ದನೋ ಆ ಕಲಿಕೆಯ ಲೈಸೆನ್ಸು ಅಧಿಕೃತಗೊಳಿಸುವ ಯಾವುದೇ ವರ್ಗದ ಮೋಟಾರು ವಾಹನವನ್ನು ಅವನು ನಡೆಸುವುದು ಸಾರ್ವಜನಿಕರಿಗೆ ಅಥವಾ ಪ್ರಯಾಣಿಕರಿಗೆ ಅಪಾಯ ಎಂದು ಕಂಡುಬಂದರೆ, ಲೈಸೆನ್ಸು ಪ್ರಾಧಿಕಾರವು ಕಲಿಕೆ ಲೈಸೆನ್ಸು ನೀಡಲು ನಿರಾಕರಿಸತಕ್ಕದ್ದು:

ಪರಂತು, ಅರ್ಜಿದಾರನು ಅಶಕ್ತರ ವಾಹನವನ್ನು ನಡೆಸಲು ಅರ್ಹನೆಂದು ಲೈಸೆನ್ಸು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅಶಕ್ತರ ವಾಹನವನ್ನು ನಡೆಸುವುದಕ್ಕೆ ಮಾತ್ರ ಸೀಮಿತವಾದ ಕಲಿಕೆಯ ಲೈಸೆನ್ಸನ್ನು ಅವನಿಗೆ ನೀಡಬಹುದು.

(5) ಯಾವುದೇ ಕಲಿಕೆಯ ಲೈಸೆನ್ಸನ್ನು ಯಾರೇ ಅರ್ಜಿದಾರನಿಗೆ, ಅವನು ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಮನದಟ್ಟಾಗುವಂತೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪರೀಕ್ಷೆಯಲ್ಲಿ ಉತ್ತೀರ್ಣನಾದ ಹೊರತು ನೀಡತಕ್ಕದ್ದಲ್ಲ.

(6) ಅರ್ಜಿಯನ್ನು ಕ್ರಮಬದ್ಧವಾಗಿ ಸಮುಚಿತ ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಸಲ್ಲಿಸಿರುವಾಗ ಮತ್ತು (3)ನೇ ಉಪಪ್ರಕರಣದ ಮೇರೆಗೆ ಅರ್ಜಿದಾರನು ತನ್ನ ದೈಹಿಕ ಅರ್ಹತೆಯ ಬಗ್ಗೆ ಅಂಥ ಪ್ರಾಧಿಕಾರಿಗೆ ಮನವರಿಕೆ ಮಾಡಿಕೊಟ್ಟಿದ್ದು (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪರೀಕ್ಷೆಯಲ್ಲಿ ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಮನದಟ್ಟಾಗುವಂತೆ ಉತ್ತೀರ್ಣನಾಗಿದ್ದರೆ, ಲೈಸೆನ್ಸು ಪ್ರಾಧಿಕಾರಿಯು, 7ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅರ್ಜಿದಾರನು 4ನೇ ಪ್ರಕರಣದ ಮೇರೆಗೆ ಮೋಟಾರು ವಾಹನವನ್ನು ನಡೆಸಲು ಅನರ್ಹನಾಗಿದ್ದ ಅಥವಾ ಮೋಟಾರು ವಾಹನವನ್ನು ನಡೆಸಲು ಲೈಸೆನ್ಸನ್ನು ಧಾರಣಮಾಡಲು ಅಥವಾ ಪಡೆಯಲು ತತ್ಕಾಲದಲ್ಲಿ ಅವನು ಅನರ್ಹನಾಗಿದ್ದ ಹೊರತು, ಆ ಅರ್ಜಿದಾರನಿಗೆ ಕಲಿಕೆಯ ಲೈಸೆನ್ಸನ್ನು ನೀಡತಕ್ಕದ್ದು:

ಪರಂತು, ಲೈಸೆನ್ಸು ನೀಡಿಕೆ ಪ್ರಾಧಿಕಾರಿಯು, ಅವನು ಸಮುಚಿತ ಲೈಸೆನ್ಸು ನೀಡಿಕೆ ಪ್ರಾಧಿಕಾರವಾಗಿಲ್ಲದಿದ್ದರೂ, ಅರ್ಜಿ ಸಲ್ಲಿಸಲು ಸಾಧ್ಯವಾಗದಿರುವುದಕ್ಕೆ ಅರ್ಜಿದಾರನಿಗೆ ಸಾಕಷ್ಟು ಕಾರಣವಿತ್ತೆಂದು ಸಮುಚಿತ ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಮನದಟ್ಟಾದರೆ, ಮೋಟಾರು ಸೈಕಲ್ಲು ಅಥವಾ ಲಘು ಮೋಟಾರು ವಾಹನವನ್ನು ನಡೆಸಲು ಕಲಿಕೆಯ ಲೈಸೆನ್ಸನ್ನು ಅರ್ಜಿದಾರನಿಗೆ ನೀಡಬಹುದು.

(7) (3)ನೇ ಉಪಪ್ರಕರಣದ ಅಥವಾ (5)ನೇ ಉಪಪ್ರಕರಣದ ಅಥವಾ ಅವೆರಡೂ ಉಪಪ್ರಕರಣಗಳ ಉಪಬಂಧಗಳಿಂದ ವ್ಯಕ್ತಿಗಳ ಯಾವುದೇ ವರ್ಗಕ್ಕೆ ಸಾಮಾನ್ಯವಾಗಿ ವಿನಾಯಿತಿ ನೀಡುವುದು ಅವಶ್ಯ ಅಥವಾ ಯುಕ್ತವಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ ಸಂಪೂರ್ಣವಾಗಿ ಅಥವಾ ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಹಾಗೆ ವಿನಾಯಿತಿ ನೀಡಬಹುದು.

(8) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಮೋಟಾರು ಸೈಕಲ್ಲನ್ನು ನಡೆಸುವ ಯಾವುದೇ ಕಲಿಕೆಯ ಲೈಸೆನ್ಸು, ಅಂಥ ಪ್ರಾರಂಭದ ತರುವಾಯ ಗಿಯರ್ ಇರುವ ಅಥವಾ ಇಲ್ಲದಿರುವ ಮೋಟಾರು ಸೈಕಲ್ಲನ್ನು ನಡೆಸುವುದಕ್ಕೂ ಅನ್ವಯವಾಗುವುದಾಗಿ ಭಾವಿಸತಕ್ಕದ್ದು.

9. ಚಾಲನ ಲೈಸೆನ್ಸು ನೀಡಿಕೆ:- (1) ಚಾಲನ ಲೈಸೆನ್ಸನ್ನು ಧಾರಣ ಮಾಡಲು ಅಥವಾ ಪಡೆಯಲು ತತ್ಕಾಲದಲ್ಲಿ ಅನರ್ಹನಾಗಿರದ ಯಾರೇ ವ್ಯಕ್ತಿಯು ತನಗೆ ಚಾಲನ ಲೈಸೆನ್ಸನ್ನು ನೀಡುವಂತೆ ಕೋರಿ,-

(i) ಅವನು ಸಾಮಾನ್ಯವಾಗಿ ವಾಸಿಸುತ್ತಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಪ್ರದೇಶದಲ್ಲಿ; ಅಥವಾ

(ii) 12ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವ ಶಾಲೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅವನು ಮೋಟಾರು ವಾಹನವನ್ನು ನಡೆಸುವ ಬಗ್ಗೆ ಶಿಕ್ಷಣ ಪಡೆಯುತ್ತಿರುವನೋ ಅಥವಾ ಪಡೆದನೋ ಆ ಶಾಲೆ ಅಥವಾ ಸಂಸ್ಥೆಯು ಇರುವಂಥ ಪ್ರದೇಶದಲ್ಲಿ

- ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದರ ಜೊತೆಗೆ ಅಂಥ ಫೀಜು ಮತ್ತು ಅಂಥ ದಸ್ತಾವೇಜುಗಳು ಇರತಕ್ಕದ್ದು.

(3) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಪರೀಕ್ಷೆಯಲ್ಲಿ ಆ ಅರ್ಜಿದಾರನು ಉತ್ತೀರ್ಣನಾದರೆ, ಅವನಿಗೆ ಚಾಲನ ಲೈಸೆನ್ಸನ್ನು ಕೊಡತಕ್ಕದ್ದು :

ಪರಂತು,-

(ಎ) (i) ಅರ್ಜಿದಾರನು ಈ ಹಿಂದೆ ಅಂಥ ವರ್ಗದ ವಾಹನವನ್ನು ನಡೆಸಲು ಚಾಲನ ಲೈಸೆನ್ಸನ್ನು ಹೊಂದಿದ್ದನೆಂದು ಮತ್ತು ಆ ಲೈಸೆನ್ಸಿನ ಮುಕ್ತಾಯದ ದಿನಾಂಕ ಹಾಗೂ ಅರ್ಜಿಯ ದಿನಾಂಕದ ನಡುವಣ ಅವಧಿಯು ಐದು ವರ್ಷಗಳನ್ನು ಮೀರಿಲ್ಲವೆಂದು; ಅಥವಾ

(ii) ಅರ್ಜಿದಾರನು, ಅಂಥ ವರ್ಗದ ವಾಹನವನ್ನು ನಡೆಸಲು 18ನೇ ಪ್ರಕರಣದ ಮೇರೆಗೆ ಕೊಟ್ಟ ಚಾಲನ ಲೈಸೆನ್ಸನ್ನು ಹೊಂದಿರುವನೆಂದು ಅಥವಾ ಈ ಹಿಂದೆ ಹೊಂದಿದ್ದನೆಂದು; ಅಥವಾ

(iii) ಅರ್ಜಿದಾರನು, 8ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸುವನೆಂಬ ಷರತ್ತಿಗೆ ಒಳಪಟ್ಟು, ಅಂಥ ವರ್ಗದ ವಾಹನವನ್ನು ನಡೆಸಲು ಭಾರತದ ಹೊರಗಿನ ಯಾವುದೇ ದೇಶದ ಸಕ್ಷಮ ಪ್ರಾಧಿಕಾರವು ನೀಡಿದ ಚಾಲನ ಲೈಸೆನ್ಸನ್ನು ಹೊಂದಿರುವನೆಂದು;

(ಬಿ) ಅರ್ಜಿದಾರನು ವಾಹನ ನಡೆಸುವುದರಿಂದ ಸಾರ್ವಜನಿಕರಿಗೆ ಅಪಾಯ ಉಂಟಾಗಬಹುದಾದ ಯಾವುದೇ ಅಶಕ್ತತೆಯಿಂದ ಅವನು ನರಳುತ್ತಿಲ್ಲವೆಂದು ತೋರಿಸುವ ಪುರಾವೆಯನ್ನು ಅರ್ಜಿದಾರನು ಹಾಜರುಪಡಿಸಿದರೆ ಅಂಥ ಯಾವುದೇ ಪರೀಕ್ಷೆ ಮಾಡುವ ಅಗತ್ಯವಿರತಕ್ಕದ್ದಲ್ಲ; ಮತ್ತು ಲೈಸೆನ್ಸು ನೀಡಿಕೆ ಪ್ರಾಧಿಕಾರಿಯು ಆ ಉದ್ದೇಶಕ್ಕಾಗಿ 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥದೇ ನಮೂನೆಯಲ್ಲಿ ಮತ್ತು ಅದೇ ರೀತಿಯಲ್ಲಿ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಅರ್ಜಿದಾರನನ್ನು ಅಗತ್ಯಪಡಿಸಬಹುದು:

ಮತ್ತೂ ಪರಂತು, (ಸಾರಿಗೆ ವಾಹನವಲ್ಲದ) ಮೋಟಾರು ವಾಹನವನ್ನು ನಡೆಸಲು ಚಾಲನ ಲೈಸೆನ್ಸಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅರ್ಜಿದಾರನು, ರಾಜ್ಯ ಸರ್ಕಾರವು ಈ ಬಗ್ಗೆ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯು ನೀಡಿದ ಚಾಲನ ಪ್ರಮಾಣ ಪತ್ರವನ್ನು ಹೊಂದಿದ್ದರೆ, ಲೈಸೆನ್ಸು ನೀಡಿಕೆ ಪ್ರಾಧಿಕಾರಿಯು, ಈ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ಚಾಲನ ಪರೀಕ್ಷೆಯಿಂದ ವಿನಾಯಿತಿ ಕೊಡಬಹುದು.

(4) ಸಾರಿಗೆ ವಾಹನವನ್ನು ನಡೆಸಲು ಲೈಸೆನ್ಸಿಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಯಾರೇ ಅರ್ಜಿದಾರನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಕನಿಷ್ಠ ವಿದ್ಯಾರ್ಹತೆಯನ್ನು ಮತ್ತು 12ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಶಾಲೆ ಅಥವಾ ಸಂಸ್ಥೆಯು ಕೊಟ್ಟ ಚಾಲನ ಪ್ರಮಾಣ ಪತ್ರವನ್ನು ಹೊಂದಿದ್ದ ಹೊರತು, ಅವನಿಗೆ ಅಂಥ ಅಧಿಕಾರ ಪತ್ರವನ್ನು ಕೊಡತಕ್ಕದ್ದಲ್ಲ.

(5) ಅರ್ಜಿದಾರನು ಪರೀಕ್ಷೆಯಲ್ಲಿ ಉತ್ತೀರ್ಣನಾಗದಿರುವಲ್ಲಿ, ಏಳು ದಿನಗಳ ಅವಧಿಯ ತರುವಾಯ ಪರೀಕ್ಷೆಗೆ ಹಾಜರಾಗಲು ಅವನಿಗೆ ಅನುಮತಿ ನೀಡಬಹುದು:

ಪರಂತು, ಅರ್ಜಿದಾರನು ಪರೀಕ್ಷೆಗೆ ಮೂರು ಸಲ ಹಾಜರಾದ ತರುವಾಯವೂ ಅವನು ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗದಿದ್ದರೆ, ಅಂಥ ಪರೀಕ್ಷೆಯ ಕೊನೆಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅಂಥ ಪರೀಕ್ಷೆಗೆ ಮತ್ತೆ ಹಾಜರಾಗಲು ಅರ್ಹನಾಗತಕ್ಕದ್ದಲ್ಲ.

(6) ವಾಹನವನ್ನು ನಡೆಸುವ ಬಗೆಗಿನ ಸಕ್ಷಮತಾ ಪರೀಕ್ಷೆಯನ್ನು, ಅರ್ಜಿಯಲ್ಲಿ ಯಾವ ಬಗೆಯ ವಾಹನವನ್ನು ಉಲ್ಲೇಖಿಸಲಾಗಿದೆಯೋ ಅದೇ ಬಗೆಯ ವಾಹನದಲ್ಲಿ ನಡೆಸತಕ್ಕದ್ದು:

ಪರಂತು, ಗಿಯರ್ ಇರುವ ಮೋಟಾರು ಸೈಕಲ್ ಚಾಲನ ಪರೀಕ್ಷೆಯಲ್ಲಿ ಉತ್ತೀರ್ಣನಾದ ವ್ಯಕ್ತಿಯು ಗಿಯರ್ ಇಲ್ಲದ ಮೋಟಾರು ಸೈಕಲ್ ಚಾಲನ ಪರೀಕ್ಷೆಯಲ್ಲಿಯೂ ಸಹ ಉತ್ತೀರ್ಣನಾಗಿರುವಂತೆ ಭಾವಿಸತಕ್ಕದ್ದು.

(7) ಒಂದು ಅರ್ಜಿಯನ್ನು ಕ್ರಮಬದ್ಧವಾಗಿ ಸಮುಚಿತ ಲೈಸೆನ್ಸು ನೀಡಿಕೆ ಪ್ರಾಧಿಕಾರಿಗೆ ಸಲ್ಲಿಸಿರುವಾಗ ಮತ್ತು ಅರ್ಜಿದಾರನು ತನ್ನ ಚಾಲನ ಸಕ್ಷಮತೆಯ ಬಗ್ಗೆ ಅಂಥ ಪ್ರಾಧಿಕಾರಿಗೆ ಮನದಟ್ಟು ಮಾಡಿಕೊಟ್ಟಾಗ, ಲೈಸೆನ್ಸು ನೀಡಿಕೆ ಪ್ರಾಧಿಕಾರಿಯು, ಅರ್ಜಿದಾರನು ಚಾಲನ ಲೈಸೆನ್ಸನ್ನು ಹೊಂದಲು ಅಥವಾ ಪಡೆಯಲು ತತ್ಕಾಲದಲ್ಲಿ ಅನರ್ಹನಾಗಿದ್ದ ಹೊರತು, ಅವನಿಗೆ ಚಾಲನ ಲೈಸೆನ್ಸನ್ನು ಕೊಡತಕ್ಕದ್ದು:

ಪರಂತು, ಅರ್ಜಿದಾರನು ಅರ್ಜಿ ಸಲ್ಲಿಸಲು ಶಕ್ಯನಾಗಲಿಲ್ಲ ಎಂಬ ಬಗ್ಗೆ ಯುಕ್ತ ಮತ್ತು ಸಾಕಷ್ಟು ಕಾರಣವಿದೆಯೆಂದು ಅಂಥ ಲೈಸೆನ್ಸು ನೀಡಿಕೆ ಪ್ರಾಧಿಕಾರಕ್ಕೆ ಮನದಟ್ಟಾದರೆ, ಆ ಲೈಸೆನ್ಸು ನೀಡಿಕೆ ಪ್ರಾಧಿಕಾರವು ಸಮುಚಿತ ಪ್ರಾಧಿಕಾರವಾಗಿರದಿದ್ದರೂ, ಮೋಟಾರು ಸೈಕಲ್ ಅಥವಾ ಲಘು ಮೋಟಾರು ವಾಹನವನ್ನು ನಡೆಸಲು ಚಾಲನ ಲೈಸೆನ್ಸನ್ನು ಕೊಡಬಹುದು:

ಮತ್ತೂ ಪರಂತು, ಅರ್ಜಿದಾರನು ಈ ಮೊದಲೇ ಚಾಲನ ಲೈಸೆನ್ಸನ್ನು ಹೊಂದಿದ್ದರೆ ಲೈಸನ್ಸು ನೀಡಿಕೆ ಪ್ರಾಧಿಕಾರವು, ಅವನು ತನ್ನ ಮೊದಲ ಲೈಸೆನ್ಸಿನ ನಕಲು ಪ್ರತಿಯನ್ನು ಪಡೆದುಕೊಳ್ಳಲು ಶಕ್ಯವಾಗದಿರುವುದಕ್ಕೆ ಯುಕ್ತ ಮತ್ತು ಸಾಕಷ್ಟು ಕಾರಣವಿದೆಯೆಂದು ಮನದಟ್ಟು ಮಾಡಿಕೊಂಡ ಹೊರತು, ಅರ್ಜಿದಾರನಿಗೆ ಹೊಸ ಚಾಲನ ಲೈಸೆನ್ಸನ್ನು ಕೊಡತಕ್ಕದ್ದಲ್ಲ.

(8) ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ,-

(ಎ) ಅವನು ಒಬ್ಬ ರೂಢಿಗತ ಅಪರಾಧಿಯೆಂದು ಅಥವಾ ರೂಢಿಗತ ಕುಡುಕನೆಂದು; ಅಥವಾ

(ಬಿ) ಅವನು ನಿದ್ರಾಜನಕ ಔಷಧಗಳು ಮತ್ತು ಮನೋದ್ರೇಕಕಾರಿ ವಸ್ತುಗಳ ಅಧಿನಿಯಮ, 1985ರ ಅರ್ಥವ್ಯಾಪ್ತಿಯೊಳಗಿನ ಯಾವುದೇ ನಿದ್ರಾಜನಕ ಔಷಧ ಅಥವಾ ಮನೋದ್ರೇಕಕಾರಿ ವಸ್ತುವಿನ ವ್ಯಸನಿಯೆಂದು; ಅಥವಾ

(ಸಿ) ಯಾವುದೇ ಮೋಟಾರು ವಾಹನವನ್ನು ನಡೆಸಲು ಆ ವ್ಯಕ್ತಿಯು ಈ ಮೊದಲೇ ಲೈಸನ್ಸನ್ನು ಹೊಂದಿದ್ದು ಅದನ್ನು ರದ್ದುಪಡಿಸಲಾಗಿದೆಯೆಂದು

- ಲೈಸನ್ಸು ನೀಡಿಕೆ ಪ್ರಾಧಿಕಾರಿಗೆ ಮನದಟ್ಟಾದರೆ, ಅವನು ಕಾರಣವನ್ನು ದಾಖಲುಮಾಡಿ, ಅಂಥ ವ್ಯಕ್ತಿಗೆ ಚಾಲನ ಲೈಸನ್ಸನ್ನು ಕೊಡಲು ನಿರಾಕರಿಸಿ ಆದೇಶವನ್ನು ಮಾಡಬಹುದು ಮತ್ತು ಈ ಉಪಪ್ರಕರಣದ ಮೇರೆಗೆ ಲೈಸೆನ್ಸು ನೀಡಿಕೆ ಪ್ರಾಧಿಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶವನ್ನು ಸ್ವೀಕರಿಸಿದ ಮೂವತ್ತು ದಿವಸಗಳೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(9) ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಮೋಟಾರು ಸೈಕಲ್ ನಡೆಸುವುದಕ್ಕಾಗಿನ ಯಾವುದೇ ಚಾಲನ ಲೈಸೆನ್ಸು, ಅಂಥ ಪ್ರಾರಂಭದ ತರುವಾಯ, ಗಿಯರ್ ಇರುವ ಅಥವಾ ಗಿಯರ್ ಇಲ್ಲದ ಮೋಟಾರು ಸೈಕಲ್ಲನ್ನು ನಡೆಸುವುದಕ್ಕಾಗಿ ಪರಿಣಾಮಕಾರಿಯಾಗಿರುವುದಾಗಿ ಭಾವಿಸತಕ್ಕದ್ದು.

10. ಚಾಲನ ಲೈಸೆನ್ಸಿನ ನಮೂನೆ ಮತ್ತು ಒಳಾಂಶಗಳು:- (1) 18ನೇ ಪ್ರಕರಣದ ಮೇರೆಗೆ ಕೊಡಲಾದ ಚಾಲನ ಲೈಸೆನ್ಸನ್ನು ಹೊರತುಪಡಿಸಿ, ಪ್ರತಿಯೊಂದು ಕಲಿಕೆಯ ಲೈಸನ್ಸು ಮತ್ತು ಚಾಲನ ಲೈಸೆನ್ಸು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

(2) ಸಂದರ್ಭಾನುಸಾರ, ಕಲಿಕೆಯ ಲೈಸೆನ್ಸು ಅಥವಾ ಚಾಲನ ಲೈಸನ್ಸನ್ನು ಹೊಂದಿರುವವನು ಈ ಕೆಳಕಂಡ ವರ್ಗಗಳ ಒಂದು ಅಥವಾ ಹೆಚ್ಚು ಮೋಟಾರು ವಾಹನವನ್ನು ನಡೆಸಲು ಅವನನ್ನು ಅರ್ಹಗೊಳಿಸುವುದೆಂದು ಸೂಚಿಸತಕ್ಕದ್ದು:-

(ಎ) ಗಿಯರ್ ಇಲ್ಲದ ಮೋಟಾರ್ ಸೈಕಲ್;

(ಬಿ) ಗಿಯರ್ ಇರುವ ಮೋಟಾರ್ ಸೈಕಲ್;

(ಸಿ) ಅಂಗವಿಕಲರ ವಾಹನ;

(ಡಿ) ಲಘು ಮೋಟಾರು ವಾಹನ;

(ಇ) ಸಾರಿಗೆ ವಾಹನ;

(ಎಫ್) (ಬಿಟ್ಟುಬಿಡಲಾಗಿದೆ);

(ಜಿ) [ x x x x ];

(ಹೆಚ್) [ x x x x ];

(ಐ) ರೋಡ್ ರೋಲರ್;

(ಜೆ) ನಿರ್ದಿಷ್ಟ ವರ್ಣನೆಯ ಮೋಟಾರು ವಾಹನ.

11. ಚಾಲನ ಲೈಸೆನ್ಸಿಗೆ ಸೇರ್ಪಡೆಗಳು:- (1) ಯಾವುದೇ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನಗಳನ್ನು ನಡೆಸಲು ಒಂದು ಚಾಲನ ಲೈಸೆನ್ಸನ್ನು ಹೊಂದಲು ಅಥವಾ ಪಡೆಯಲು ತತ್ಕಾಲದಲ್ಲಿ ಅನರ್ಹನಾಗಿಲ್ಲದಿರುವ ಮತ್ತು ಯಾವುದೇ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನಗಳನ್ನು ನಡೆಸುವ ಚಾಲನ ಲೈಸೆನ್ಸನ್ನು ಹೊಂದಿರುವ ಯಾರೇ ವ್ಯಕ್ತಿಯು, ಲೈಸೆನ್ಸಿಗೆ ಅಂಥ ಇತರ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನಗಳನ್ನು ಸೇರಿಸುವುದಕ್ಕಾಗಿ ತಾನು ಸಾಮಾನ್ಯವಾಗಿ ವಾಸಿಸುವ ಅಥವಾ ವ್ಯವಹಾರ ನಡೆಸುವ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸು ನೀಡಿಕೆ ಪ್ರಾಧಿಕಾರಕ್ಕೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಸ್ತಾವೇಜುಗಳು ಮತ್ತು ಅಂಥ ಫೀಜುಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, 9ನೇ ಪ್ರಕರಣದ ಉಪಬಂಧಗಳು, ಈ ಪ್ರಕರಣದ ಮೇರೆಗಿನ ಅರ್ಜಿಯು, ಅರ್ಜಿದಾರನು ತನ್ನ ಲೈಸೆನ್ಸಿಗೆ ಸೇರಿಸಿಕೊಳ್ಳಬಯಸುವ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳನ್ನು ನಡೆಸಲು ಆ ಪ್ರಕರಣದ ಮೇರೆಗೆ ಲೈಸೆನ್ಸು ನೀಡಿಕೆಗೆ ಸಲ್ಲಿಸಿದ ಅರ್ಜಿಯಾಗಿದ್ದರೆ ಹೇಗೋ ಹಾಗೆ ಸದರಿ ಅರ್ಜಿಗೆ ಅನ್ವಯವಾಗತಕ್ಕದ್ದು.

12. ಮೋಟಾರು ವಾಹನಗಳ ಚಾಲನೆಯಲ್ಲಿ ಶಿಕ್ಷಣ ನೀಡಲು ಶಾಲೆಗಳು ಅಥವಾ ಸಂಸ್ಥೆಗಳಿಗೆ ಲೈಸೆನ್ಸ್ ನೀಡಿಕೆ ಮತ್ತು ಅವುಗಳ ವಿನಿಯಮನ:- (1) ಕೇಂದ್ರ ಸರ್ಕಾರವು, ಮೋಟಾರು ವಾಹನಗಳ ಚಾಲನೆಯಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ, ಶಾಲೆಗಳು ಅಥವಾ ಸಂಸ್ಥೆಗಳು (ಯಾವುದೇ ಹೆಸರಿನಿಂದ ಕರೆಯಲಿ) ಶಿಕ್ಷಣ ನೀಡುವುದಕ್ಕಾಗಿ ರಾಜ್ಯ ಸರ್ಕಾರಗಳು ಲೈಸೆನ್ಸು ನೀಡುವ ಮತ್ತು ವಿನಿಯಮಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಅಂಥ ಲೈಸೆನ್ಸುಗಳ ನೀಡಿಕೆ, ನವೀಕರಣ ಮತ್ತು ರದ್ದಿಯಾತಿಯನ್ನೊಳಗೊಂಡು ಅಂಥ ಶಾಲೆಗಳು ಅಥವಾ ಸಂಸ್ಥೆಗಳಿಗೆ ಲೈಸೆನ್ಸು ನೀಡುವುದು;

(ಬಿ) ಅಂಥ ಶಾಲೆಗಳು ಅಥವಾ ಸಂಸ್ಥೆಗಳ ಮೇಲ್ವಿಚಾರಣೆ;

(ಸಿ) ಅರ್ಜಿ ನಮೂನೆ ಮತ್ತು ಲೈಸೆನ್ಸ್ ಅರ್ಜಿ ಮತ್ತು ಅದರಲ್ಲಿ ಅಡಕವಾಗಿರಬೇಕಾದ ವಿವರಗಳು;

(ಡಿ) ಅಂಥ ಲೈಸೆನ್ಸುಗಳಿಗೆ ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು;

(ಇ) ಲೈಸನ್ಸು ನೀಡಿಕೆಗೆ ಸಂಬಂಧಿಸಿದ ಷರತ್ತುಗಳು;

(ಎಫ್) ಅಂಥ ಲೈಸನ್ಸುಗಳ ನೀಡಿಕೆ ಅಥವಾ ನವೀಕರಣವನ್ನು ನಿರಾಕರಿಸುವ ಆದೇಶಗಳ ವಿರುದ್ಧ ಅಪೀಲುಗಳು ಮತ್ತು ಅಂಥ ಲೈಸನ್ಸುಗಳನ್ನು ರದ್ದುಗೊಳಿಸುವ ಆದೇಶಗಳ ವಿರುದ್ಧ ಅಪೀಲುಗಳು;

(ಜಿ) ಒಬ್ಬ ವ್ಯಕ್ತಿಯು ಮೋಟಾರು ವಾಹನಗಳ ಚಾಲನೆಯಲ್ಲಿ ಶಿಕ್ಷಣ ನೀಡಲು ಅಂಥ ಯಾವುದೇ ಶಾಲೆ ಮತ್ತು ಸಂಸ್ಥೆಯನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಬಗ್ಗೆ ಷರತ್ತುಗಳು;

(ಹೆಚ್) ಯಾವುದೇ ಮೋಟಾರು ವಾಹನದ ದಕ್ಷ ಚಾಲನೆಯಲ್ಲಿ ಶಿಕ್ಷಣ ನೀಡಲು ಪಠ್ಯಕ್ರಮ ಅಥವಾ ಪಠ್ಯಕ್ರಮಗಳ ಸ್ವರೂಪ, ಪಠ್ಯಕ್ರಮ ಮತ್ತು ಅವಧಿ;

(ಐ) ಅಂಥ ಶಿಕ್ಷಣ ನೀಡುವ ಉದ್ದೇಶಕ್ಕೆ ಬೇಕಾದ ಸಲಕರಣೆ ಮತ್ತು ಸಾಧನ ಸಾಮಗ್ರಿಗಳು (ದ್ವಿನಿಯಂತ್ರಣದೊಂದಿಗೆ ಜೋಡಿಸಲಾದ ಮೋಟಾರು ವಾಹನಗಳನ್ನೊಳಗೊಂಡು);

(ಜೆ) ಸ್ಥಾಪಿಸಬಹುದಾದ ಅಥವಾ ನಿರ್ವಹಿಸಬಹುದಾದ ಅಂಥ ಶಾಲೆಗಳು ಅಥವಾ ಸಂಸ್ಥೆಗಳ ಆವರಣಗಳ ಸೂಕ್ತತೆ ಮತ್ತು ಅದರಲ್ಲಿ ಒದಗಿಸಬೇಕಾದ ಸೌಲಭ್ಯಗಳು;

(ಕೆ) ಮೋಟಾರು ವಾಹನಗಳ ಚಾಲನೆಯ ಶಿಕ್ಷಣ ನೀಡುವ ವ್ಯಕ್ತಿಯು (ಅನುಭವವನ್ನೊಳಗೊಂಡು) ಹೊಂದಿರತಕ್ಕ ಶೈಕ್ಷಣಿಕ ಮತ್ತು ವೃತ್ತೀಯ ಅರ್ಹತೆಗಳು;

(ಎಲ್) ಅಂತಹ ಶಾಲೆಗಳ ಮತ್ತು ಸಂಸ್ಥೆಗಳ ಪರಿಶೀಲನೆ (ಅಂಥ ಶಿಕ್ಷಣ ನೀಡಲು ಅವರಿಂದ ಸಲ್ಲಿಸಲಾದ ಸೇವೆ ಮತ್ತು ಅವರಿಂದ ನಿರ್ವಹಿಸಲಾಗುತ್ತಿರುವ ಸಲಕರಣೆಗಳು, ಸಾಧನ ಸಾಮಗ್ರಿಗಳು ಮತ್ತು ಮೋಟಾರು ವಾಹನಗಳನ್ನೊಳಗೊಂಡು);

(ಎಂ) ಅಂಥ ಶಾಲೆಗಳು ಅಥವಾ ಸಂಸ್ಥೆಗಳು ಇಟ್ಟುಕೊಂಡು ಬರಬೇಕಾದ ದಾಖಲೆಗಳು;

(ಎನ್) ಅಂಥ ಶಾಲೆಗಳು ಅಥವಾ ಸಂಸ್ಥೆಗಳ ಆರ್ಥಿಕ ಸ್ಥಿರತೆ;

(ಓ) ಅಂಥ ಶಾಲೆಗಳು ಅಥವಾ ಸಂಸ್ಥೆಗಳು ನೀಡತಕ್ಕ ಚಾಲನ ಪ್ರಮಾಣಪತ್ರಗಳು ಯಾವುವಾದರೂ ಇದ್ದರೆ ಅವು ಮತ್ತು ಅಂಥ ಚಾಲನ ಪ್ರಮಾಣಪತ್ರವನ್ನು ನೀಡತಕ್ಕ ನಮೂನೆ ಮತ್ತು ಅಂಥ ಪ್ರಮಾಣ ಪತ್ರಗಳನ್ನು ನೀಡುವ ಉದ್ದೇಶಕ್ಕಾಗಿ ಪಾಲಿಸತಕ್ಕ ಅಗತ್ಯತೆಗಳು;

(ಪಿ) ಈ ಪ್ರಕರಣದ ಉದ್ದೇಶಗಳನ್ನು ಈಡೇರಿಸಲು ಅವಶ್ಯವಿರಬಹುದಾದ ಇತರ ವಿಷಯಗಳು.

(3) ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ, ಸಂಪೂರ್ಣವಾಗಿಯಾಗಲಿ ಅಥವಾ ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೆ ಒಳಪಟ್ಟಾಗಲಿ ಮೋಟಾರು ವಾಹನಗಳ ಚಾಲನೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಶಿಕ್ಷಣ ನೀಡುವ ಯಾವುದೇ ವರ್ಗದ ಶಾಲೆಗಳು ಅಥವಾ ಸಂಸ್ಥೆಗಳಿಗೆ ಈ ಪ್ರಕರಣದ ಉಪಬಂಧಗಳಿಂದ ವಿನಾಯಿತಿ ನೀಡುವುದು ಅವಶ್ಯ ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ ಅದು ಹಾಗೆ ವಿನಾಯಿತಿ ನೀಡಬಹುದು.

(4) ಮೋಟಾರು ವಾಹನಗಳ ಚಾಲನೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಶಿಕ್ಷಣ ನೀಡುವ ಶಾಲೆ ಅಥವಾ ಸಂಸ್ಥೆಯು ಈ ಅಧಿನಿಯಮದ ಆರಂಭಕ್ಕೆ ನಿಕಟಪೂರ್ವದಲ್ಲಿ ಲೈಸನ್ಸ್ ಮೇರೆಗೆ ಅಥವಾ ಲೈಸೆನ್ಸ್ ಇಲ್ಲದೆಯೆ ಅಂಥ ಆರಂಭದಿಂದ ಒಂದು ತಿಂಗಳ ಅವಧಿಯವರೆಗೆ, ಈ ಅಧಿನಿಯಮದ ಮೇರೆಗೆ ಲೈಸನ್ಸನ್ನು ನೀಡಿಲ್ಲದಿದ್ದರೂ ಅಂಥ ಶಿಕ್ಷಣ ನೀಡುವುದನ್ನು ಮುಂದುವರೆಸಬಹುದು ಮತ್ತು ಒಂದು ತಿಂಗಳ ಸದರಿ ಅವಧಿಯಲ್ಲಿ ಈ ಅಧಿನಿಯಮದ ಮೇರೆಗೆ ಅಂಥ ಲೈಸೆನ್ಸಿಗೆ ಅರ್ಜಿ ಸಲ್ಲಿಸಿದ್ದರೆ ಮತ್ತು ಅಂಥ ಅರ್ಜಿಯು ನಿಗದಿತ ನಮೂನೆಯಲ್ಲಿದ್ದು, ನಿರ್ದಿಷ್ಟಪಡಿಸಲಾದ ವಿವರಗಳನ್ನು ಒಳಗೊಂಡಿದ್ದರೆ ಮತ್ತು ನಿರ್ದಿಷ್ಟಪಡಿಸಿದ ಫೀಜಿನ ರಸೀದಿಯನ್ನು ಅದಕ್ಕೆ ಲಗತ್ತಿಸಿದ್ದರೆ ಲೈಸನ್ಸ್ ನೀಡಿಕೆ ಪ್ರಾಧಿಕಾರವು ಅಂಥ ಅರ್ಜಿಯನ್ನು ವಿಲೇವಾರಿ ಮಾಡುವವರೆಗೆ ಅಂಥ ಶಿಕ್ಷಣವನ್ನು ಮುಂದುವರೆಸಬಹುದು.

13. ಮೋಟಾರು ವಾಹನಗಳ ಚಾಲನೆ ಲೈಸನ್ಸ್‌ಗಳ ಪರಿಣಾಮದ ವ್ಯಾಪ್ತಿ:- ಈ ಅಧಿನಿಯಮದ ಮೇರೆಗೆ ನೀಡಲಾದ ಕಲಿಕೆಯ ಲೈಸೆನ್ಸ್ ಅಥವಾ ಚಾಲನ ಲೈಸೆನ್ಸ್ ಭಾರತದಾದ್ಯಂತ ಜಾರಿಯಲ್ಲಿರತಕ್ಕದ್ದು.

14. ಮೋಟಾರು ವಾಹನಗಳ ಚಾಲನೆ ಲೈಸೆನ್ಸ್‌ಗಳ ಚಲಾವಣೆ:- (1) ಈ ಅಧಿನಿಯಮದ ಮೇರೆಗೆ ನೀಡಲಾದ ಕಲಿಕೆಯ ಲೈಸೆನ್ಸು, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಲೈಸೆನ್ಸು ನೀಡಿದ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಚಾಲನ ಲೈಸೆನ್ಸು,-

(ಎ) ಸಾರಿಗೆ ವಾಹನದ ಚಾಲನೆಯ ಲೈಸೆನ್ಸಿನ ಸಂದರ್ಭದಲ್ಲಿ ಮೂರು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಗಂಡಾಂತರಕಾರಿ ಅಥವಾ ಅಪಾಯಕಾರಿ ಸ್ವರೂಪದ ಸರಕುಗಳನ್ನು ಸಾಗಿಸುವ ಸಾರಿಗೆ ವಾಹನವನ್ನು ನಡೆಸುವ ಲೈಸೆನ್ಸಿನ ಸಂದರ್ಭದಲ್ಲಿ ಅದು ಒಂದು ವರ್ಷದ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು ಮತ್ತು ಅದರ ನವೀಕರಣವು ಗೊತ್ತುಪಡಿಸಿದ ಪಠ್ಯಕ್ರಮವುಳ್ಳ ಒಂದು ದಿನದ ಪುನಶ್ಚೇತನ ವ್ಯಾಸಂಗ ಕ್ರಮದ ತರಬೇತಿ ಪಡೆಯುವುದಕ್ಕೆ ಚಾಲಕನು ಒಳಪಟ್ಟಿರತಕ್ಕದ್ದು; ಮತ್ತು

(ಬಿ) ಇತರ ಯಾವುದೇ ಲೈಸೆನ್ಸ್‌ನ ಸಂದರ್ಭದಲ್ಲಿ,-

(i) ಲೈಸೆನ್ಸನ್ನು ಪ್ರಾಥಮಿಕವಾಗಿಯೇ ಆಗಲಿ ಅಥವಾ ಅದರ ನವೀಕರಣ ಮೂಲಕವಾಗಿಯೇ ಆಗಲಿ ಪಡೆಯುವ ವ್ಯಕ್ತಿಯು, ಅದರ ನೀಡಿಕೆಯ ಅಥವಾ ಸಂದರ್ಭಾನುಸಾರ ಅದರ ನವೀಕರಣದ ದಿನಾಂಕದಂದು ಅವನಿಗೆ ಐವತ್ತು ವರ್ಷ ವಯಸ್ಸಾಗಿಲ್ಲದಿದ್ದರೆ,-

(ಎ) ಅಂಥ ಲೈಸೆನ್ಸನ್ನು ನೀಡಿದ ಅಥವಾ ನವೀಕರಿಸಿದ ದಿನಾಂಕದಿಂದ ಇಪ್ಪತ್ತು ವರ್ಷಗಳ ಅವಧಿಯವರೆಗೆ ಪರಿಣಾಮಿಯಾಗಿರತಕ್ಕದ್ದು; ಅಥವಾ

(ಬಿ) ಅಂಥ ವ್ಯಕ್ತಿಗೆ ಐವತ್ತು ವರ್ಷ ವಯಸ್ಸಾಗುವ ದಿನಾಂಕದವರೆಗೆ

- ಇವೆರಡರಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ;

(ii) (i) ನೇ ಉಪ ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗೆ ಲೈಸೆನ್ಸು ನೀಡಿಕೆಯ ಅಥವಾ ಸಂದರ್ಭಾನುಸಾರ ಅದರ ನವೀಕರಣದ ದಿನಾಂಕದಂದು ಐವತ್ತು ವರ್ಷ ವಯಸ್ಸಾಗಿದ್ದರೆ, ಗೊತ್ತುಪಡಿಸಬಹುದಾದ ಫೀಜನ್ನು ಸಂದಾಯ ಮಾಡಿದ ಮೇಲೆ ಅಂಥ ನೀಡಿಕೆ ಅಥವಾ ನವೀಕರಣದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪರಿಣಾಮಕಾರಿಯಾಗಿರತಕ್ಕದ್ದು:

ಪರಂತು, ಪ್ರತಿಯೊಂದು ಚಾಲನ ಲೈಸನ್ಸು ಈ ಉಪಪ್ರಕರಣದ ಮೇರೆಗೆ ಅದರ ಅವಧಿಯು ಮುಗಿದಿದ್ದರೂ, ಅಂಥ ಮುಕ್ತಾಯದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯವರೆಗೆ ಪರಿಣಾಮಕಾರಿಯಾಗಿರುವುದು ಮುಂದುವರಿಯತಕ್ಕದ್ದು.

15. ಚಾಲನ ಲೈಸೆನ್ಸುಗಳ ನವೀಕರಣ:- ಯಾವುದೇ ಲೈಸೆನ್ಸು ನೀಡಿಕೆ ಪ್ರಾಧಿಕಾರವು, ಅದಕ್ಕೆ ಅರ್ಜಿ ಸಲ್ಲಿಸಿದ ತರುವಾಯ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೀಡಲಾದ ಚಾಲನ ಲೈಸೆನ್ಸನ್ನು ಅದರ ಮುಕ್ತಾಯದ ದಿನಾಂಕದಿಂದ ಪರಿಣಾಮವುಳ್ಳಂತೆ ನವೀಕರಿಸಬಹುದು:

ಪರಂತು, ಲೈಸೆನ್ಸಿನ ನವೀಕರಣಕ್ಕಾಗಿ ಅದರ ಮುಕ್ತಾಯದ ದಿನಾಂಕದಿಂದ ಮೂವತ್ತಕ್ಕೂ ಹೆಚ್ಚು ದಿನಗಳ ತರುವಾಯ ಅರ್ಜಿ ಸಲ್ಲಿಸಿರುವಂಥ ಯಾವುದೇ ಸಂದರ್ಭದಲ್ಲಿ ಚಾಲನ ಲೈಸೆನ್ಸನ್ನು ಅದರ ನವೀಕರಣದ ದಿನಾಂಕದಿಂದ ಪರಿಣಾಮವುಳ್ಳಂತೆ ನವೀಕರಿಸತಕ್ಕದ್ದು:

ಮತ್ತೂ ಪರಂತು, ಸಾರಿಗೆ ವಾಹನದ ಚಾಲನ ಲೈಸೆನ್ಸಿನ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ ಅಥವಾ ಇತರ ಯಾವುದೇ ಸಂದರ್ಭದಲ್ಲಿ ಅರ್ಜಿದಾರನಿಗೆ ನಲವತ್ತು ವರ್ಷ ವಯಸ್ಸಾಗಿದ್ದಿರುವಲ್ಲಿ ಆ ಅರ್ಜಿಗೆ 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದಂಥ ನಮೂನೆಯಲ್ಲಿಯೇ ಮತ್ತು ರೀತಿಯಲ್ಲಿಯೇ ವೈದ್ಯಕೀಯ ಪ್ರಮಾಣಪತ್ರವನ್ನು ಲಗತ್ತಿಸತಕ್ಕದ್ದು ಮತ್ತು 8ನೇ ಪ್ರಕರಣದ (4)ನೇ ಉಪಪ್ರಕರಣದ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಕಲಿಕೆ ಲೈಸೆನ್ಸಿಗೆ ಸಂಬಂಧಪಟ್ಟು ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಸಂದರ್ಭಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು.

(2) ಚಾಲನ ಲೈಸೆನ್ಸಿನ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅಂಥ ದಸ್ತಾವೇಜುಗಳನ್ನು ಅದಕ್ಕೆ ಲಗತ್ತಿಸತಕ್ಕದ್ದು.

(3) ಚಾಲನ ಲೈಸೆನ್ಸಿನ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಅದರ ಮುಕ್ತಾಯದ ದಿನಾಂಕಕ್ಕೆ ಮುಂಚೆ ಅಥವಾ ಆ ದಿನಾಂಕದಿಂದ ಮೂವತ್ತು ದಿವಸಗಳನ್ನು ಮೀರದಂತೆ ಸಲ್ಲಿಸಿರುವಲ್ಲಿ ಅಂಥ ನವೀಕರಣಕ್ಕೆ ಸಂದಾಯವಾಗತಕ್ಕ ಫೀಜು ಈ ಬಗ್ಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಫೀಜು ಆಗಿರತಕ್ಕದ್ದು.

(4) ಚಾಲನ ಲೈಸನ್ಸಿನ ನವೀಕರಣಕ್ಕೆ ಅರ್ಜಿಯನ್ನು ಅದರ ಮುಕ್ತಾಯದ ದಿನಾಂಕದಿಂದ ಮೂವತ್ತು ದಿವಸಗಳ ತರುವಾಯ ಸಲ್ಲಿಸಿದ್ದರೆ, ಅಂತಹ ನವೀಕರಣಕ್ಕೆ ಸಂದಾಯ ಮಾಡಬೇಕಾದ ಫೀಜು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಮೊಬಲಗು ಆಗಿರತಕ್ಕದ್ದು:

ಪರಂತು, ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅರ್ಜಿ ಸಲ್ಲಿಸಲು ಅರ್ಜಿದಾರನಿಗೆ ಸರಿಯಾದ ಮತ್ತು ಸಾಕಷ್ಟು ಕಾರಣಗಳಿಂದ ತಡೆಯುಂಟಾಗಿತ್ತೆಂದು ಮನದಟ್ಟಾದರೆ, ಈ ಉಪಪ್ರಕರಣದ ಮೇರೆಗೆ ಚಾಲನ ಲೈಸೆನ್ಸಿನ ನವೀಕರಣಕ್ಕೆ ಸಲ್ಲಿಸಿದ ಅರ್ಜಿಯ ಸಂಬಂಧದಲ್ಲಿ, (3)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ಫೀಜನ್ನು ಸ್ವೀಕರಿಸಬಹುದು:

ಮತ್ತೂ ಪರಂತು, ಚಾಲನ ಲೈಸನ್ಸು ಪರಿಣಾಮಕಾರಿಯಾಗಿರುವುದು ಕೊನೆಗೊಂಡಂದಿನಿಂದ ಐದು ವರ್ಷಗಳು ಮೀರಿದ ತರುವಾಯ ಅರ್ಜಿಯನ್ನು ಸಲ್ಲಿಸಿದ್ದರೆ, 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಚಾಲನ ಸಾಮರ್ಥ್ಯದ ಪರೀಕ್ಷೆ ಕೊಟ್ಟು ಅದಕ್ಕೆ ಮನವರಿಕೆಯಾಗುವಂತೆ ಉತ್ತೀರ್ಣನಾದ ಹೊರತು ಚಾಲನ ಲೈಸನ್ಸನ್ನು ನವೀಕರಿಸಲು ಲೈಸೆನ್ಸು ನೀಡಿಕೆ ಪ್ರಾಧಿಕಾರವು ನಿರಾಕರಿಸಬಹುದು.

(5) ನವೀಕರಣದ ಅರ್ಜಿಯನ್ನು ತಿರಸ್ಕರಿಸಿದಾಗ ಸಂದಾಯ ಮಾಡಲಾದ ಫೀಜು, ಕೇಂದ್ರ ಸರ್ಕಾರವು ನಿಯಮಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ಮರುಪಾವತಿಸತಕ್ಕದ್ದು.

(6) ಚಾಲನ ಲೈಸನ್ಸನ್ನು ನವೀಕರಿಸುವ ಪ್ರಾಧಿಕಾರವು, ಚಾಲನ ಲೈಸೆನ್ಸ್ ನೀಡಿಕೆ ಪ್ರಾಧಿಕಾರವಾಗಿಲ್ಲದಿರುವಲ್ಲಿ, ಅದು ಚಾಲನ ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ನವೀಕರಣದ ಸಂಗತಿಯನ್ನು ತಿಳಿಸತಕ್ಕದ್ದು.

16. ಕಾಯಿಲೆ ಅಥವಾ ಅಸಮರ್ಥತೆಯ ಆಧಾರದ ಮೇರೆಗೆ ಚಾಲನ ಲೈಸೆನ್ಸನ್ನು ರದ್ದುಗೊಳಿಸುವುದು:- ಈ ಹಿಂದಿನ ಪ್ರಕರಣಗಳಲ್ಲಿ ಏನೇ ಇದ್ದರೂ, ಲೈಸನ್ಸು ಹೊಂದಿರುವ ವ್ಯಕ್ತಿಯು ಯಾವುದೇ ಕಾಯಿಲೆ ಅಥವಾ ಅಸಮರ್ಥತೆಯ ಕಾರಣದಿಂದಾಗಿ

ಮೋಟಾರು ವಾಹನವನ್ನು ನಡೆಸಲು ಯೋಗ್ಯನಲ್ಲವೆಂದು ನಂಬಲು ಯಾವುದೇ ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಯುಕ್ತ ಕಾರಣಗಳಿದ್ದರೆ, ಅದು ಯಾವುದೇ ಸಮಯದಲ್ಲಿ ಚಾಲನ ಲೈಸನ್ಸನ್ನು ರದ್ದುಗೊಳಿಸಬಹುದು ಅಥವಾ ಅಂಥ ಚಾಲನ ಲೈಸನ್ಸನ್ನು ಹೊಂದಿರುವುದನ್ನು ಮುಂದುವರೆಸುವುದಕ್ಕೆ ಷರತ್ತಾಗಿ ಅದರ ಧಾರಕನಿಗೆ 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ನಮೂನೆಯಲ್ಲಿಯೇ ಮತ್ತು ರೀತಿಯಲ್ಲಿಯೇ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು.

17. ಚಾಲನ ಲೈಸನ್ಸನ್ನು ನಿರಾಕರಿಸುವ ಅಥವಾ ರದ್ದುಗೊಳಿಸುವ ಆದೇಶಗಳು ಮತ್ತು ಅದರ ಮೇಲಿನ ಅಪೀಲುಗಳು:- (1) ಲೈಸನ್ಸು ನೀಡಿಕೆ ಪ್ರಾಧಿಕಾರವು ಯಾವುದೇ ಕಲಿಕೆ ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವಲ್ಲಿ ಅಥವಾ ಯಾವುದೇ ಚಾಲನ ಲೈಸನ್ಸನ್ನು ರದ್ದುಗೊಳಿಸುವಲ್ಲಿ ಅಥವಾ ಯಾವುದೇ ಚಾಲನ ಲೈಸನ್ಸಿಗೆ ಯಾವುದೇ ವರ್ಗದ ಅಥವಾ ವಿವರಣೆಯ ಮೋಟಾರು ವಾಹನವನ್ನು ಸೇರಿಸಲು ನಿರಾಕರಿಸುವಲ್ಲಿ, ಅಂಥ ನಿರಾಕರಣೆಗೆ ಅಥವಾ ರದ್ದಿಯಾತಿಗೆ ಬರವಣಿಗೆಯಲ್ಲಿ ಕಾರಣ ನೀಡಿ, ಸಂದರ್ಭಾನುಸಾರ, ಅರ್ಜಿದಾರನಿಗೆ ಅಥವಾ ಅದರ ಧಾರಕನಿಗೆ ತಿಳಿಸಲಾದ ಆದೇಶದ ಮೂಲಕ, ಹಾಗೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅವನಿಗೆ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ನಿಯಮಿಸಿದ ಪ್ರಾಧಿಕಾರಕ್ಕೆ ಆ ಬಗ್ಗೆ ಅಪೀಲು ಸಲ್ಲಿಸಬಹುದು ಮತ್ತು ಅದು ಅಂಥ ವ್ಯಕ್ತಿಗೆ ಮತ್ತು ಆ ಆದೇಶವನ್ನು ಮಾಡಿದ ಪ್ರಾಧಿಕಾರಕ್ಕೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ಅಪೀಲು ಪ್ರಾಧಿಕಾರದ ತೀರ್ಮಾನವು ಆದೇಶ ಮಾಡಿದ ಪ್ರಾಧಿಕಾರಕ್ಕೆ ಬಂಧನಕಾರಿಯಾಗತಕ್ಕದ್ದು.

18. ಕೇಂದ್ರ ಸರ್ಕಾರಕ್ಕೆ ಸೇರಿದ ಮೋಟಾರು ವಾಹನಗಳ ಚಾಲನೆಗೆ ಚಾಲನ ಲೈಸನ್ಸ್:- (1) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರಾಧಿಕಾರವು, ಕೇಂದ್ರ ಸರ್ಕಾರದ ಸ್ವತ್ತಾಗಿರುವ ಅಥವಾ ತತ್ಕಾಲದಲ್ಲಿ ಅದರ ಅನನ್ಯ ನಿಯಂತ್ರಣದಲ್ಲಿರುವ ಮತ್ತು ದೇಶ ರಕ್ಷಣೆಗೆ ಸಂಬಂಧಿಸಿದ ಸರ್ಕಾರಿ ಉದ್ದೇಶಗಳಿಗಾಗಿ ಬಳಸುವ ಮತ್ತು ಯಾವುದೇ ವಾಣಿಜ್ಯ ಉದ್ಯಮಗಳೊಂದಿಗೆ ಸಂಬಂಧಿಸಿಲ್ಲದ ಮೋಟಾರು ವಾಹನಗಳನ್ನು ನಡೆಸಲು ಹದಿನೆಂಟು ವರ್ಷ ತುಂಬಿದ ವ್ಯಕ್ತಿಗಳಿಗೆ ಭಾರತದಾದ್ಯಂತ ಸಿಂಧುವಾದ ಚಾಲನ ಲೈಸನ್ಸನ್ನು ನೀಡಬಹುದು.

(2) ಈ ಪ್ರಕರಣದ ಮೇರೆಗೆ ನೀಡಲಾದ ಚಾಲನ ಲೈಸನ್ಸು, ವ್ಯಕ್ತಿಯು ಚಾಲನ ಮಾಡಲು ಅರ್ಹತೆ ಹೊಂದಿರುವ ವರ್ಗ ಅಥವಾ ವಿವರದ ವಾಹನವನ್ನು ಮತ್ತು ಹಾಗೆ ಅರ್ಹತೆ ಪಡೆದಿರುವ ಅವಧಿಯನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಚಾಲನ ಲೈಸನ್ಸು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮೋಟಾರು ವಾಹನದ ಹೊರತು ಇತರ ಯಾವುದೇ ಮೋಟಾರು ವಾಹನವನ್ನು ನಡೆಸಲು ಲೈಸನ್ಸು ಧಾರಕನಿಗೆ ಹಕ್ಕು ನೀಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಯಾವುದೇ ಚಾಲನ ಲೈಸನ್ಸನ್ನು ನೀಡುವ ಪ್ರಾಧಿಕಾರವು ಯಾವುದೇ ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಯಾವುದೇ ಸಮಯದಲ್ಲಿ ಅಂಥ ಸರ್ಕಾರವು ಅಗತ್ಯಪಡಿಸಿದಲ್ಲಿ ಚಾಲನ ಲೈಸನ್ಸು ಹೊಂದಿರುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

19. ಚಾಲನ ಲೈಸನ್ಸನ್ನು ಧಾರಣ ಮಾಡದಂತೆ ಅನರ್ಹಗೊಳಿಸಲು ಅಥವಾ ಅಂಥ ಲೈಸನ್ಸನ್ನು ರದ್ದುಗೊಳಿಸಲು ಲೈಸನ್ಸ್ ನೀಡಿಕೆ ಪ್ರಾಧಿಕಾರದ ಅಧಿಕಾರ:- (1) ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಚಾಲನ ಲೈಸೆನ್ಸ್ ಧಾರಕನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅವನು,-

(ಎ) ರೂಢಿಗತ ಅಪರಾಧಿ ಅಥವಾ ರೂಢಿಗತ ಕುಡುಕನೆಂದು; ಅಥವಾ

(ಬಿ) ನಿದ್ರಾಜನಕ ಔಷಧಗಳು ಮತ್ತು ಮನೋದ್ರೇಕಕಾರಿ ವಸ್ತುಗಳ ಅಧಿನಿಯಮ, 1985ರ ಅರ್ಥವ್ಯಾಪ್ತಿಯಲ್ಲಿ ಯಾವುದೇ ನಿದ್ರಾಜನಕ ಅಥವಾ ಮನೋದ್ರೇಕಕಾರಿ ವಸ್ತುಗಳ ರೂಢಿಗತ ವ್ಯಸನಿಯಾಗಿರುವನೆಂದು; ಅಥವಾ

(ಸಿ) ಸಂಜ್ಞೇಯ ಅಪರಾಧ ಮಾಡುವಲ್ಲಿ ಮೋಟಾರು ವಾಹನವನ್ನು ಉಪಯೋಗಿಸುತ್ತಿದ್ದಾನೆಂದು ಅಥವಾ ಉಪಯೋಗಿಸಿದ್ದನೆಂದು; ಅಥವಾ

(ಡಿ) ಮೋಟಾರು ವಾಹನದ ಚಾಲಕನಾಗಿ, ಆತನ ಹಿಂದಿನ ನಡತೆಯಿಂದ ಅವನು ಮೋಟಾರು ವಾಹನ ನಡೆಸುವುದರಿಂದ ಸಾರ್ವಜನಿಕರಿಗೆ ಅಪಾಯವಾಗುವ ಸಂಭವವಿದೆಯೆಂದು ತೋರಿಸಿಕೊಟ್ಟಿದ್ದಾನೆಂದು; ಅಥವಾ

(ಇ) ಮೋಸ ಅಥವಾ ತಪ್ಪು ನಿರೂಪಣೆಯಿಂದ ಯಾವುದೇ ಚಾಲನ ಲೈಸನ್ಸನ್ನು ಅಥವಾ ನಿರ್ದಿಷ್ಟ ವರ್ಗದ ಅಥವಾ ವಿವರಣೆಯನ್ನುಳ್ಳ ಮೋಟಾರು ವಾಹನವನ್ನು ಚಾಲನ ಮಾಡಲು ಯಾವುದೇ ಚಾಲನ ಲೈಸನ್ಸ್ ಪಡೆದಿದ್ದಾನೆಂದು; ಅಥವಾ

(ಎಫ್) ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಸಾರ್ವಜನಿಕರಿಗೆ ತೊಂದರೆ ಅಥವಾ ಅಪಾಯವನ್ನುಂಟುಮಾಡುವಂಥ ಯಾವುದೇ ಕೃತ್ಯ ಮಾಡಿದ್ದಾನೆಂದು; ಅಥವಾ

(ಜಿ) 22ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಲಾದ ಪರೀಕ್ಷೆಗೆ ಒಳಗಾಗಲು ತಪ್ಪಿದ್ದಾನೆಂದು ಅಥವಾ ಅದರಲ್ಲಿ ಉತ್ತೀರ್ಣನಾಗಿಲ್ಲವೆಂದು; ಅಥವಾ

(ಹೆಚ್) ಲೈಸನ್ಸು ಧಾರಕನ ಉಸ್ತುವಾರಿ ಹೊಂದಿರುವ ವ್ಯಕ್ತಿಯು ಬರೆದು ಕೊಟ್ಟ ಸಮ್ಮತಿ ಪತ್ರದೊಡನೆ ನೀಡಲಾದ ಕಲಿಕೆ ಲೈಸನ್ಸನ್ನು ಅಥವಾ ಚಾಲನ ಲೈಸನ್ಸನ್ನು ಹೊಂದಿರುವ ಹದಿನೆಂಟಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಯು ಅಂಥ ಉಸ್ತುವಾರಿಯಲ್ಲಿರುವುದು ಸಮಾಪ್ತವಾಗಿದೆಯೆಂದು

- ಮನದಟ್ಟಾದಲ್ಲಿ, ಅದು ಕಾರಣಗಳನ್ನು ಬರಹದಲ್ಲಿ ದಾಖಲಿಸಿ,-

(i) ಲೈಸನ್ಸ್‌ನಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲ ಅಥವಾ ಯಾವುದೇ ವರ್ಗಗಳ ಅಥವಾ ವಿವರಣೆಯ ವಾಹನಗಳನ್ನು ನಡೆಸಲು ಲೈಸನ್ಸು ಧಾರಣ ಮಾಡದಂತೆ ಅಥವಾ ಪಡೆಯದಂತೆ ನಿರ್ದಿಷ್ಟ ಅವಧಿಯವರೆಗೆ ಅಂಥ ವ್ಯಕ್ತಿಯನ್ನು ಅನರ್ಹಗೊಳಿಸುವ ಆದೇಶವನ್ನು ಮಾಡಬಹುದು; ಅಥವಾ

(ii) ಅಂಥ ಯಾವುದೇ ಲೈಸನ್ಸನ್ನು ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಲ್ಲಿ, ಚಾಲನ ಲೈಸೆನ್ಸಿನ ಧಾರಕನು, ಚಾಲನ ಲೈಸನ್ಸನ್ನು ಈಗಾಗಲೇ ವಾಪಸು ಒಪ್ಪಿಸಿರದಿದ್ದರೆ, ಆ ಆದೇಶವನ್ನು ಮಾಡುವ ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ತನ್ನ ಲೈಸನ್ಸನ್ನು ಆ ಕೂಡಲೇ ವಾಪಸು ಒಪ್ಪಿಸತಕ್ಕದ್ದು ಮತ್ತು ಆ ಲೈಸನ್ಸು ನೀಡಿಕೆ ಪ್ರಾಧಿಕಾರವು,-

(ಎ) ಚಾಲನ ಲೈಸನ್ಸು, ಈ ಅಧಿನಿಯಮದ ಮೇರೆಗೆ ನೀಡಲಾದ ಚಾಲನ ಲೈಸನ್ಸ್ ಆಗಿದ್ದರೆ, ಅನರ್ಹತೆಯು ಮುಗಿಯುವವರೆಗೆ ಅಥವಾ ಅದನ್ನು ತೆಗೆದುಹಾಕುವವರೆಗೆ ಅದನ್ನು ಇಟ್ಟುಕೊಳ್ಳತಕ್ಕದ್ದು ; ಅಥವಾ

(ಬಿ) ಅದು ಈ ಅಧಿನಿಯಮದ ಮೇರೆಗೆ ನೀಡಲಾದ ಚಾಲನ ಲೈಸನ್ಸು ಆಗಿಲ್ಲದಿದ್ದರೆ, ಅದರ ಮೇಲೆ ಅನರ್ಹತೆಯನ್ನು ಹಿಂಬರಹ ಮಾಡಿ ಅದನ್ನು ನೀಡಿರುವ ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಕಳುಹಿಸಬಹುದು; ಅಥವಾ

(ಸಿ) ಯಾವುದೇ ಲೈಸನ್ಸಿನ ರದ್ದಿಯಾತಿಯ ಸಂದರ್ಭದಲ್ಲಿ, ಅದರ ಮೇಲೆ ರದ್ದಿಯಾತಿಯ ಹಿಂಬರಹವನ್ನು ಮಾಡಿ ಅದನ್ನು ನೀಡಿದ ಪ್ರಾಧಿಕಾರವಾಗಿಲ್ಲದಿದ್ದರೆ, ಆ ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ರದ್ದಿಯಾತಿಯ ಸಂಗತಿಯನ್ನು ತಿಳಿಸತಕ್ಕದ್ದು:

ಪರಂತು, ಯಾವ ವ್ಯಕ್ತಿಯ ಚಾಲನ ಲೈಸನ್ಸು ಅವನಿಗೆ ಒಂದಕ್ಕಿಂತ ಹೆಚ್ಚು ವರ್ಗ ಅಥವಾ ವಿವರಣೆಯ ಮೋಟಾರು ವಾಹನಗಳ ಚಾಲನೆಗೆ ಅಧಿಕಾರ ನೀಡುತ್ತಿರುವಲ್ಲಿ ಮತ್ತು (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವು ಯಾವುದೇ ನಿರ್ದಿಷ್ಟ ವರ್ಗ ಅಥವಾ ವಿವರಣೆಯ ಮೋಟಾರು ವಾಹನದ ಚಾಲನೆಗೆ ಆತನನ್ನು ಅನರ್ಹಗೊಳಿಸಿರುವಲ್ಲಿ, ಲೈಸನ್ಸ್ ನೀಡಿಕೆ ಪ್ರಾಧಿಕಾರವು ಚಾಲನ ಲೈಸೆನ್ಸಿನ ಮೇಲೆ ಅನರ್ಹತೆಯನ್ನು ಹಿಂಬರಹ ಮಾಡತಕ್ಕದ್ದು ಮತ್ತು ಅದನ್ನು ಧಾರಕನಿಗೆ ಹಿಂದಿರುಗಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಲೈಸನ್ಸ್ ನೀಡಿಕೆ ಪ್ರಾಧಿಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಅಪೀಲು ಪ್ರಾಧಿಕಾರವು ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ನೋಟೀಸನ್ನು ನೀಡತಕ್ಕದ್ದು ಮತ್ತು ಆ ಪಕ್ಷವು ಉಭಯ ಪಕ್ಷಗಳನ್ನು ಸುನಾವಣೆ ಮಾಡಬೇಕೆಂದು ಅಗತ್ಯಪಡಿಸಿದರೆ ಹಾಗೆ ಸುನಾವಣೆ ಮಾಡತಕ್ಕದ್ದು ಮತ್ತು ತನಗೆ ಸೂಕ್ತ ಕಂಡಂಥ ಆದೇಶವನ್ನು ಹೊರಡಿಸಬಹುದು ಮತ್ತು ಅಂಥ ಯಾವುದೇ ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶವು ಅಂತಿಮವಾಗಿರತಕ್ಕದ್ದು.

20. ಅನರ್ಹಗೊಳಿಸಲು ನ್ಯಾಯಾಲಯದ ಅಧಿಕಾರ:- (1) ಯಾವ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಥವಾ ಯಾವ ಅಪರಾಧವನ್ನು ಎಸಗುವಲ್ಲಿ ಮೋಟಾರು ವಾಹನವನ್ನು ಬಳಸಲಾಗಿತ್ತೋ ಆ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣಯಿಸಲಾಗಿರುವಲ್ಲಿ, ಅಂಥ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯವು, ಈ ಅಧಿನಿಯಮದ

ಉಪಬಂಧಗಳಿಗೆ ಒಳಪಟ್ಟು ಕಾನೂನು ಮೂಲಕ ಅಧಿಕೃತಗೊಳಿಸಿದ ಯಾವುದೇ ಇತರ ದಂಡನೆಯನ್ನು ವಿಧಿಸುವುದಲ್ಲದೆ, ಹಾಗೆ ಅಪರಾಧಿಗಳೆಂದು ನಿರ್ಣೀತರಾದ ವ್ಯಕ್ತಿಗಳನ್ನು ಅಂಥ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ವರ್ಗಗಳ ಅಥವಾ ವಿವರಣೆಯ ವಾಹನಗಳನ್ನು ಅಥವಾ ಅಂಥ ವಾಹನಗಳ ಪೈಕಿ ಯಾವುದೇ ನಿರ್ದಿಷ್ಟ ವರ್ಗದ ಅಥವಾ ವಿವರಣೆಯ ವಾಹನವನ್ನು ನಡೆಸಲು ಯಾವುದೇ ಚಾಲನ ಲೈಸನ್ಸನ್ನು ನ್ಯಾಯಾಲಯವು ನಿರ್ದಿಷ್ಟಪಡಿಸುವ ಅವಧಿಯವರೆಗೆ ಧಾರಣ ಮಾಡಲು ಅನರ್ಹರೆಂದು ಘೋಷಿಸಬಹುದು:

ಪರಂತು, 183ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಬಂಧದಲ್ಲಿ, ಮೊದಲನೇ ಅಥವಾ ಎರಡನೇ ಅಪರಾಧಕ್ಕಾಗಿ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಒಬ್ಬ ವ್ಯಕ್ತಿಯು 132ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ 134ನೇ ಪ್ರಕರಣದ ಅಥವಾ 185ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ ಅಂಥ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸುವ ನ್ಯಾಯಾಲಯವು, (1)ನೇ ಉಪಪ್ರಕರಣದ ಮೇರೆಗಿನ ಅನರ್ಹತೆಯನ್ನು ಆದೇಶಿಸತಕ್ಕದ್ದು ಮತ್ತು ಆ ಅಪರಾಧವು, 132ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡಕ್ಕೆ ಅಥವಾ 134ನೇ ಪ್ರಕರಣಕ್ಕೆ ಸಂಬಂಧಪಟ್ಟಿದ್ದರೆ ಅಂಥ ಅನರ್ಹತೆಯು ಒಂದು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ಇರತಕ್ಕದ್ದು ಮತ್ತು ಅಪರಾಧವು 185ನೇ ಪ್ರಕರಣಕ್ಕೆ ಸಂಬಂಧಪಟ್ಟಿರುವುದಾದರೆ ಅಂಥ ಅನರ್ಹತೆಯು ಆರು ತಿಂಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ಇರತಕ್ಕದ್ದು.

(3) ನ್ಯಾಯಾಲಯವು, ಬರವಣಿಗೆಯಲ್ಲಿ ವಿಶೇಷ ಕಾರಣಗಳನ್ನು ದಾಖಲಿಸಿ ಅನ್ಯಥಾ ಆದೇಶ ನೀಡುವುದು ಸೂಕ್ತವೆಂದು ಭಾವಿಸಿದ್ದ ಹೊರತು, ಯಾವೊಬ್ಬ ವ್ಯಕ್ತಿಯು,-

(ಎ) 184ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಆ ಪ್ರಕರಣದ ಮೇರೆಗೆ ಅಪರಾಧಕ್ಕಾಗಿ ಅಪರಾಧಿ ಎಂದು ಪುನಃ ನಿರ್ಣೀತನಾದರೆ;

(ಬಿ) 189ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾದರೆ; ಅಥವಾ

(ಸಿ) 192ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾದರೆ

- ಅವನನ್ನು ಅನರ್ಹಗೊಳಿಸಲು ಆದೇಶವನ್ನು ಮಾಡತಕ್ಕದ್ದು:

ಪರಂತು, ಅನರ್ಹತೆಯ ಅವಧಿಯು, (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಸಂದರ್ಭದಲ್ಲಿ ಐದು ವರ್ಷಗಳ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಸಂದರ್ಭದಲ್ಲಿ ಎರಡು ವರ್ಷಗಳ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಸಂದರ್ಭದಲ್ಲಿ ಒಂದು ವರ್ಷದ ಅವಧಿಯನ್ನು ಮೀರತಕ್ಕದ್ದಲ್ಲ.

(4) 184ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯ ಅನರ್ಹತೆಯ ಆದೇಶ ಮಾಡುವ ನ್ಯಾಯಾಲಯವು, ಅಂತಹ ವ್ಯಕ್ತಿಯು 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಚಾಲನ ಸಾಮರ್ಥ್ಯ ಪರೀಕ್ಷೆಯಲ್ಲಿ ಈ ಮುಂಚೆ ಉತ್ತೀರ್ಣನಾಗಿದ್ದಿರಲಿ ಅಥವಾ ಇಲ್ಲದಿರಲಿ, ಅನರ್ಹತೆಯ ಆದೇಶವನ್ನು ಮಾಡಿದ ನಂತರ ಲೈಸನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಮನವರಿಕೆಯಾಗುವಂತೆ ಪರೀಕ್ಷೆಯಲ್ಲಿ ಉತ್ತೀರ್ಣನಾಗುವವರೆಗೆ ಅನರ್ಹನಾಗಿಯೇ ಉಳಿಯತಕ್ಕದ್ದೆಂದು ನಿರ್ದೇಶಿಸಬಹುದು.

(5) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಅಪರಾಧಕ್ಕಾಗಿ ಮಾಡಲಾದ ಯಾವುದೇ ಅಪರಾಧ ನಿರ್ಣಯದ ವಿರುದ್ಧ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದಾಗಿದೆಯೋ ಆ ನ್ಯಾಯಾಲಯವು ಆ ಉಪಪ್ರಕರಣದ ಮೇರೆಗೆ ಮಾಡಿದ ಅನರ್ಹತೆಯ ಯಾವುದೇ ಆದೇಶವನ್ನು ಯಾವ ಅಪರಾಧ ನಿರ್ಣಯದ ಪರಿಣಾಮವಾಗಿ ಅಂಥ ಅನರ್ಹತೆಯ ಆದೇಶವನ್ನು ಮಾಡಲಾಯಿತೋ ಅದರ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸಲು ಅವಕಾಶವಿರದಿದ್ದರೂ ತಳ್ಳಿಹಾಕಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

21. ಕೆಲವು ಸಂದರ್ಭಗಳಲ್ಲಿ ಚಾಲನ ಲೈಸನ್ಸನ್ನು ಅಮಾನತುಗೊಳಿಸುವುದು:- (1) 184ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಈ ಹಿಂದೆ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಗೆ ಸಂಬಂಧಿಸಿ ಅಂಥ ವ್ಯಕ್ತಿಯು ಸದರಿ 184ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ವರ್ಗದ ಅಥವಾ ವಿವರಣೆಯ ಮೋಟಾರು ವಾಹನವನ್ನು ಹಾಗೆ

ಅಪಾಯಕರವಾದ ರೀತಿಯಲ್ಲಿ ನಡೆಸಿ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ಮರಣವನ್ನು ಉಂಟುಮಾಡಿರುವನೆಂಬ ಅಥವಾ ತೀವ್ರ ಸ್ವರೂಪದ ಗಾಯಗಳನ್ನು ಉಂಟುಮಾಡಿರುವನೆಂಬ ಆಪಾದನೆಯ ಮೇಲೆ ಪೊಲೀಸ್ ಅಧಿಕಾರಿಯು ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುವಲ್ಲಿ ಅಂಥ ವ್ಯಕ್ತಿಯು ಅಂಥ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳಿಗೆ ಸಂಬಂಧಿಸಿ ಹೊಂದಿರುವ ಚಾಲನ ಲೈಸನ್ಸು,-

(ಎ) ಮೊಕದ್ದಮೆಯನ್ನು ದಾಖಲು ಮಾಡಿದ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ; ಅಥವಾ

(ಬಿ) ಅಂಥ ವ್ಯಕ್ತಿಯು, ಹಿಂದೆ ಹೇಳಿರುವ ಅವಧಿ ಮುಗಿಯುವುದಕ್ಕೆ ಮುಂಚೆ ವಿಮೋಚನೆಗೊಂಡಿದ್ದರೆ ಅಥವಾ ನಿರಪರಾಧಿ ಎಂದು ನಿರ್ಣೀತನಾಗಿದ್ದರೆ ಸಂದರ್ಭಾನುಸಾರ ಅಂಥ ವಿಮೋಚನೆ ಅಥವಾ ನಿರಪರಾಧಿ ಎಂದು ನಿರ್ಣಯವಾಗುವವರೆಗೆ

- ಅಮಾನತಾಗತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಕಾರಣದಿಂದಾಗಿ ಒಬ್ಬ ವ್ಯಕ್ತಿಯು ಹೊಂದಿರುವ ಚಾಲನ ಲೈಸನ್ಸು ಅಮಾನತು ಆದಾಗ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮೊಕದ್ದಮೆಯನ್ನು ದಾಖಲು ಮಾಡಿದ ಪೊಲೀಸ್ ಅಧಿಕಾರಿಯು, ಅಂಥ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳುವ ಸಕ್ಷಮ ನ್ಯಾಯಾಲಯದ ಗಮನಕ್ಕೆ ಅಂಥ ಅಮಾನತಿನ ವಿಷಯವನ್ನು ತರತಕ್ಕದ್ದು ಮತ್ತು ಆ ತರುವಾಯ ಅಂಥ ನ್ಯಾಯಾಲಯವು ಆ ಚಾಲನ ಲೈಸನ್ಸಿನ ಸ್ವಾಧೀನವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅದರ ಮೇಲೆ ಅಮಾನತನ್ನು ಹಿಂಬರಹ ಮಾಡತಕ್ಕದ್ದು ಮತ್ತು ಆ ಲೈಸನ್ಸನ್ನು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ ಅಂಥ ಹಿಂಬರಹದ ವಿಷಯವನ್ನು ತಿಳಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ನಿರಪರಾಧಿ ಎಂದು ನಿರ್ಣೀತನಾದಾಗ ಅಥವಾ ವಿಮೋಚನೆಗೊಂಡಾಗ, ನ್ಯಾಯಾಲಯವು, ಆ ಲೈಸನ್ಸಿನ ಅಮಾನತಿಗೆ ಸಂಬಂಧಿಸಿ ಅದರ ಮೇಲೆ ಮಾಡಲಾದ ಹಿಂಬರಹವನ್ನು ರದ್ದುಗೊಳಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟ ವರ್ಗ ಅಥವಾ ವಿವರಣೆಯ ಮೋಟಾರು ವಾಹನಕ್ಕೆ ಸಂಬಂಧಿಸಿದ ಚಾಲನ ಲೈಸನ್ಸನ್ನು ಅಮಾನತುಗೊಳಿಸಿದ್ದರೆ, ಅಂಥ ಲೈಸನ್ಸನ್ನು ಹೊಂದಿರುವ ವ್ಯಕ್ತಿಯನ್ನು , ಆ ಚಾಲನ ಲೈಸನ್ಸಿನ ಅಮಾನತು ಜಾರಿಯಲ್ಲಿರುವವರೆಗೆ ಅಂಥ ನಿರ್ದಿಷ್ಟ ವರ್ಗದ ಅಥವಾ ವಿವರಣೆಯ ಮೋಟಾರು ವಾಹನವನ್ನು ನಡೆಸಲು ಯಾವುದೇ ಲೈಸನ್ಸನ್ನು ಹೊಂದಿರದಂತೆ ಅಥವಾ ಪಡೆಯದಂತೆ ಅನರ್ಹಗೊಳಿಸತಕ್ಕದ್ದು.

22. ಅಪರಾಧ ನಿರ್ಣಯವಾದ ಮೇಲೆ ಚಾಲನ ಲೈಸೆನ್ಸಿನ ಅಮಾನತು ಅಥವಾ ರದ್ದಿಯಾತಿ:- (1) 20ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, 21ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು 184ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಯಾವುದೇ ವರ್ಗದ ಅಥವಾ ವಿವರಣೆಯ ಮೋಟಾರು ವಾಹನವನ್ನು ಅಪಾಯಕರವಾದ ರೀತಿಯಲ್ಲಿ ನಡೆಸಿ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ಮರಣ ಉಂಟುಮಾಡಿರುವ ಅಥವಾ ಅವರಿಗೆ ತೀವ್ರ ಗಾಯವನ್ನು ಉಂಟುಮಾಡಿರುವ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿರುವಲ್ಲಿ, ಅಂಥ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯವು, ಅಂಥ ವ್ಯಕ್ತಿಯು ಹೊಂದಿರುವ ಚಾಲನ ಲೈಸನ್ಸು ಆ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅದನ್ನು ತಾನು ಸೂಕ್ತವೆಂದು ಭಾವಿಸುವಂಥ ಅವಧಿಗೆ ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು.

(2) 20ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ 185ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಈ ಹಿಂದೆಯೇ ಅಪರಾಧಿ ಎಂದು ನಿರ್ಣೀತನಾಗಿದ್ದು ಪುನಃ ಆ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿರುವಲ್ಲಿ, ಆ ತರುವಾಯದ ಅಂಥ ಅಪರಾಧ ನಿರ್ಣಯವನ್ನು ಮಾಡುವ ನ್ಯಾಯಾಲಯವು ಅಂಥ ವ್ಯಕ್ತಿಯು ಹೊಂದಿರುವ ಚಾಲನ ಲೈಸನ್ಸನ್ನು ಆದೇಶದ ಮೂಲಕ ರದ್ದುಗೊಳಿಸಬಹುದು.

(3) ಈ ಪ್ರಕರಣದ ಮೇರೆಗೆ ಚಾಲನ ಲೈಸನ್ಸನ್ನು ರದ್ದುಗೊಳಿಸಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ನ್ಯಾಯಾಲಯವು ಆ ಚಾಲನ ಲೈಸನ್ಸನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದರ ಮೇಲೆ ರದ್ದಿಯಾತಿಯನ್ನು ಅಥವಾ ಸಂದರ್ಭಾನುಸಾರ ಅಮಾನತನ್ನು ಹಿಂಬರಹ ಮಾಡತಕ್ಕದ್ದು ಮತ್ತು ಹಾಗೆ ಹಿಂಬರಹ ಮಾಡಿದ ಆ ಚಾಲನ ಲೈಸನ್ಸನ್ನು ಅದನ್ನು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಾಧಿಕಾರವು ಲೈಸನ್ಸನ್ನು ಸ್ವೀಕರಿಸಿದ ತರುವಾಯ ಅದನ್ನು ತನ್ನ ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು ಮತ್ತು ಅಮಾನತುಗೊಳಿಸಲಾದ ಲೈಸನ್ಸಿನ ಸಂದರ್ಭದಲ್ಲಿ, ಲೈಸನ್ಸು ಧಾರಕನು ಅದನ್ನು ಹಿಂದಿರುಗಿಸಲು ಅರ್ಜಿಯನ್ನು ಸಲ್ಲಿಸಿದ ತರುವಾಯ ಅಮಾನತಿನ ಅವಧಿಯು ಮುಗಿದ ಮೇಲೆ ಅದನ್ನು ಅವನಿಗೆ ಹಿಂದಿರುಗಿಸತಕ್ಕದ್ದು:

ಪರಂತು, ಅಂಥ ಯಾವುದೇ ಲೈಸೆನ್ಸನ್ನು ಅದರ ಧಾರಕನು ಅಮಾನತಿನ ಅವಧಿಯು ಮುಗಿದ ತರುವಾಯ, ಲೈಸನ್ಸು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಪ್ರಾಧಿಕಾರಕ್ಕೆ ಮನದಟ್ಟಾಗುವಂತೆ 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಚಾಲನ ಸಾಮರ್ಥ್ಯದ ಹೊಸ ಪರೀಕ್ಷೆಗೆ ಒಳಗಾಗಿ ಅದರಲ್ಲಿ ಉತ್ತೀರ್ಣನಾದ ಹೊರತು ಮತ್ತು 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಮೂನೆಯಲ್ಲಿಯೇ ಮತ್ತು ರೀತಿಯಲ್ಲಿಯೇ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಹೊರತು, ಅವನಿಗೆ ಹಿಂದಿರುಗಿಸತಕ್ಕದ್ದಲ್ಲ.

(4) ನಿರ್ದಿಷ್ಟ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳ ಚಾಲನ ಲೈಸೆನ್ಸನ್ನು ಈ ಪ್ರಕರಣದ ಮೇರೆಗೆ ರದ್ದುಗೊಳಿಸಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ಅಂಥ ಲೈಸೆನ್ಸನ್ನು ಹೊಂದಿರುವ ವ್ಯಕ್ತಿಯನ್ನು, ಚಾಲನ ಲೈಸೆನ್ಸಿನ ರದ್ದಿಯಾತಿ ಅಥವಾ ಅಮಾನತು ಜಾರಿಯಲ್ಲಿರುವವರೆಗೆ ಅಂಥ ನಿರ್ದಿಷ್ಟ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳನ್ನು ನಡೆಸುವ ಯಾವುದೇ ಲೈಸೆನ್ಸನ್ನು ಧಾರಣ ಮಾಡದಂತೆ ಅಥವಾ ಪಡೆಯದಂತೆ ಅನರ್ಹಗೊಳಿಸತಕ್ಕದ್ದು.

23. ಅನರ್ಹತೆಯ ಆದೇಶದ ಪರಿಣಾಮ:- (1) 19ನೇ ಪ್ರಕರಣದ ಅಥವಾ 20ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಸಂಬಂಧದಲ್ಲಿ ಯಾವುದೇ ಅನರ್ಹತಾ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯನ್ನು, ಚಾಲನ ಲೈಸೆನ್ಸನ್ನು ಧಾರಣ ಮಾಡದಂತೆ ಅಥವಾ ಪಡೆಯದಂತೆ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ಮತ್ತು ಅವಧಿಯವರೆಗೆ ಅನರ್ಹಗೊಳಿಸತಕ್ಕದ್ದು ಮತ್ತು ಆ ಆದೇಶದ ದಿನಾಂಕದಂದು ಅಂಥ ವ್ಯಕ್ತಿಯು ಧಾರಣ ಮಾಡಿರುವ ಚಾಲನ ಲೈಸೆನ್ಸು ಯಾವುದಾದರೂ ಇದ್ದರೆ ಅದು ಅಷ್ಟು ಮಟ್ಟಿಗೆ ಮತ್ತು ಅಂಥ ಅವಧಿಯಲ್ಲಿ ಜಾರಿಯಲ್ಲಿರುವುದು ನಿಲ್ಲತಕ್ಕದ್ದು.

(2) 20ನೇ ಪ್ರಕರಣದ ಮೇರೆಗೆ ಮಾಡಲಾದ ಅನರ್ಹತೆಯ ಆದೇಶದ ಜಾರಿಯನ್ನು, ಅಂಥ ಆದೇಶದ ವಿರುದ್ಧ ಅಥವಾ ಅಂಥ ಆದೇಶವನ್ನು ಯಾವ ಅಪರಾಧ ನಿರ್ಣಯದ ಪರಿಣಾಮವಾಗಿ ಮಾಡಲಾಯಿತೋ ಆ ಅಪರಾಧ ನಿರ್ಣಯದ ವಿರುದ್ಧ ಅಪೀಲು ಇತ್ಯರ್ಥದಲ್ಲಿರುವಾಗ, ಅಪೀಲು ನ್ಯಾಯಾಲಯವು ಅಮಾನತುಗೊಳಿಸತಕ್ಕದ್ದೆಂದು ಅಥವಾ ಮುಂದೂಡತಕ್ಕದ್ದೆಂದು ನಿರ್ದೇಶಿಸಿದ ಹೊರತು ಹಾಗೆ ಅಮಾನತುಗೊಳಿಸತಕ್ಕದ್ದಲ್ಲ ಅಥವಾ ಮುಂದೂಡತಕ್ಕದ್ದಲ್ಲ.

(3) ಯಾವ ವ್ಯಕ್ತಿಯ ಸಂಬಂಧದಲ್ಲಿ ಯಾವುದೇ ಅನರ್ಹತೆಯ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು, ಆದೇಶದ ದಿನಾಂಕದಿಂದ ಆರು ತಿಂಗಳು ಗತಿಸಿದ ತರುವಾಯ ಯಾವುದೇ ಸಮಯದಲ್ಲಿ ನ್ಯಾಯಾಲಯಕ್ಕೆ ಅಥವಾ ಆ ಆದೇಶವನ್ನು ಮಾಡಿದ ಇತರ ಪ್ರಾಧಿಕಾರಕ್ಕೆ ಅನರ್ಹತೆಯನ್ನು ತೆಗೆದುಹಾಕಲು ಅರ್ಜಿ ಸಲ್ಲಿಸಬಹುದು; ಮತ್ತು ಸಂದರ್ಭಾನುಸಾರ ಆ ನ್ಯಾಯಾಲಯವು ಅಥವಾ ಆ ಪ್ರಾಧಿಕಾರವು ಎಲ್ಲ ಪರಿಸ್ಥಿತಿಗಳನ್ನು ಗಮನಿಸಿ ಆ ಅನರ್ಹತೆಯನ್ನು ರದ್ದುಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು:

ಪರಂತು, ಆ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಈ ಪ್ರಕರಣದ ಮೇರೆಗೆ ಯಾವುದೇ ಅನರ್ಹತೆಯ ಆದೇಶವನ್ನು ರದ್ದುಗೊಳಿಸಲು ಅಥವಾ ವ್ಯತ್ಯಾಸಗೊಳಿಸಲು ನಿರಾಕರಿಸುವಲ್ಲಿ, ಅದರ ಮೇರೆಗಿನ ಎರಡನೇ ಅರ್ಜಿಯನ್ನು ಅಂಥ ನಿರಾಕರಣೆಯ ದಿನಾಂಕದಿಂದ ಮೂರು ತಿಂಗಳ ಅವಧಿಯು ಗತಿಸುವುದಕ್ಕೆ ಮುಂಚೆ ಸ್ವೀಕರಿಸತಕ್ಕದ್ದಲ್ಲ.

24. ಹಿಂಬರಹ:- (1) ಅನರ್ಹತೆಯ ಆದೇಶವನ್ನು ಮಾಡುವ ನ್ಯಾಯಾಲಯ ಅಥವಾ ಪ್ರಾಧಿಕಾರವು, ಅನರ್ಹಗೊಳಿಸಲಾದ ವ್ಯಕ್ತಿಯು ಧಾರಣಮಾಡಿದ ಚಾಲನ ಲೈಸೆನ್ಸು, ಯಾವುದಾದರೂ ಇದ್ದರೆ, ಅದರ ಮೇಲೆ ಅನರ್ಹತೆಯ ಆದೇಶದ ಮತ್ತು ಅನರ್ಹತೆಯ ಆದೇಶವನ್ನು ಯಾವ ಅಪರಾಧ ನಿರ್ಣಯಕ್ಕೆ ಸಂಬಂಧಿಸಿ ಮಾಡಲಾಯಿತೋ ಆ ಯಾವುದೇ ಅಪರಾಧ ನಿರ್ಣಯದ ವಿವರಗಳನ್ನು 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಅನರ್ಹತೆಯ ಆದೇಶದ ಯಾವುದೇ ರದ್ದಿಯಾತಿ ಅಥವಾ ವ್ಯತ್ಯಾಸದ ವಿವರಗಳನ್ನು, ಹಿಂಬರೆಯತಕ್ಕದ್ದು ಅಥವಾ ಹಿಂಬರೆಸತಕ್ಕದ್ದು.

(2) ಕೇಂದ್ರ ಸರ್ಕಾರವು, ನಿಯಮಿಸಬಹುದಾದಂತೆ ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸುವ ನ್ಯಾಯಾಲಯವು, ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟಂತೆ ಯಾವುದೇ ಅನರ್ಹತೆಯ ಆದೇಶವನ್ನು ಮಾಡಿರಲಿ ಅಥವಾ ಇಲ್ಲದಿರಲಿ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯು ಧಾರಣ ಮಾಡಿರುವ ಯಾವುದೇ ಚಾಲನ ಲೈಸೆನ್ಸಿನ ಮೇಲೆ ಅಂಥ ಅಪರಾಧ ನಿರ್ಣಯದ ವಿವರಗಳನ್ನು ಹಿಂಬರೆಯತಕ್ಕದ್ದು ಅಥವಾ ಹಿಂಬರೆಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಅಪರಾಧಕ್ಕಾಗಿ ಆಪಾದಿತನಾದ ಯಾರೇ ವ್ಯಕ್ತಿಯು, ನ್ಯಾಯಾಲಯಕ್ಕೆ ಹಾಜರಾಗುವಾಗ ಚಾಲನ ಲೈಸೆನ್ಸ್ ಅವನ ಸ್ವಾಧೀನದಲ್ಲಿದ್ದರೆ ಅದನ್ನು ತನ್ನೊಂದಿಗೆ ತರತಕ್ಕದ್ದು.

(4) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಮೂರು ತಿಂಗಳು ಮೀರಿದ ಅವಧಿಯ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವಲ್ಲಿ ಶಿಕ್ಷೆಯ ಆದೇಶವನ್ನು ಮಾಡುವ ನ್ಯಾಯಾಲಯವು ಸಂಬಂಧಪಟ್ಟ ವ್ಯಕ್ತಿಯ ಚಾಲನ ಲೈಸನ್ಸಿನ ಮೇಲೆ ಅಂಥ ಶಿಕ್ಷಾದೇಶದ ಸಂಗತಿಯನ್ನು ಹಿಂಬರೆಯತಕ್ಕದ್ದು ಮತ್ತು ಪ್ರಾಸಿಕ್ಯೂಟ್ ಮಾಡುವ ಪ್ರಾಧಿಕಾರವು ಅಂಥ ಹಿಂಬರಹದ ಸಂಗತಿಯನ್ನು, ಚಾಲನ ಲೈಸೆನ್ಸನ್ನು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(5) ಯಾವುದೇ ನ್ಯಾಯಾಲಯವು ಚಾಲನ ಲೈಸನ್ಸಿನ ಮೇಲೆ ಹಿಂಬರೆದಾಗ ಅಥವಾ ಹಿಂಬರೆಸಿದಾಗ ಅಂಥ ನ್ಯಾಯಾಲಯವು ಆ ಹಿಂಬರಹದ ವಿವರಗಳನ್ನು, ಚಾಲನ ಲೈಸನ್ಸನ್ನು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(6) ಚಾಲನ ಲೈಸನ್ಸಿನ ಮೇಲೆ ಹಿಂಬರೆಯಲಾದ ನ್ಯಾಯಾಲಯದ ಯಾವುದೇ ಅಪರಾಧ ನಿರ್ಣಯದ ಅಥವಾ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ಮೇಲೆ ಅಪೀಲು ನ್ಯಾಯಾಲಯವು ಅಪರಾಧ ನಿರ್ಣಯವನ್ನು ಅಥವಾ ಆದೇಶವನ್ನು ವ್ಯತ್ಯಾಸಗೊಳಿಸಿರುವಲ್ಲಿ ಅಥವಾ ತಳ್ಳಿಹಾಕಿರುವಲ್ಲಿ ಆ ಅಪೀಲು ನ್ಯಾಯಾಲಯವು ಆ ಚಾಲನ ಲೈಸನ್ಸನ್ನು ನೀಡಿದ ಅಥವಾ ಆ ಹಿಂದೆ ನವೀಕರಿಸಿದ ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ ಅದನ್ನು ತಿಳಿಸತಕ್ಕದ್ದು ಮತ್ತು ಅಂಥ ಪ್ರಾಧಿಕಾರವು ಹಿಂಬರಹವನ್ನು ತಿದ್ದುಪಡಿ ಮಾಡತಕ್ಕದ್ದು ಅಥವಾ ತಿದ್ದುಪಡಿ ಮಾಡಿಸತಕ್ಕದ್ದು.

25. ಹಿಂಬರಹದ ವರ್ಗಾವಣೆ ಮತ್ತು ಹಿಂಬರಹವಿಲ್ಲದೆ ಚಾಲನ ಲೈಸನ್ಸು ನೀಡಿಕೆ:- (1) ಯಾವುದೇ ಚಾಲನ ಲೈಸನ್ಸಿನ ಮೇಲಿನ ಹಿಂಬರಹವನ್ನು, ಅದರ ಧಾರಕನು ಪಡೆದ ಯಾವುದೇ ಹೊಸ ಚಾಲನ ಲೈಸನ್ಸಿಗೆ ಅಥವಾ ಅದರ ದ್ವಿಪ್ರತಿಗೆ, ಧಾರಕನು ಈ ಪ್ರಕರಣದ ಉಪಬಂಧಗಳ ಮೇರೆಗೆ ಹಿಂಬರಹವಿಲ್ಲದೆ ಚಾಲನ ಲೈಸನ್ಸು ನೀಡಿಕೆಗೆ ಅವನು ಹಕ್ಕುಳ್ಳವನಾಗುವವರೆಗೆ ವರ್ಗಾವಣೆ ಮಾಡತಕ್ಕದ್ದು.

(2) ಚಾಲನ ಲೈಸನ್ಸ್‌ಗೆ ಹಿಂಬರಹ ಮಾಡಬೇಕಾಗಿರುವಲ್ಲಿ ಮತ್ತು ಆ ಚಾಲನ ಲೈಸೆನ್ಸು ಹಿಂಬರಹ ಮಾಡಬೇಕಾಗಿರುವ ನ್ಯಾಯಾಲಯ ಅಥವಾ ಪ್ರಾಧಿಕಾರದ ಸ್ವಾಧೀನದಲ್ಲಿ ಇಲ್ಲದಿದ್ದರೆ, ಆಗ,-

(ಎ) ಯಾವ ವ್ಯಕ್ತಿಯ ಸಂಬಂಧದಲ್ಲಿ ಹಿಂಬರಹ ಮಾಡಬೇಕಾಗಿದೆಯೋ ಆ ವ್ಯಕ್ತಿಯು, ಆ ಸಮಯಕ್ಕೆ ಚಾಲನ ಲೈಸನ್ಸಿನ ಧಾರಕನಾಗಿದ್ದರೆ, ಅವನು ಆ ಚಾಲನ ಲೈಸನ್ಸನ್ನು ನ್ಯಾಯಾಲಯಕ್ಕೆ ಅಥವಾ ಆ ಪ್ರಾಧಿಕಾರಕ್ಕೆ ಐದು ದಿನಗಳ ಒಳಗೆ ಅಥವಾ ನ್ಯಾಯಾಲಯ ಅಥವಾ ಪ್ರಾಧಿಕಾರವು ನಿಗದಿಪಡಿಸಬಹುದಾದಂತಹ ಇನ್ನಷ್ಟು ಸಮಯದೊಳಗೆ ಹಾಜರುಪಡಿಸತಕ್ಕದ್ದು ; ಅಥವಾ

(ಬಿ) ಅವನು ಆಗ ಚಾಲನ ಲೈಸನ್ಸ್ ಧಾರಕನಾಗಿಲ್ಲದೆ, ಆ ತರುವಾಯ ಚಾಲನ ಲೈಸನ್ಸನ್ನು ಪಡೆದರೆ, ಅವನು ಆ ಚಾಲನ ಲೈಸನ್ಸನ್ನು ಪಡೆದ ತರುವಾಯ, ಐದು ದಿನಗಳ ಒಳಗೆ ಅದನ್ನು ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಹಾಜರುಪಡಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಚಾಲನ ಲೈಸನ್ಸನ್ನು ಹಾಜರುಪಡಿಸದಿದ್ದರೆ, ಆ ಲೈಸನ್ಸು ಅಂಥ ಅವಧಿಯು ಮುಗಿದ ತರುವಾಯ ಅದನ್ನು ಹಿಂಬರಹದ ಉದ್ದೇಶಕ್ಕಾಗಿ ಹಾಜರುಪಡಿಸುವವರೆಗೆ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(3) ಯಾವ ವ್ಯಕ್ತಿಯ ಚಾಲನ ಲೈಸನ್ಸಿಗೆ ಹಿಂಬರಹ ಮಾಡಲಾಗಿದೆಯೋ ಅಂಥ ಹಿಂಬರಹದ ತರುವಾಯ ಮೂರು ವರ್ಷಗಳ ನಿರಂತರ ಅವಧಿಯಲ್ಲಿ ಅವನ ವಿರುದ್ಧ ಇನ್ನು ಹಿಂಬರಹ ಮಾಡಿಲ್ಲದಿದ್ದರೆ, ಆ ವ್ಯಕ್ತಿಯು ತನ್ನ ಚಾಲನ ಲೈಸನ್ಸನ್ನು ಒಪ್ಪಿಸಿ ಮತ್ತು ಐದು ರೂಪಾಯಿ ಫೀಜನ್ನು ಸಂದಾಯ ಮಾಡಿದ ಮೇಲೆ ಎಲ್ಲ ಹಿಂಬರಹಗಳಿಂದ ಮುಕ್ತವಾದ ಹೊಸ ಚಾಲನ ಲೈಸನ್ಸನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಹಿಂಬರಹವು 112ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವೇಗದ ಮಿತಿಯ ಉಲ್ಲಂಘನೆಯ ಅಪರಾಧಕ್ಕೆ ಸಂಬಂಧಿಸಿ ಮಾತ್ರವೇ ಮಾಡಲಾಗಿದ್ದರೆ, ಅಂಥ ವ್ಯಕ್ತಿಯು ಹಿಂಬರಹದ ದಿನಾಂಕದ ಒಂದು ವರ್ಷದ ಅವಧಿಯು ಗತಿಸುತ್ತಲೇ ಅಂಥ ಹಿಂಬರಹದಿಂದ ಮುಕ್ತವಾದ ಹೊಸ ಲೈಸನ್ಸನ್ನು ಪಡೆಯಲು ಹಕ್ಕುಳ್ಳವನಾಗತಕ್ಕದ್ದು:

ಮತ್ತೂ ಪರಂತು, ಕ್ರಮವಾಗಿ ಮೂರು ವರ್ಷ ಮತ್ತು ಒಂದು ವರ್ಷದ ಸದರಿ ಅವಧಿಯನ್ನು ಲೆಕ್ಕಹಾಕುವಲ್ಲಿ, ಸದರಿ ವ್ಯಕ್ತಿಯನ್ನು ಚಾಲನ ಲೈಸನ್ಸನ್ನು ಧಾರಣ ಮಾಡದಂತೆ ಅಥವಾ ಪಡೆಯದಂತೆ ಅನರ್ಹಗೊಳಿಸಿರುವ ಯಾವುದೇ ಅವಧಿಯನ್ನು ಹೊರತುಪಡಿಸತಕ್ಕದ್ದು.

26. ಚಾಲನ ಲೈಸನ್ಸ್‌ಗಳ ರಾಜ್ಯ ರಿಜಿಸ್ಟರುಗಳ ನಿರ್ವಹಣೆ:- (1) ಪ್ರತಿಯೊಂದು ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ರಾಜ್ಯ ಸರ್ಕಾರದ ಲೈಸನ್ಸ್ ನೀಡಿಕೆ ಪ್ರಾಧಿಕಾರಗಳು ನೀಡಿದ ಮತ್ತು ನವೀಕರಿಸಿದ

ಚಾಲನ ಲೈಸನ್ಸುಗಳ ಸಂಬಂಧದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡು ಚಾಲನ ಲೈಸೆನ್ಸ್‌ಗಳ ರಾಜ್ಯ ರಿಜಿಸ್ಟರ್ ಎಂದು ಕರೆಯಲಾಗುವ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು, ಆ ವಿವರಗಳೆಂದರೆ:-

(ಎ) ಚಾಲನ ಲೈಸೆನ್ಸ್‌ಗಳ ಧಾರಕರ ಹೆಸರು ಮತ್ತು ವಿಳಾಸಗಳು;

(ಬಿ) ಲೈಸನ್ಸ್ ಸಂಖ್ಯೆಗಳು;

(ಸಿ) ಲೈಸೆನ್ಸ್‌ಗಳ ನೀಡಿಕೆ ಅಥವಾ ನವೀಕರಣದ ದಿನಾಂಕಗಳು;

(ಡಿ) ಲೈಸೆನ್ಸ್‌ಗಳ ಮುಕ್ತಾಯದ ದಿನಾಂಕ;

(ಇ) ನಡೆಸಲು ಅಧಿಕೃತಗೊಳಿಸಲಾದ ವಾಹನಗಳ ವರ್ಗಗಳು ಮತ್ತು ಪ್ರಕಾರಗಳು; ಮತ್ತು

(ಎಫ್) ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಇತರ ವಿವರಗಳು.

(2) ಪ್ರತಿಯೊಂದು ರಾಜ್ಯ ಸರ್ಕಾರವು, ಚಾಲನ ಲೈಸೆನ್ಸ್‌ಗಳ ರಾಜ್ಯ ರಿಜಿಸ್ಟರಿನ ಮುದ್ರಿತ ಪ್ರತಿಯನ್ನು ಅಥವಾ ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ ನಮೂನೆಯಲ್ಲಿನ ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅಂಥ ರಿಜಿಸ್ಟರಿನಲ್ಲಿ ಕಾಲಕಾಲಕ್ಕೆ ಮಾಡಲಾದ ಸೇರ್ಪಡೆಗಳನ್ನು ಮತ್ತು ಇತರ ತಿದ್ದುಪಡಿಗಳನ್ನು ತಡಮಾಡದೆ ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕದ್ದು.

(3) ಚಾಲನ ಲೈಸನ್ಸುಗಳ ರಾಜ್ಯ ರಿಜಿಸ್ಟರನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

27. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- ಕೇಂದ್ರ ಸರ್ಕಾರವು,-

(ಎ) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳಿಗೆ ಸಂಬಂಧಿಸಿ;

(ಬಿ) ಕಲಿಕೆಯ ಲೈಸೆನ್ಸ್‌ಗಾಗಿ ಅರ್ಜಿಯನ್ನು ಸಲ್ಲಿಸಬಹುದಾದಂಥ ನಮೂನೆ, ಅದು ಒಳಗೊಂಡಿರತಕ್ಕ ಮಾಹಿತಿ ಮತ್ತು 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜುಗಳು -ಇವುಗಳಿಗಾಗಿ ಉಪಬಂಧಿಸಿ;

(ಸಿ) 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವೈದ್ಯಕೀಯ ಪ್ರಮಾಣಪತ್ರದ ನಮೂನೆಗಾಗಿ ಉಪಬಂಧಿಸಿ;

(ಡಿ) 8ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪರೀಕ್ಷೆಯ ವಿವರಗಳನ್ನು ಉಪಬಂಧಿಸಿ;

(ಇ) ಚಾಲನ ಲೈಸನ್ಸಿಗಾಗಿ ಸಲ್ಲಿಸುವ ಅರ್ಜಿಯ ನಮೂನೆ, ಅದು ಒಳಗೊಂಡಿರತಕ್ಕ ಮಾಹಿತಿ ಮತ್ತು 9ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ದಸ್ತಾವೇಜುಗಳು - ಇವುಗಳಿಗಾಗಿ ಉಪಬಂಧಿಸಿ;

(ಎಫ್) 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ, ಚಾಲನ ಸಾಮರ್ಥ್ಯದ ಪರೀಕ್ಷೆಯ ವಿವರಗಳಿಗಾಗಿ ಉಪಬಂಧಿಸಿ;

(ಜಿ) ಈ ಅಧಿನಿಯಮದ ಮೇರೆಗೆ ಸಾರಿಗೆ ವಾಹನಗಳನ್ನು ನಡೆಸಲು ಯಾವ ವ್ಯಕ್ತಿಗಳಿಗೆ ಲೈಸನ್ಸು ನೀಡಬಹುದೋ, ಅವರ ಕನಿಷ್ಠ ವಿದ್ಯಾರ್ಹತೆಗಳನ್ನು ಮತ್ತು ಅಂಥ ವ್ಯಕ್ತಿಗಳು ಅಂಥ ಅರ್ಹತೆಗಳನ್ನು ಯಾವ ಸಮಯದೊಳಗೆ ಆರ್ಜಿಸತಕ್ಕದ್ದೋ ಆ ಸಮಯವನ್ನು ನಿರ್ದಿಷ್ಟಪಡಿಸಿ;

(ಹೆಚ್) 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಲೈಸೆನ್ಸ್‌ಗಳ ನಮೂನೆ ಮತ್ತು ಒಳಾಂಶಗಳಿಗಾಗಿ ಉಪಬಂಧಿಸಿ;

(ಐ) 11ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ನಮೂನೆ ಮತ್ತು ಒಳಾಂಶಗಳು ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜುಗಳು ಮತ್ತು ವಿಧಿಸಬೇಕಾದ ಫೀಜು

- ಇವುಗಳಿಗಾಗಿ ಉಪಬಂಧಿಸಿ;

(ಜೆ) 11ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗುವ ಅರ್ಜಿಗೆ ಯಾವ ಷರತ್ತುಗಳಿಗೆ ಒಳಪಟ್ಟು 9ನೇ ಪ್ರಕರಣವು ಅನ್ವಯವಾಗತಕ್ಕದ್ದೋ ಆ ಷರತ್ತುಗಳನ್ನು ಉಪಬಂಧಿಸಿ;

(ಕೆ) 15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ನಮೂನೆ ಮತ್ತು ಒಳಾಂಶಗಳು ಮತ್ತು 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಂಥ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು

- ಇವುಗಳಿಗಾಗಿ ಉಪಬಂಧಿಸಿ;

(ಎಲ್) 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸನ್ಸ್‌ಗಳನ್ನು ನೀಡುವ ಪ್ರಾಧಿಕಾರದ ಸಲುವಾಗಿ ಉಪಬಂಧಿಸಿ;

(ಎಂ) ಕಲಿಕೆ ಲೈಸನ್ಸುಗಳ ನೀಡಿಕೆಗೆ ಮತ್ತು ಚಾಲನ ಲೈಸನ್ಸುಗಳು ಮತ್ತು ಮೋಟಾರು ವಾಹನ ನಡೆಸುವ ಶಿಕ್ಷಣವನ್ನು ಬೋಧಿಸುವ ಶಾಲೆಗಳು ಅಥವಾ ಕಾರ್ಯ ಸಂಸ್ಥೆಗಳನ್ನು ವಿನಿಯಮಿಸುವ ಉದ್ದೇಶಕ್ಕಾಗಿ ಲೈಸನ್ಸುಗಳ ನೀಡಿಕೆ ಮತ್ತು ನವೀಕರಣಗಳ ಬಗ್ಗೆ 8ನೇ ಪ್ರಕರಣದ (2)ನೇ ಉಪಪ್ರಕರಣ, 9ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 15ನೇ ಪ್ರಕರಣದ (3)ನೇ ಉಪಪ್ರಕರಣ ಮತ್ತು (4)ನೇ ಉಪಪ್ರಕರಣಗಳು

- ಇವುಗಳ ಮೇರೆಗೆ ಸಂದಾಯವಾಗಬೇಕಾದ ಫೀಜನ್ನು ನಿರ್ದಿಷ್ಟಪಡಿಸಿ;

(ಎನ್) 19ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಉದ್ದೇಶಗಳಿಗಾಗಿ ಕೃತ್ಯಗಳನ್ನು ನಿರ್ದಿಷ್ಟಪಡಿಸಿ;

(ಓ) 24ನೇ ಪ್ರಕರಣದ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗಿನ ಅಪರಾಧಗಳನ್ನು ನಿರ್ದಿಷ್ಟಪಡಿಸಿ;

(ಪಿ) 26ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಎಲ್ಲ ವಿಷಯಗಳು ಅಥವಾ ಅವುಗಳಲ್ಲಿ ಯಾವೊಂದರ ಬಗ್ಗೆ ಉಪಬಂಧಿಸಿ; ಮತ್ತು

(ಕ್ಯೂ) ಕೇಂದ್ರ ಸರ್ಕಾರವು ನಿಯಮಿಸಿದ ಅಥವಾ ನಿಯಮಿಸಬೇಕಾದ ಯಾವುದೇ ಇತರ ವಿಷಯದ ಬಗ್ಗೆ

- ನಿಯಮಗಳನ್ನು ರಚಿಸಬಹುದು.

28. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳನ್ನು ಹೊರತುಪಡಿಸಿ, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ಲೈಸನ್ಸು ನೀಡಿಕೆ ಪ್ರಾಧಿಕಾರಗಳು ಮತ್ತು ನಿಯಮಿಸಲಾದ ಇತರ ಪ್ರಾಧಿಕಾರಗಳ ನೇಮಕಾತಿ, ಅಧಿಕಾರವ್ಯಾಪ್ತಿ, ನಿಯಂತ್ರಣ ಮತ್ತು ಪ್ರಕಾರ್ಯಗಳು;

(ಬಿ) ಈ ಅಧ್ಯಾಯದ ಮೇರೆಗೆ ಸಲ್ಲಿಸಬಹುದಾದ ಅಪೀಲುಗಳ ನಿರ್ವಹಣೆ ಮತ್ತು ಸುನಾವಣೆ, ಅಂಥ ಅಪೀಲುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಂಥ ಫೀಜುಗಳ ಮರುಪಾವತಿ:

ಪರಂತು, ಹಾಗೆ ನಿಗದಿಪಡಿಸಲಾದ ಫೀಜು ಇಪ್ಪತ್ತೈದು ರೂಪಾಯಿಗಳನ್ನು ಮೀರತಕ್ಕದ್ದಲ್ಲ;

(ಸಿ) ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ಲೈಸನ್ಸ್‌ಗಳಿಗೆ ಬದಲಾಗಿ ದ್ವಿಪ್ರತಿ ಲೈಸನ್ಸು ನೀಡಿಕೆ ಮತ್ತು ಹಳೆಯ ಭಾವಚಿತ್ರವನ್ನು ಬದಲಾಯಿಸುವುದು ಮತ್ತು ಆ ಬಗ್ಗೆ ವಿಧಿಸತಕ್ಕ ಫೀಜುಗಳು;

(ಡಿ) ಸಾರಿಗೆ ವಾಹನಗಳ ಚಾಲಕರು ಧರಿಸುವ ಬ್ಯಾಡ್ಜ್‌ಗಳು ಮತ್ತು ಸಮವಸ್ತ್ರಗಳು ಮತ್ತು ಬ್ಯಾಡ್ಜ್‌ಗಳ ಸಂಬಂಧದಲ್ಲಿ ಸಂದಾಯವಾಗತಕ್ಕ ಫೀಜು;

(ಇ) 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ವೈದ್ಯಕೀಯ ಪ್ರಮಾಣ ಪತ್ರದ ನೀಡಿಕೆಗೆ ಸಂದಾಯವಾಗತಕ್ಕ ಫೀಜು;

(ಎಫ್) ಈ ಅಧ್ಯಾಯದ ಮೇರೆಗೆ ಸಂದಾಯವಾಗತಕ್ಕ ಎಲ್ಲಾ ಫೀಜುಗಳ ಅಥವಾ ಅದರ ಯಾವುದೇ ಭಾಗದ ಸಂದಾಯದಿಂದ ನಿಯಮಿಸಿದ ವ್ಯಕ್ತಿಗಳಿಗೆ ಅಥವಾ ನಿಯಮಿಸಿದ ವ್ಯಕ್ತಿಗಳ ವರ್ಗಗಳಿಗೆ ವಿನಾಯಿತಿ;

(ಜಿ) ಲೈಸನ್ಸ್ ನೀಡುವ ಒಂದು ಪ್ರಾಧಿಕಾರವು ಲೈಸನ್ಸ್ ನೀಡುವ ಇನ್ನೊಂದು ಪ್ರಾಧಿಕಾರಕ್ಕೆ ನೀಡಲಾದ ಲೈಸನ್ಸುಗಳ ವಿವರಗಳನ್ನು ತಿಳಿಸುವುದು;

(ಹೆಚ್) ಸಾರಿಗೆ ವಾಹನಗಳ ಚಾಲನ ಲೈಸೆನ್ಸ್ ನೀಡಲಾದಂಥ ವ್ಯಕ್ತಿಗಳ ಕರ್ತವ್ಯಗಳು, ಪ್ರಕಾರ್ಯಗಳು ಮತ್ತು ನಡತೆ;

(ಐ) ಈ ಅಧ್ಯಾಯದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಎಲ್ಲಾ ಅಥವಾ ಯಾವುವೇ ಉಪಬಂಧಗಳಿಂದ ರೋಡ್-ರೋಲರ್‌ಗಳ ಚಾಲಕರಿಗೆ ವಿನಾಯಿತಿ;

(ಜೆ) 26ನೇ ಪ್ರಕರಣದ ಮೇರೆಗೆ ಚಾಲನ ಲೈಸೆನ್ಸ್‌ಗಳ ರಾಜ್ಯ ರಿಜಿಸ್ಟರನ್ನು ನಿರ್ವಹಿಸಬೇಕಾದಂಥ ರೀತಿ;

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ

- ಇವುಗಳಿಗಾಗಿ ಉಪಬಂಧಿಸಬಹುದು.

## ಅಧ್ಯಾಯ - III

### ಮಜಲು ವಾಹನಗಳ ನಿರ್ವಾಹಕರಿಗೆ ಲೈಸನ್ಸು ನೀಡಿಕೆ

29. ನಿರ್ವಾಹಕರ ಲೈಸನ್ಸಿನ ಅವಶ್ಯಕತೆ:- (1) ಯಾರೇ ವ್ಯಕ್ತಿಯು, ಮಜಲು ವಾಹನದ ನಿರ್ವಾಹಕನಾಗಿ ಕಾರ್ಯನಿರ್ವಹಿಸಲು ಅವನನ್ನು ಅಧಿಕೃತಗೊಳಿಸಿ ಅವನಿಗೆ ನೀಡಲಾದ ಚಾಲ್ತಿ ನಿರ್ವಾಹಕನ ಲೈಸನ್ಸನ್ನು ಹೊಂದಿರುವ ಹೊರತು, ಅಂಥ ನಿರ್ವಾಹಕನಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು, ಮಜಲು ವಾಹನದ ನಿರ್ವಾಹಕನಾಗಿ ಕಾರ್ಯನಿರ್ವಹಿಸಲು, ಹಾಗೆ ಲೈಸನ್ಸು ಪಡೆದಿಲ್ಲದ ಯಾರೇ ವ್ಯಕ್ತಿಯನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ ಅಥವಾ ಅನುಮತಿ ನೀಡತಕ್ಕದ್ದಲ್ಲ.

(2) ನಿರ್ವಾಹಕನ ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಮಜಲು ವಾಹನದ ಚಾಲಕನಿಗೆ ಅಥವಾ ಒಂದು ತಿಂಗಳಿಗೆ ಮೀರದ ಅವಧಿಗೆ ನಿರ್ವಾಹಕನಾಗಿ ಕಾರ್ಯನಿರ್ವಹಿಸಲು ನಿಯೋಜಿತನಾದ ವ್ಯಕ್ತಿಗೆ (1)ನೇ ಉಪಪ್ರಕರಣವು ಯಾವ ಷರತ್ತುಗಳಿಗೊಳಪಟ್ಟು ಅನ್ವಯವಾಗತಕ್ಕದ್ದಲ್ಲವೋ ಆ ನಿಯಮಗಳನ್ನು ರಾಜ್ಯ ಸರ್ಕಾರವು ನಿಯಮಿಸಬಹುದು.

30. ನಿರ್ವಾಹಕನ ಲೈಸನ್ಸು ನೀಡಿಕೆ:- (1) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು 31ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅನರ್ಹಗೊಳಿಸಿಲ್ಲದ ಮತ್ತು ನಿರ್ವಾಹಕನ ಲೈಸನ್ಸನ್ನು ಧಾರಣಮಾಡಲು ಅಥವಾ ಪಡೆಯಲು ತತ್ಕಾಲದಲ್ಲಿ ಅನರ್ಹನಾಗಿಲ್ಲದ ಯಾರೇ ವ್ಯಕ್ತಿಯು, ನಿರ್ವಾಹಕನ ಲೈಸನ್ಸನ್ನು ತನಗೆ ನೀಡುವಂತೆ ತಾನು ಸಾಮಾನ್ಯವಾಗಿ ವಾಸಿಸುತ್ತಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

(3) ನಿರ್ವಾಹಕನ ಲೈಸನ್ಸಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಗೆ, ನೋಂದಾಯಿತ ವೈದ್ಯ ವೃತ್ತಿಗಾರನು ಸಹಿಮಾಡಿದ್ದು ನಿಯಮಿಸಬಹುದಾದಂಥ ನಮೂನೆಯಲ್ಲಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಿರತಕ್ಕದ್ದು ಮತ್ತು ಅರ್ಜಿದಾರನ ಇತ್ತೀಚಿನ ಎರಡು ಸ್ಪಷ್ಟ ಭಾವಚಿತ್ರಗಳನ್ನು ಸಹ ಲಗತ್ತಿಸಿರತಕ್ಕದ್ದು.

(4) ಈ ಅಧ್ಯಾಯದ ಮೇರೆಗೆ ನೀಡಲಾದ ನಿರ್ವಾಹಕನ ಲೈಸನ್ಸು, ನಿಯಮಿಸಬಹುದಾದಂಥ ನಮೂನೆಯಲ್ಲಿದ್ದು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅದನ್ನು ನೀಡಲಾದ ರಾಜ್ಯದಾದ್ಯಂತ ಜಾರಿಯಲ್ಲಿರತಕ್ಕದ್ದು.

(5) ನಿರ್ವಾಹಕನ ಲೈಸನ್ಸಿನ ಫೀಜು ಮತ್ತು ಅದರ ಪ್ರತಿಯೊಂದು ನವೀಕರಣದ ಫೀಜು ಚಾಲನ ಲೈಸನ್ಸಿನ ಫೀಜಿನ ಅರ್ಧದಷ್ಟಿರತಕ್ಕದ್ದು.

31. ನಿರ್ವಾಹಕನ ಲೈಸನ್ಸು ನೀಡಿಕೆಗೆ ಅನರ್ಹತೆಗಳು:- (1) ಹದಿನೆಂಟು ವರ್ಷ ತುಂಬದ ಯಾರೇ ವ್ಯಕ್ತಿಯು ನಿರ್ವಾಹಕನ ಲೈಸನ್ಸು ಧಾರಣ ಮಾಡತಕ್ಕದ್ದಲ್ಲ ಅಥವಾ ಅವನಿಗೆ ಅದನ್ನು ನೀಡತಕ್ಕದ್ದಲ್ಲ.

(2) ಲೈಸನ್ಸು ನೀಡಿಕೆ ಪ್ರಾಧಿಕಾರವು,-

(ಎ) ಅರ್ಜಿದಾರನು ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರದಿದ್ದರೆ;

(ಬಿ) ಅರ್ಜಿದಾರನು, ನಿರ್ವಾಹಕನಾಗಿ ಕೆಲಸಮಾಡಲು ಅವನು ಹಾಜರುಪಡಿಸಿದ ವೈದ್ಯಕೀಯ ಪ್ರಮಾಣ ಪತ್ರದಿಂದ ಅವನು ದೈಹಿಕವಾಗಿ ಯೋಗ್ಯನಲ್ಲವೆಂದು ಕಂಡುಬಂದರೆ; ಮತ್ತು

(ಸಿ) ಅರ್ಜಿದಾರನು ಆ ಹಿಂದೆ ಹೊಂದಿದ್ದ ಯಾವುದೇ ನಿರ್ವಾಹಕನ ಲೈಸನ್ಸು ರದ್ದುಗೊಂಡಿದ್ದರೆ

- ನಿರ್ವಾಹಕನ ಲೈಸನ್ಸನ್ನು ನೀಡಲು ನಿರಾಕರಿಸತಕ್ಕದ್ದು.

32. ಕಾಯಿಲೆ ಅಥವಾ ಅಶಕ್ತತೆಯ ಕಾರಣಗಳಿಗಾಗಿ ನಿರ್ವಾಹಕನ ಲೈಸನ್ಸಿನ ರದ್ದಿಯಾತಿ:- ನಿರ್ವಾಹಕನ ಲೈಸನ್ಸು ಹೊಂದಿರುವವನು ಅಂಥ ಲೈಸನ್ಸನ್ನು ಧಾರಣ ಮಾಡಲು ಅವನನ್ನು ಖಾಯಂ ಆಗಿ ಅಸಮರ್ಥಗೊಳಿಸುವ ಸಂಭವವಿರುವ ಯಾವುದೇ ಕಾಯಿಲೆ ಅಥವಾ ಅಶಕ್ತತೆಯಿಂದ ಬಳಲುತ್ತಿರುವನೆಂದು ಲೈಸನ್ಸು ನೀಡಿಕೆ ಪ್ರಾಧಿಕಾರಕ್ಕೆ ನಂಬಲು ಯುಕ್ತ ಕಾರಣವಿದ್ದರೆ, ಅದು ಯಾವುದೇ ಸಮಯದಲ್ಲಿ ನಿರ್ವಾಹಕನ ಆ ಲೈಸನ್ಸನ್ನು ರದ್ದುಗೊಳಿಸಬಹುದು ಮತ್ತು ನಿರ್ವಾಹಕನ ಲೈಸನ್ಸನ್ನು ರದ್ದುಗೊಳಿಸಿದ ಪ್ರಾಧಿಕಾರವು ಅದನ್ನು ನೀಡಿದ ಪ್ರಾಧಿಕಾರವಾಗಿಲ್ಲದೆ ಇದ್ದರೆ, ಆ ಲೈಸನ್ಸನ್ನು ನೀಡಿದ ಪ್ರಾಧಿಕಾರಕ್ಕೆ ಅಂಥ ರದ್ದಿಯಾತಿಯ ಸಂಗತಿಯನ್ನು ತಿಳಿಸತಕ್ಕದ್ದು:

ಪರಂತು, ಯಾವುದೇ ಲೈಸನ್ಸನ್ನು ರದ್ದುಗೊಳಿಸುವುದಕ್ಕೆ ಮೊದಲು, ಲೈಸನ್ಸು ನೀಡಿಕೆ ಪ್ರಾಧಿಕಾರವು ಅಂಥ ಲೈಸನ್ಸು ಹೊಂದಿರುವ ವ್ಯಕ್ತಿಗೆ ಸುನಾವಣೆಯ ಯುಕ್ತ ಅವಕಾಶವನ್ನು ಕೊಡತಕ್ಕದ್ದು.

33. ನಿರ್ವಾಹಕನ ಲೈಸನ್ಸುಗಳನ್ನು ನಿರಾಕರಿಸುವುದು, ಮುಂತಾದ ಆದೇಶಗಳು ಮತ್ತು ಅವುಗಳ ಮೇಲಣ ಅಪೀಲುಗಳು:- (1) ಲೈಸನ್ಸು ನೀಡಿಕೆ ಪ್ರಾಧಿಕಾರವು ಯಾವುದೇ ನಿರ್ವಾಹಕನ ಲೈಸನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವಲ್ಲಿ ಅಥವಾ ಅದನ್ನು ರದ್ದುಗೊಳಿಸುವಲ್ಲಿ, ಸಂದರ್ಭಾನುಸಾರ ಅರ್ಜಿದಾರನಿಗೆ ಅಥವಾ ಲೈಸನ್ಸು ಧಾರಕನಿಗೆ ಅಂಥ ನಿರಾಕರಣೆ ಅಥವಾ ರದ್ದಿಯಾತಿಗೆ ಕಾರಣಗಳನ್ನು ಲಿಖಿತದಲ್ಲಿ ತಿಳಿಸಿ ಆದೇಶದ ಮೂಲಕ ಹಾಗೆ ನಿರಾಕರಿಸಬಹುದು ಅಥವಾ ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ತನಗೆ ಆದೇಶವನ್ನು ಜಾರಿಗೊಳಿಸಿದ ಮೂವತ್ತು ದಿವಸಗಳೊಳಗಾಗಿ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಆ ಪ್ರಾಧಿಕಾರವು ಅಂಥ ವ್ಯಕ್ತಿಗೆ ಮತ್ತು ಆದೇಶ ಮಾಡಿದ ಪ್ರಾಧಿಕಾರಕ್ಕೆ ಸುನಾವಣೆಯ ಅವಕಾಶವನ್ನು ಕೊಟ್ಟ ತರುವಾಯ ಆ ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ಅಪೀಲು ಪ್ರಾಧಿಕಾರದ ತೀರ್ಮಾನವು ಆದೇಶವನ್ನು ಮಾಡಿದ ಪ್ರಾಧಿಕಾರಕ್ಕೆ ಬಂಧನಕಾರಿಯಾಗಿರತಕ್ಕದ್ದು.

34. ಅನರ್ಹಗೊಳಿಸಲು ಲೈಸನ್ಸು ನೀಡಿಕೆ ಪ್ರಾಧಿಕಾರದ ಅಧಿಕಾರ:- (1) ಯಾವುದೇ ಲೈಸನ್ಸು ನೀಡಿಕೆ ಪ್ರಾಧಿಕಾರವು, ನಿರ್ವಾಹಕನಾಗಿ ಆ ಹಿಂದಿನ ಅವನ ನಡತೆಯ ಕಾರಣದಿಂದ ಅವನನ್ನು ನಿರ್ವಾಹಕನ ಲೈಸನ್ಸನ್ನು ಧಾರಣ ಮಾಡದಂತೆ ಅಥವಾ ಪಡೆಯದಂತೆ ಅನರ್ಹಗೊಳಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅದು ಕಾರಣಗಳನ್ನು ದಾಖಲುಮಾಡಿ ಆ ವ್ಯಕ್ತಿಯನ್ನು ಒಂದು ವರ್ಷಕ್ಕೆ ಮೀರದ ನಿರ್ದಿಷ್ಟ ಅವಧಿಯವರೆಗೆ ನಿರ್ವಾಹಕನ ಲೈಸನ್ಸನ್ನು ಧಾರಣ ಮಾಡದಂತೆ ಅಥವಾ ಪಡೆಯದಂತೆ ಅನರ್ಹಗೊಳಿಸುವ ಆದೇಶವನ್ನು ಮಾಡಬಹುದು:

ಪರಂತು, ಲೈಸನ್ಸು ಧಾರಣಮಾಡಿದವನನ್ನು ಅನರ್ಹಗೊಳಿಸುವುದಕ್ಕೆ ಮುಂಚೆ ಲೈಸನ್ಸು ನೀಡಿಕೆ ಪ್ರಾಧಿಕಾರವು ಅಂಥ ಲೈಸನ್ಸನ್ನು ಧಾರಣ ಮಾಡಿರುವ ವ್ಯಕ್ತಿಗೆ ಸುನಾವಣೆಯ ಸೂಕ್ತ ಅವಕಾಶವನ್ನು ಕೊಡತಕ್ಕದ್ದು.

(2) ಲೈಸನ್ಸನ್ನು ಈಗಾಗಲೇ ಒಪ್ಪಿಸಿಲ್ಲದಿದ್ದರೆ, ಆದೇಶವನ್ನು ಮಾಡುವ ಪ್ರಾಧಿಕಾರಕ್ಕೆ ಲೈಸೆನ್ಸ್‌ನ್ನು ಆ ಕೂಡಲೇ ಒಪ್ಪಿಸತಕ್ಕದ್ದು ಮತ್ತು ಆ ಪ್ರಾಧಿಕಾರವು ಅಂಥ ಲೈಸನ್ಸನ್ನು ಅನರ್ಹತೆಯು ಕೊನೆಗೊಳ್ಳುವ ತನಕ ಅಥವಾ ಅದನ್ನು ತೆಗೆದುಹಾಕುವವರೆಗೆ ಇಟ್ಟುಕೊಳ್ಳತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನಿರ್ವಾಹಕನ ಲೈಸನ್ಸು ಧಾರಕನನ್ನು ಅನರ್ಹಗೊಳಿಸುವ ಪ್ರಾಧಿಕಾರವು, ಲೈಸನ್ಸು ನೀಡಿಕೆ ಪ್ರಾಧಿಕಾರವಾಗಿಲ್ಲದಿದ್ದರೆ, ಅದನ್ನು ನೀಡಿದ ಪ್ರಾಧಿಕಾರಕ್ಕೆ ಅಂಥ ಅನರ್ಹತೆಯ ಸಂಗತಿಯನ್ನು ತಿಳಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ತನಗೆ ಆದೇಶವನ್ನು ಜಾರಿಗೊಳಿಸಿದ ಮೂವತ್ತು ದಿವಸಗಳೊಳಗಾಗಿ, ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಆ ಪ್ರಾಧಿಕಾರವು ಅಂಥ ವ್ಯಕ್ತಿಗೆ ಮತ್ತು ಆದೇಶ ಮಾಡಿದ ಪ್ರಾಧಿಕಾರಕ್ಕೆ ಸುನಾವಣೆಯ ಅವಕಾಶವನ್ನು ಕೊಟ್ಟ ತರುವಾಯ ಆ ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ಅಪೀಲು ಪ್ರಾಧಿಕಾರದ ತೀರ್ಮಾನವು ಆದೇಶವನ್ನು ಮಾಡಿದ ಪ್ರಾಧಿಕಾರಕ್ಕೆ ಬಂಧನಕಾರಿಯಾಗಿರತಕ್ಕದ್ದು.

35. ಅನರ್ಹಗೊಳಿಸಲು ನ್ಯಾಯಾಲಯದ ಅಧಿಕಾರ:- (1) ನಿರ್ವಾಹಕನ ಲೈಸೆನ್ಸು ಹೊಂದಿರುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿರುವಲ್ಲಿ, ಅಂಥ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸಿದ ನ್ಯಾಯಾಲಯವು, ಕಾನೂನು ಮೂಲಕ ಅಧಿಕೃತವಾದ ಯಾವುದೇ ಇತರ ಶಿಕ್ಷೆಯನ್ನು ವಿಧಿಸುವುದೇ ಅಲ್ಲದೆ ಹಾಗೆ ಅಪರಾಧ ನಿರ್ಣೀತನಾದ ವ್ಯಕ್ತಿಯನ್ನು ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ನಿರ್ವಾಹಕನ ಲೈಸನ್ಸನ್ನು ಹೊಂದಿರದಂತೆ ಅನರ್ಹನಾಗಿರುವನೆಂದು ಘೋಷಿಸಬಹುದು.

(2) ಈ ಅಧಿನಿಯಮದ ಮೇರೆಗಿನ ಯಾವೊಂದು ಅಪರಾಧದ ಯಾವುದೇ ಅಪರಾಧ ನಿರ್ಣಯದ ವಿರುದ್ಧ ಅಪೀಲು ಸಲ್ಲಿಸಬಹುದಾಗಿದೆಯೋ ಆ ನ್ಯಾಯಾಲಯವು, ಅಧೀನ ನ್ಯಾಯಾಲಯವು ಮಾಡಿದ ಅನರ್ಹತೆಯ ಯಾವುದೇ ಆದೇಶವನ್ನು ತಳ್ಳಿಹಾಕಬಹುದು ಅಥವಾ ವ್ಯತ್ಯಾಸಗೊಳಿಸಬಹುದು ಮತ್ತು ಅಂಥ ನ್ಯಾಯಾಲಯದ ವಿರುದ್ಧ ಸಾಮಾನ್ಯವಾಗಿ ಅಪೀಲನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸಬಹುದೋ ಆ ನ್ಯಾಯಾಲಯವು ಮಾಡಿದ ಅನರ್ಹತೆಯ ಯಾವುದೇ ಆದೇಶವನ್ನು, ಯಾವ ಅಪರಾಧ ನಿರ್ಣಯಕ್ಕೆ ಸಂಬಂಧಿಸಿ ಅಂಥ ಆದೇಶವನ್ನು ಮಾಡಲಾಯಿತೋ ಅದರ ವಿರುದ್ಧ ಅಪೀಲನ್ನು ಸಲ್ಲಿಸುವಂತಿಲ್ಲದಿದ್ದರೂ, ತಳ್ಳಿಹಾಕಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

36. ಅಧ್ಯಾಯ **II** ರ ಕೆಲವು ಉಪಬಂಧಗಳು ನಿರ್ವಾಹಕನ ಲೈಸನ್ಸಿಗೆ ಅನ್ವಯವಾಗುವುದು:- 6ನೇ ಪ್ರಕರಣದ (2)ನೇ ಉಪಪ್ರಕರಣ, 14, 15 ಮತ್ತು 23ನೇ ಪ್ರಕರಣಗಳು, 24ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು 25ನೇ ಪ್ರಕರಣದ ಉಪಬಂಧಗಳು ಚಾಲನ ಲೈಸನ್ಸಿನ ಸಂಬಂಧದಲ್ಲಿ ಅನ್ವಯವಾಗುವಂತೆಯೇ ನಿರ್ವಾಹಕನ ಲೈಸನ್ಸಿನ ಸಂಬಂಧದಲ್ಲಿಯೂ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

37. ಉಳಿಸುವಿಕೆಗಳು:- ಮಜಲು ವಾಹನದ (ಯಾವುದೇ ಹೆಸರಿನಿಂದ ಕರೆಯಲ್ಪಡುವ) ನಿರ್ವಾಹಕನಾಗಿ ಕಾರ್ಯನಿರ್ವಹಿಸಲು ಯಾವುದೇ ಲೈಸನ್ಸನ್ನು ಯಾವುದೇ ರಾಜ್ಯದಲ್ಲಿ ನೀಡಲಾಗಿದ್ದು ಈ ಅಧಿನಿಯಮವು ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದರೆ, ಅಂಥ ಪ್ರಾರಂಭವಾಗಿದ್ದರೂ, ಈ ಅಧಿನಿಯಮವನ್ನು ಅನುಮೋದಿಸಿರದಿದ್ದರೆ ಯಾವ ಅವಧಿವರೆಗೆ ಅದು ಜಾರಿಯಲ್ಲಿರುತ್ತಿತ್ತೋ ಅಷ್ಟು ಅವಧಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಪ್ರತಿಯೊಂದು ಲೈಸನ್ಸು, ಆ ಲೈಸನ್ಸನ್ನು ನೀಡಿದ ದಿನಾಂಕದಂದು ಈ ಅಧ್ಯಾಯವು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಈ ಅಧ್ಯಾಯದ ಮೇರೆಗೆ ನೀಡಲಾದ ಲೈಸನ್ಸು ಎಂದು ಭಾವಿಸತಕ್ಕದ್ದು.

38. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) ಲೈಸನ್ಸು ನೀಡಿಕೆ ಪ್ರಾಧಿಕಾರಗಳು ಮತ್ತು ಈ ಅಧ್ಯಾಯದ ಮೇರೆಗೆ ನಿಯಮಿಸಲಾದ ಇತರ ಪ್ರಾಧಿಕಾರಿಗಳ ನೇಮಕಾತಿ, ಅಧಿಕಾರವ್ಯಾಪ್ತಿ, ನಿಯಂತ್ರಣ ಮತ್ತು ಪ್ರಕಾರ್ಯಗಳು;

(ಬಿ) ನಿರ್ವಾಹಕನ ಪ್ರಕಾರ್ಯಗಳನ್ನು ನಿರ್ವಹಿಸುವ ಮಜಲು ವಾಹನಗಳ ಚಾಲಕರು ಮತ್ತು ನಿರ್ವಾಹಕರಾಗಿ ಕಾರ್ಯನಿರ್ವಹಿಸಲು ತಾತ್ಕಾಲಿಕವಾಗಿ ನಿಯೋಜಿತರಾದ ವ್ಯಕ್ತಿಗಳಿಗೆ ಯಾವ ಷರತ್ತುಗಳಿಗೊಳಪಟ್ಟು 29ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಂದ ವಿನಾಯಿತಿ ಕೊಡಬಹುದೋ ಆ ಷರತ್ತುಗಳು;

(ಸಿ) ನಿರ್ವಾಹಕರ ಕನಿಷ್ಠ ವಿದ್ಯಾರ್ಹತೆಗಳು, ಅವರ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಮತ್ತು ನಿರ್ವಾಹಕರ ಲೈಸೆನ್ಸುಗಳನ್ನು ನೀಡಲಾಗಿರುವ ವ್ಯಕ್ತಿಗಳ ನಡತೆ;

(ಡಿ) ನಿರ್ವಾಹಕರ ಲೈಸನ್ಸ್‌ಗಳಿಗಾಗಿ ಅಥವಾ ಅಂಥ ಲೈಸನ್ಸ್‌ಗಳ ನವೀಕರಣಕ್ಕಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ ಮತ್ತು ಅದರಲ್ಲಿ ಇರಬೇಕಾದ ವಿವರಗಳು;

(ಇ) ನಿರ್ವಾಹಕರ ಲೈಸನ್ಸುಗಳನ್ನು ನೀಡಬೇಕಾದ ಅಥವಾ ನವೀಕರಿಸಬೇಕಾದ ನಮೂನೆ ಮತ್ತು ಅದರಲ್ಲಿ ಇರಬೇಕಾದ ವಿವರಗಳು;

(ಎಫ್) ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ಲೈಸನ್ಸುಗಳಿಗೆ ಬದಲಾಗಿ ದ್ವಿಪ್ರತಿ ಲೈಸನ್ಸು ನೀಡಿಕೆ, ಹಳೆಯ ಭಾವಚಿತ್ರವನ್ನು ಬದಲಾಯಿಸುವುದು ಮತ್ತು ಆ ಬಗ್ಗೆ ವಿಧಿಸತಕ್ಕ ಫೀಜುಗಳು;

(ಜಿ) ಈ ಅಧ್ಯಾಯದ ಮೇರೆಗೆ ಸಲ್ಲಿಸಬಹುದಾದ ಅಪೀಲುಗಳ ನಿರ್ವಹಣೆ ಮತ್ತು ಸುನಾವಣೆ, ಅಂಥ ಅಪೀಲುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಂಥ ಫೀಜುಗಳ ಮರುಪಾವತಿ:

ಪರಂತು, ಹಾಗೆ ನಿಗದಿಪಡಿಸಲಾದ ಫೀಜು ಇಪ್ಪತ್ತೈದು ರೂಪಾಯಿಗಳನ್ನು ಮೀರತಕ್ಕದ್ದಲ್ಲ;

(ಹೆಚ್) ಮಜಲು ವಾಹನಗಳ ನಿರ್ವಾಹಕರು ಧರಿಸಬೇಕಾದ ಬ್ಯಾಡ್ಜ್‌ಗಳು ಮತ್ತು ಸಮವಸ್ತ್ರಗಳು ಮತ್ತು ಅಂಥ ಬ್ಯಾಡ್ಜ್‌ಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು;

(ಐ) ನೋಂದಾಯಿತ ವೈದ್ಯ ವೃತ್ತಿಗಾರರು, 30ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರಗಳನ್ನು ನೀಡುವುದು ಮತ್ತು ಅಂಥ ಪ್ರಮಾಣ ಪತ್ರಗಳ ನಮೂನೆ;

(ಜೆ) ಇನ್ನೊಂದು ರಾಜ್ಯದಲ್ಲಿ ನೀಡಲಾದ ನಿರ್ವಾಹಕನ ಲೈಸನ್ಸು, ಯಾವ ಷರತ್ತುಗಳಿಗೊಳಪಟ್ಟು ಮತ್ತು ಎಷ್ಟು ವ್ಯಾಪ್ತಿಗೆ ಈ ರಾಜ್ಯದಲ್ಲಿ ಪರಿಣಾಮಕಾರಿಯಾಗಿರತಕ್ಕದ್ದೋ ಆ ಷರತ್ತುಗಳು ಮತ್ತು ವ್ಯಾಪ್ತಿ;

(ಕೆ) ನಿರ್ವಾಹಕನ ಲೈಸನ್ಸ್‌ಗಳ ವಿವರಗಳನ್ನು ಒಂದು ಪ್ರಾಧಿಕಾರವು ಮತ್ತೊಂದು ಪ್ರಾಧಿಕಾರಕ್ಕೆ ತಿಳಿಸುವುದು; ಮತ್ತು

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

## ಅಧ್ಯಾಯ - **IV**

### ಮೋಟಾರು ವಾಹನಗಳ ನೋಂದಣಿ

39. ನೋಂದಣಿಯ ಅವಶ್ಯಕತೆ:- ಯಾರೇ ವ್ಯಕ್ತಿಯು ಮತ್ತು ಮೋಟಾರು ವಾಹನದ ಒಡೆಯನು, ಯಾವುದೇ ಮೋಟಾರು ವಾಹನವನ್ನು, ಆ ವಾಹನವನ್ನು ಈ ಅಧ್ಯಾಯಕ್ಕೆ ಅನುಸಾರವಾಗಿ ನೋಂದಾಯಿಸಿದ್ದು ವಾಹನದ ಆ ನೋಂದಣಿ ಪ್ರಮಾಣ ಪತ್ರವನ್ನು ಅಮಾನತು ಮಾಡಿಲ್ಲದ ಅಥವಾ ರದ್ದುಗೊಳಿಸಿಲ್ಲದ ಹೊರತು ಮತ್ತು ಆ ವಾಹನವು ನಿಯಮಿಸಿದ ರೀತಿಯಲ್ಲಿ ನೋಂದಣಿ ಗುರುತನ್ನು ಪ್ರದರ್ಶಿಸಿದ್ದ ಹೊರತು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ಆ ಬಗ್ಗೆ ಅನುಮತಿ ಕೊಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವ್ಯವಹಾರಿಯ ಸ್ವಾಧೀನದಲ್ಲಿರುವ ಮೋಟಾರು ವಾಹನಕ್ಕೆ ಅನ್ವಯವಾಗತಕ್ಕದ್ದಲ್ಲ.

40. ನೋಂದಣಿಯನ್ನು ಎಲ್ಲಿ ಮಾಡುವುದು:- 42ನೇ ಪ್ರಕರಣ, 43ನೇ ಪ್ರಕರಣ ಮತ್ತು 60ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಮೋಟಾರು ವಾಹನದ ಪ್ರತಿಯೊಬ್ಬ ಒಡೆಯನು, ಯಾವ ನೋಂದಣಿ ಪ್ರಾಧಿಕಾರದ ಅಧಿಕಾರವ್ಯಾಪ್ತಿಯಲ್ಲಿ ನಿವಾಸವನ್ನು ಹೊಂದಿರುವನೋ ಅಥವಾ ಆ ವಾಹನವನ್ನು ಸಾಮಾನ್ಯವಾಗಿ ಇಡುವಂಥ ವ್ಯವಹಾರ ಸ್ಥಳವು ಇರುವುದೋ, ಆ ನೋಂದಣಿ ಪ್ರಾಧಿಕಾರದಿಂದ ಆ ವಾಹನದ ನೋಂದಣಿ ಮಾಡಿಸಿಕೊಳ್ಳತಕ್ಕದ್ದು.

41. ನೋಂದಣಿ ಹೇಗೆ ಮಾಡುವುದು:- (1) ಮೋಟಾರು ವಾಹನದ ಒಡೆಯನು ಅಥವಾ ಅವನ ಪರವಾಗಿ ನೋಂದಣಿಗಾಗಿ ಸಲ್ಲಿಸುವ ಅರ್ಜಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದಕ್ಕೆ ಅಂಥ ದಸ್ತಾವೇಜುಗಳು, ವಿವರಗಳು ಮತ್ತು ಮಾಹಿತಿಯನ್ನು ಲಗತ್ತಿಸತಕ್ಕದ್ದು ಮತ್ತು ಅದನ್ನು ಅಂಥ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಮೋಟಾರು ವಾಹನದ ಜಂಟಿ ಒಡೆತನವನ್ನು ಹೊಂದಿರುವಲ್ಲಿ, ಎಲ್ಲ ಒಡೆಯರ ಪರವಾಗಿ ಅವರಲ್ಲಿ ಒಬ್ಬನು ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ಅರ್ಜಿದಾರನನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮೋಟಾರು ವಾಹನದ ಒಡೆಯನೆಂಬುದಾಗಿ ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಜೊತೆಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಫೀಜನ್ನು ಲಗತ್ತಿಸತಕ್ಕದ್ದು.

(3) ನೋಂದಣಿ ಪ್ರಾಧಿಕಾರವು, ತಾನು ನೋಂದಾಯಿಸಿದ ಮೋಟಾರು ವಾಹನದ ಒಡೆಯನಿಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನು ಮತ್ತು ಮಾಹಿತಿಯನ್ನು ಒಳಗೊಂಡ ನೋಂದಣಿ ಪ್ರಮಾಣಪತ್ರವನ್ನು ಅಂಥ ರೀತಿಯಲ್ಲಿ ನೀಡತಕ್ಕದ್ದು.

(4) ನೋಂದಣಿ ಪ್ರಮಾಣ ಪತ್ರದಲ್ಲಿ ಸೇರಿಸಬೇಕಾಗಿರುವ ಇತರ ವಿವರಗಳೊಂದಿಗೆ ನೋಂದಣಿ ಪ್ರಾಧಿಕಾರವು, ಕೇಂದ್ರ ಸರ್ಕಾರವು ಮೋಟಾರು ವಾಹನದ ವಿನ್ಯಾಸ, ರಚನೆ ಮತ್ತು ಉಪಯೋಗ ಇವುಗಳನ್ನು ಗಮನಿಸಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಮಾದರಿಯಾಗಿರತಕ್ಕ ಮೋಟಾರು ವಾಹನದ ಮಾದರಿಯನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(5) ನೋಂದಣಿ ಪ್ರಾಧಿಕಾರವು, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರದ ವಿವರಗಳನ್ನು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇಡತಕ್ಕ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(6) ನೋಂದಣಿ ಪ್ರಾಧಿಕಾರವು, ಆ ವಾಹನಕ್ಕೆ ಅದರ ಮೇಲೆ ಪ್ರದರ್ಶಿಸಲು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ರಾಜ್ಯಕ್ಕೆ ಹಂಚಿಹಾಕಿದ ಅಕ್ಷರಗಳ ಗುಂಪುಗಳ ಪೈಕಿ ಒಂದು ಗುಂಪು ಮತ್ತು ಅದರ ತರುವಾಯ ಅಂಥ ಅಕ್ಷರಗಳು ಮತ್ತು ಅಂಕಿಗಳನ್ನು ಒಳಗೊಂಡಿದ್ದು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಮೋಟಾರು ವಾಹನದ ಮೇಲೆ ಪ್ರದರ್ಶಿಸಿ ತೋರಿಸುವ (ಈ ಅಧಿನಿಯಮದಲ್ಲಿ ನೋಂದಣಿ ಗುರುತು ಎಂದು ಉಲ್ಲೇಖಿಸಲಾದ) ವಿಭಿನ್ನತಾ ಗುರುತನ್ನು ಕೊಡತಕ್ಕದ್ದು.

(7) ಸಾರಿಗೆ ವಾಹನವನ್ನು ಹೊರತುಪಡಿಸಿ ಇತರ ಮೋಟಾರು ವಾಹನದ ಸಂಬಂಧದಲ್ಲಿ ಈ ಅಧಿನಿಯಮದ ಪ್ರಾರಂಭದ ಮುಂಚೆ ಅಥವಾ ತರುವಾಯ (3)ನೇ ಉಪಪ್ರಕರಣದ ಮೇರೆಗೆ ನೀಡಲಾದ ನೋಂದಣಿ ಪ್ರಮಾಣ ಪತ್ರವು, ಈ ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಅಂಥ ಪ್ರಮಾಣ ಪತ್ರದ ನೀಡಿಕೆಯ ದಿನಾಂಕದಿಂದ ಹದಿನೈದು ವರ್ಷಗಳವರೆಗೆ ಮಾತ್ರ ಸಿಂಧುವಾಗಿರತಕ್ಕದ್ದು ಮತ್ತು ಅದು ನವೀಕರಣ ಯೋಗ್ಯವಾಗಿರತಕ್ಕದ್ದು.

(8) ಸಾರಿಗೆ ವಾಹನವನ್ನು ಹೊರತುಪಡಿಸಿ ಇತರ ಮೋಟಾರು ವಾಹನದ ಒಡೆಯನು ಅಥವಾ ಅವನ ಪರವಾಗಿ ನೋಂದಣಿ ಪ್ರಮಾಣ ಪತ್ರದ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನು ಮತ್ತು ಮಾಹಿತಿಯನ್ನು ಒಳಗೊಂಡು ಸಲ್ಲಿಸತಕ್ಕದ್ದು.

(9) (8)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಜೊತೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಫೀಜನ್ನು ಲಗತ್ತಿಸತಕ್ಕದ್ದು.

(10) 56ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ನೋಂದಣಿ ಪ್ರಾಧಿಕಾರವು, (8)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಐದು ವರ್ಷಗಳ ಅವಧಿಗೆ ನೋಂದಣಿ ಪ್ರಮಾಣ ಪತ್ರವನ್ನು ನವೀಕರಿಸತಕ್ಕದ್ದು ಮತ್ತು ಅದು ಮೂಲ ನೋಂದಣಿ ಪ್ರಾಧಿಕಾರವಾಗಿಲ್ಲದಿದ್ದರೆ ಈ ಸಂಗತಿಯನ್ನು ಮೂಲ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(11) ನಿಯಮಿಸಿದ ಅವಧಿಯಲ್ಲಿ ಒಡೆಯನು, ಸಂದರ್ಭಾನುಸಾರ (1)ನೇ ಉಪಪ್ರಕರಣದ ಮೇರೆಗೆ ಅಥವಾ (8)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಲು ತಪ್ಪಿದರೆ, ನೋಂದಣಿ ಪ್ರಾಧಿಕಾರವು, ಪ್ರಕರಣದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಟು, 177ನೇ ಪ್ರಕರಣದ ಮೇರೆಗೆ ಒಡೆಯನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದಲಾಗಿ (13)ನೇ ಉಪಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ ನೂರು ರೂಪಾಯಿಗೆ ಮೀರದ ಮೊಬಲಗನ್ನು ಸಂದಾಯ ಮಾಡುವಂತೆ ಅವನನ್ನು ಅಗತ್ಯಪಡಿಸಬಹುದು:

ಪರಂತು, ಒಡೆಯನು ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಅವನ ವಿರುದ್ಧ 177ನೇ ಪ್ರಕರಣದ ಮೇರೆಗಿನ ಕ್ರಮವನ್ನು ಕೈಗೊಳ್ಳತಕ್ಕದ್ದು.

(12) (11)ನೇ ಉಪಪ್ರಕರಣದ ಮೇರೆಗಿನ ಮೊಬಲಗನ್ನು ಒಡೆಯನು ಸಂದಾಯ ಮಾಡಿರುವಲ್ಲಿ, ಅವನ ವಿರುದ್ಧ 177ನೇ ಪ್ರಕರಣದ ಮೇರೆಗಿನ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(13) (11)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರವು, (1)ನೇ ಉಪಪ್ರಕರಣ ಅಥವಾ (8)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವಲ್ಲಿ ಒಡೆಯನಿಂದ ಆದ ವಿಳಂಬದ ಅವಧಿಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಮೊಬಲಗನ್ನು ನಿಯಮಿಸಬಹುದು.

(14) ನೋಂದಣಿ ಪ್ರಮಾಣ ಪತ್ರದ ದ್ವಿಪ್ರತಿಗೆ ಸಲ್ಲಿಸುವ ಅರ್ಜಿಯನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವಿವರಗಳನ್ನು ಮತ್ತು ಮಾಹಿತಿಯನ್ನು ಒಳಗೊಂಡು ಅಂಥ ಫೀಜಿನೊಂದಿಗೆ ಹಿಂದಿನ ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

42. ರಾಜತಾಂತ್ರಿಕ ಅಧಿಕಾರಿಗಳು, ಮುಂತಾದವರ ಮೋಟಾರು ವಾಹನಗಳ ನೋಂದಣಿಯ ಬಗ್ಗೆ ವಿಶೇಷ ಉಪಬಂಧ:- (1) ಮೋಟಾರು ವಾಹನದ ನೋಂದಣಿಗಾಗಿ, ಯಾರೇ ರಾಜತಾಂತ್ರಿಕ ಅಧಿಕಾರಿ ಅಥವಾ ಕೌನ್ಸುಲರ್ ಅಧಿಕಾರಿಯು ಅಥವಾ ಅವರ ಪರವಾಗಿ, 41ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದಾಗ, ಆ ಪ್ರಕರಣದ (3)ನೇ ಉಪಪ್ರಕರಣ ಅಥವಾ (6)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ನೋಂದಣಿ ಪ್ರಾಧಿಕಾರವು, (3)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಮತ್ತು ಪ್ರಕ್ರಿಯೆಗನುಸಾರವಾಗಿ ವಾಹನವನ್ನು ನೋಂದಾಯಿಸತಕ್ಕದ್ದು ಮತ್ತು ಆ ನಿಯಮಗಳಲ್ಲಿ ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಆ ವಾಹನಕ್ಕೆ ಅದರ ಮೇಲೆ ಪ್ರದರ್ಶಿಸಲು ವಿಶೇಷ ನೋಂದಣಿ ಗುರುತನ್ನು ಕೊಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ವಾಹನವನ್ನು ನೋಂದಾಯಿಸಲಾಗಿದೆಯೆಂದು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ನೋಂದಣಿ ಪ್ರಮಾಣ ಪತ್ರವೆಂದು ಉಲ್ಲೇಖಿಸಲಾಗುವ) ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಹಾಗೆ ನೋಂದಾಯಿಸಲಾದ ಯಾವುದೇ ವಾಹನವನ್ನು ರಾಜತಾಂತ್ರಿಕ ಅಧಿಕಾರಿ ಅಥವಾ ಕೌನ್ಸುಲರ್ ಅಧಿಕಾರಿಯ ಸ್ವತ್ತಾಗಿ ಇರುವವರೆಗೆ ಈ ಅಧಿನಿಯಮದ ಮೇರೆಗೆ ಇತರ ರೀತಿಯಲ್ಲಿ ನೋಂದಾಯಿಸತಕ್ಕದ್ದೆಂದು ಅಗತ್ಯಪಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ನೋಂದಾಯಿಸಲಾದ ಯಾರೇ ವಾಹನವು, ಯಾರೇ ರಾಜತಾಂತ್ರಿಕ ಅಧಿಕಾರಿ ಅಥವಾ ಕೌನ್ಸುಲರ್ ಅಧಿಕಾರಿಯ ಸ್ವತ್ತಾಗಿರುವುದು ನಿಂತುಹೋದರೆ, ಈ ಪ್ರಕರಣದ ಮೇರೆಗೆ ನೀಡಲಾದ ನೋಂದಾಯಿತ ಪ್ರಮಾಣ ಪತ್ರವು ಪರಿಣಾಮಕಾರಿಯಾಗಿರುವುದು ಸಹ ನಿಂತುಹೋಗತಕ್ಕದ್ದು ಮತ್ತು ಆ ತರುವಾಯ 39 ಮತ್ತು 40 ಈ ಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕದ್ದು.

(3) ಕೇಂದ್ರ ಸರ್ಕಾರವು, ರಾಜತಾಂತ್ರಿಕ ಅಧಿಕಾರಿಗಳು ಮತ್ತು ಕೌನ್ಸುಲರ್ ಅಧಿಕಾರಿಗಳಿಗೆ ಸೇರಿದ ಮೋಟಾರು ವಾಹನಗಳ ನೋಂದಣಿಗಾಗಿ, ಅಂಥ ವಾಹನಗಳನ್ನು ನೋಂದಾಯಿಸಲು ನೋಂದಣಿ ಪ್ರಾಧಿಕಾರವು ಅನುಸರಿಸಬೇಕಾಗಿರುವ ಪ್ರಕ್ರಿಯೆ, ಅಂಥ ವಾಹನಗಳ ನೋಂದಣಿ ಪ್ರಮಾಣ ಪತ್ರಗಳನ್ನು ನೀಡತಕ್ಕ ನಮೂನೆ, ವಾಹನಗಳ ಒಡೆಯರಿಗೆ ಅಂಥ ನೋಂದಣಿ ಪ್ರಮಾಣ ಪತ್ರಗಳನ್ನು ಕಳುಹಿಸತಕ್ಕ ರೀತಿ ಮತ್ತು ಅಂಥ ವಾಹನಗಳಿಗೆ ಕೊಡತಕ್ಕ ವಿಶೇಷ ನೋಂದಣಿ ಗುರುತುಗಳು - ಇವುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ, "ರಾಜತಾಂತ್ರಿಕ ಅಧಿಕಾರಿ" ಅಥವಾ "ಕೌನ್ಸುಲರ್ ಅಧಿಕಾರಿ" ಎಂದರೆ ಕೇಂದ್ರ ಸರ್ಕಾರವು ಅಂಥವನು ಎಂದು ಮನ್ನಣೆ ನೀಡಿದ ಯಾರೇ ವ್ಯಕ್ತಿ ಮತ್ತು ಒಬ್ಬ ವ್ಯಕ್ತಿಯು ಅಂಥ ಅಧಿಕಾರಿಯೇ ಅಥವಾ ಅಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದಾಗ, ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

43. ತಾತ್ಕಾಲಿಕ ನೋಂದಣಿ:- (1) 40ನೇ ಪ್ರಕರಣದಲ್ಲಿ ಏನೇ ಇದ್ದರೂ, ಮೋಟಾರು ವಾಹನದ ಒಡೆಯನು, ಯಾವುದೇ ನೋಂದಣಿ ಪ್ರಾಧಿಕಾರಕ್ಕೆ ಅಥವಾ ಇತರ ನಿಯಮಿಸಿದ ಪ್ರಾಧಿಕಾರಕ್ಕೆ ಆ ವಾಹನವನ್ನು ನಿಯಮಿಸಿದ ರೀತಿಯಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಲು ಮತ್ತು ನಿಯಮಿಸಿದ ರೀತಿಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ಹಾಗೂ ತಾತ್ಕಾಲಿಕ ನೋಂದಣಿ ಗುರುತನ್ನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಬಹುದು.

(2) ಈ ಪ್ರಕರಣದ ಮೇರೆಗೆ ಮಾಡಲಾದ ನೋಂದಣಿಯು ಒಂದು ತಿಂಗಳು ಮೀರದ ಅವಧಿಗೆ ಸಿಂಧುವಾಗಿರತಕ್ಕದ್ದು ಮತ್ತು ಅದು ನವೀಕರಣ ಯೋಗ್ಯವಾಗಿರತಕ್ಕದ್ದಲ್ಲ:

ಪರಂತು, ಹಾಗೆ ನೋಂದಾಯಿಸಲಾದ ಮೋಟಾರು ವಾಹನವು ಚಾಸಿಸ್ ಆಗಿರುವಲ್ಲಿ ಮತ್ತು ಅದಕ್ಕೆ ಒಡಲನ್ನು ಜೋಡಿಸುವುದಕ್ಕಾಗಿ ಅಥವಾ ಒಡೆಯನ ನಿಯಂತ್ರಣವನ್ನು ಮೀರಿದ ಯಾವುದೇ ಅನಿರೀಕ್ಷಿತ ಸಂದರ್ಭಗಳಿಂದಾಗಿ ಅದನ್ನು ಸದರಿ ಒಂದು ತಿಂಗಳ ಅವಧಿಗೂ ಮೀರಿ ಕಾರ್ಯಾಗಾರದಲ್ಲಿ ಉಳಿಸಿಕೊಂಡಿದ್ದರೆ, ಆ ಅವಧಿಯನ್ನು ನಿಯಮಿಸಬಹುದಾದ ಫೀಜು ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ಮೇಲೆ ಸಂದರ್ಭಾನುಸಾರ ನೋಂದಣಿ ಪ್ರಾಧಿಕಾರ ಅಥವಾ ಇತರ ನಿಯಮಿಸಿದ ಪ್ರಾಧಿಕಾರವು ಅನುಮತಿಸಬಹುದಾದ ಇನ್ನಷ್ಟು ಅವಧಿ ಅಥವಾ ಅವಧಿಗಳಿಗೆ ವಿಸ್ತರಿಸಬಹುದು.

(3) ಕಂತು ಖರೀದಿ ಒಪ್ಪಂದ, ಗುತ್ತಿಗೆ ಅಥವಾ ಅಡಮಾನದ ಮೇರೆಗೆ ಮೋಟಾರು ವಾಹನವನ್ನು ಹೊಂದಿರುವ ಸಂದರ್ಭದಲ್ಲಿ, ನೋಂದಣಿ ಪ್ರಾಧಿಕಾರಿಯು ಅಥವಾ ಗೊತ್ತುಪಡಿಸಿದ ಇತರ ಪ್ರಾಧಿಕಾರಿಯು ಅಂಥ ವಾಹನದ ತಾತ್ಕಾಲಿಕ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಅದರಲ್ಲಿ ಒಡೆಯನು ಯಾವ ವ್ಯಕ್ತಿಯೊಂದಿಗೆ ಅಂಥ ಒಪ್ಪಂದವನ್ನು ಮಾಡಿಕೊಂಡಿರುವನೋ ಆ ವ್ಯಕ್ತಿಯ ಪೂರ್ಣ ಹೆಸರು ಮತ್ತು ವಿಳಾಸವನ್ನು ಸ್ಪುಟವಾಗಿ ಮತ್ತು ಎದ್ದುಕಾಣುವಂತೆ ಸೇರಿಸತಕ್ಕದ್ದು.

44. ನೋಂದಣಿ ಸಮಯದಲ್ಲಿ ವಾಹನವನ್ನು ಹಾಜರುಪಡಿಸುವುದು:- ನೋಂದಣಿ ಪ್ರಾಧಿಕಾರವು ಮೋಟಾರು ವಾಹನವನ್ನು ನೋಂದಾಯಿಸಲು ಅಥವಾ ಸಾರಿಗೆ ವಾಹನವನ್ನು ಹೊರತುಪಡಿಸಿ ಇತರ ಮೋಟಾರು ವಾಹನಕ್ಕೆ ಸಂಬಂಧಿಸಿದ ನೋಂದಣಿ ಪ್ರಮಾಣ ಪತ್ರವನ್ನು ನವೀಕರಿಸಲು ಕ್ರಮ ಕೈಗೊಳ್ಳುವುದಕ್ಕೆ ಮೊದಲು, ಸಂದರ್ಭಾನುಸಾರ ವಾಹನದ ನೋಂದಣಿಗಾಗಿ ಅಥವಾ ನೋಂದಣಿ ಪ್ರಮಾಣ ಪತ್ರದ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯನ್ನು, ಆ ವಾಹನವನ್ನು ಅದರ ಮುಂದೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನೇಮಿಸಬಹುದಾದಂಥ ಪ್ರಾಧಿಕಾರದ ಮುಂದೆ, ಅರ್ಜಿಯಲ್ಲಿರುವ ವಿವರಗಳು ನಿಜವಾಗಿವೆ ಮತ್ತು ಆ ವಾಹನವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅವಶ್ಯಕತೆಗಳನ್ನು ಪೂರೈಸುತ್ತದೆಂದು ಮನದಟ್ಟು ಮಾಡಿಕೊಳ್ಳುವ ದೃಷ್ಟಿಯಿಂದ ಹಾಜರುಪಡಿಸುವಂತೆ ಅಗತ್ಯಪಡಿಸತಕ್ಕದ್ದು.

45. ನೋಂದಣಿ ಮಾಡಲು ಅಥವಾ ನೋಂದಣಿ ಪ್ರಮಾಣ ಪತ್ರವನ್ನು ನವೀಕರಿಸಲು ನಿರಾಕರಿಸುವುದು:- ನೋಂದಣಿ ಪ್ರಾಧಿಕಾರವು, ಯಾವುದೇ ಮೋಟಾರು ವಾಹನವನ್ನು ನೋಂದಾಯಿಸಲು ಅಥವಾ (ಸಾರಿಗೆ ವಾಹನವಲ್ಲದ) ಮೋಟಾರು ವಾಹನಕ್ಕೆ ಸಂಬಂಧಿಸಿದ ನೋಂದಣಿ ಪ್ರಮಾಣ ಪತ್ರವನ್ನು ನವೀಕರಿಸಲು, ಎರಡೂ ಸಂದರ್ಭಗಳಲ್ಲಿ ನೋಂದಣಿ ಪ್ರಾಧಿಕಾರಕ್ಕೆ ಆ ವಾಹನವು ಕಳುವು ಮಾಡಿದ ಮೋಟಾರು ವಾಹನವೆಂದು ಅಥವಾ ಆ ವಾಹನವು ಯಾಂತ್ರಿಕವಾಗಿ ದೋಷಪೂರ್ಣವಾಗಿದೆ ಎಂದು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅವಶ್ಯಕತೆಗಳನ್ನು ಪೂರೈಸಿಲ್ಲವೆಂದು ಅಥವಾ ವಾಹನದ ಯಾವುದೇ ಹಿಂದಿನ ನೋಂದಣಿ ವಿವರಗಳನ್ನು ಅರ್ಜಿದಾರನು ಒದಗಿಸಲು ತಪ್ಪಿರುವನೆಂದು ಅಥವಾ ವಾಹನದ ನೋಂದಣಿಯ ಅಥವಾ ಸಂದರ್ಭಾನುಸಾರ ಪ್ರಮಾಣ ಪತ್ರದ ನವೀಕರಣದ ಅಥವಾ ಅದರ ನೋಂದಣಿಯ ಅರ್ಜಿಯಲ್ಲಿ ತಪ್ಪು ವಿವರಗಳನ್ನು ಒದಗಿಸಿರುವನೆಂದು ನಂಬಲು ಕಾರಣವಿದ್ದರೆ ಆದೇಶದ ಮೂಲಕ ನಿರಾಕರಿಸಬಹುದು ಮತ್ತು ನೋಂದಣಿ ಪ್ರಾಧಿಕಾರವು, ಯಾರ ವಾಹನದ ನೋಂದಣಿಯನ್ನು ನಿರಾಕರಿಸಲಾಗಿದೆಯೋ ಅಥವಾ ನೋಂದಣಿ ಪ್ರಮಾಣ ಪತ್ರದ ನವೀಕರಣಕ್ಕೆ ಸಲ್ಲಿಸಿದ ಯಾರ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ಅರ್ಜಿದಾರನಿಗೆ ಆ ಆದೇಶದ ಪ್ರತಿಯನ್ನು ಅಂಥ ನಿರಾಕರಣೆಯ ಕಾರಣಗಳೊಂದಿಗೆ ಒದಗಿಸತಕ್ಕದ್ದು.

46. ಭಾರತದಲ್ಲಿ ನೋಂದಣಿಯು ಪರಿಣಾಮಕಾರಿಯಾಗಿರುವುದು:- 47ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧ್ಯಾಯದ ಅನುಸಾರ ಯಾವುದೇ ರಾಜ್ಯದಲ್ಲಿ ನೋಂದಾಯಿತವಾದ ಮೋಟಾರು ವಾಹನವನ್ನು, ಭಾರತದ ಮತ್ತಾವುದೇ ಭಾಗದಲ್ಲಿ ನೋಂದಾಯಿಸಬೇಕಾದ ಅವಶ್ಯಕತೆ ಇರುವುದಿಲ್ಲ ಮತ್ತು ಅಂಥ ವಾಹನಕ್ಕೆ ಸಂಬಂಧಿಸಿ ಈ ಅಧಿನಿಯಮದ ಮೇರೆಗೆ ನೀಡಿದ ಅಥವಾ ಜಾರಿಯಲ್ಲಿರುವ ನೋಂದಣಿಯ ಪ್ರಮಾಣ ಪತ್ರವು ಭಾರತದಾದ್ಯಂತ ಪರಿಣಾಮಕಾರಿಯಾಗಿರತಕ್ಕದ್ದು.

47. ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸಿದ ತರುವಾಯ ಹೊಸ ನೋಂದಣಿ ಗುರುತನ್ನು ನೀಡುವುದು:- (1) ಒಂದು ರಾಜ್ಯದಲ್ಲಿ ನೋಂದಾಯಿತವಾದ ಮೋಟಾರು ವಾಹನವನ್ನು ಹನ್ನೆರಡು ತಿಂಗಳು ಮೀರಿದ ಅವಧಿಯವರೆಗೆ ಇನ್ನೊಂದು ರಾಜ್ಯದಲ್ಲಿ ಇಟ್ಟಿದ್ದರೆ, ಆ ವಾಹನದ ಒಡೆಯನು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ವಿವರಗಳನ್ನೊಳಗೊಂಡ ಅಂಥ ನಮೂನೆಯಲ್ಲಿ ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಆ ವಾಹನವು ಇರುವುದೋ ಆ ನೋಂದಣಿ ಪ್ರಾಧಿಕಾರಕ್ಕೆ ಹೊಸ ನೋಂದಣಿ ಗುರುತು ನೀಡುವಂತೆ ಕೋರಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಆ ನೋಂದಣಿ ಪ್ರಾಧಿಕಾರಕ್ಕೆ ನೋಂದಣಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗಿನ ಅರ್ಜಿಗೆ,-

(i) 48ನೇ ಪ್ರಕರಣದ ಮೇರೆಗೆ ಪಡೆಯಲಾದ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರ ; ಅಥವಾ

(ii) ಅಂಥ ಪ್ರಮಾಣ ಪತ್ರವನ್ನು ಪಡೆಯದಿರುವ ಸಂದರ್ಭದಲ್ಲಿ,-

(ಎ) 48ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪಡೆಯಲಾದ ರಸೀತಿ; ಅಥವಾ

(ಬಿ) 48ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಪ್ರಾಧಿಕಾರಕ್ಕೆ ತಲುಪೊಪ್ಪಿಗೆ ಕಳುಹಿಸಬೇಕಾದ ನೋಂದಾಯಿತ ಅಂಚೆಯ ಮೂಲಕ ಈ ಬಗ್ಗೆ ಅರ್ಜಿಯನ್ನು ವಾಹನದ ಒಡೆಯನು ಕಳುಹಿಸಿದ್ದರೆ ಅವನಿಂದ ಸ್ವೀಕರಿಸಲಾದ ಅಂಚೆ ತಲುಪೊಪ್ಪಿಗೆ

- ಇವುಗಳನ್ನು, ಅಂಥ ಪ್ರಮಾಣ ಪತ್ರ ನೀಡಲು ಅಂಥ ಪ್ರಾಧಿಕಾರವು ನಿರಾಕರಿಸುವ ಅಥವಾ ಅಂಥ ಪ್ರಮಾಣ ಪತ್ರವನ್ನು ಯಾವ ನಿರ್ದೇಶನಕ್ಕೆ ಒಳಪಟ್ಟು ನೀಡಬಹುದೋ ಆ ಯಾವುದೇ ನಿರ್ದೇಶನವನ್ನು ಪೂರೈಸುವಂತೆ ಅಗತ್ಯಪಡಿಸುವ ಯಾವುದೇ ಪತ್ರವನ್ನು ತಾನು ಸ್ವೀಕರಿಸಿಲ್ಲವೆಂಬ ಘೋಷಣೆಯೊಂದಿಗೆ ಲಗತ್ತಿಸತಕ್ಕದ್ದು:

ಮತ್ತೂ ಪರಂತು, ಕಂತುಖರೀದಿ, ಗುತ್ತಿಗೆ ಅಥವಾ ಆಧಾರದ ಒಪ್ಪಂದದ ಮೇರೆಗೆ ಮೋಟಾರು ವಾಹನವನ್ನು ಹೊಂದಿರುವ ಸಂದರ್ಭದಲ್ಲಿ, ಈ ಉಪಪ್ರಕರಣದ ಮೇರೆಗಿನ ಅರ್ಜಿಯ ಜೊತೆಗೆ ಯಾವ ವ್ಯಕ್ತಿಯ ಜೊತೆ ಅಂಥ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆಯೋ ಆ ವ್ಯಕ್ತಿಯ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು ಮತ್ತು ಅಂಥ ಒಪ್ಪಂದವನ್ನು ಯಾವ ವ್ಯಕ್ತಿಯ ಜೊತೆ ಮಾಡಿಕೊಳ್ಳಲಾಗಿದೆಯೋ ಆ ವ್ಯಕ್ತಿಯಿಂದ ಅಂಥ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ಸಂಬಂಧಿಸಿ 51ನೇ ಪ್ರಕರಣದ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ, ಅರ್ಜಿಯನ್ನು ಯಾವ ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆಯೋ ಆ ನೋಂದಣಿ ಪ್ರಾಧಿಕಾರವು, 62ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ವಿವರ ಪಟ್ಟಿಕೆಗಳು ಯಾವುವಾದರೂ ಇದ್ದಲ್ಲಿ, ಅವುಗಳನ್ನು ತಾನು ಸೂಕ್ತವೆಂದು ಭಾವಿಸುವಂಥ ಪರಿಶೀಲನೆಯನ್ನು ಮಾಡಿದ ತರುವಾಯ, ವಾಹನದ ಮೇಲೆ ಆ ತರುವಾಯ ಪ್ರದರ್ಶಿಸಲು ಅಥವಾ ತೋರಿಸಲು 41ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಗುರುತನ್ನು ಆ ವಾಹನಕ್ಕೆ ಕೊಡತಕ್ಕದ್ದು ಮತ್ತು ಆ ಪ್ರಮಾಣ ಪತ್ರವನ್ನು ಅರ್ಜಿದಾರನಿಗೆ ಹಿಂದಿರುಗಿಸುವುದಕ್ಕೆ ಮುಂಚೆ ಅದರ ಮೇಲೆ ಗುರುತನ್ನು ದಾಖಲಿಸತಕ್ಕದ್ದು ಮತ್ತು ಈ ಹಿಂದೆ ವಾಹನವನ್ನು ನೋಂದಾಯಿಸಿದ ನೋಂದಣಿ ಪ್ರಾಧಿಕಾರವನ್ನು ಸಂಪರ್ಕಿಸಿ, ವಾಹನದ ನೋಂದಣಿಯನ್ನು ಆ ನೋಂದಣಿ ಪ್ರಾಧಿಕಾರದ ದಾಖಲೆಗಳಿಂದ ತನ್ನ ದಾಖಲೆಗಳಿಗೆ ವರ್ಗಾಯಿಸಿಕೊಳ್ಳುವ ವ್ಯವಸ್ಥೆ ಮಾಡತಕ್ಕದ್ದು.

(3) ಮೋಟಾರು ವಾಹನವನ್ನು ಕಂತು ಖರೀದಿ ಅಥವಾ ಗುತ್ತಿಗೆ ಅಥವಾ ಆಧಾರದ ಒಪ್ಪಂದದ ಮೇಲೆ ಹೊಂದಿರುವಾಗ ನೋಂದಣಿ ಪ್ರಾಧಿಕಾರವು, (2)ನೇ ಉಪಪ್ರಕರಣದ ಮೇರೆಗೆ ನೋಂದಣಿ ಗುರುತನ್ನು ವಾಹನಕ್ಕೆ ಕೊಟ್ಟ ತರುವಾಯ, ನೋಂದಾಯಿತ ಒಡೆಯನು ಯಾವ ವ್ಯಕ್ತಿಯ ಜೊತೆಗೆ ಕಂತು ಖರೀದಿ ಅಥವಾ ಗುತ್ತಿಗೆ ಅಥವಾ ಆಧಾರದ ಒಪ್ಪಂದವನ್ನು ಮಾಡಿಕೊಂಡಿರುವನೋ ಆ ವ್ಯಕ್ತಿಯಾಗಿ ನೋಂದಣಿ ಪ್ರಮಾಣ ಪತ್ರದಲ್ಲಿ ಯಾರ ಹೆಸರನ್ನು ನಿರ್ದಿಷ್ಟಪಡಿಸಲಾಗಿದೆಯೋ ಆ ವ್ಯಕ್ತಿಗೆ, ಸದರಿ ನೋಂದಣಿ ಗುರುತನ್ನು ಕೊಟ್ಟ ಸಂಗತಿಯನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾದ ಅಂಥ ವ್ಯಕ್ತಿಯ ವಿಳಾಸಕ್ಕೆ ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ನೋಟೀಸು ಕಳುಹಿಸಿ ತಿಳಿಸತಕ್ಕದ್ದು.

(4) ರಾಜ್ಯ ಸರ್ಕಾರವು, ರಾಜ್ಯದೊಳಗೆ ತರಲಾದ ಅಥವಾ ತತ್ಕಾಲದಲ್ಲಿ ರಾಜ್ಯದಲ್ಲಿ ಇರುವ ಮತ್ತು ರಾಜ್ಯದೊಳಗೆ ನೋಂದಾಯಿತವಾಗಿಲ್ಲದ ಮೋಟಾರು ವಾಹನದ ಒಡೆಯನನ್ನು, ಆ ಮೋಟಾರು ವಾಹನಕ್ಕೆ ಮತ್ತು ಅದರ ನೋಂದಣಿಗೆ ಸಂಬಂಧಿಸಿ ನಿಯಮಿಸಿದ ಮಾಹಿತಿಯನ್ನು ರಾಜ್ಯದಲ್ಲಿ ನಿಯಮಿಸಿದ ಪ್ರಾಧಿಕಾರಕ್ಕೆ ಒದಗಿಸುವಂತೆ ಅಗತ್ಯಪಡಿಸಲು 65ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಬಹುದು.

(5) ನಿಯಮಿಸಿದ ಅವಧಿಯಲ್ಲಿ ಒಡೆಯನು (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಲು ತಪ್ಪಿದರೆ, ನೋಂದಣಿ ಪ್ರಾಧಿಕಾರವು, ಪ್ರಕರಣದ ಪರಿಸ್ಥಿತಿಗಳನ್ನು ಗಮನಿಸಿ 177ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದಲಾಗಿ (7)ನೇ ಉಪಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ ನೂರು ರೂಪಾಯಿಗಳಿಗೆ ಮೀರದಂಥ ಮೊಬಲಗನ್ನು ಒಡೆಯನು ಸಂದಾಯ ಮಾಡತಕ್ಕದ್ದೆಂದು ಅಗತ್ಯಪಡಿಸಬಹುದು:

ಪರಂತು, ಒಡೆಯನು ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಅವನ ವಿರುದ್ಧ 177ನೇ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳತಕ್ಕದ್ದು.

(6) ಒಡೆಯನು (5)ನೇ ಉಪಪ್ರಕರಣದ ಮೇರೆಗೆ ಮೊಬಲಗನ್ನು ಸಂದಾಯ ಮಾಡಿದಾಗ ಅವನ ವಿರುದ್ಧ 177ನೇ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(7) (5)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವಲ್ಲಿ ಒಡೆಯನಿಂದ ಉಂಟಾದ ವಿಳಂಬದ ಅವಧಿಯನ್ನು ಗಮನಿಸಿ ರಾಜ್ಯ ಸರ್ಕಾರವು, ವಿವಿಧ ಮೊಬಲಗುಗಳನ್ನು ನಿಯಮಿಸಬಹುದು.

48. ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರ:- (1) ಮೋಟಾರು ವಾಹನದ ಒಡೆಯನು, 47ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊಸ ನೋಂದಣಿ ಗುರುತು ಕೊಡುವಂತೆ ಕೋರಿ ಅರ್ಜಿ ಸಲ್ಲಿಸುವಾಗ ಮೋಟಾರು ವಾಹನವನ್ನು ನೋಂದಾಯಿಸಿದಂಥ ರಾಜ್ಯವನ್ನು ಹೊರತುಪಡಿಸಿ ಬೇರೆ ರಾಜ್ಯಕ್ಕೆ ಅದನ್ನು ವರ್ಗಾಯಿಸಬೇಕಾಗಿರುವಲ್ಲಿ, ಅಂಥ ವಾಹನದ ವರ್ಗಾವಣೆದಾರನು 50ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವರ್ಗಾವಣೆಯನ್ನು ಕುರಿತು ವರದಿ ಮಾಡುವಾಗ ವಾಹನವನ್ನು ನೋಂದಾಯಿಸಿದ ನೋಂದಣಿ ಪ್ರಾಧಿಕಾರಕ್ಕೆ, ವಾಹನಕ್ಕೆ ಹೊಸ ನೋಂದಣಿ ಗುರುತನ್ನು ಕೊಡಲು ಅಥವಾ ಸಂದರ್ಭಾನುಸಾರ ನೋಂದಣಿ ಪ್ರಮಾಣ ಪತ್ರದಲ್ಲಿ ಒಡೆತನದ ವರ್ಗಾವಣೆಯ ವಿವರಗಳನ್ನು ದಾಖಲಿಸಲು ಆಕ್ಷೇಪಣೆ ಇಲ್ಲ ಎಂಬುದಾಗಿ (ಇಲ್ಲಿ ಇನ್ನು ಮುಂದೆ

ಈ ಪ್ರಕರಣದಲ್ಲಿ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವೆಂದು ಉಲ್ಲೇಖಿಸಲಾದ) ಪ್ರಮಾಣ ಪತ್ರವನ್ನು ನೀಡಬೇಕಾಗಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ನೋಂದಣಿ ಪ್ರಾಧಿಕಾರವು, (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ರಸೀತಿಯನ್ನು ನೀಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ನೋಂದಣಿ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವಂತೆ ಅಗತ್ಯಪಡಿಸಿದ ತರುವಾಯ ಮತ್ತು ಅದನ್ನು ಸ್ವೀಕರಿಸಿದ ಮೂವತ್ತು ದಿನಗಳ ಒಳಗೆ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ತಾನು ನೀಡಿರುವುದಾಗಿ ಅಥವಾ ನೀಡಲು ನಿರಾಕರಿಸಿರುವುದಾಗಿ ಲಿಖಿತ ಆದೇಶದ ಮೂಲಕ ಅರ್ಜಿದಾರನಿಗೆ ತಿಳಿಸತಕ್ಕದ್ದು:

ಪರಂತು, ನೋಂದಣಿ ಪ್ರಾಧಿಕಾರವು, ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸುವ ಬಗ್ಗೆ ಕಾರಣಗಳನ್ನು ತಾನು ಲಿಖಿತದಲ್ಲಿ ದಾಖಲಿಸಿದ ಮತ್ತು ಅದರ ಒಂದು ಪ್ರತಿಯನ್ನು ಅರ್ಜಿದಾರನಿಗೆ ಕಳುಹಿಸಿದ ಹೊರತು, ಅದನ್ನು ನೀಡಲು ನಿರಾಕರಿಸತಕ್ಕದ್ದಲ್ಲ.

(4) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮೂವತ್ತು ದಿನಗಳ ಅವಧಿಯೊಳಗೆ ನೋಂದಣಿ ಪ್ರಾಧಿಕಾರವು ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸದಿದ್ದರೆ ಅಥವಾ ಅರ್ಜಿದಾರನಿಗೆ ಆ ನಿರಾಕರಣೆ ಬಗ್ಗೆ ತಿಳಿಸದಿದ್ದರೆ, ನೋಂದಣಿ ಪ್ರಾಧಿಕಾರವು ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ನೀಡಿದೆ ಎಂದು ಭಾವಿಸತಕ್ಕದ್ದು.

(5) ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಅಥವಾ ನೀಡಲು ನಿರಾಕರಿಸುವುದಕ್ಕೆ ಮುಂಚೆ, ನೋಂದಣಿ ಪ್ರಾಧಿಕಾರವು, ಸಂಬಂಧಪಟ್ಟ ಮೋಟಾರು ವಾಹನದ ಕಳುವಿನ ಬಗ್ಗೆ ಯಾವುದೇ ಮೊಕದ್ದಮೆ ವರದಿಯಾಗಿಲ್ಲವೆಂದು ಅಥವಾ ಇತ್ಯರ್ಥದಲ್ಲಿದೆ ಎಂದು ಪೊಲೀಸರಿಂದ ಲಿಖಿತ ವರದಿಯನ್ನು ಪಡೆಯತಕ್ಕದ್ದು ಮತ್ತು ಮೋಟಾರು ವಾಹನದ ಸಂಬಂಧದಲ್ಲಿ ರಸ್ತೆ ತೆರಿಗೆಯೂ ಸೇರಿ ಸರ್ಕಾರಕ್ಕೆ ಸಲ್ಲಿಸತಕ್ಕ ಎಲ್ಲ ಮೊಬಲಗುಗಳನ್ನು ಸಂದಾಯ ಮಾಡಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

(6) ವಾಹನದ ಒಡೆಯನು, ತನ್ನ ವಾಹನದ ಕಳವಿನ ಬಗ್ಗೆ, ಯಾವ ಪೊಲೀಸು ಠಾಣೆಯಲ್ಲಿ ದೂರನ್ನು ದಾಖಲ್ಮಾಡಿದ್ದಾನೆಯೋ ಆ ಪೊಲೀಸು ಠಾಣೆಯ ಹೆಸರಿನೊಂದಿಗೆ ನೋಂದಣಿ ಪ್ರಾಧಿಕಾರಿಗೆ ಲಿಖಿತದಲ್ಲಿ ಆದಷ್ಟು ಬೇಗ ತಿಳಿಸತಕ್ಕದ್ದು; ಮತ್ತು ಆ ನೋಂದಣಿ ಪ್ರಾಧಿಕಾರಿಯ ಆಕ್ಷೇಪಣೆ ಇಲ್ಲವೆಂಬ ಪ್ರಮಾಣ ಪತ್ರಕ್ಕಾಗಿ, ನೋಂದಣಿಗಾಗಿ, ಒಡೆತನದ ವರ್ಗಾವಣೆಯ ಅಥವಾ ನಕಲು ನೋಂದಣಿ ಪ್ರಮಾಣ ಪತ್ರದ ದ್ವಿಪ್ರತಿಯ ನೀಡಿಕೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ವಿಲೇ ಮಾಡುವಾಗ ಅಂಥ ಕಳವಿನ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

49. ವಾಸಸ್ಥಳ ಅಥವಾ ವ್ಯವಹಾರ ಸ್ಥಳದ ಬದಲಾವಣೆ:- (1) ಮೋಟಾರು ವಾಹನದ ಒಡೆಯನು, ಆ ವಾಹನದ ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಿದ ವಿಳಾಸದಲ್ಲಿ ವಾಸದ ಅಥವಾ ವ್ಯವಹಾರದ ಸ್ಥಳವನ್ನು ಹೊಂದಿರುವುದು ಕೊನೆಗೊಂಡಿದ್ದರೆ ಅಂಥ ವಿಳಾಸದ ಬದಲಾವಣೆಯ ಮೂವತ್ತು ದಿವಸಗಳ ಒಳಗೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ದಸ್ತಾವೇಜುಗಳನ್ನು ಲಗತ್ತಿಸಿ ತನ್ನ ಹೊಸ ವಿಳಾಸವನ್ನು ನೋಂದಣಿ ಪ್ರಮಾಣ ಪತ್ರವನ್ನು ನೀಡಿದ ನೋಂದಣಿ ಪ್ರಾಧಿಕಾರಕ್ಕೆ ಅಥವಾ ಹೊಸ ವಿಳಾಸವು ಇನ್ನೊಂದು ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿದ್ದರೆ ಆ ಇನ್ನೊಂದು ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ಮತ್ತು ಅದೇ ಸಮಯಕ್ಕೆ ಹೊಸ ವಿಳಾಸವನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಲು, ಆ ನೋಂದಣಿ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರ ಆ ಇನ್ನೊಂದು ನೋಂದಣಿ ಪ್ರಾಧಿಕಾರಕ್ಕೆ ಅದನ್ನು ಕಳುಹಿಸಿಕೊಡತಕ್ಕದ್ದು.

(2) ಮೋಟಾರು ವಾಹನದ ಒಡೆಯನು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತನ್ನ ಹೊಸ ವಿಳಾಸವನ್ನು ಸಂಬಂಧಪಟ್ಟ ನೋಂದಣಿ ಪ್ರಾಧಿಕಾರಕ್ಕೆ ತಿಳಿಸಲು ತಪ್ಪಿದರೆ, ನೋಂದಣಿ ಪ್ರಾಧಿಕಾರವು, ಪ್ರಕರಣದ ಪರಿಸ್ಥಿತಿಗಳನ್ನು ಗಮನಿಸಿ, 177ನೇ ಪ್ರಕರಣದ ಮೇರೆಗೆ ಒಡೆಯನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದಲಾಗಿ, (4)ನೇ ಉಪಪ್ರಕರಣದ ಮೇರೆಗೆ ನಿಯಮಿಸಬಹುದಾದಂಥ ನೂರು ರೂಪಾಯಿಗಳನ್ನು ಮೀರದ ಮೊಬಲಗನ್ನು ಸಂದಾಯ ಮಾಡಲು ಅವನನ್ನು ಅಗತ್ಯಪಡಿಸಬಹುದು:

ಪರಂತು, ಒಡೆಯನು ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ 177ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಕ್ರಮವನ್ನು ಕೈಗೊಳ್ಳತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ, ಆ ವ್ಯಕ್ತಿಯು ಮೊಬಲಗನ್ನು ಸಂದಾಯ ಮಾಡಿದ್ದರೆ 177ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರವು, ವ್ಯಕ್ತಿಯು ತನ್ನ ಹೊಸ ವಿಳಾಸವನ್ನು ತಿಳಿಸುವಲ್ಲಿ ಮಾಡಿದ ವಿಳಂಬದ ಅವಧಿಯನ್ನು ಗಮನಿಸಿ ವಿವಿಧ ಮೊಬಲಗುಗಳನ್ನು ನಿಯಮಿಸಬಹುದು.

(5) (1)ನೇ ಉಪಪ್ರಕರಣದ ಮೇರೆಗೆ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ನೋಂದಣಿ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಪರಿಶೀಲನೆಯನ್ನು ಮಾಡಿದ ತರುವಾಯ ನೋಂದಣಿ ಪ್ರಮಾಣ ಪತ್ರದಲ್ಲಿ ಆ ಹೊಸ ವಿಳಾಸವನ್ನು ನಮೂದಿಸುವಂತೆ ಮಾಡತಕ್ಕದ್ದು.

(6) ಅಂಥ ಯಾವುದೇ ನಮೂದನ್ನು ಮಾಡುವ ಮೂಲ ನೋಂದಣಿ ಪ್ರಾಧಿಕಾರವನ್ನು ಹೊರತುಪಡಿಸಿ, ಇತರ ನೋಂದಣಿ ಪ್ರಾಧಿಕಾರವು ಬದಲಾಯಿಸಿದ ವಿಳಾಸವನ್ನು ಮೂಲ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(7) ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಿದ ವಿಳಾಸದ ಬದಲಾವಣೆಯು ತಾತ್ಕಾಲಿಕವಾಗಿದ್ದು ಆರು ತಿಂಗಳ ಅವಧಿಯನ್ನು ಮೀರುವ ಉದ್ದೇಶವಿಲ್ಲದಿದ್ದರೆ ಅಥವಾ ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಿದ ವಿಳಾಸದಿಂದ ಮೋಟಾರು ವಾಹನವನ್ನು ಉಪಯೋಗಿಸಿರದಿದ್ದರೆ ಅಥವಾ ಸ್ಥಳಾಂತರಿಸದಿದ್ದರೆ (1)ನೇ ಉಪಪ್ರಕರಣದಲ್ಲಿ ಇರುವುದ್ಯಾವುದೂ ಅನ್ವಯವಾಗತಕ್ಕದ್ದಲ್ಲ.

50. ಒಡೆತನದ ವರ್ಗಾವಣೆ:- ಈ ಅಧ್ಯಾಯದ ಮೇರೆಗೆ ನೋಂದಾಯಿತವಾದ ಯಾವುದೇ ಮೋಟಾರು ವಾಹನದ ಒಡೆತನವನ್ನು ವರ್ಗಾವಣೆ ಮಾಡಿರುವಲ್ಲಿ,-

(ಎ) ವರ್ಗಾವಣೆಕಾರನು,-

(i) ಒಂದೇ ರಾಜ್ಯದಲ್ಲಿ ನೋಂದಾಯಿತವಾದ ವಾಹನದ ಸಂದರ್ಭದಲ್ಲಿ, ವರ್ಗಾವಣೆಯಾದ ಹದಿನಾಲ್ಕು ದಿವಸಗಳೊಳಗೆ ವರ್ಗಾವಣೆಯ ಸಂಗತಿಯನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ದಸ್ತಾವೇಜುಗಳೊಂದಿಗೆ ಮತ್ತು ಅಂಥ ರೀತಿಯಲ್ಲಿ ವರ್ಗಾವಣೆಯಲ್ಲಿ ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಬೇಕಾಗಿದೆಯೋ ಅವನಿಗೆ ವರದಿ ಮಾಡತಕ್ಕದ್ದು ಮತ್ತು ಅದೇ ಸಮಯಕ್ಕೆ ಸದರಿ ವರದಿಯ ಒಂದು ಪ್ರತಿಯನ್ನು ವರ್ಗಾವಣೆ ಪಡೆದವನಿಗೆ ಕಳುಹಿಸತಕ್ಕದ್ದು.

(ii) ರಾಜ್ಯದ ಹೊರಗಡೆ ನೋಂದಾಯಿಸಿದ ವಾಹನದ ಸಂದರ್ಭದಲ್ಲಿ ವರ್ಗಾವಣೆಯಾದ ನಲವತ್ತೈದು ದಿವಸಗಳೊಳಗೆ (i)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ನೋಂದಣಿ ಪ್ರಾಧಿಕಾರಕ್ಕೆ,-

(ಎ) 48ನೇ ಪ್ರಕರಣದ ಮೇರೆಗೆ ಪಡೆದ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು; ಅಥವಾ

(ಬಿ) ಅಂಥ ಪ್ರಮಾಣ ಪತ್ರವನ್ನು ಪಡೆಯದೇ ಇರುವ ಸಂದರ್ಭದಲ್ಲಿ,-

(I) 48ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪಡೆದ ರಸೀತಿಯನ್ನು; ಅಥವಾ

(II) 48ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಪ್ರಾಧಿಕಾರಕ್ಕೆ ಈ ಬಗ್ಗೆ ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ಅರ್ಜಿಯನ್ನು ಸಲ್ಲಿಸಿದ್ದರೆ, ವರ್ಗಾವಣೆ ಕಾರನು ಸ್ವೀಕರಿಸಲಾದ ಅಂಚೆ ತಲುಪೊಪ್ಪಿಗೆಯನ್ನು

- ಮತ್ತು ಅಂಥ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸುವ ಅಂಥ ಪ್ರಮಾಣ ಪತ್ರವನ್ನು ಯಾವ ನಿರ್ದೇಶನಕ್ಕೆ ಒಳಪಟ್ಟು ನೀಡಬಹುದೋ ಆ ಯಾವುದೇ ನಿರ್ದೇಶನವನ್ನು ಪಾಲಿಸುವಂತೆ ಅಗತ್ಯಪಡಿಸುವ ಯಾವುದೇ ಪತ್ರವನ್ನು ಪಡೆದಿಲ್ಲವೆಂದು ಘೋಷಣೆ ಸಮೇತ ಕಳುಹಿಸತಕ್ಕದ್ದು;

(ಬಿ) ವರ್ಗಾವಣೆ ಪಡೆದವನು, ವರ್ಗಾವಣೆಯ ಮೂವತ್ತು ದಿವಸಗಳ ಒಳಗೆ ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಸಂದರ್ಭಾನುಸಾರ ಅವನ ವಾಸಸ್ಥಳ ಅಥವಾ ಸಾಮಾನ್ಯವಾಗಿ ವಾಹನವನ್ನು ಇಡುವ ಅವನ ವ್ಯವಹಾರ

ಸ್ಥಳ ಇರುವುದೊ ಆ ನೋಂದಣಿ ಪ್ರಾಧಿಕಾರಕ್ಕೆ ವರ್ಗಾವಣೆಯ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಆ ನೋಂದಣಿ ಪ್ರಮಾಣ ಪತ್ರವನ್ನು ಆ ನೋಂದಣಿ ಪ್ರಾಧಿಕಾರಿಗೆ ನಿಯಮಿಸಿದ ಫೀಜು ಮತ್ತು ಒಡೆತನದ ವರ್ಗಾವಣೆಯ ವಿವರಗಳನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಲು ಅನುಕೂಲವಾಗುವಂತೆ ವರ್ಗಾವಣೆಕಾರನಿಂದ ತಾನು ಪಡೆದ ವರದಿಯ ಪ್ರತಿಯ ಸಮೇತ ಕಳುಹಿಸತಕ್ಕದ್ದು.

(2) (ಎ) ಮೋಟಾರು ವಾಹನವನ್ನು ಯಾರ ಹೆಸರಿನಲ್ಲಿ ನೋಂದಾಯಿಸಲಾಗಿತ್ತೋ ಆ ವ್ಯಕ್ತಿಯು ಮರಣ ಹೊಂದಿದರೆ; ಅಥವಾ

(ಬಿ) ಸರ್ಕಾರವು ನಡೆಸಿದ ಅಥವಾ ಅದರ ಪರವಾಗಿ ನಡೆಸಲಾದ ಬಹಿರಂಗ ಹರಾಜಿನಲ್ಲಿ ಮೋಟಾರು ವಾಹನವನ್ನು ಖರೀದಿಸಿದ್ದರೆ ಅಥವಾ ಆರ್ಜಿಸಿದ್ದರೆ

- ಆ ವಾಹನದ ಸ್ವಾಧೀನತೆಯ ಉತ್ತರಾಧಿಕಾರಿಯಾಗುವ ವ್ಯಕ್ತಿಯು ಅಥವಾ ಸಂದರ್ಭಾನುಸಾರ ಆ ಮೋಟಾರು ವಾಹನವನ್ನು ಖರೀದಿಸಿದ ಅಥವಾ ಆರ್ಜಿಸಿದ ವ್ಯಕ್ತಿಯು, ವಾಹನದ ಒಡೆತನವನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳುವ ಉದ್ದೇಶಕ್ಕಾಗಿ ಅರ್ಜಿಯನ್ನು, ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಅವನ ವಾಸಸ್ಥಳವು ಅಥವಾ ಸಂದರ್ಭಾನುಸಾರ ಸಾಮಾನ್ಯವಾಗಿ ವಾಹನವನ್ನು ಇಡುವ ಅವನ ವ್ಯವಹಾರ ಸ್ಥಳ ಇರುವುದೋ ಆ ನೋಂದಣಿ ಪ್ರಾಧಿಕಾರಿಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ಫೀಜಿನೊಂದಿಗೆ ಮತ್ತು ಅಂಥ ಅವಧಿಯೊಳಗೆ ಸಲ್ಲಿಸತಕ್ಕದ್ದು.

(3) ವರ್ಗಾವಣೆಕಾರನು ಅಥವಾ ವರ್ಗಾವಣೆ ಪಡೆದವನು ಸಂದರ್ಭಾನುಸಾರ (1)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ವರ್ಗಾವಣೆಯ ಸಂಗತಿಯನ್ನು ನೋಂದಣಿ ಪ್ರಾಧಿಕಾರಕ್ಕೆ ವರದಿ ಮಾಡಲು ತಪ್ಪಿದರೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಲು ಅಗತ್ಯಪಡಿಸಲಾದ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಇತರ ವ್ಯಕ್ತಿ ಎಂದು ಉಲ್ಲೇಖಿಸಲಾಗುವ) ವ್ಯಕ್ತಿಯು, ನಿಯಮಿಸಿದ ಅವಧಿಯಲ್ಲಿ ಅಂಥ ಅರ್ಜಿಯನ್ನು ಸಲ್ಲಿಸಲು ತಪ್ಪಿದರೆ, ನೋಂದಣಿ ಪ್ರಾಧಿಕಾರವು ಆ ಪ್ರಕರಣದ ಪರಿಸ್ಥಿತಿಗಳನ್ನು ಗಮನಿಸಿ ಸಂದರ್ಭಾನುಸಾರ ವರ್ಗಾವಣೆಕಾರ ಅಥವಾ ವರ್ಗಾವಣೆ ಪಡೆದವ ಅಥವಾ ಆ ಇತರ ವ್ಯಕ್ತಿಯನ್ನು 177ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದಲಾಗಿ (5)ನೇ ಉಪಪ್ರಕರಣದ ಮೇರೆಗೆ ನಿಯಮಿಸಬಹುದಾದ ನೂರು ರೂಪಾಯಿಗಳನ್ನು ಮೀರದ ಮೊಬಲಗನ್ನು ಸಂದಾಯ ಮಾಡಲು ಅಗತ್ಯಪಡಿಸಬಹುದು:

ಪರಂತು, ಸಂದರ್ಭಾನುಸಾರ ವರ್ಗಾವಣೆಕಾರ ಅಥವಾ ವರ್ಗಾವಣೆ ಪಡೆದವನು ಅಥವಾ ಆ ಇತರ ವ್ಯಕ್ತಿಯು ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಅವನ ವಿರುದ್ಧ 177ನೇ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳಬಹುದು.

(4) (3)ನೇ ಉಪಪ್ರಕರಣದ ಮೇರೆಗೆ, ವ್ಯಕ್ತಿಯು ಮೊಬಲಗನ್ನು ಸಂದಾಯ ಮಾಡಿದ್ದರೆ, 177ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(5) (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ವರ್ಗಾವಣೆಕಾರನು ಅಥವಾ ವರ್ಗಾವಣೆ ಪಡೆದವನು, ಆ ಮೋಟಾರು ವಾಹನದ ಒಡೆತನದ ವರ್ಗಾವಣೆಯ ಸಂಗತಿಯನ್ನು ವರದಿ ಮಾಡುವಲ್ಲಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ಆ ಇತರ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸುವಲ್ಲಿ ಉಂಟಾದ ವಿಳಂಬದ ಅವಧಿಯನ್ನು ಗಮನಿಸಿ ರಾಜ್ಯ ಸರ್ಕಾರವು ವಿವಿಧ ಮೊಬಲಗುಗಳನ್ನು ನಿಯಮಿಸಬಹುದು.

(6) (1)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಅಥವಾ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ನೋಂದಣಿ ಪ್ರಾಧಿಕಾರವು, ಒಡೆತನದ ವರ್ಗಾವಣೆಯನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲು ಮಾಡಬಹುದು.

(7) ಅಂಥ ಯಾವುದೇ ನಮೂದನ್ನು ದಾಖಲು ಮಾಡುವ ನೋಂದಣಿ ಪ್ರಾಧಿಕಾರವು ಒಡೆತನದ ವರ್ಗಾವಣೆಯ ವಿಷಯವನ್ನು ವರ್ಗಾವಣೆಕಾರನಿಗೆ ಮತ್ತು ಅದು ಮೂಲ ನೋಂದಣಿ ಪ್ರಾಧಿಕಾರವಾಗಿಲ್ಲದಿದ್ದರೆ ಮೂಲ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

51. ಕಂತು ಖರೀದಿ ಒಪ್ಪಂದ, ಮುಂತಾದವುಗಳಿಗೆ ಒಳಪಟ್ಟ ಮೋಟಾರು ವಾಹನಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು:- (1) ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ (ಸದರಿ ಒಪ್ಪಂದವೆಂದು ಉಲ್ಲೇಖಿಸಲಾಗುವ) ಕಂತು ಖರೀದಿ, ಗುತ್ತಿಗೆ ಅಥವಾ ಆಧಾರ ಒಪ್ಪಂದದ ಮೇರೆಗೆ ಹೊಂದಿರುವ ಮೋಟಾರು ವಾಹನದ ನೋಂದಣಿಗೆ ಅರ್ಜಿಯನ್ನು ಸಲ್ಲಿಸಿದಾಗ, ನೋಂದಣಿ ಪ್ರಾಧಿಕಾರವು, ಸದರಿ ಒಪ್ಪಂದವು ಅಸ್ತಿತ್ವದಲ್ಲಿರುವ ಬಗ್ಗೆ ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದು ಮಾಡತಕ್ಕದ್ದು.

(2) ಈ ಅಧ್ಯಾಯದ ಮೇರೆಗೆ ನೋಂದಾಯಿತವಾದ ಯಾವುದೇ ಮೋಟಾರು ವಾಹನದ ಒಡೆತನವನ್ನು ವರ್ಗಾವಣೆ ಮಾಡಿರುವಲ್ಲಿ ಮತ್ತು ವರ್ಗಾವಣೆ ಪಡೆದವನು ಯಾರೇ ವ್ಯಕ್ತಿಯೊಂದಿಗೆ ಸದರಿ ಒಪ್ಪಂದ ಮಾಡಿಕೊಂಡಿರುವಲ್ಲಿ, ಹಿಂದಿನ ನೋಂದಣಿ ಪ್ರಾಧಿಕಾರಿಯು ಸದರಿ ಒಪ್ಪಂದಕ್ಕೆ ಪಕ್ಷಕಾರರಾಗಿರುವವರು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಸದರಿ ಒಪ್ಪಂದದ ಬಗ್ಗೆ ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದು ಮಾಡತಕ್ಕದ್ದು ಮತ್ತು ಹಿಂದಿನ ನೋಂದಣಿ ಪ್ರಾಧಿಕಾರಿಯು ಮೂಲ ನೋಂದಣಿ ಪ್ರಾಧಿಕಾರಿಯಾಗಿಲ್ಲದಿದ್ದರೆ, ಮೂಲ ನೋಂದಣಿ ಪ್ರಾಧಿಕಾರಿಗೆ ಈ ಬಗ್ಗೆ ಮಾಹಿತಿಯನ್ನು ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ನಮೂದನ್ನು, ಹಿಂದಿನ ನೋಂದಣಿ ಪ್ರಾಧಿಕಾರಿಯ ಸಂಬಂಧಪಟ್ಟ ಪಕ್ಷಕಾರನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಸದರಿ ಒಪ್ಪಂದದ ಮುಕ್ತಾಯದ ರುಜುವಾತಾದ ತರುವಾಯ ರದ್ದುಗೊಳಿಸಬಹುದು ಮತ್ತು ಹಿಂದಿನ ನೋಂದಣಿ ಪ್ರಾಧಿಕಾರಿಯು ಮೂಲ ನೋಂದಣಿ ಪ್ರಾಧಿಕಾರಿಯಾಗಿಲ್ಲದಿದ್ದರೆ, ಮೂಲ ನೋಂದಣಿ ಪ್ರಾಧಿಕಾರಿಗೆ ಈ ಬಗ್ಗೆ ಮಾಹಿತಿಯನ್ನು ಕಳುಹಿಸತಕ್ಕದ್ದು.

(4) ಸದರಿ ಒಪ್ಪಂದದ ಮೇರೆಗೆ ಹೊಂದಿರುವ ಯಾವುದೇ ಮೋಟಾರು ವಾಹನದ ಒಡೆತನದ ವರ್ಗಾವಣೆಗೆ ಸಂಬಂಧಿಸಿದ ಯಾವುದೇ ನಮೂದನ್ನು, ನೋಂದಣಿ ಪ್ರಮಾಣ ಪತ್ರದಲ್ಲಿ ಯಾವ ವ್ಯಕ್ತಿಯ ಹೆಸರನ್ನು ನೋಂದಾಯಿತ ಒಡೆಯನ ಜೊತೆ ಸದರಿ ಒಪ್ಪಂದವನ್ನು ಮಾಡಿಕೊಂಡ ವ್ಯಕ್ತಿ ಎಂಬುದಾಗಿ ನಿರ್ದಿಷ್ಟಪಡಿಸಲಾಗಿದೆಯೋ ಆ ವ್ಯಕ್ತಿಯ ಲಿಖಿತ ಸಮ್ಮತಿ ಪಡೆದ ಹೊರತು ಮಾಡತಕ್ಕದ್ದಲ್ಲ.

(5) ಯಾವ ವ್ಯಕ್ತಿಯ ಹೆಸರನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ನೋಂದಾಯಿತ ಒಡೆಯನ ಜೊತೆ ಸದರಿ ಒಪ್ಪಂದವನ್ನು ಮಾಡಿಕೊಂಡ ವ್ಯಕ್ತಿ ಎಂಬುದಾಗಿ ನಿರ್ದಿಷ್ಟಪಡಿಸಲಾಗಿದೆಯೋ ಆ ವ್ಯಕ್ತಿಯು, ಸದರಿ ಒಪ್ಪಂದದ ಉಪಬಂಧಗಳ ಮೇರೆಗೆ ನೋಂದಾಯಿತ ಒಡೆಯನ ತಪ್ಪಿನ ಕಾರಣದಿಂದಾಗಿ ನೋಂದಾಯಿತ ಒಡೆಯನಿಂದ ವಾಹನದ ಸ್ವಾಧೀನವನ್ನು ತಾನು ತೆಗೆದುಕೊಂಡಿರುವನೆಂದು ಮತ್ತು ನೋಂದಾಯಿತ ಒಡೆಯನು ನೋಂದಣಿ ಪ್ರಮಾಣ ಪತ್ರವನ್ನು ಒಪ್ಪಿಸಲು ನಿರಾಕರಿಸಿರುವನೆಂದು ಅಥವಾ ತಲೆತಪ್ಪಿಸಿಕೊಂಡಿರುವನೆಂದು ನೋಂದಣಿ ಪ್ರಾಧಿಕಾರಕ್ಕೆ ಮನದಟ್ಟು ಮಾಡಿಕೊಟ್ಟಿರುವಲ್ಲಿ ಅಂಥ ಪ್ರಾಧಿಕಾರವು ನೋಂದಾಯಿತ ಒಡೆಯನಿಗೆ (ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾದ ಅವನ ವಿಳಾಸಕ್ಕೆ ತಲುಪೋಪ್ತಿಗೆ ನೋಂದಾಯಿತ ಅಂಚೆಯ ಮೂಲಕ ನೋಟೀಸನ್ನು ಕಳುಹಿಸಿ) ಅವನು ಸಲ್ಲಿಸಬಯಸುವ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಆ ನೋಂದಣಿ ಪ್ರಮಾಣ ಪತ್ರವನ್ನು ಅದರ ಮುಂದೆ ಹಾಜರುಪಡಿಸದಿದ್ದರೂ ಆ ಪ್ರಮಾಣ ಪತ್ರವನ್ನು ರದ್ದುಪಡಿಸಿ, ನೋಂದಾಯಿತ ಒಡೆಯನು ಸದರಿ ಒಪ್ಪಂದವನ್ನು ಯಾವ ವ್ಯಕ್ತಿಯ ಜೊತೆ ಮಾಡಿಕೊಂಡಿರುವನೋ ಅವನ ಹೆಸರಿನಲ್ಲಿ ಹೊಸ ನೋಂದಣಿ ಪ್ರಮಾಣ ಪತ್ರವನ್ನು ನೀಡಬಹುದು:

ಪರಂತು, ಅಂಥ ವ್ಯಕ್ತಿಯು, ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಹೊರತು ಮೋಟಾರು ವಾಹನಕ್ಕೆ ಸಂಬಂಧಿಸಿ ಹೊಸ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದಲ್ಲ :

ಮತ್ತೂ ಪರಂತು, ಸಾರಿಗೆ ವಾಹನವನ್ನು ಹೊರತುಪಡಿಸಿ ಇತರ ಮೋಟಾರು ವಾಹನದ ಸಂಬಂಧದಲ್ಲಿ ನೀಡಲಾದ ಹೊಸ ನೋಂದಣಿ ಪ್ರಮಾಣ ಪತ್ರವು, ಈ ಉಪಪ್ರಕರಣದ ಮೇರೆಗೆ ರದ್ದುಗೊಳಿಸಿದ ಪ್ರಮಾಣ ಪತ್ರವು ಜಾರಿಯಲ್ಲಿರಬಹುದಾಗಿದ್ದ ಉಳಿದ ಅವಧಿಗೆ ಮಾತ್ರ ಸಿಂಧುವಾಗಿರತಕ್ಕದ್ದು.

(6) ನೋಂದಾಯಿತ ಒಡೆಯನು, 81ನೇ ಪ್ರಕರಣದ ಮೇರೆಗೆ, ಪರ್ಮಿಟ್ಟಿನ ನವೀಕರಣಕ್ಕಾಗಿ ಅಥವಾ 41ನೇ ಪ್ರಕರಣದ (14)ನೇ ಉಪಪ್ರಕರಣದ ಮೇರೆಗೆ ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರದ ನೀಡಿಕೆಗಾಗಿ ಅಥವಾ 47ನೇ ಪ್ರಕರಣದ ಮೇರೆಗೆ ಹೊಸ ನೋಂದಣಿ ಗುರುತನ್ನು ನೀಡುವುದಕ್ಕಾಗಿ ಅಥವಾ ಇನ್ನೊಂದು ರಾಜ್ಯಕ್ಕೆ ವಾಹನವನ್ನು ಸಾಗಿಸುವುದಕ್ಕಾಗಿ ಅಥವಾ ವಾಹನವನ್ನು ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಪರಿವರ್ತಿಸುವ ಸಮಯದಲ್ಲಿ ಅಥವಾ 48ನೇ ಪ್ರಕರಣದ ಮೇರೆಗೆ ಆಕ್ಷೇಪಣೆ ಇಲ್ಲ ಎಂಬ ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ಅಥವಾ 49ನೇ ಪ್ರಕರಣದ ಮೇರೆಗೆ ವಾಸಸ್ಥಳ ಅಥವಾ ವ್ಯವಹಾರ ಸ್ಥಳವನ್ನು ಬದಲಾಯಿಸುವುದಕ್ಕಾಗಿ ಅಥವಾ 52ನೇ ಪ್ರಕರಣದ ಮೇರೆಗೆ ವಾಹನವನ್ನು ಮಾರ್ಪಾಟು ಮಾಡುವುದಕ್ಕಾಗಿ, ಸಮುಚಿತ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಮೊದಲು, "ಆಕ್ಷೇಪಣೆ ಇಲ್ಲ" ಪ್ರಮಾಣ ಪತ್ರವನ್ನು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಪ್ರಮಾಣ ಪತ್ರವೆಂದು ಉಲ್ಲೇಖಿಸಲಾಗುವ) ನೀಡುವುದಕ್ಕಾಗಿ ನೋಂದಾಯಿತ ಒಡೆಯನು ಸದರಿ ಒಪ್ಪಂದವನ್ನು

ಯಾವ ವ್ಯಕ್ತಿಯೊಡನೆ ಮಾಡಿಕೊಂಡಿರುವನೋ ಆ ವ್ಯಕ್ತಿಗೆ (ಅಂಥ ವ್ಯಕ್ತಿಯನ್ನು ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಹಣಕಾಸು ನೀಡುವವನು ಎಂದು ಉಲ್ಲೇಖಿಸಲಾಗಿದೆ) ಅರ್ಜಿಯನ್ನು ಸಲ್ಲಿಸತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಮತ್ತು (8) ಮತ್ತು (9)ನೇ ಉಪಪ್ರಕರಣಗಳ ಉದ್ದೇಶಗಳಿಗಾಗಿ ಯಾವುದೇ ಪರ್ಮಿಟ್ಟಿಗೆ ಸಂಬಂಧಿಸಿದಂತೆ "ಸಮುಚಿತ ಪ್ರಾಧಿಕಾರ" ಎಂದರೆ ಅಂಥ ಪರ್ಮಿಟ್ಟನ್ನು ನವೀಕರಿಸಲು ಈ ಅಧಿನಿಯಮದ ಮೂಲಕ ಅಧಿಕೃತವಾದ ಪ್ರಾಧಿಕಾರ ಮತ್ತು ನೋಂದಣಿಗೆ ಸಂಬಂಧಿಸಿ ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರವನ್ನು ನೀಡಲು ಅಥವಾ ಹೊಸ ನೋಂದಣಿ ಗುರುತನ್ನು ನೀಡಲು ಈ ಅಧಿನಿಯಮದ ಮೂಲಕ ಅಧಿಕೃತವಾದ ಪ್ರಾಧಿಕಾರ.

(7) (6)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಏಳು ದಿವಸಗಳ ಒಳಗೆ, ಹಣಕಾಸು ನೀಡುವವನು ಅರ್ಜಿದಾರನಿಗೆ ಕೋರಲಾಗಿರುವ ಪ್ರಮಾಣ ಪತ್ರವನ್ನು ನೀಡಬಹುದು ಅಥವಾ ಕಾರಣಗಳನ್ನು ಲಿಖಿತದಲ್ಲಿ ದಾಖಲುಮಾಡಿ, ಅದನ್ನು ಅರ್ಜಿದಾರನಿಗೆ ತಿಳಿಸಿ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಬಹುದು ಮತ್ತು ಹಣಕಾಸು ನೀಡುವವನು ಪ್ರಮಾಣ ಪತ್ರವನ್ನು ನೀಡಲು ತಪ್ಪಿದರೆ ಮತ್ತು ಏಳು ದಿವಸಗಳ ಸದರಿ ಅವಧಿಯಲ್ಲಿ ಅರ್ಜಿದಾರನಿಗೆ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸುವುದಕ್ಕೆ ಕಾರಣಗಳನ್ನು ತಿಳಿಸಲು ಸಹ ತಪ್ಪಿದರೆ, ಕೋರಲಾಗಿರುವ ಪ್ರಮಾಣ ಪತ್ರವನ್ನು ಹಣಕಾಸು ನೀಡುವವನು ನೀಡಿರುವುದಾಗಿ ಭಾವಿಸತಕ್ಕದ್ದು.

(8) ನೋಂದಾಯಿತ ಒಡೆಯನು, 81ನೇ ಪ್ರಕರಣದ ಮೇರೆಗೆ ಯಾವುದೇ ಪರ್ಮಿಟ್ಟನ್ನು ನವೀಕರಿಸುವುದಕ್ಕಾಗಿ ಅಥವಾ 41ನೇ ಪ್ರಕರಣದ (14)ನೇ ಉಪಪ್ರಕರಣದ ಮೇರೆಗೆ ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರದ ನೀಡಿಕೆಗಾಗಿ ಅಥವಾ 47ನೇ ಪ್ರಕರಣದ ಮೇರೆಗೆ ಹೊಸ ನೋಂದಣಿ ಗುರುತನ್ನು ನೀಡುವುದಕ್ಕಾಗಿ ಸಮುಚಿತ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಾಗ ಆ ಅರ್ಜಿಯ ಜೊತೆಗೆ (7)ನೇ ಉಪಪ್ರಕರಣದ ಮೇರೆಗೆ ಪಡೆಯಲಾದ ಪ್ರಮಾಣ ಪತ್ರ ಯಾವುದಾದರೂ ಇದ್ದರೆ ಅದನ್ನು ಅಥವಾ ಅಂಥ ಪ್ರಮಾಣ ಪತ್ರವನ್ನು ಪಡೆಯದಿದ್ದರೆ, ಆ ಉಪಪ್ರಕರಣದ ಮೇರೆಗೆ ಹಣಕಾಸು ನೀಡುವವನಿಂದ ಸ್ವೀಕರಿಸಿದ ತಿಳಿವಳಿಕೆ ಅಥವಾ ಸಂದರ್ಭಾನುಸಾರ ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಏಳು ದಿವಸಗಳ ಅವಧಿಯಲ್ಲಿ ಹಣಕಾಸು ನೀಡುವವನಿಂದ ಯಾವುದೇ ತಿಳಿವಳಿಕೆಯನ್ನು ಸ್ವೀಕರಿಸಿಲ್ಲವೆಂಬ ಘೋಷಣೆಯನ್ನು ಸಲ್ಲಿಸತಕ್ಕದ್ದು.

(9) ಸದರಿ ಒಪ್ಪಂದದ ಮೇರೆಗೆ ಹೊಂದಿರುವ ವಾಹನಕ್ಕೆ ಸಂಬಂಧಿಸಿ ಯಾವುದೇ ಪರ್ಮಿಟ್ಟಿನ ನವೀಕರಣಕ್ಕೆ ಅಥವಾ ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರದ ನೀಡಿಕೆಗೆ ಅಥವಾ ಹೊಸ ನೋಂದಣಿ ಗುರುತನ್ನು ನೀಡುವುದಕ್ಕೆ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಸಮುಚಿತ ಪ್ರಾಧಿಕಾರವು,-

(ಎ) ಹಣಕಾಸು ನೀಡುವವನು ಕೋರಲಾಗಿರುವ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸುವ ಸಂದರ್ಭದಲ್ಲಿ, ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ,-

(i) ಪರ್ಮಿಟ್ಟನ್ನು ನವೀಕರಿಸಬಹುದು ಅಥವಾ ನವೀಕರಿಸಲು ನಿರಾಕರಿಸಬಹುದು; ಅಥವಾ

(ii) ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರವನ್ನು ನೀಡಬಹುದು ಅಥವಾ ನೀಡಲು ನಿರಾಕರಿಸಬಹುದು; ಅಥವಾ

(iii) ಹೊಸ ನೋಂದಣಿ ಗುರುತನ್ನು ನೀಡಬಹುದು ಅಥವಾ ನೀಡಲು ನಿರಾಕರಿಸಬಹುದು.

(ಬಿ) ಇತರ ಯಾವುದೇ ಸಂದರ್ಭದಲ್ಲಿ,-

(i) ಪರ್ಮಿಟ್ಟನ್ನು ನವೀಕರಿಸಬಹುದು; ಅಥವಾ

(ii) ದ್ವಿಪ್ರತಿ ನೋಂದಣಿ ಪ್ರಮಾಣ ಪತ್ರವನ್ನು ನೀಡಬಹುದು; ಅಥವಾ

(iii) ಹೊಸ ನೋಂದಣಿ ಗುರುತನ್ನು ನೀಡಬಹುದು.

(10) ನೋಂದಣಿ ಪ್ರಮಾಣ ಪತ್ರದಲ್ಲಿ,-

(ಎ) ಮೋಟಾರು ವಾಹನದ ಕಂತು ಖರೀದಿ, ಗುತ್ತಿಗೆ ಅಥವಾ ಆಧಾರ ಒಪ್ಪಂದದ; ಅಥವಾ

(ಬಿ) (3)ನೇ ಉಪಪ್ರಕರಣದ ಮೇರೆಗೆ ಯಾವುದೇ ನಮೂದಿತ ರದ್ದಿಯಾತಿ; ಅಥವಾ

(ಸಿ) ಮೋಟಾರು ವಾಹನದ ಒಡೆತನದ ವರ್ಗಾವಣೆಯನ್ನು ದಾಖಲೆಮಾಡುವ; ಅಥವಾ

(ಡಿ) ಮೋಟಾರು ವಾಹನದಲ್ಲಿ ಯಾವುದೇ ಪರಿವರ್ತನೆ; ಅಥವಾ

(ಇ) ಮೋಟಾರು ವಾಹನದ ನೋಂದಣಿಯ ಅಮಾನತು ಅಥವಾ ರದ್ದಿಯಾತಿ; ಅಥವಾ

(ಎಫ್) ವಿಳಾಸದ ಬದಲಾವಣೆ

- ಇವುಗಳಿಗೆ ಸಂಬಂಧಿಸಿ ನಮೂದು ಮಾಡುವ ನೋಂದಣಿ ಪ್ರಾಧಿಕಾರವು ಅಂಥ ನಮೂದನ್ನು ಮಾಡಲಾಗಿದೆ ಎಂದು ಹಣಕಾಸು ನೀಡುವವನಿಗೆ ತಲುಪೂಪ್ತಿಗೆ ಬರತಕ್ಕ ನೋಂದಾಯಿತ ಅಂಚೆಯ ಮೂಲಕ ತಿಳಿಸತಕ್ಕದ್ದು.

(11) ಹೊಸ ವಾಹನವನ್ನು ನೋಂದಾಯಿಸುವ ಅಥವಾ ನೋಂದಣಿಯ ನಕಲು ಪ್ರಮಾಣ ಪತ್ರವನ್ನು ಅಥವಾ ಆಕ್ಷೇಪಣೆ ಇಲ್ಲವೆಂಬ ಪ್ರಮಾಣ ಪತ್ರವನ್ನು ಅಥವಾ ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರವನ್ನು ನೀಡುವ ಅಥವಾ ಅರ್ಹತಾ ಪ್ರಮಾಣ ಪತ್ರವನ್ನು ನೀಡುವ ಅಥವಾ ನವೀಕರಿಸುವ ಅಥವಾ ಪರ್ಮಿಟ್ಟಿನಲ್ಲಿ ಇನ್ನೊಂದು ಮೋಟಾರು ವಾಹನಕ್ಕೆ ಸಂಬಂಧಿಸಿದ ನಮೂದುಗಳನ್ನು ಪ್ರತಿಯೋಜಿಸುವ ನೋಂದಣಿ ಪ್ರಾಧಿಕಾರವು ಅಂಥ ವ್ಯವಹಾರದ ಬಗ್ಗೆ ಹಣಕಾಸು ನೀಡುವವನಿಗೆ ತಿಳಿಸತಕ್ಕದ್ದು.

(12) ನೋಂದಣಿ ಪ್ರಾಧಿಕಾರವು ಮೂಲ ನೋಂದಣಿ ಪ್ರಾಧಿಕಾರವಾಗಿಲ್ಲದಿದ್ದರೆ, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನಮೂದುಗಳನ್ನು ಮಾಡುವಾಗ ಅಥವಾ (3)ನೇ ಉಪಪ್ರಕರಣದ ಮೇರೆಗೆ ಸದರಿ ನಮೂದುಗಳನ್ನು ರದ್ದುಮಾಡುವಾಗ ಅಥವಾ (5)ನೇ ಉಪಪ್ರಕರಣದ ಮೇರೆಗೆ ಹೊಸ ನೋಂದಣಿ ಪ್ರಮಾಣ ಪತ್ರವನ್ನು ನೀಡುವಾಗ, ಅದು, ಸದರಿ ವಿಷಯವನ್ನು ಮೂಲ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

52. ಮೋಟಾರು ವಾಹನದಲ್ಲಿ ಬದಲಾವಣೆ:- (1) ಒಂದು ಮೋಟಾರು ವಾಹನದ ಒಡೆಯನು, ನೋಂದಣಿ ಪ್ರಮಾಣ ಪತ್ರದಲ್ಲಿ ಒಳಗೊಂಡ ವಿವರಗಳು ಮೂಲತಃ ತಯಾರಕರು ನಿರ್ದಿಷ್ಟಪಡಿಸಿದ ವಿವರಗಳಿಂದ ವ್ಯತ್ಯಸ್ಥವಾಗುವ ಹಾಗೆ ವಾಹನದಲ್ಲಿ ಬದಲಾವಣೆ ಮಾಡತಕ್ಕದ್ದಲ್ಲ:

ಪರಂತು, ಒಂದು ಮೋಟಾರು ವಾಹನದ ಒಡೆಯನು, ಪರಿವರ್ತನಾ ಕಿಟ್‌ನ್ನು ಅಳವಡಿಸುವ ಮೂಲಕ ಬ್ಯಾಟರಿ, ಸಮ್ಮರ್ದಿತ ನೈಸರ್ಗಿಕ ಅನಿಲ, ಸೌರಶಕ್ತಿ, ದ್ರವ ಪೆಟ್ರೋಲಿಯಂ ಅನಿಲ ಅಥವಾ ಇತರ ಯಾವುದೇ ಇಂಧನ ಅಥವಾ ಶಕ್ತಿಯ ಮೂಲ - ಇವುಗಳು ಒಳಗೊಂಡಂತೆ ವಿವಿಧ ಬಗೆಯ ಇಂಧನ ಅಥವಾ ಶಕ್ತಿಯ ಮೂಲದಿಂದ ವಾಹನಗಳ ಚಾಲನೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಒಂದು ವಾಹನದ ಎಂಜಿನನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರ್ಪಾಟು ಮಾಡಬೇಕಾದಲ್ಲಿ, ಅಂಥ ಮಾರ್ಪಾಟನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮಾಡತಕ್ಕದ್ದು:

ಮತ್ತೂ ಪರಂತು, ಕೇಂದ್ರ ಸರ್ಕಾರವು, ಅಂಥ ಪರಿವರ್ತನಾ ಕಿಟ್‌ಗಳಿಗಾಗಿ ಅನುಮೋದನೆ, ಮರು ಮಾರ್ಪಾಟು ಮತ್ತು ಇತರ ಸಂಬಂಧಿಸಿದ ವಿಷಯಗಳಿಗೆ ನಿರ್ದಿಷ್ಟ ವಿವರಗಳನ್ನು, ಷರತ್ತುಗಳನ್ನು ನಿಯಮಿಸಬಹುದು:

ಮತ್ತೂ ಅಲ್ಲದೆ, ಕೇಂದ್ರ ಸರ್ಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಮೇಲೆ ನಿರ್ದಿಷ್ಟಪಡಿಸಿದುದಕ್ಕಿಂತ ಹೊರತಾದ ರೀತಿಯಲ್ಲಿ ವಾಹನಗಳನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ವಿನಾಯಿತಿಗಳನ್ನು ನೀಡಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚಿಸುವುದರ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಹತ್ತು ಸಾರಿಗೆ ವಾಹನಗಳಿಗಿಂತ ಕಡಿಮೆ ಇಲ್ಲದ ವಾಹನಗಳ ಒಡೆತನವನ್ನು ಹೊಂದಿರುವ ಯಾರೇ ವ್ಯಕ್ತಿಗೆ, ನೋಂದಾಯಿತ ಪ್ರಾಧಿಕಾರದ ಅನುಮೋದನೆಯಿಲ್ಲದೆ ಅವನು ಹೊಂದಿದ ಯಾವುದೇ ವಾಹನಕ್ಕೆ ಅದರ ಎಂಜಿನ್‌ಗೆ ಬದಲಾಗಿ ಅದೇ ತಯಾರಿಕೆ ಮತ್ತು ಮಾದರಿಯ ಎಂಜಿನ್‌ನ್ನು ಬದಲಾಯಿಸಿಕೊಳ್ಳಲು ಅಧಿಕಾರ ನೀಡಬಹುದು ಮತ್ತು ಅನುಮತಿ ನೀಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ನೋಂದಾಯಿತ ಪ್ರಾಧಿಕಾರದ ಅನುಮೋದನೆಯಿಲ್ಲದೆ ಅಥವಾ ಅಂಥ ಅನುಮೋದನೆಯಿಲ್ಲದೆ ಅವುಗಳ ಎಂಜಿನ್ ಬದಲಾವಣೆಯ ಕಾರಣದಿಂದ ಮೋಟಾರು ವಾಹನದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿದ್ದಲ್ಲಿ, ವಾಹನದ ಒಡೆಯನು, ಬದಲಾವಣೆ ಮಾಡಿದ ಹದಿನಾಲ್ಕು ದಿನಗಳೊಳಗಾಗಿ, ಯಾರ ಅಧಿಕಾರ ವ್ಯಾಪ್ತಿಯೊಳಗೆ ಅವನು ವಾಸಿಸುತ್ತಿದ್ದಾನೆಯೋ ಅಂಥ ನೋಂದಾಯಿತ ಪ್ರಾಧಿಕಾರಕ್ಕೆ ಬದಲಾವಣೆ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ನೋಂದಣಿಯ ವಿವರಗಳನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸುವುದಕ್ಕೋಸ್ಕರ ಆ ನೋಂದಣಿ ಪ್ರಮಾಣ ಪತ್ರವನ್ನು ನಿಯಮಿತ ಶುಲ್ಕದೊಂದಿಗೆ ಆ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(4) ಮೂಲ ನೋಂದಾಯಿತ ಪ್ರಾಧಿಕಾರವಲ್ಲದ, ಯಾವುದೇ ಅಂಥ ನಮೂದನೆಯನ್ನು ಮಾಡುವಂಥ ನೋಂದಣಿ ಪ್ರಾಧಿಕಾರವು ನಮೂದನೆಯ ವಿವರಗಳನ್ನು ಮೂಲ ನೋಂದಾಯಿತ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(5) (1), (2), (3) ಮತ್ತು (4)ನೇ ಉಪಪ್ರಕರಣಗಳ ಮೇರೆಗೆ ಮಾಡಲಾದ ಉಪಬಂಧಗಳಿಗೆ ಒಳಪಟ್ಟು, ಕಂತು ಖರೀದಿ ಒಪ್ಪಂದದ ಮೇರೆಗೆ ವಾಹನವನ್ನು ಹೊಂದಿರುವಂಥ ವ್ಯಕ್ತಿಯು, ನೋಂದಾಯಿತ ಒಡೆಯನ ಲಿಖಿತ ಒಪ್ಪಿಗೆಯ ಹೊರತು ವಾಹನಕ್ಕೆ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ "ಮಾರ್ಪಾಟು" ಎಂದರೆ ಒಂದು ವಾಹನದ ಮೂಲ ಆಕಾರದಲ್ಲಿ ಬದಲಾವಣೆ ಆಗುವ ಹಾಗೆ ಮೂಲ ರಚನೆಯಲ್ಲಿ ಮಾಡಿದ ಬದಲಾವಣೆ.

(6) * * * * *

53. ನೋಂದಣಿಯ ಅಮಾನತು:- ಯಾವುದೇ ನೋಂದಣಿ ಪ್ರಾಧಿಕಾರವು ಅಥವಾ ನಿಯಮಿಸಿದ ಇತರ ಪ್ರಾಧಿಕಾರವು, ತನ್ನ ಅಧಿಕಾರ ವ್ಯಾಪ್ತಿಯಲ್ಲಿನ ಮೋಟಾರು ವಾಹನವು,-

(ಎ) ಸಾರ್ವಜನಿಕ ಸ್ಥಳದಲ್ಲಿ ಅದರ ಉಪಯೋಗದಿಂದ ಸಾರ್ವಜನಿಕರಿಗೆ ಹಾನಿಯುಂಟಾಗುವಂತಹ ಪರಿಸ್ಥಿತಿಯಲ್ಲಿದೆ ಎಂದು ಅಥವಾ ಈ ಅಧಿನಿಯಮ ಅಥವಾ ಅದರಮೇರೆಗೆ ಮಾಡಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಲು ತಪ್ಪಿದೆಯೆಂದು; ಅಥವಾ

(ಬಿ) ಪರ್ಮಿಟ್ಟು ಇಲ್ಲದೆ ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಉಪಯೋಗಿಸಲಾಗಿತ್ತೆಂದು ಅಥವಾ ಉಪಯೋಗಿಸಲಾಗುತ್ತಿದೆಯೆಂದು

- ನಂಬಲು ಕಾರಣವಿದ್ದರೆ ಪ್ರಾಧಿಕಾರವು, ಒಡೆಯನು ಸಲ್ಲಿಸಬಯಸುವ ಯಾವುದೇ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಆತನಿಗೆ ನೀಡಿದ ತರುವಾಯ, (ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲಾಗಿರುವ ಆತನ ವಿಳಾಸಕ್ಕೆ ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ಒಡೆಯನಿಗೆ ನೋಟೀಸನ್ನು ಕಳುಹಿಸಿ),-

(i) (ಎ) ಖಂಡದ ಅಡಿಯಲ್ಲಿ ಬರುವ ಯಾವುದೇ ಪ್ರಕರಣದಲ್ಲಿ ನ್ಯೂನತೆಗಳನ್ನು ತನಗೆ ಸಮಾಧಾನವಾಗುವಂತೆ ಸರಿಪಡಿಸುವವರೆಗೆ; ಮತ್ತು

(ii) (ಬಿ) ಖಂಡದ ಅಡಿಯಲ್ಲಿ ಬರುವ ಯಾವುದೇ ಪ್ರಕರಣದಲ್ಲಿ ನಾಲ್ಕು ತಿಂಗಳು ಮೀರದ ಅವಧಿಯವರೆಗೆ

- ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ವಾಹನದ ನೋಂದಣಿ ಪ್ರಮಾಣ ಪತ್ರವನ್ನು ಅಮಾನತುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಮಾನತಿನ ಆದೇಶವನ್ನು ಮಾಡುವಾಗ, ನೋಂದಣಿ ಪ್ರಾಧಿಕಾರವಲ್ಲದ ಇತರ ಪ್ರಾಧಿಕಾರವು ಅಂಥ ಅಮಾನತಿನ ಸಂಗತಿಯನ್ನು ಮತ್ತು ಅದರ ಕಾರಣಗಳನ್ನು, ಅಮಾನತಿನ ಸಮಯದಲ್ಲಿ ವಾಹನವು, ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿತ್ತೋ ಅಂಥ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ, ಮೋಟಾರು ವಾಹನದ ನೋಂದಣಿಯನ್ನು ಒಂದು ತಿಂಗಳಿಗೆ ಕಡಿಮೆ ಇಲ್ಲದ ಸತತ ಅವಧಿಗೆ ಅಮಾನತುಗೊಳಿಸಿರುವಲ್ಲಿ, ನೋಂದಣಿಯನ್ನು ಅಮಾನತು ಮಾಡಿದಾಗ ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಆ ವಾಹನವು ಇದ್ದಿತೋ ಆ ಪ್ರಾಧಿಕಾರವು ಮೂಲ ನೋಂದಣಿ ಪ್ರಾಧಿಕಾರವಲ್ಲದಿದ್ದರೆ ಆ ಪ್ರಾಧಿಕಾರಕ್ಕೆ ಅಮಾನತಿನ ವಿಷಯವನ್ನು ತಿಳಿಸತಕ್ಕದ್ದು.

(4) ಮೋಟಾರು ವಾಹನದ ಒಡೆಯನು, ಈ ಪ್ರಕರಣದ ಮೇರೆಗೆ, ನೋಂದಣಿ ಪ್ರಮಾಣ ಪತ್ರವನ್ನು ಅಮಾನತುಗೊಳಿಸಿದ ನೋಂದಣಿ ಪ್ರಾಧಿಕಾರವು ಅಥವಾ ಇತರ ನಿಯಮಿಸಿದ ಪ್ರಾಧಿಕಾರವು ಕೇಳಿದಾಗ ನೋಂದಣಿ ಪ್ರಮಾಣ ಪತ್ರವನ್ನು ಒಪ್ಪಿಸತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಲಾದ ನೋಂದಣಿ ಪ್ರಮಾಣ ಪತ್ರವನ್ನು ನೋಂದಣಿಯನ್ನು ಅಮಾನತುಗೊಳಿಸಿದ ಆದೇಶವನ್ನು ರದ್ದುಗೊಳಿಸಿದಾಗ, ಒಡೆಯನಿಗೆ ಹಿಂದಿರುಗಿಸತಕ್ಕದ್ದು, ಆದರೆ ಅದಕ್ಕೆ ಮುಂಚಿತವಾಗಿ ಹಿಂದಿರುಗಿಸತಕ್ಕದ್ದಲ್ಲ.

54. 53ನೇ ಪ್ರಕರಣದ ಮೇರೆಗೆ ಅಮಾನತುಗೊಳಿಸಿದ ನೋಂದಣಿಯ ರದ್ದಿಯಾತಿ:- 53ನೇ ಪ್ರಕರಣದ ಮೇರೆಗೆ ವಾಹನದ ನೋಂದಣಿಯ ಅಮಾನತು ಆರು ತಿಂಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ಅಡೆತಡೆ ಇಲ್ಲದೆ ಮುಂದುವರಿದರೆ, ನೋಂದಣಿಯನ್ನು ಅಮಾನತುಗೊಳಿಸಿದಾಗ ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ವಾಹನವಿದ್ದಿತೋ ಆ

ಪ್ರಾಧಿಕಾರವು ಮೂಲ ನೋಂದಣಿ ಪ್ರಾಧಿಕಾರವಾಗಿದ್ದರೆ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಅದು ಮೂಲ ನೋಂದಣಿ ಪ್ರಾಧಿಕಾರವಲ್ಲದೆ ಇದ್ದರೆ ನೋಂದಣಿಯನ್ನು ರದ್ದುಗೊಳಿಸಬಹುದಾದಂತಹ ಪ್ರಾಧಿಕಾರಕ್ಕೆ ನೋಂದಣಿ ಪ್ರಮಾಣ ಪತ್ರವನ್ನು ಕಳುಹಿಸಿಕೊಡತಕ್ಕದ್ದು.

55. ನೋಂದಣಿಯ ರದ್ದಿಯಾತಿ:- (1) ಮೋಟಾರು ವಾಹನವು ನಾಶವಾಗಿದ್ದರೆ ಅಥವಾ ಶಾಶ್ವತವಾಗಿ ಉಪಯೋಗಕ್ಕೆ ಅನರ್ಹವಾಗಿದ್ದರೆ, ಒಡೆಯನು ಹದಿನಾಲ್ಕು ದಿನಗಳ ಒಳಗೆ ಅಥವಾ ಸಾಧ್ಯವಾದಷ್ಟು ಬೇಗನೆ, ಸಂದರ್ಭಾನುಸಾರ ಅವನ ವಾಸಸ್ಥಳದ ಅಥವಾ ಸಾಮಾನ್ಯವಾಗಿ ಅವನು ವಾಹನವನ್ನು ಇರಿಸುವ ಅವನ ವ್ಯವಹಾರ ಸ್ಥಳದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನೋಂದಣಿ ಪ್ರಾಧಿಕಾರಕ್ಕೆ ಆ ಸಂಗತಿಯನ್ನು ವರದಿ ಮಾಡತಕ್ಕದ್ದು ಮತ್ತು ವಾಹನದ ನೋಂದಣಿ ಪ್ರಮಾಣ ಪತ್ರವನ್ನು ಆ ಪ್ರಾಧಿಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ನೋಂದಣಿ ಪ್ರಾಧಿಕಾರವು, ಅದು ಮೂಲ ನೋಂದಣಿ ಪ್ರಾಧಿಕಾರವಾಗಿದ್ದರೆ ನೋಂದಣಿಯನ್ನು ಮತ್ತು ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸತಕ್ಕದ್ದು ಅಥವಾ ಅದು ನೋಂದಣಿ ಪ್ರಾಧಿಕಾರವಾಗಿಲ್ಲದಿದ್ದರೆ ವರದಿಯನ್ನು ಮತ್ತು ನೋಂದಣಿ ಪ್ರಮಾಣ ಪತ್ರವನ್ನು ಮೂಲ ನೋಂದಣಿ ಪ್ರಾಧಿಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಪ್ರಾಧಿಕಾರವು ನೋಂದಣಿಯನ್ನು ರದ್ದುಗೊಳಿಸತಕ್ಕದ್ದು.

(3) ಯಾವುದೇ ನೋಂದಣಿ ಪ್ರಾಧಿಕಾರವು, ರಾಜ್ಯ ಸರ್ಕಾರವು ಆದೇಶದ ಮೂಲಕ ನೇಮಿಸಬಹುದಾದಂಥ ಪ್ರಾಧಿಕಾರದಿಂದ ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಮೋಟಾರು ವಾಹನದ ಪರೀಕ್ಷೆಗೆ ಆದೇಶ ನೀಡಬಹುದು ಮತ್ತು ಅಂತಹ ಪರೀಕ್ಷೆಯ ನಂತರ ಮತ್ತು ಒಡೆಯನು ಯಾವುದೇ ಮನವಿಯನ್ನು ಸಲ್ಲಿಸಲು ಬಯಸಿದರೆ ಅದಕ್ಕೆ ಅವಕಾಶವನ್ನು ನೀಡಿದ ನಂತರ (ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲಾದ ಒಡೆಯನ ವಿಳಾಸಕ್ಕೆ ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ಒಡೆಯನಿಗೆ ನೋಟೀಸನ್ನು ಕಳುಹಿಸಿ) ವಾಹನವು ಉಪಯೋಗಿಸಲು ಬಾರದ ಸ್ಥಿತಿಯಲ್ಲಿದೆ ಎಂದು ಅಥವಾ ಸಾರ್ವಜನಿಕ ಸ್ಥಳದಲ್ಲಿ ಅದನ್ನು ಉಪಯೋಗಿಸುವುದರಿಂದ ಸಾರ್ವಜನಿಕರಿಗೆ ಅಪಾಯ ಉಂಟಾಗುವ ಸಂಭವವಿದೆ ಎಂದು ಮತ್ತು ಅದು ದುರಸ್ತಿಗೆ ಮೀರಿದುದೆಂದು ಮನದಟ್ಟಾದರೆ ನೋಂದಣಿಯನ್ನು ರದ್ದುಗೊಳಿಸಬಹುದು.

(4) ನೋಂದಣಿ ಪ್ರಾಧಿಕಾರವು, ಮೋಟಾರು ವಾಹನವನ್ನು ಶಾಶ್ವತವಾಗಿ ಭಾರತದಿಂದ ಹೊರಗೆ ಸಾಗಿಸಲಾಗಿದೆಯೆಂದು ದೃಢಪಟ್ಟರೆ ಆಗ ನೋಂದಣಿ ಪ್ರಾಧಿಕಾರವು ನೋಂದಣಿಯನ್ನು ರದ್ದುಗೊಳಿಸತಕ್ಕದ್ದು.

(5) ನೋಂದಣಿ ಪ್ರಾಧಿಕಾರವು, ಮೋಟಾರು ವಾಹನದ ನೋಂದಣಿಯನ್ನು ಯಾವುದೇ ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವಂಥ ಅಥವಾ ಮುಖ್ಯ ವಿವರದಲ್ಲಿ ಸಂಗತಿಗಳ ಸುಳ್ಳು ನಿರೂಪಣೆಯನ್ನು ಆಧರಿಸಿ ದಸ್ತಾವೇಜುಗಳನ್ನು ಪಡೆಯಲಾಗಿದೆ ಎಂದು ಅಥವಾ ಇಂಜಿನ್ ಸಂಖ್ಯೆ ಅಥವಾ ಛಾಸಿಸ್ ಸಂಖ್ಯೆಯು ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾದಂತಹ ಸಂಖ್ಯೆಗಿಂತ ಭಿನ್ನವಾಗಿದೆಯೆಂದು ದೃಢಪಟ್ಟರೆ ಆಗ ನೋಂದಣಿ ಪ್ರಾಧಿಕಾರವು ಆತನು ಸಲ್ಲಿಸಬಯಸುವ ಮನವಿಯನ್ನು ಸಲ್ಲಿಸಲು ಒಡೆಯನಿಗೆ ಅವಕಾಶವನ್ನು ನೀಡಿದ ನಂತರ (ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿರುವ ಅವನ ವಿಳಾಸಕ್ಕೆ ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ಒಡೆಯನಿಗೆ ನೋಟೀಸನ್ನು ಕಳುಹಿಸಿ) ಮತ್ತು ಬರವಣಿಗೆಯಲ್ಲಿ ಕಾರಣಗಳನ್ನು ದಾಖಲು ಮಾಡಿ ನೋಂದಣಿಯನ್ನು ರದ್ದುಗೊಳಿಸಬಹುದು.

(6) 54ನೇ ಪ್ರಕರಣದ ಮೇರೆಗೆ ಅಥವಾ ಈ ಪ್ರಕರಣದ ಮೇರೆಗೆ, ಮೋಟಾರು ವಾಹನದ ನೋಂದಣಿಯನ್ನು ರದ್ದುಗೊಳಿಸುವ ನೋಂದಣಿ ಪ್ರಾಧಿಕಾರವು, ಅಂತಹ ಸಂಗತಿಯನ್ನು ವಾಹನದ ಒಡೆಯನಿಗೆ ಬರವಣಿಗೆಯಲ್ಲಿ ತಿಳಿಸತಕ್ಕದ್ದು ಮತ್ತು ವಾಹನದ ಒಡೆಯನು ಆ ಕೂಡಲೇ ವಾಹನದ ನೋಂದಣಿ ಪ್ರಮಾಣ ಪತ್ರವನ್ನು ಆ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು.

(7) 54ನೇ ಪ್ರಕರಣದ ಮೇರೆಗೆ ಅಥವಾ ಈ ಪ್ರಕರಣದ ಮೇರೆಗೆ, ರದ್ದಿಯಾತಿಯ ಆದೇಶವನ್ನು ಮಾಡುವ ನೋಂದಣಿ ಪ್ರಾಧಿಕಾರವು, ತಾನು ಮೂಲ ನೋಂದಣಿ ಪ್ರಾಧಿಕಾರವಾಗಿದ್ದರೆ, ನೋಂದಣಿ ಪ್ರಮಾಣ ಪತ್ರವನ್ನು ಮತ್ತು ತನ್ನ ದಾಖಲೆಗಳಲ್ಲಿರುವ ಆ ವಾಹನಕ್ಕೆ ಸಂಬಂಧಿಸಿದ ನಮೂದನ್ನು ರದ್ದು ಮಾಡತಕ್ಕದ್ದು ಮತ್ತು ಅದು ಮೂಲ ನೋಂದಣಿ ಪ್ರಾಧಿಕಾರವಾಗಿರದಿದ್ದರೆ, ನೋಂದಣಿ ಪ್ರಮಾಣ ಪತ್ರವನ್ನು ಆ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಪ್ರಾಧಿಕಾರವು ನೋಂದಣಿ ಪ್ರಮಾಣ ಪತ್ರವನ್ನು ಮತ್ತು ತನ್ನ ದಾಖಲೆಗಳಲ್ಲಿರುವ ಆ ವಾಹನಕ್ಕೆ ಸಂಬಂಧಪಟ್ಟ ನಮೂದನ್ನು ರದ್ದುಮಾಡತಕ್ಕದ್ದು.

(8) ಈ ಪ್ರಕರಣದಲ್ಲಿ ಮತ್ತು 41, 49, 50, 51, 52, 53 ಮತ್ತು 54ನೇ ಪ್ರಕರಣಗಳಲ್ಲಿ "ಮೂಲ ನೋಂದಣಿ ಪ್ರಾಧಿಕಾರ" ಎಂಬ ಪದಾವಳಿಗೆ ಯಾರ ದಾಖಲೆಗಳಲ್ಲಿ ವಾಹನದ ನೋಂದಣಿಯನ್ನು ದಾಖಲಿಸಲಾಗಿದೆಯೋ ಆ ನೋಂದಣಿ ಪ್ರಾಧಿಕಾರ ಎಂದು ಅರ್ಥ.

(9) ಈ ಪ್ರಕರಣದಲ್ಲಿ "ನೋಂದಣಿ ಪ್ರಮಾಣಪತ್ರ" ಎಂಬುದು ಈ ಅಧಿನಿಯಮದ ಉಪಬಂಧಗಳ ಮೇರೆಗೆ ನವೀಕರಿಸಲಾದ ನೋಂದಣಿ ಪ್ರಮಾಣ ಪತ್ರವನ್ನು ಒಳಗೊಳ್ಳುತ್ತದೆ.

56. ಸಾರಿಗೆ ವಾಹನಗಳ ಅರ್ಹತಾ ಪ್ರಮಾಣ ಪತ್ರ:- (1) 59 ಮತ್ತು 60ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಸಾರಿಗೆ ವಾಹನವು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಎಲ್ಲ ಅಗತ್ಯತೆಗಳನ್ನು ತತ್ಕಾಲದಲ್ಲಿ ಪೂರೈಸುತ್ತದೆಂದು, (2)ನೇ ಉಪಪ್ರಕರಣದಲ್ಲಿ ನಮೂದಿಸಲಾದ ನಿಯಮಿತ ಪ್ರಾಧಿಕಾರವು ಅಥವಾ ಅಧಿಕೃತ ಪರೀಕ್ಷಾ ಕೇಂದ್ರವು ನೀಡಿದ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ವಿವರಗಳನ್ನು ಮತ್ತು ಮಾಹಿತಿಯನ್ನು ಒಳಗೊಂಡಂಥ ನಮೂನೆಯನ್ನು ಒಂದು ಅರ್ಹತಾ ಪ್ರಮಾಣ ಪತ್ರವನ್ನು ಹೊಂದಿದ್ದ ಹೊರತು, 39ನೇ ಪ್ರಕರಣದ ಉದ್ದೇಶಗಳಿಗಾಗಿ ಆ ವಾಹನವು ಕಾನೂನುಮಾನ್ಯವಾಗಿ ನೋಂದಾಯಿತವಾಗಿದೆಯೆಂದು ಭಾವಿಸತಕ್ಕದ್ದಲ್ಲ:

ಪರಂತು, ನಿಯಮಿಸಿದ ಪ್ರಾಧಿಕಾರವು ಅಥವಾ ಅಧಿಕೃತ ಪರೀಕ್ಷಾ ಕೇಂದ್ರವು, ಅಂಥ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಿದಲ್ಲಿ, ಅದು ಅಂಥ ನಿರಾಕರಣೆಯ ಕಾರಣಗಳನ್ನು ಬರಹದಲ್ಲಿ ವಾಹನದ ಒಡೆಯನಿಗೆ ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ "ಅಧಿಕೃತ ಪರೀಕ್ಷಾ ಕೇಂದ್ರ" ಎಂದರೆ ರಾಜ್ಯ ಸರ್ಕಾರವು, ಪರೀಕ್ಷಾ ಕೇಂದ್ರದ ಅಥವಾ ಗ್ಯಾರೇಜಿನ ಚಾಲಕ (ಆಪರೇಟರ್)ನ ಅನುಭವ, ತರಬೇತಿ ಮತ್ತು ಸಾಮರ್ಥ್ಯಗಳನ್ನು ಮತ್ತು ಅದರಲ್ಲಿನ ಪರೀಕ್ಷಾ ಸಾಧನ ಸಾಮಗ್ರಿಗಳು ಮತ್ತು ಪರೀಕ್ಷಾ ಸಿಬ್ಬಂದಿ -ಇವುಗಳನ್ನು ಗಮನಿಸಿ ಅಂಥ ಪರೀಕ್ಷಾ ಕೇಂದ್ರಗಳ ಅಥವಾ ಗ್ಯಾರೇಜುಗಳ ವಿನಿಯಮನ ಮತ್ತು ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗನುಸಾರವಾಗಿ ನಿರ್ದಿಷ್ಟಪಡಿಸಬಹುದಾದಂಥ ವಾಹನ ಸೇವಾ ಕೇಂದ್ರ ಅಥವಾ ಸಾರ್ವಜನಿಕ ಅಥವಾ ಖಾಸಗಿ ಗ್ಯಾರೇಜ್ ಎಂದರ್ಥ.

(3) (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಒಂದು ಅರ್ಹತಾ ಪ್ರಮಾಣ ಪತ್ರವು ಈ ಅಧಿನಿಯಮದ ಉದ್ದೇಶಗಳನ್ನು ಗಮನಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅವಧಿಗೆ ಪರಿಣಾಮಕಾರಿಯಾಗಿರತಕ್ಕದ್ದು.

(4) ಅರ್ಹತಾ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ವಾಹನವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಎಲ್ಲ ಅಗತ್ಯತೆಗಳನ್ನು ಪೂರೈಸುತ್ತಿಲ್ಲವೆಂದು ನಿಯಮಿತ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಯಾವುದೇ ಸಮಯದಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು; ಮತ್ತು ಅಂಥ ರದ್ದಿಯಾತಿಯ ಅನಂತರ ವಾಹನದ ನೋಂದಣಿ ಪ್ರಮಾಣ ಪತ್ರವು ಮತ್ತು ಆ ವಾಹನದ ಸಂಬಂಧವಾಗಿ Vನೇ ಅಧ್ಯಾಯದ ಮೇರೆಗೆ ನೀಡಲಾದ ಯಾವುದೇ ಪರ್ಮಿಟ್‌ನ್ನು ಹೊಸ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವವರೆಗೂ ಅಮಾನತಿನಲ್ಲಿದೆಯೆಂದು ಭಾವಿಸತಕ್ಕದ್ದು:

ಪರಂತು, ಗೊತ್ತುಪಡಿಸಲಾದ ಪ್ರಾಧಿಕಾರಿಯು ಅಂಥ ತಾಂತ್ರಿಕ ವಿದ್ಯಾರ್ಹತೆಯನ್ನು ಹೊಂದಿದ್ದ ಹೊರತು ಅಥವಾ ಗೊತ್ತುಪಡಿಸಲಾದ ಪ್ರಾಧಿಕಾರಿಯು ಅಂಥ ತಾಂತ್ರಿಕ ವಿದ್ಯಾರ್ಹತೆಯನ್ನು ಹೊಂದಿಲ್ಲದಿದ್ದರೆ ಅಂಥ ವಿದ್ಯಾರ್ಹತೆಗಳನ್ನು ಹೊಂದಿರುವ ಅಧಿಕಾರಿಯ ವರದಿಯ ಆಧಾರದ ಮೇಲೆ ಹೊರತು ಅಂಥ ಯಾವುದೇ ರದ್ದಿಯಾತಿಯನ್ನು ಮಾಡತಕ್ಕದ್ದಲ್ಲ.

(5) ಈ ಅಧಿನಿಯಮದ ಮೇರೆಗೆ ನೀಡಿದ ಅರ್ಹತಾ ಪ್ರಮಾಣ ಪತ್ರವು, ಜಾರಿಯಲ್ಲಿರುವಾಗ ಇಡೀ ಭಾರತದಲ್ಲಿ ಅದು ಸಿಂಧುವಾಗಿರತಕ್ಕದ್ದು.

57. ಅಪೀಲುಗಳು:- (1) 41, 42, 43, 45, 47, 48, 49, 50, 52, 53, 55 ಅಥವಾ 56ನೇ ಪ್ರಕರಣದ ಮೇರೆಗೆ ನೋಂದಾಯಿತ ಪ್ರಾಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ನೋಟೀಸನ್ನು ತಾನು ಸ್ವೀಕರಿಸಿದಂಥ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಗೊತ್ತುಪಡಿಸಲಾದ ಪ್ರಾಧಿಕಾರಕ್ಕೆ ಆ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ಪ್ರಾಧಿಕಾರವು, ಮೂಲ ಪ್ರಾಧಿಕಾರಕ್ಕೆ ಅಪೀಲಿನ ನೋಟೀಸನ್ನು ಕೊಡತಕ್ಕದ್ದು ಮತ್ತು ಮೂಲ ಪ್ರಾಧಿಕಾರಕ್ಕೆ ಮತ್ತು ಅಪೀಲುದಾರರಿಗೆ ಅಪೀಲಿನಲ್ಲಿ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ಅನಂತರ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡತಕ್ಕದ್ದು.

58. ಸಾರಿಗೆ ವಾಹನಗಳ ಸಂಬಂಧವಾಗಿ ವಿಶೇಷ ಉಪಬಂಧಗಳು:- (1) ಕೇಂದ್ರ ಸರ್ಕಾರವು, ಸಾರಿಗೆ ವಾಹನದ (ಮೋಟಾರು ಕ್ಯಾಬನ್ನು ಹೊರತುಪಡಿಸಿ) ಚಕ್ರಗಳಿಗೆ ಜೋಡಿಸಿದ ಟೈರುಗಳ ಸಂಖ್ಯೆ, ಸ್ವರೂಪ ಮತ್ತು ಗಾತ್ರಗಳನ್ನು ಮತ್ತು ಅದರ ತಯಾರಿಕೆ ಮತ್ತು ಮಾದರಿಗಳನ್ನು ಮತ್ತು ಸಂಬಂಧಪಟ್ಟ ಇತರ ವಿಷಯಗಳನ್ನು ಗಮನಿಸಿ, ರಾಜಪತ್ರದಲ್ಲಿ ಅಧಿಸೂಚನೆಯ

ಮೂಲಕ, ಸಾರಿಗೆ ವಾಹನದ ಪ್ರತಿಯೊಂದು ತಯಾರಿಕೆ ಮತ್ತು ಮಾದರಿಗೆ ಸಂಬಂಧಿಸಿದಂತೆ ಅಂಥ ವಾಹನದ ಗರಿಷ್ಠ ಒಟ್ಟು ವಾಹನ ತೂಕ ಮತ್ತು ಅಂಥ ವಾಹನದ ಪ್ರತಿಯೊಂದು ಅಚ್ಚಿನ ಗರಿಷ್ಠ ಸುರಕ್ಷಿತ ಅಚ್ಚು ಭಾರವನ್ನು ನಿರ್ದಿಷ್ಟಪಡಿಸಬಹುದು.

(2) ನೋಂದಣಿ ಪ್ರಾಧಿಕಾರವು, ಮೋಟಾರು ಕ್ಯಾಬಲ್ಲದ ಒಂದು ಸಾರಿಗೆ ವಾಹನವನ್ನು ನೋಂದಾಯಿಸುವಾಗ, ಈ ಕೆಳಗಿನ ವಿವರಗಳನ್ನು ನೋಂದಣಿ ದಾಖಲೆಯಲ್ಲಿ ಮತ್ತು ವಾಹನದ ನೋಂದಣಿ ಪ್ರಮಾಣ ಪತ್ರದಲ್ಲಿಯೂ ಸಹ ನಮೂದಿಸತಕ್ಕದ್ದು, ಎಂದರೆ:-

(ಎ) ವಾಹನದ ಖಾಲಿ ತೂಕ;

(ಬಿ) ಪ್ರತಿ ಚಕ್ರಕ್ಕೂ ಜೋಡಿಸಿರುವ ಟೈರುಗಳ ಸಂಖ್ಯೆ, ಸ್ವರೂಪ ಮತ್ತು ಗಾತ್ರ;

(ಸಿ) ವಾಹನದ ಒಟ್ಟು ತೂಕ ಮತ್ತು ಅದರ ಹಲವಾರು ಅಚ್ಚುಗಳಿಗೆ ಸಂಬಂಧಿಸಿದ ನೋಂದಾಯಿತ ಅಚ್ಚುಭಾರ; ಮತ್ತು

(ಡಿ) ಪ್ರಯಾಣಿಕರನ್ನು ಮಾತ್ರ ಅಥವಾ ಸರಕುಗಳೊಂದಿಗೆ ಪ್ರಯಾಣಿಕರನ್ನು ಕರೆದೊಯ್ಯಲು ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅಳವಡಿಸಲಾಗಿದ್ದರೆ, ಸ್ಥಳಾವಕಾಶವನ್ನು ಒದಗಿಸಲಾಗಿರುವ ಪ್ರಯಾಣಿಕರ ಸಂಖ್ಯೆ

- ಮತ್ತು ವಾಹನದ ಒಡೆಯನು ಇದೇ ವಿವರಗಳನ್ನು ನಿಯಮಿಸಿದ ರೀತಿಯಲ್ಲಿ ವಾಹನದ ಮೇಲೆ ಪ್ರದರ್ಶಿಸತಕ್ಕದ್ದು.

(3) ವಾಹನದ ತಯಾರಿಕೆ ಮತ್ತು ಮಾದರಿ ಮತ್ತು ಅದರ ಚಕ್ರಗಳಿಗೆ ಜೋಡಿಸಿದ ಟೈರುಗಳ ಸಂಖ್ಯೆ, ಸ್ವರೂಪ ಮತ್ತು ಗಾತ್ರಗಳಿಗೆ ಸಂಬಂಧಿಸಿ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದುದಕ್ಕಿಂತ ಭಿನ್ನವಾಗಿರುವ ಯಾವುದೇ ಒಟ್ಟು ವಾಹನದ ತೂಕ ಅಥವಾ ಅದರ ಯಾವುವೇ ಅಚ್ಚುಗ್ಗಳ ನೋಂದಾಯಿತ ಅಚ್ಚುಭಾರ- ಇವುಗಳನ್ನು ಅಂಥ ಯಾವುದೇ ವಾಹನದ ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸತಕ್ಕದ್ದಲ್ಲ:

ಪರಂತು, ವಿಶಿಷ್ಟವಾದ ರೀತಿಯ ವಾಹನಗಳಿಗೆ ವಿಶಿಷ್ಟವಾದ ಪ್ರದೇಶದಲ್ಲಿ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದವುಗಳಿಗಿಂತ ಹೆಚ್ಚಿನ ತೂಕಗಳನ್ನು ಹೇರಲು ಅನುಮತಿಸಬಹುದೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ, ಅದು ರಾಜಪತ್ರದಲ್ಲಿ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳೊಡನೆ ಈ ಉಪಪ್ರಕರಣದ ಉಪಬಂಧಗಳು ಅನ್ವಯಿಸತಕ್ಕದ್ದೆಂದು ನಿರ್ದೇಶಿಸಬಹುದು.

(4) [ x x x x ]

(5) ವಾಹನದ ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಿದ ಒಟ್ಟು ವಾಹನದ ತೂಕವನ್ನು (3)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಪರಷ್ಕರಿಸುವುದಕ್ಕಾಗಿ, ನೋಂದಣಿ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ನೋಂದಣಿ ಪ್ರಮಾಣ ಪತ್ರವನ್ನು ಹಾಜರುಪಡಿಸಲು ನಿಯಮಿಸಬಹುದಾದಂಥ ಪ್ರಕ್ರಿಯೆಗನುಸಾರವಾಗಿ ನೋಂದಣಿ ಪ್ರಾಧಿಕಾರವು ಸಾರಿಗೆ ವಾಹನದ ಮಾಲೀಕನನ್ನು ಅಗತ್ಯಪಡಿಸಬಹುದು.

59. ಮೋಟಾರು ವಾಹನದ ವಯೋಮಿತಿಯನ್ನು ನಿಗದಿಪಡಿಸಲು ಅಧಿಕಾರ:- (1) ಕೇಂದ್ರ ಸರ್ಕಾರವು, ಸಾರ್ವಜನಿಕ ಸುರಕ್ಷತೆ, ಅನುಕೂಲತೆ ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಗಮನಿಸಿ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಮೋಟಾರು ವಾಹನದ ಜೀವಿತ ಕಾಲವನ್ನು, ಅದರ ತಯಾರಿಕೆಯ ದಿನಾಂಕದಿಂದ ಪರಿಗಣಿಸಿ ನಿರ್ದಿಷ್ಟಪಡಿಸಬಹುದು. ಅದರ ಅವಧಿ ಮುಗಿದ ತರುವಾಯ ಮೋಟಾರು ವಾಹನವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪೂರೈಸುತ್ತದೆಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, ಬೇರೆ ಬೇರೆ ವರ್ಗಗಳ ಅಥವಾ ಬೇರೆ ಬೇರೆ ರೀತಿಯ ಮೋಟಾರು ವಾಹನಗಳಿಗೆ ಬೇರೆ ಬೇರೆ ಕಾಲವನ್ನು ನಿರ್ದಿಷ್ಟಪಡಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ಯಾವುದೇ ವಸ್ತು ಪ್ರದರ್ಶನದಲ್ಲಿ ಪ್ರದರ್ಶನ ಅಥವಾ ಪ್ರಾತ್ಯಕ್ಷಿಕೆಯ ಉದ್ದೇಶಕ್ಕಾಗಿ ಉಪಯೋಗಿಸುವಂಥ, ತಾಂತ್ರಿಕ ಸಂಶೋಧನೆ ಅಥವಾ ವಿಂಟೇಂಜ್ ಕಾರ್ ರ್‍ಯಾಲಿಯಲ್ಲಿ ಭಾಗವಹಿಸುವ ಉದ್ದೇಶಗಳಿಗಾಗಿ ಉಪಯೋಗಿಸುವಂಥ ಮೋಟಾರು ವಾಹನದ ಉದ್ದೇಶವನ್ನು ಗಮನಿಸಿ, ರಾಜಪತ್ರದಲ್ಲಿ ಅಧಿಸೂಚನೆಯು ಮೂಲಕ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಯಾವುದೇ ವರ್ಗದ ಅಥವಾ ರೀತಿಯ ಮೋಟಾರು ವಾಹನವನ್ನು, ಆ ಅಧಿಸೂಚನೆಯಲ್ಲಿ ವಿವರಿಸಲಾದ ಉದ್ದೇಶಕ್ಕಾಗಿ (1)ನೇ ಉಪಪ್ರಕರಣದ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು.

(3) 56ನೇ ಪ್ರಕರಣದಲ್ಲಿ ಏನೇ ಇದ್ದರೂ, ನಿಯಮಿತ ಪ್ರಾಧಿಕಾರವು ಅಥವಾ ಅಧಿಕೃತ ಪರೀಕ್ಷಾ ಕೇಂದ್ರವು, (1)ನೇ ಉಪಪ್ರಕರಣದ ಮೇರೆಗೆ ನೀಡಲಾದ ಯಾವುದೇ ಅಧಿಸೂಚನೆಯ ಉಪಬಂಧಗಳನ್ನು ಉಲ್ಲಂಘಿಸಿ ಮೋಟಾರು ವಾಹನಕ್ಕೆ ಅರ್ಹತಾ ಪ್ರಮಾಣ ಪತ್ರವನ್ನು ಮಂಜೂರು ಮಾಡತಕ್ಕದ್ದಲ್ಲ.

60. ಕೇಂದ್ರ ಸರ್ಕಾರಕ್ಕೆ ಸೇರಿದ ವಾಹನಗಳ ನೋಂದಣಿ:- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು, ಕೇಂದ್ರ ಸರ್ಕಾರದ ಸ್ವತ್ತಾಗಿರುವ ಅಥವಾ ತತ್ಕಾಲದಲ್ಲಿ ಅದರ ಸಂಪೂರ್ಣ ನಿಯಂತ್ರಣದಲ್ಲಿರುವ ಮತ್ತು ದೇಶ ರಕ್ಷಣೆಗೆ ಸಂಬಂಧಿಸಿದ ಮತ್ತು ಯಾವುದೇ ವಾಣಿಜ್ಯ ಉದ್ಯಮದೊಂದಿಗೆ ಸಂಬಂಧಿಸಿರದ ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸುವಂಥ ಮೋಟಾರು ವಾಹನವನ್ನು ನೋಂದಣಿ ಮಾಡಬಹುದು ಮತ್ತು ಹಾಗೆ ನೋಂದಣಿಯಾದ ಯಾವುದೇ ವಾಹನವು, ಕೇಂದ್ರ ಸರ್ಕಾರದ ಸ್ವತ್ತಾಗಿರುವವರೆಗೆ ಅಥವಾ ಅದರ ಸಂಪೂರ್ಣ ನಿಯಂತ್ರಣದಲ್ಲಿರುವವರೆಗೆ ಈ ಅಧಿನಿಯಮದ ಮೇರೆಗೆ ಅನ್ಯಥಾ ನೋಂದಣಿಯಾಗುವುದು ಅಗತ್ಯವಿಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ವಾಹನವನ್ನು ನೋಂದಾಯಿಸುವ ಪ್ರಾಧಿಕಾರವು, ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ನಿಯಮಗಳಲ್ಲಿ ಒಳಗೊಂಡ ಉಪಬಂಧಗಳಿಗನುಸಾರ ಒಂದು ನೋಂದಣಿ ಗುರುತನ್ನು ಗೊತ್ತುಪಡಿಸತಕ್ಕದ್ದು ಮತ್ತು ಅಂಥ ವಾಹನವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಎಲ್ಲ ಅಗತ್ಯತೆಗಳನ್ನು ಪೂರೈಸುತ್ತದೆಂದು ಮತ್ತು ವಾಹನವನ್ನು ಈ ಪ್ರಕರಣದ ಮೇರೆಗೆ ನೋಂದಣಿ ಮಾಡಲಾಗಿದೆ ಎಂದು ಆ ವಾಹನದ ಸಂಬಂಧದಲ್ಲಿ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೋಂದಣಿಯಾದ ವಾಹನವು (2)ನೇ ಉಪಪ್ರಕರಣದ ಮೇರೆಗೆ ನೀಡಿದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ನೋಂದಣಿಯಾದ ವಾಹನವು, ಕೇಂದ್ರ ಸರ್ಕಾರದ ಸ್ವತ್ತಾಗಿರುವುದು ಅಥವಾ ಅದರ ಸಂಪೂರ್ಣ ನಿಯಂತ್ರಣದಲ್ಲಿರುವುದು ಕೊನೆಗೊಂಡ ತರುವಾಯ 39 ಮತ್ತು 40ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ವಾಹನವನ್ನು ನೋಂದಣಿ ಮಾಡುವ ಪ್ರಾಧಿಕಾರವು ಯಾವುದೇ ರಾಜ್ಯ ಸರ್ಕಾರಕ್ಕೆ ಆ ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಅಪೇಕ್ಷಿಸುವಂಥ ವಾಹನದ ಸಾಮಾನ್ಯ ಸ್ವರೂಪ, ಎಲ್ಲಾ ಅಳತೆಗಳ ಮತ್ತು ಅಚ್ಚು ತೂಕಗಳು - ಇವುಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸತಕ್ಕದ್ದು.

61. ಹಿಂಬಂಡಿಗಳಿಗೆ ಈ ಅಧ್ಯಾಯದ ಅನ್ವಯ:- (1) ಈ ಅಧ್ಯಾಯದ ಉಪಬಂಧಗಳು, ಇತರ ಯಾವುದೇ ಮೋಟಾರು ವಾಹನದ ನೋಂದಣಿಗೆ ಅನ್ವಯವಾಗುವಂತೆಯೇ ಹಿಂಬಂಡಿಗಳ ನೋಂದಣಿಗೂ ಅನ್ವಯವಾಗತಕ್ಕದ್ದು.

(2) ಒಂದು ಹಿಂಬಂಡಿಗೆ ಕೊಟ್ಟ ನೋಂದಣಿ ಗುರುತನ್ನು, ಕೇಂದ್ರ ಸರ್ಕಾರವು ನಿಯಮಿಸಿದಂಥ ರೀತಿಯಲ್ಲಿ ಎಳೆಯುವ ವಾಹನದ ಪಾರ್ಶ್ವ ಭಾಗದಲ್ಲಿ ಪ್ರದರ್ಶಿಸತಕ್ಕದ್ದು.

(3) ಮೋಟಾರು ವಾಹನದ ನೋಂದಣಿ ಗುರುತನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ, ಸಂದರ್ಭಾನುಸಾರ ಹಿಂಬಂಡಿಯ ಮೇಲೆ ಅಥವಾ ಆ ಸಾಲುಬಂಡಿಗಳ ಕೊನೆಯ ಹಿಂಬಂಡಿಯ ಮೇಲೆ ಪ್ರದರ್ಶಿಸಿದ ಹೊರತು, ಯಾವ ವ್ಯಕ್ತಿಯೂ, ಹಿಂಬಂಡಿಯನ್ನು ಅಥವಾ ಹಿಂಬಂಡಿಗಳನ್ನು ಜೋಡಿಸಿರುವ ಮೋಟಾರು ವಾಹನವನ್ನು ನಡೆಸತಕ್ಕದ್ದಲ್ಲ.

62. ಕಳುವಾದ ಮತ್ತು ವಶಪಡಿಸಿಕೊಂಡ ಮೋಟಾರು ವಾಹನಗಳಿಗೆ ಸಂಬಂಧಿಸಿ ಪೊಲೀಸಿನವರು ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸುವುದು:- ರಾಜ್ಯ ಸರ್ಕಾರವು, ತಾನು ಅವಶ್ಯವೆಂದು ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ವಿಹಿತವಾದುದೆಂದು ಭಾವಿಸಿದರೆ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲನು (ಯಾವುದೇ ಪದನಾಮದಿಂದ ಕರೆಯಲಾಗುವ) ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪೊಲೀಸ್ ಅಧಿಕಾರಿಗಳು ಕಳುವಾದ ಮತ್ತು ಪೊಲೀಸಿನವರು ಅರಿತು ವಶಪಡಿಸಿಕೊಂಡ ಕಳುವಾದ ವಾಹನಗಳ ಸಂಬಂಧದಲ್ಲಿ ಮಾಹಿತಿಯನ್ನು ಒಳಗೊಂಡಂಥ ವಿವರ ಪಟ್ಟಿಕೆಯನ್ನು ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಬಹುದು ಮತ್ತು ಅಂಥ ವಿವರ ಪಟ್ಟಿಕೆಯನ್ನು ಸಲ್ಲಿಸುವಂಥ ರೀತಿಯನ್ನು ಮತ್ತು ಯಾವ ದಿನಾಂಕದೊಳಗಾಗಿ ಸಲ್ಲಿಸಬೇಕೆಂಬುದನ್ನು ನಿಯಮಿಸಬಹುದು.

63. ರಾಜ್ಯದ ಮೋಟಾರು ವಾಹನಗಳ ರಿಜಿಸ್ಟರುಗಳನ್ನು ಇಡುವುದು:- (1) ಪ್ರತಿಯೊಂದು ರಾಜ್ಯ ಸರ್ಕಾರವು, ರಾಜ್ಯದಲ್ಲಿನ ಮೋಟಾರು ವಾಹನಗಳ ಸಂಬಂಧದಲ್ಲಿ ಕೆಳಕಂಡ ವಿವರಗಳನ್ನು ಒಳಗೊಂಡ ರಾಜ್ಯದ ಮೋಟಾರು ವಾಹನಗಳ ರಿಜಿಸ್ಟರು ಎಂದು ಕರೆಯಲಾಗುವ ಒಂದು ರಿಜಿಸ್ಟರನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಇಡತಕ್ಕದ್ದು, ಎಂದರೆ:-

(ಎ) ನೋಂದಣಿ ಸಂಖ್ಯೆಗಳು;

(ಬಿ) ತಯಾರಿಕೆಯ ವರ್ಷಗಳು;

(ಸಿ) ವರ್ಗಗಳು ಮತ್ತು ಮಾದರಿಗಳು;

(ಡಿ) ನೋಂದಾಯಿತ ಒಡೆಯರ ಹೆಸರುಗಳು ಮತ್ತು ವಿಳಾಸಗಳು; ಮತ್ತು

(ಇ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ವಿವರಗಳು.

(2) ಪ್ರತಿಯೊಂದು ರಾಜ್ಯ ಸರ್ಕಾರವು, ರಾಜ್ಯ ಮೋಟಾರು ವಾಹನಗಳ ರಿಜಿಸ್ಟರಿನ ಒಂದು ಮುದ್ರಿತ ಪ್ರತಿಯನ್ನು ಕೇಂದ್ರ ಸರ್ಕಾರವು ಒದಗಿಸಬೇಕೆಂದು ಇಚ್ಛಿಸಿದರೆ ಕೇಂದ್ರ ಸರ್ಕಾರಕ್ಕೆ ಹಾಗೆ ಒದಗಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಮಾಡಲಾದ ಅಂಥ ರಿಜಿಸ್ಟರಿನ ಎಲ್ಲಾ ಸೇರ್ಪಡೆಗಳನ್ನು ಮತ್ತು ಇತರ ತಿದ್ದುಪಡಿಗಳನ್ನು ಸಹ ತಡಮಾಡದೆ ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕದ್ದು.

(3) ರಾಜ್ಯ ಮೋಟಾರು ವಾಹನಗಳ ರಿಜಿಸ್ಟರನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಇಡತಕ್ಕದ್ದು.

64. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರಗಳು:- ಕೇಂದ್ರ ಸರ್ಕಾರವು, ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) 41ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ, ಯಾವ ಅವಧಿಯೊಳಗೆ ಮತ್ತು ಯಾವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದೋ ಆ ಅವಧಿ ಮತ್ತು ನಮೂನೆ ಮತ್ತು ಅದು ಒಳಗೊಂಡಿರತಕ್ಕ ದಸ್ತಾವೇಜುಗಳು, ವಿವರಗಳು ಮತ್ತು ಮಾಹಿತಿ;

(ಬಿ) 41 ನೇ ಪ್ರಕರಣದ (3) ನೇ ಉಪ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ರಚಿಸಬಹುದಾದ ನಮೂನೆ ಮತ್ತು ಅದು ಒಳಗೊಂಡಿರತಕ್ಕ ವಿವರಗಳು ಮತ್ತು ಮಾಹಿತಿ ಮತ್ತು ಅದನ್ನು ನೀಡತಕ್ಕಂಥ ರೀತಿ;

(ಸಿ) 41 ನೇ ಪ್ರಕರಣದ (5) ನೇ ಉಪ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರದ ವಿವರಗಳನ್ನು ನೋಂದಣಿ ಮಾಡುವ ಪ್ರಾಧಿಕಾರದ ದಾಖಲೆಗಳಲ್ಲಿ ನಮೂದಿಸತಕ್ಕಂಥ ನಮೂನೆ ಮತ್ತು ರೀತಿ;

(ಡಿ) 41 ನೇ ಪ್ರಕರಣದ 6 ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಗುರುತು, ಪದಗಳು ಮತ್ತು ಅಂಕಿಗಳು ಮತ್ತು ಇತರ ವಿವರಗಳನ್ನು ಪ್ರದರ್ಶಿಸತಕ್ಕಂಥ ಮತ್ತು ತೋರಿಸತಕ್ಕಂಥ ರೀತಿ ಮತ್ತು ನಮೂನೆ;

(ಇ) 41 ನೇ ಪ್ರಕರಣದ (8) ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಬೇಕಾದಂಥ ಅವಧಿ ಮತ್ತು ನಮೂನೆ ಮತ್ತು ಅದು ಒಳಗೊಳ್ಳತಕ್ಕಂಥ ವಿವರಗಳು ಮತ್ತು ಮಾಹಿತಿ;

(ಎಫ್) 41 ನೇ ಪ್ರಕರಣದ (14) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯನ್ನು ಸಲ್ಲಿಸತಕ್ಕಂಥ ನಮೂನೆ, ಅದು ಒಳಗೊಳ್ಳತಕ್ಕಂಥ ವಿವರಗಳು ಮತ್ತು ಮಾಹಿತಿ ಮತ್ತು ಆ ಬಗ್ಗೆ ವಿಧಿಸತಕ್ಕ ಫೀಜು;

(ಜಿ) 47 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯನ್ನು ಸಲ್ಲಿಸತಕ್ಕಂಥ ನಮೂನೆ ಮತ್ತು ಅವಧಿ ಮತ್ತು ಅದು ಒಳಗೊಳ್ಳಬೇಕಾದಂಥ ವಿವರಗಳು;

(ಹೆಚ್) 48 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ " ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರ " ಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕಂಥ ನಮೂನೆ ಮತ್ತು ರೀತಿ ಮತ್ತು 48 ನೇ ಪ್ರಕರಣದ (2) ನೇ ಉಪ ಪ್ರಕರಣದ ಮೇರೆಗೆ ನೀಡಬೇಕಾದ ರಸೀದಿಯ ನಮೂನೆ;

(ಐ) 48 ನೇ ಪ್ರಕರಣದ ಮೇರೆಗೆ ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಮುಂಚೆ ಅರ್ಜಿದಾರನು ಪಾಲಿಸಬೇಕಾದ ವಿಷಯಗಳು;

(ಜೆ) 49 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ, ವಿಳಾಸದ ಬದಲಾವಣೆಯನ್ನು ತಿಳಿಸತಕ್ಕಂಥ ನಮೂನೆ ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜುಗಳು;

(ಕೆ) 50 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ ಅಥವಾ 50 ನೇ ಪ್ರಕರಣದ (2) ನೇ ಉಪ ಪ್ರಕರಣದ ಮೇರೆಗೆ ಒಡೆತನದ ವರ್ಗಾವಣೆಯನ್ನು ತಿಳಿಸತಕ್ಕಂಥ ನಮೂನೆ ಮತ್ತು ರೀತಿ ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜು;

(ಎಲ್) 51 ನೇ ಪ್ರಕರಣದ (2) ನೇ ಅಥವಾ (3) ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸತಕ್ಕಂಥ ನಮೂನೆ;

(ಎಂ) 56 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ ಅರ್ಹತಾ ಪ್ರಮಾಣ ಪತ್ರವನ್ನು ನೀಡತಕ್ಕಂಥ ನಮೂನೆ ಮತ್ತು ಅದು ಒಳಗೊಳ್ಳತಕ್ಕಂಥ ವಿವರಗಳು ಮತ್ತು ಮಾಹಿತಿ;

(ಎನ್) 56 ನೇ ಪ್ರಕರಣದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಅರ್ಹತಾ ಪ್ರಮಾಣಪತ್ರವು ಜಾರಿಯಲ್ಲಿರತಕ್ಕ ಅವಧಿ;

(ಒ) ನೋಂದಣಿ ಪ್ರಮಾಣ ಪತ್ರಗಳ ನೀಡಿಕೆ ಅಥವಾ ನವೀಕರಣ ಅಥವಾ ಬದಲಾವಣೆಗೆ, ನೋಂದಣಿ ಪ್ರಮಾಣಪತ್ರದ ಮೇಲಿನ ಒಡೆತನದ ವರ್ಗಾವಣೆಗೆ ಸಂಬಂಧಿಸಿದ ನಮೂದನೆಗೆ, ನೋಂದಣಿ ಪ್ರಮಾಣಪತ್ರದ ಮೇಲಿನ ಕಂತು ಖರೀದಿ ಒಪ್ಪಂದದ ಅಥವಾ ಗುತ್ತಿಗೆಯ ಅಥವಾ ಆಧಾರದ ಸಂಬಂಧದ ಹಿಂಬರಹಕ್ಕೆ ಅಥವಾ ಅದರ ರದ್ದಿಯಾತಿಗೆ ಅರ್ಹತಾ ಪ್ರಮಾಣ ಪತ್ರಗಳಿಗೆ, ನೋಂದಣಿ ಗುರುತುಗಳಿಗೆ ಮತ್ತು ಮೋಟಾರು ವಾಹನಗಳ ಪರೀಕ್ಷೆಗೆ ಅಥವಾ ಪರಿಶೀಲನೆಗೆ ವಿಧಿಸಬೇಕಾದ ಫೀಜುಗಳು ಮತ್ತು ಅಂಥ ಫೀಜುಗಳ ಮರುಪಾವತಿ;

(ಪಿ) ಕೇಂದ್ರ ಸರ್ಕಾರವು ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

65. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ:- (1) ರಾಜ್ಯ ಸರ್ಕಾರವು, 64 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳ ಹೊರತು, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ಈ ಅಧ್ಯಾಯದ ಮೇರೆಗೆ ಸಲ್ಲಿಸಬಹುದಾದ ಅಪೀಲುಗಳನ್ನು ನಡೆಸುವುದು ಮತ್ತು ಸುನಾವಣೆ ಮಾಡುವುದು (ಅಂಥ ಅಪೀಲುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಅಂಥ ಫೀಜುಗಳ ಮರುಪಾವತಿ);

(ಬಿ) ನೋಂದಣಿ ಪ್ರಾಧಿಕಾರವು ಮತ್ತು ಇತರ ನಿಯಮಿಸಲಾದ ಪ್ರಾಧಿಕಾರಗಳ ನೇಮಕ, ಅದರ ಪ್ರಕಾರ್ಯಗಳು ಮತ್ತು ಅಧಿಕಾರ ವ್ಯಾಪ್ತಿ;

(ಸಿ) ರಸ್ತೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ಮಲೀಕರಣಕ್ಕಾಗಿ ಮಾತ್ರವೇ ವಿನ್ಯಾಸಗೊಳಿಸಿ ಉಪಯೋಗಿಸಲಾಗುವ ರೋಡ್ ರೋಲರ್‌ಗಳು, ಗ್ರೇಡರುಗಳು ಮತ್ತು ಇತರ ವಾಹನಗಳನ್ನು ಈ ಅಧ್ಯಾಯದ ಎಲ್ಲಾ ಅಥವಾ ಯಾವುವೇ ಉಪಬಂಧಗಳಿಂದ ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳಿಂದ ವಿನಾಯಿತಿ ಮತ್ತು ಅಂಥ ವಿನಾಯಿತಿಯನ್ನು ನಿಯಂತ್ರಿಸುವ ಷರತ್ತುಗಳು;

(ಡಿ) ನೋಂದಣಿ ಮತ್ತು ಅರ್ಹತಾ ಪ್ರಮಾಣಪತ್ರಗಳ ನೀಡಿಕೆ ಅಥವಾ ನವೀಕರಣ ಮತ್ತು ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ಪ್ರಮಾಣಪತ್ರಗಳ ಬದಲಾಗಿ ಅಂಥ ಪ್ರಮಾಣಪತ್ರಗಳ ದ್ವಿಪ್ರತಿಗಳ ನೀಡಿಕೆ;

(ಇ) ನೋಂದಣಿ ಪ್ರಮಾಣ ಪತ್ರಗಳಲ್ಲಿ ಒಟ್ಟು ವಾಹನದ ತೂಕಕ್ಕೆ ಸಂಬಂಧಿಸಿದ ವಿವರಗಳ ನಮೂದನೆಗಳನ್ನು ಪರಿಷ್ಕರಿಸುವುದಕ್ಕಾಗಿ ನೋಂದಣಿ ಪ್ರಾಧಿಕಾರಿಯ ಮುಂದೆ ನೋಂದಣಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವುದು;

(ಎಫ್) ಮೋಟಾರು ವಾಹನಗಳ ತಾತ್ಕಾಲಿಕ ನೋಂದಣಿ ಮತ್ತು ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರದ ಮತ್ತು ಗುರುತುಗಳ ನೀಡಿಕೆ;

(ಜಿ) 58 ನೇ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿವರಗಳನ್ನು ಮತ್ತು ಇತರ ನಿಯಮಿತ ವಿವರಗಳನ್ನು ಪ್ರದರ್ಶಿಸತಕ್ಕ ರೀತಿ;

(ಹೆಚ್) ಈ ಅಧ್ಯಾಯದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲ ಫೀಜುಗಳ ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡುವುದರಿಂದ ನಿಯಮಿತ ವ್ಯಕ್ತಿಗಳಿಗೆ ಅಥವಾ ನಿಯಮಿತ ವ್ಯಕ್ತಿಗಳ ವರ್ಗಗಳಿಗೆ ವಿನಾಯಿತಿ;

(ಐ) ಈ ಅಧ್ಯಾಯದ ಉದ್ದೇಶಕ್ಕಾಗಿ ಉಪಯೋಗಿಸಬೇಕಾದ, ಕೇಂದ್ರ ಸರ್ಕಾರದಿಂದ ನಿಯಮಿಸಲಾದುದರ ಹೊರತಾದ ಇತರ ನಮೂನೆಗಳು;

(ಜೆ) ನೋಂದಣಿ ಪ್ರಮಾಣ ಪತ್ರದ ವಿವರಗಳನ್ನು ನೋಂದಣಿ ಪ್ರಾಧಿಕಾರಿಗಳು ಮತ್ತು ರಾಜ್ಯದ ಹೊರಗೆ ನೋಂದಣಿ ಮಾಡಿದ ವಾಹನಗಳ ಒಡೆಯರು ಅಂಥ ವಾಹನಗಳ ಮತ್ತು ಅವುಗಳ ನೋಂದಣಿಯ ವಿವರಗಳನ್ನು ಪರಸ್ಪರ ತಿಳಿಸುವುದು;

(ಕೆ) 41 ನೇ ಪ್ರಕರಣದ (13) ನೇ ಉಪ ಪ್ರಕರಣದ ಅಥವಾ 47 ನೇ ಪ್ರಕರಣದ (7) ನೇ ಉಪ ಪ್ರಕರಣದ ಅಥವಾ 49 ನೇ ಪ್ರಕರಣದ (4) ನೇ ಉಪ ಪ್ರಕರಣದ ಅಥವಾ 50 ನೇ ಪ್ರಕರಣದ (5) ನೇ ಉಪ ಪ್ರಕರಣದ ಮೇರೆಗೆ, ಮೊಬಲಗು ಅಥವಾ ಮೊಬಲಗುಗಳು;

(ಎಲ್) ಅರ್ಹತಾ ಪ್ರಮಾಣ ಪತ್ರಗಳ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಯು ಇತ್ಯರ್ಥದಲ್ಲಿರುವಾಗ ಅವುಗಳ ಕಾನೂನು ಮಾನ್ಯತೆಯ ವಿಸ್ತರಣೆ;

(ಎಂ) ವ್ಯಾಪಾರಿಗಳ ಸ್ವಾಧೀನದಲ್ಲಿರುವ ಮೋಟಾರು ವಾಹನಗಳಿಗೆ ಈ ಅಧ್ಯಾಯದ ಉಪಬಂಧಗಳಿಂದ ವಿನಾಯಿತಿ ಮತ್ತು ಆ ವಿನಾಯಿತಿಗಾಗಿ ಷರತ್ತುಗಳು ಮತ್ತು ಫೀಜುಗಳು;

(ಎನ್) 62 ನೇ ಪ್ರಕರಣದ ಮೇರೆಗೆ ವಿವರಣ ಪಟ್ಟಿಕೆಯನ್ನು ಕಳುಹಿಸತಕ್ಕ ನಮೂನೆ ಮತ್ತು ಅವಧಿ;

(ಒ) 63 ನೇ ಪ್ರಕರಣದ ಮೇರೆಗೆ ರಾಜ್ಯ ಮೋಟಾರು ವಾಹನಗಳ ರಿಜಿಸ್ಟರನ್ನು ಇಡತಕ್ಕ ರೀತಿ;

(ಪಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ

- ಇವುಗಳಿಗಾಗಿ ಉಪಬಂಧ ಕಲ್ಪಿಸಬಹುದು.

## ಅಧ್ಯಾಯ - V

### ಸಾರಿಗೆ ವಾಹನಗಳ ನಿಯಂತ್ರಣ

66. ಪರ್ಮಿಟ್ಟುಗಳ ಅವಶ್ಯಕತೆ :- (1) ಮೋಟಾರು ವಾಹನದ ಯಾರೇ ಒಡೆಯನು, ಅಂಥ ವಾಹನವು ಯಾರೇ ಪ್ರಯಾಣಿಕರನ್ನು ಅಥವಾ ಯಾವುವೇ ಸರಕುಗಳನ್ನು ಒಯ್ಯುತ್ತಿರಲಿ ಅಥವಾ ಇಲ್ಲದಿರಲಿ, ಆ ವಾಹನವನ್ನು ಸಾರಿಗೆ ವಾಹನವಾಗಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬಳಸಲು ಪ್ರಾದೇಶಿಕ ಅಥವಾ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ನಿಯಮಿಸಲಾದ ಯಾವುದೇ ಪ್ರಾಧಿಕಾರವು ಅವನನ್ನು ಅಧಿಕೃತಗೊಳಿಸಿ ನೀಡಿದ ಅಥವಾ ಮೇಲು ರುಜು ಮಾಡಿದ ಪರ್ಮಿಟ್ಟಿನ ಷರತ್ತುಗಳಿಗೆ ಅನುಸಾರವಾಗಿ ಹೊರತು, ಆ ವಾಹನವನ್ನು ಅಂಥ ಸ್ಥಳದಲ್ಲಿ ಬಳಸಲಾಗುತ್ತಿರುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಮಜಲು ವಾಹನದ ಪರ್ಮಿಟ್ಟು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುದೇ ಷರತ್ತುಗಳಿಗೊಳಪಟ್ಟು, ಕರಾರು ವಾಹನವಾಗಿ ಆ ವಾಹನವನ್ನು ಉಪಯೋಗಿಸುವುದನ್ನು ಅಧಿಕೃತಗೊಳಿಸತಕ್ಕದ್ದು:

ಮತ್ತೂ ಪರಂತು, ಮಜಲು ವಾಹನದ ಪರ್ಮಿಟ್ಟು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುದೇ ಷರತ್ತುಗಳಿಗೊಳಪಟ್ಟು, ಅದು ಪ್ರಯಾಣಿಕರನ್ನು ಒಯ್ಯುತ್ತಿರುವಾಗ ಅಥವಾ ಒಯ್ಯದಿರುವಾಗ, ಸರಕು ವಾಹನವಾಗಿ ಆ ವಾಹನವನ್ನು ಉಪಯೋಗಿಸುವುದನ್ನು ಅಧಿಕೃತಗೊಳಿಸಬಹುದು:

ಮತ್ತೂ ಅಲ್ಲದೆ, ಸರಕು ವಾಹನದ ಪರ್ಮಿಟ್ಟು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುವೇ ಷರತ್ತುಗಳಿಗೊಳಪಟ್ಟು, ಪರ್ಮಿಟ್ಟು ಧಾರಕನು ನಡೆಸುತ್ತಿರುವ ವ್ಯಾಪಾರ ಅಥವಾ ವ್ಯವಹಾರಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ಸರಕುಗಳ ಸಾಗಣೆಗೆ ಆ ವಾಹನವನ್ನು ಉಪಯೋಗಿಸುವುದನ್ನು ಅಧಿಕೃತಗೊಳಿಸತಕ್ಕದ್ದು.

(2) ಸರಕು ವಾಹನದ ಪರ್ಮಿಟ್ಟು ಧಾರಕನು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ತನ್ನ ಒಡೆತನಕ್ಕೆ ಸೇರಿಲ್ಲದ ಯಾವುದೇ ಸಾರ್ವಜನಿಕ ಅಥವಾ ಅರೆ ಹಿಂಬಂಡಿಯನ್ನು ಎಳೆಯುವುದಕ್ಕಾಗಿ ಆ ವಾಹನವನ್ನು ಉಪಯೋಗಿಸಬಹುದು:

ಪರಂತು, ಯಾವುದೇ ಕೀಲುಗಳಿಂದ ಜೋಡಿಸಿದ ವಾಹನದ ಪರ್ಮಿಟ್‌ಧಾರಕನು, ಯಾವುದೇ ಇತರ ಸೆಮಿ ಟ್ರೈಲರ್‌ದೊಂದಿಗೆ ಕೀಲು ಜೋಡಿಸಿದ ವಾಹನದ ಪ್ರಮುಖ ವಾಹನವನ್ನು ಉಪಯೋಗಿಸಬಹುದು.

(3) (1)ನೇ ಉಪ ಪ್ರಕರಣದ ಉಪಬಂಧಗಳು:-

(ಎ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನಕ್ಕೆ ಸೇರಿದ್ದು, ಯಾವುದೇ ವಾಣಿಜ್ಯೋದ್ಯಮಕ್ಕೆ ಸಂಬಂಧಿಸಿದಲ್ಲದ, ಸರ್ಕಾರಿ ಉದ್ದೇಶಗಳಿಗಾಗಿ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಬಿ) ಸ್ಥಳೀಯ ಪ್ರಾಧಿಕಾರವು ಅಥವಾ ಸ್ಥಳೀಯ ಪ್ರಾಧಿಕಾರದೊಡನೆ ಮಾಡಿಕೊಂಡ ಕರಾರಿನ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಒಡೆತನಕ್ಕೆ ಸೇರಿದ್ದು, ರಸ್ತೆಯನ್ನು ಸ್ವಚ್ಛಗೊಳಿಸುವುದಕ್ಕೆ, ರಸ್ತೆಗೆ ನೀರು ಹಾಯಿಸಲು ಅಥವಾ ನಿರ್ಮಲೀಕರಣದ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಸಿ) ಪೊಲೀಸು, ಅಗ್ನಿ ಶಾಮಕ ದಳ ಅಥವಾ ಆಂಬ್ಯುಲೆನ್ಸ್ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಡಿ) ಶವಗಳನ್ನು ಮತ್ತು ಶವಗಳ ಜೊತೆಯಲ್ಲಿ ದು:ಖಿತರನ್ನು ಸಾಗಿಸುವುದಕ್ಕಾಗಿ ಮಾತ್ರ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಇ) ಕೆಟ್ಟ ವಾಹನವನ್ನು ಎಳೆಯುವುದಕ್ಕಾಗಿ ಅಥವಾ ಕೆಟ್ಟ ವಾಹನದಿಂದ ಸರಕುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವುದಕ್ಕಾಗಿ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಎಫ್) ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಯಾವುದೇ ಇತರ ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಜಿ) ಈ ಬಗ್ಗೆ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಮಾತ್ರ ಮತ್ತು ಅಂಥ ಷರತ್ತುಗಳಿಗನುಸಾರವಾಗಿ ಮೋಟಾರು ವಾಹನಗಳನ್ನು ತಯಾರಿಸುವ ಅಥವಾ ಅವುಗಳ ವ್ಯವಹಾರ ಮಾಡುವ ಅಥವಾ ಚಾಸಿಸ್ ಗಳಿಗೆ ಜೋಡಿಸಲು ಒಡಲುಗಳನ್ನು ನಿರ್ಮಿಸುವ ವ್ಯಕ್ತಿಯು ಉಪಯೋಗಿಸುವ ಯಾವುದೇ ಸಾರಿಗೆ ವಾಹನಕ್ಕೆ;

(ಹೆಚ್) * * * * * *

(ಐ) ಯಾವುದೇ ಸರಕು ವಾಹನಕ್ಕೆ, 3000.00 ಕಿ.ಗ್ರಾಂ.ಗಳನ್ನು ಮೀರದ ಒಟ್ಟು ವಾಹನದ ತೂಕಕ್ಕೆ;

(ಜೆ) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಒಂದು ರಾಜ್ಯದಲ್ಲಿ ಖರೀದಿಸಿದ್ದು ಯಾರೇ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಒಯ್ಯದೆ ಆ ರಾಜ್ಯದಲ್ಲಿರುವ ಅಥವಾ ಇತರ ಯಾವುದೇ ರಾಜ್ಯದಲ್ಲಿರುವ ಸ್ಥಳಕ್ಕೆ ಹೋಗುತ್ತಿರುವ ಯಾವುದೇ ಸಾರಿಗೆ ವಾಹನಕ್ಕೆ;

(ಕೆ) 43 ನೇ ಪ್ರಕರಣದ ಮೇರೆಗೆ ತಾತ್ಕಾಲಿಕವಾಗಿ ನೋಂದಣಿಯಾಗಿದ್ದು ನೋಂದಣಿ ಮಾಡಿಸುವ ಉದ್ದೇಶಕ್ಕಾಗಿ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಹೋಗುತ್ತಿರುವ ಯಾವುದೇ ಸಾರಿಗೆ ವಾಹನಕ್ಕೆ;

(ಎಲ್) * * * * * *

(ಎಂ) ಪ್ರವಾಹ, ಭೂಕಂಪ ಅಥವಾ ಯಾವುದೇ ಇತರ ನೈಸರ್ಗಿಕ ವಿಪತ್ತು ಅಥವಾ ರಸ್ತೆಯ ಮೇಲಣ ಅಡ್ಡಿ ಅಥವಾ ಮುಂಗಾಣದ ಪರಿಸ್ಥಿತಿಗಳ ಕಾರಣದಿಂದ ತನ್ನ ಗಮ್ಯ ಸ್ಥಾನವನ್ನು ತಲುಪುವ ದೃಷ್ಟಿಯಿಂದ ರಾಜ್ಯದೊಳಗೆ ಅಥವಾ ರಾಜ್ಯದ ಹೊರಗೆ ಯಾವುದೇ ಇತರ ಮಾರ್ಗದ ಮೂಲಕ ಮಾರ್ಗಾಂತರ ಮಾಡಬೇಕಾದ ಅಗತ್ಯವಿರುವ ಯಾವುದೇ ಸಾರಿಗೆ ವಾಹನಕ್ಕೆ;

(ಎನ್) ಕೇಂದ್ರ ಅಥವಾ ರಾಜ್ಯ ಸರ್ಕಾರವು, ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಉಪಯೋಗಿಸಲಾಗುವ ಯಾವುದೇ ಸಾರಿಗೆ ವಾಹನಕ್ಕೆ;

(ಒ) ಕಂತು ಖರೀದಿ, ಗುತ್ತಿಗೆ ಅಥವಾ ಆಧಾರದ ಒಪ್ಪಂದಕ್ಕೆ ಒಳಪಟ್ಟಿದ್ದು, ಒಡೆಯನ ಲೋಪದ ಕಾರಣದಿಂದ ಅಂಥ ಒಪ್ಪಂದವನ್ನು ಒಡೆಯನು ಯಾವ ವ್ಯಕ್ತಿಯ ಜೊತೆ ಮಾಡಿಕೊಂಡಿರುವನೋ ಆ ವ್ಯಕ್ತಿಯು ಅಥವಾ ಅವನ ಪರವಾಗಿ ಸ್ವಾಧೀನವನ್ನು ಪಡೆದುಕೊಂಡಿರುವ ಯಾವುದೇ ಸಾರಿಗೆ ವಾಹನವು ತನ್ನ ಗಮ್ಯ ಸ್ಥಾನವನ್ನು ತಲುಪಲು ಸಾಧ್ಯವಾಗುವಂಥ ಯಾವುದೇ ಸಾರಿಗೆ ವಾಹನಕ್ಕೆ; ಅಥವಾ

(ಪಿ) ದುರಸ್ತಿಯ ಉದ್ದೇಶಕ್ಕಾಗಿ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಹೋಗುತ್ತಿರುವ ಯಾವುದೇ ಸಾರಿಗೆ ವಾಹನಕ್ಕೆ

- ಅನ್ವಯವಾಗತಕ್ಕದ್ದಲ್ಲ.

(4) (3) ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, (1) ನೇ ಉಪ ಪ್ರಕರಣವು, 90 ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ರಾಜ್ಯ ಸರ್ಕಾರವು ಹಾಗೆ ನಿಯಮಿಸಿದರೆ, ಚಾಲಕನನ್ನು ಬಿಟ್ಟು ಒಂಭತ್ತಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಒಯ್ಯಲು ಅಳವಡಿಸಿದ ಯಾವುದೇ ಮೋಟಾರು ವಾಹನಕ್ಕೆ ಅನ್ವಯವಾಗತಕ್ಕದ್ದು.

67. ರಸ್ತೆ ಸಾರಿಗೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಅಧಿಕಾರ:- (1) ರಾಜ್ಯ ಸರ್ಕಾರವು,-

(ಎ) ಮೋಟಾರು ಸಾರಿಗೆಯನ್ನು ಅಭಿವೃದ್ಧಿಪಡಿಸುವ ಮೂಲಕ ಸಾರ್ವಜನಿಕರಿಗೆ, ವ್ಯಾಪಾರ ಮತ್ತು ಉದ್ಯಮಗಳಿಗೆ ಒದಗಿಸುವ ಪ್ರಯೋಜನಗಳು;

(ಬಿ) ರಸ್ತೆ ಮತ್ತು ರೈಲು ಸಾರಿಗೆಗಳ ಸಮನ್ವಯದ ಅಪೇಕ್ಷಣೀಯತೆ;

(ಸಿ) ರಸ್ತೆ ವ್ಯವಸ್ಥೆಯ ದುಸ್ಥಿತಿಯನ್ನು ತಡೆಗಟ್ಟುವ ಅಪೇಕ್ಷಣೀಯತೆ; ಮತ್ತು

(ಡಿ) ಪರ್ಮಿಟ್ಟು ಧಾರಕರ ನಡುವೆ ಲಾಭದಾಯಕವಲ್ಲದ ಸ್ಪರ್ಧೆಯನ್ನು ತಡೆಗಟ್ಟುವ ಅಪೇಕ್ಷಣೀಯತೆ

- ಇವುಗಳನ್ನು ಗಮನದಲ್ಲಿಟ್ಟುಕೊಂಡು, ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,-

(i) ಮಜಲು ವಾಹನಗಳಿಗೆ, ಕರಾರು ವಾಹನಗಳಿಗೆ ಮತ್ತು ಸರಕು ವಾಹನಗಳಿಗೆ ಪ್ರಯಾಣದರ ಮತ್ತು ಸಾಗಣೆ ದರವನ್ನು (ಅದರ ಗರಿಷ್ಠ ಮತ್ತು ಕನಿಷ್ಠ ಮಿತಿಗಳೂ ಸೇರಿ) ನಿಗದಿಪಡಿಸುವ ಬಗ್ಗೆ:

ಪರಂತು [* * * * *]

(ii) ನಿರ್ದೇಶನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಸರಕು ವಾಹನಗಳ ಮೂಲಕ ಸಾಮಾನ್ಯವಾಗಿ ಬಹು ದೂರ ಸರಕುಗಳ ಸಂಚಾರವನ್ನು ಅಥವಾ ನಿರ್ದಿಷ್ಟ ವರ್ಗಗಳ ಸರಕುಗಳನ್ನು ಸಾಗಿಸುವುದನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ ಬಗ್ಗೆ;

(iii) ಸಾಮಾನ್ಯವಾಗಿ ಮೋಟಾರು ಸಾರಿಗೆಯ ನಿಯಂತ್ರಣಕ್ಕೆ ಮತ್ತು ವಿಶೇಷವಾಗಿ ಸಾರಿಗೆಯ ಇತರ ಸಾಧನಗಳೊಂದಿಗೆ ಅದರ ಸಮನ್ವಯಕ್ಕೆ ಮತ್ತು ದೂರ ಸರಕು ಸಂಚಾರ ಸಾಗಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರದೊಂದಿಗೆ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದೊಂದಿಗೆ ಅಥವಾ ಯಾವುದೇ ಇತರ ದೇಶದ ಸರ್ಕಾರದೊಂದಿಗೆ ಮಾಡಿಕೊಂಡ ಯಾವುದೇ ಒಪ್ಪಂದವನ್ನು ಜಾರಿಗೊಳಿಸುವುದಕ್ಕೆ ಅಗತ್ಯವೆಂದು ಅಥವಾ ಯುಕ್ತವೆಂದು ರಾಜ್ಯ ಸರ್ಕಾರಕ್ಕೆ ತೋರುವಂಥ ಯಾವುದೇ ಇತರ ವಿಷಯದ ಬಗ್ಗೆ

- ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು:

ಪರಂತು, ಯಾವ ದಿನಾಂಕದಂದು ಅಥವಾ ಯಾವ ದಿನಾಂಕದ ತರುವಾಯ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಒಂದು ತಿಂಗಳಿಗೆ ಕಡಿಮೆಯಿಲ್ಲದಂತೆ, ಪ್ರಸ್ತಾವಿತ ಕರಡು ನಿರ್ದೇಶನಗಳನ್ನು ರಾಜಪತ್ರದಲ್ಲಿ ಪ್ರಕಟಿಸಿದ ಹೊರತು, (ii) ನೇ ಅಥವಾ (iii) ನೇ ಖಂಡದಲ್ಲಿ ಉಲ್ಲೇಖಿತವಾದ ವಿಷಯಗಳ ಸಂಬಂಧದಲ್ಲಿ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ ಮತ್ತು ಸ್ವೀಕರಿಸಬಹುದಾದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಯಾರ ಹಿತಾಸಕ್ತಿಗಳು ಬಾಧಿತವಾಗಿವೆಯೋ ಅವರ ಪ್ರತಿನಿಧಿಗಳಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ ರಾಜ್ಯ ಸಾರಿಗೆ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಪರಿಗಣಿಸಬೇಕು.

(2) ಮಜಲು ವಾಹನಗಳಿಗೆ, ಕರಾರು ವಾಹನಗಳಿಗೆ ಮತ್ತು ಸರಕು ವಾಹನಗಳಿಗೆ ಪ್ರಯಾಣದರ ಮತ್ತು ಸಾಗಣೆ ಬಾಡಿಗೆಯನ್ನು ನಿಗದಿಪಡಿಸುವುದಕ್ಕೆ ಸಂಬಂಧಪಟ್ಟಂತೆ (1) ನೇ ಉಪ ಪ್ರಕರಣದ ಮೇರೆಗಿನ ಯಾವುದೇ ನಿರ್ದೇಶನವು, ಮಜಲು ವಾಹನಗಳ, ಕರಾರು ವಾಹನಗಳ ಅಥವಾ ಸರಕು ವಾಹನಗಳ ನಿರ್ವಹಣೆಗಾರರಿಗೆ, ಪ್ರಯಾಣಿಕರು ಮತ್ತು ಸರಕುಗಳ ಮೇಲಣ ತೆರಿಗೆಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸಂದರ್ಭಾನುಸಾರ ಪ್ರಯಾಣಿಕರು ಅಥವಾ ಸರಕು ರವಾನೆದಾರರು ಸಂದಾಯ ಮಾಡತಕ್ಕ ತೆರಿಗೆಯನ್ನು ಒಳಗೊಂಡಿರತಕ್ಕದ್ದೆಂದು ಉಪಬಂಧಿಸಬಹುದು.

68. ಸಾರಿಗೆ ಪ್ರಾಧಿಕಾರಗಳು:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, (3) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯಕ್ಕಾಗಿ ಒಂದು ರಾಜ್ಯ ಸಾರಿಗೆ ಪ್ರಾಧಿಕಾರವನ್ನು ರಚಿಸತಕ್ಕದ್ದು ಮತ್ತು ಅದೇ ರೀತಿಯಲ್ಲಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳನ್ನು, ಅಂಥ ಪ್ರತಿಯೊಂದು

ಪ್ರಾಧಿಕಾರಕ್ಕೆ ಸಂಬಂಧಿಸಿದ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ (ಈ ಅಧ್ಯಾಯದಲ್ಲಿ ಪ್ರದೇಶಗಳೆಂದು ಉಲ್ಲೇಖಿತವಾಗುವ) ಪ್ರದೇಶಗಳ ಆದ್ಯಂತ ಅಂಥ ಪ್ರಾಧಿಕಾರಗಳಿಗೆ ಈ ಅಧ್ಯಾಯದಿಂದ ಅಥವಾ ಅದರ ಮೇರೆಗೆ ವಹಿಸಿಕೊಟ್ಟ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ರಚಿಸತಕ್ಕದ್ದು:

ಪರಂತು, ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ ಆಡಳಿತಗಾರನು ಯಾವುದೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವನ್ನು ರಚಿಸದಿರಬಹುದು.

(2) ರಾಜ್ಯ ಸಾರಿಗೆ ಪ್ರಾಧಿಕಾರವು ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ನ್ಯಾಯಿಕ ಅನುಭವವನ್ನು ಹೊಂದಿರುವ ಅಥವಾ ಅಪೀಲು ಅಥವಾ ಪುನರೀಕ್ಷಣಾ ಪ್ರಾಧಿಕಾರಿಯಾಗಿ ಅನುಭವ ಹೊಂದಿರುವ ಅಥವಾ ಯಾವುದೇ ಕಾನೂನಿನ ಮೇರೆಗೆ ಯಾವುದೇ ಆದೇಶವನ್ನು ಮಾಡಲು ಅಥವಾ ಯಾವುದೇ ನಿರ್ಣಯ ತೆಗೆದುಕೊಳ್ಳಲು ಸಕ್ಷಮ ನ್ಯಾಯ ನಿರ್ಣಯ ಪ್ರಾಧಿಕಾರಿಯಾಗಿರುವ ಅಧ್ಯಕ್ಷನನ್ನು ಮತ್ತು ರಾಜ್ಯ ಸರ್ಕಾರವು ನೇಮಕ ಮಾಡಲು ಯುಕ್ತವೆಂದು ಭಾವಿಸಬಹುದಾದಂತೆ ರಾಜ್ಯ ಸಾರಿಗೆ ಪ್ರಾಧಿಕಾರದ ಸಂದರ್ಭದಲ್ಲಿ ನಾಲ್ಕಕ್ಕೆ ಹೆಚ್ಚಾಗಿಲ್ಲದಷ್ಟು (ಅಧಿಕಾರಿಗಳಾಗಿರುವ ಅಥವಾ ಆಗಿಲ್ಲದಿರುವ) ಇತರ ವ್ಯಕ್ತಿಗಳನ್ನು ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಂದರ್ಭದಲ್ಲಿ ಇಬ್ಬರಿಗಿಂತ ಹೆಚ್ಚಾಗಿಲ್ಲದಷ್ಟು (ಅಧಿಕಾರಿಗಳಾಗಿರುವ ಅಥವಾ ಆಗಿಲ್ಲದಿರುವ) ಇತರ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು; ಆದರೆ ಯಾವುದೇ ಸಾರಿಗೆ ಉದ್ಯಮದಲ್ಲಿ ಮಾಲೀಕನಾಗಿ, ನೌಕರನಾಗಿ ಅಥವಾ ಅನ್ಯಥಾ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು, ರಾಜ್ಯದ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಪ್ರಾಧಿಕಾರದ ಸದಸ್ಯನಾಗಿರುವ ಯಾರೇ ವ್ಯಕ್ತಿಯು ಯಾವುದೇ ಸಾರಿಗೆ ಉದ್ಯಮದಲ್ಲಿ ಹಣಕಾಸಿನ ಹಿತಾಸಕ್ತಿಯನ್ನು ಆರ್ಜಿಸಿದರೆ, ಹಾಗೆ ಮಾಡಿದ ನಾಲ್ಕು ವಾರಗಳ ಒಳಗೆ ಅಂಥ ಹಿತಾಸಕ್ತಿಯ ಆರ್ಜನೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಲಿಖಿತ ನೋಟೀಸನ್ನು ನೀಡತಕ್ಕದ್ದು ಮತ್ತು ಪದವನ್ನು ಖಾಲಿ ಮಾಡತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಸಂದರ್ಭಾನುಸಾರ, ರಾಜ್ಯ ಸಾರಿಗೆ ಪ್ರಾಧಿಕಾರದ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸದಸ್ಯರಲ್ಲಿ ಯಾವೊಬ್ಬನು, ಅವನು ನ್ಯಾಯಿಕ ಅನುಭವವನ್ನು ಅಥವಾ ಅಪೀಲು ಅಥವಾ ಪುನರೀಕ್ಷಣಾ ಪ್ರಾಧಿಕಾರಿಯಾಗಿ ಅಥವಾ ಯಾವುದೇ ಕಾನೂನಿನ ಮೇರೆಗೆ ಯಾವುದೇ ಆದೇಶವನ್ನು ಮಾಡಲು ಅಥವಾ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ಸಕ್ಷಮವಾದ ನ್ಯಾಯ ನಿರ್ಣಯ ಪ್ರಾಧಿಕಾರಿಯಾಗಿ ಅನುಭವವನ್ನು ಹೊಂದಿರದಿದ್ದರೂ, ಅಧ್ಯಕ್ಷನ ಗೈರುಹಾಜರಿಯಲ್ಲಿ ಅಂಥ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತೂ ಪರಂತು, ರಾಜ್ಯ ಸರ್ಕಾರವು,-

(i) ನ್ಯಾಯಿಕ ಅನುಭವ ಹೊಂದಿರುವ ಅಥವಾ ಅಪೀಲು ಅಥವಾ ಪುನರೀಕ್ಷಣಾ ಪ್ರಾಧಿಕಾರಿಯಾಗಿ ಅಥವಾ ಯಾವುದೇ ಕಾನೂನಿನ ಮೇರೆಗೆ ಯಾವುದೇ ಆದೇಶವನ್ನು ಮಾಡಲು ಅಥವಾ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ಸಕ್ಷಮನಾದ ನ್ಯಾಯ ನಿರ್ಣಯ ಪ್ರಾಧಿಕಾರಿಯಾಗಿ ಅನುಭವ ಹೊಂದಿರುವ ಅಧಿಕಾರಿಯಾಗಿರುವ ಒಬ್ಬ ಸದಸ್ಯನಿಂದ ಮಾತ್ರ ಕೂಡಿರುವ ಹಾಗೆ ರಾಜ್ಯ ಸಾರಿಗೆ ಪ್ರಾಧಿಕಾರವನ್ನು ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವನ್ನು ಯಾವುದೇ ಪ್ರದೇಶಕ್ಕಾಗಿ ರಚಿಸುವುದು ಅವಶ್ಯ ಮತ್ತು ಯುಕ್ತವೆಂದು ಅದು ಪರಿಗಣಿಸಿದರೆ ಹಾಗೆ ರಚಿಸಬಹುದು;

(ii) ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ, ಅಧ್ಯಕ್ಷನ ಅಥವಾ ಯಾರೇ ಇತರ ಸದಸ್ಯನ ಗೈರು ಹಾಜರಿಯಲ್ಲಿ ಅಂಥ ಪ್ರಾಧಿಕಾರದ ವ್ಯವಹಾರದ ನಿರ್ವಹಣೆಗೆ ಉಪಬಂಧಿಸಬಹುದು ಮತ್ತು ಅಂಥ ವ್ಯವಹಾರವನ್ನು, ಯಾವ ಪರಿಸ್ಥಿತಿಗಳಲ್ಲಿ ಮತ್ತು ಯಾವ ರೀತಿಯಲ್ಲಿ ನಡೆಸಬಹುದೆಂಬುದನ್ನು ನಿರ್ದಿಷ್ಟಪಡಿಸಬಹುದು:

ಮತ್ತೂ ಅಲ್ಲದೆ, ಈ ಉಪ ಪ್ರಕರಣದಲ್ಲಿರುವುದು ಯಾವುದೂ, (ಸಾರಿಗೆ ಉದ್ಯಮದ ವ್ಯವಸ್ಥಾಪನೆಗೆ ಅಥವಾ ನಿರ್ವಹಣೆಗೆ ನೇರವಾಗಿ ಸಂಬಂಧಿಸಿಲ್ಲದ ಅಧಿಕಾರಿಯ ಹೊರತಾದ) ಅಧಿಕಾರಿಯನ್ನು, ಆ ಅಧಿಕಾರಿಯನ್ನು ನೇಮಿಸಿರುವ ಸರ್ಕಾರವು ಸಾರಿಗೆ ಉದ್ಯಮದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿದೆ ಅಥವಾ ಆರ್ಜಿಸಿದೆ ಎಂಬ ಕಾರಣ ಮಾತ್ರದಿಂದಲೇ ಅಂಥ ಪ್ರಾಧಿಕಾರದ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಮುಂದುವರಿಯಲು ತಡೆಯುವುದಾಗಿ ಅರ್ಥೈಸತಕ್ಕದ್ದಲ್ಲ.

(3) ರಾಜ್ಯ ಸಾರಿಗೆ ಪ್ರಾಧಿಕಾರವು ಮತ್ತು ಪ್ರತಿಯೊಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು 67 ನೇ ಪ್ರಕರಣದ ಮೇರೆಗೆ ನೀಡಿದ ಯಾವುವೇ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ರಾಜ್ಯ ಸಾರಿಗೆ ಪ್ರಾಧಿಕಾರವು, ಅಂಥ ನಿರ್ದೇಶನಗಳಿಗೆ ಒಳಪಟ್ಟು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು ಇಡೀ ರಾಜ್ಯದಲ್ಲಿ ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ರಾಜ್ಯದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳ ಕಾರ್ಯಕಲಾಪಗಳು ಮತ್ತು ಕಾರ್ಯನೀತಿಗಳು ಯಾವುವಾದರೂ ಇದ್ದರೆ, ಅವುಗಳ ಸಮನ್ವಯ ಮತ್ತು ನಿಯಂತ್ರಣ;

(ಬಿ) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಇಲ್ಲದಿರುವಲ್ಲಿ ಅಂಥ ಪ್ರಾಧಿಕಾರದ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ತಾನು ಸೂಕ್ತವೆಂದು ಭಾವಿಸಿದರೆ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಹಾಗೆ ಅಗತ್ಯಪಡಿಸಿದರೆ, ಎರಡು ಅಥವಾ ಹೆಚ್ಚು ಪ್ರದೇಶಗಳಿಗೆ ಸಾಮಾನ್ಯವಾದ ಯಾವುದೇ ಮಾರ್ಗಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವುದು;

(ಸಿ) ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳ ನಡುವೆ ಉದ್ಭವಿಸುವ ಎಲ್ಲಾ ವಿವಾದಗಳನ್ನು ಮತ್ತು ಯಾವ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದೋ ಆ ಎಲ್ಲಾ ವಿಷಯಗಳನ್ನು ತೀರ್ಮಾನಿಸುವುದು;

(ಸಿಎ) ಮಜಲು ವಾಹನಗಳನ್ನು ಓಡಿಸುವುದಕ್ಕಾಗಿ ಸರ್ಕಾರವು ಮಾರ್ಗಗಳನ್ನು ರೂಪಿಸುವುದು; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

(4) (3) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಧಿಕಾರಗಳನ್ನು ಚಲಾಯಿಸುವ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ರಾಜ್ಯ ಸಾರಿಗೆ ಪ್ರಾಧಿಕಾರವು, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಯಾವುದೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅವುಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು.

(5) ರಾಜ್ಯ ಸಾರಿಗೆ ಪ್ರಾಧಿಕಾರವು ಮತ್ತು ಯಾವುದೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, 96 ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಈ ಬಗ್ಗೆ ಅಧಿಕೃತಗೊಂಡಿದ್ದರೆ, ಸದರಿ ನಿಯಮಗಳ ಮೂಲಕ, ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ ಅಥವಾ ವ್ಯಕ್ತಿಗೆ, ಅಂಥ ನಿರ್ಬಂಧಗಳು, ಪರಿಮಿತಿಗಳು ಮತ್ತು ಷರತ್ತುಗಳಿಗೊಳಪಟ್ಟು, ತನ್ನಲ್ಲಿರುವ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

69. ಪರ್ಮಿಟ್ಟುಗಳ ಅರ್ಜಿಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧ:- ಪರ್ಮಿಟ್ಟಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು, ವಾಹನ ಅಥವಾ ವಾಹನಗಳನ್ನು ಉಪಯೋಗಿಸಲು ಉದ್ದೇಶಿಸಲಾಗಿರುವ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು:

ಪರಂತು, ಅರ್ಜಿಯನ್ನು ವಾಹನ ಅಥವಾ ವಾಹನಗಳನ್ನು ಒಂದೇ ರಾಜ್ಯದಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪ್ರದೇಶಗಳಲ್ಲಿ ಉಪಯೋಗಿಸಲು ಉದ್ದೇಶಿಸಿದ್ದರೆ, ಉದ್ದೇಶಿತ ಮಾರ್ಗ ಅಥವಾ ಕ್ಷೇತ್ರದ ಹೆಚ್ಚಿನ ಭಾಗವು ಯಾವ ಪ್ರದೇಶದಲ್ಲಿ ಬರುವುದೋ ಆ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಉದ್ದೇಶಿತ ಮಾರ್ಗದ ಅಥವಾ ಕ್ಷೇತ್ರದ ಭಾಗವು ಪ್ರತಿಯೊಂದು ಪ್ರದೇಶದಲ್ಲಿಯೂ ಸರಿ ಸುಮಾರಾಗಿ ಸಮಾನವಾಗಿರುವ ಸಂದರ್ಭದಲ್ಲಿ ಆ ವಾಹನ ಅಥವಾ ವಾಹನಗಳನ್ನು ಯಾವ ಪ್ರದೇಶದಲ್ಲಿ ಇಡಲು ಉದ್ದೇಶಿಸಲಾಗಿದೆಯೋ, ಆ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು:

ಮತ್ತೂ ಪರಂತು, ವಾಹನ ಅಥವಾ ವಾಹನಗಳನ್ನು ವಿಭಿನ್ನ ರಾಜ್ಯಗಳಲ್ಲಿ ಇರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪ್ರದೇಶಗಳಲ್ಲಿ ಉಪಯೋಗಿಸಲು ಉದ್ದೇಶಿಸಿದ್ದರೆ, ಅರ್ಜಿಯನ್ನು, ಅರ್ಜಿದಾರನು ವಾಸಿಸುವ ಅಥವಾ ತನ್ನ ವ್ಯವಹಾರದ ಮುಖ್ಯ ಸ್ಥಳವನ್ನು ಹೊಂದಿರುವ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) (1) ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಯಾವುದೇ ವಾಹನ ಅಥವಾ ವಾಹನಗಳನ್ನು ವಿಭಿನ್ನ ರಾಜ್ಯಗಳಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪ್ರದೇಶಗಳಲ್ಲಿ ಉಪಯೋಗಿಸಲು ಉದ್ದೇಶಿಸಿರುವ ಸಂದರ್ಭದಲ್ಲಿ, ಆ ಉಪ ಪ್ರಕರಣದ ಮೇರೆಗಿನ ಅರ್ಜಿಯನ್ನು ಅರ್ಜಿದಾರನು ವಾಸಿಸುವ ಅಥವಾ ಅವನ ವ್ಯವಹಾರದ ಮುಖ್ಯ ಸ್ಥಳವನ್ನು ಹೊಂದಿರುವ ಪ್ರದೇಶದ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದೆಂದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

70. ಮಜಲು ವಾಹನದ ಪರ್ಮಿಟ್ಟಿಗಾಗಿ ಅರ್ಜಿ:- (1) (ಈ ಅಧ್ಯಾಯದಲ್ಲಿ ಮಜಲು ವಾಹನದ ಪರ್ಮಿಟ್ಟು ಎಂದು ಉಲ್ಲೇಖಿತವಾಗುವ) ಮಜಲು ವಾಹನಕ್ಕೆ ಅಥವಾ ಮೀಸಲು ಮಜಲು ವಾಹನಕ್ಕೆ ಸಂಬಂಧಿಸಿದ ಪರ್ಮಿಟ್ಟಿಗೆ ಸಲ್ಲಿಸುವ ಅರ್ಜಿಯು ಆದಷ್ಟು ಮಟ್ಟಿಗೆ ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಅರ್ಜಿಗೆ ಸಂಬಂಧಿಸಿದ ಮಾರ್ಗ ಅಥವಾ ಮಾರ್ಗಗಳು ಅಥವಾ ಕ್ಷೇತ್ರ ಅಥವಾ ಕ್ಷೇತ್ರಗಳು;

(ಬಿ) ಅಂಥ ಪ್ರತಿಯೊಂದು ವಾಹನದ ಮಾದರಿ ಮತ್ತು ಸ್ಥಳಾವಕಾಶ;

(ಸಿ) ಒದಗಿಸಲು ಉದ್ದೇಶಿಸಿದ ದೈನಂದಿನ ಕನಿಷ್ಠ ಮತ್ತು ಗರಿಷ್ಠ ಟ್ರಿಪ್ಪುಗಳ ಸಂಖ್ಯೆ ಮತ್ತು ಸಾಧಾರಣ ಟ್ರಿಪ್ಪುಗಳ ವೇಳಾ ಪಟ್ಟಿ;

ವಿವರಣೆ:- ಈ ಪ್ರಕರಣದ, 72 ನೇ ಪ್ರಕರಣ, 80 ನೇ ಪ್ರಕರಣ ಮತ್ತು 102 ನೇ ಪ್ರಕರಣ - ಇವುಗಳ ಉದ್ದೇಶಗಳಿಗಾಗಿ "ಟ್ರಿಪ್ಪು" ಎಂದರೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗುವ ಏಕ ಮುಖ ಪ್ರಯಾಣ ಮತ್ತು ಪ್ರತಿಯೊಂದು ಮರುಪ್ರಯಾಣವನ್ನು ಪ್ರತ್ಯೇಕ ಟ್ರಿಪ್ಪು ಎಂದು ಭಾವಿಸತಕ್ಕದ್ದು;

(ಡಿ) ಸಾರಿಗೆ ಸೇವೆಯನ್ನು ನಿರ್ವಹಿಸಲು ಮತ್ತು ವಿಶೇಷ ಸಂದರ್ಭಗಳಿಗಾಗಿ ವ್ಯವಸ್ಥೆ ಮಾಡಲು ಮೀಸಲಿಡಲು ಉದ್ದೇಶಿಸಿದ ವಾಹನಗಳ ಸಂಖ್ಯೆ;

(ಇ) ವಾಹನಗಳನ್ನು ನಿಲ್ಲಿಸುವ ಸ್ಥಳ, ಅವುಗಳ ನಿರ್ವಹಣೆ ಮತ್ತು ದುರಸ್ತಿ, ಪ್ರಯಾಣಿಕರ ಸೌಕರ್ಯ ಮತ್ತು ಅನುಕೂಲ ಮತ್ತು ಸಾಮಾನುಗಳ ದಾಸ್ತಾನು ಮತ್ತು ಸುರಕ್ಷೆ - ಇವುಗಳಿಗಾಗಿ ಮಾಡಲು ಉದ್ದೇಶಿಸಿದ ವ್ಯವಸ್ಥೆಗಳು;

(ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳು.

(2) (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಗೆ ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು ಲಗತ್ತಿಸತಕ್ಕದ್ದು.

71. ಮಜಲು ವಾಹನದ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುವಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ:- (1) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮಜಲು ವಾಹನದ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುವಾಗ ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು:

[ಪರಂತು x x x x ]

(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದಕ್ಕೆ ಒದಗಿಸಲಾದ ಯಾವುದೇ ವೇಳಾ ಪಟ್ಟಿಯಿಂದ, ವಾಹನಗಳನ್ನು ನಡೆಸಬೇಕಾದಂಥ ವೇಗಕ್ಕೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಸಂಭವವಿದೆ ಎಂದು ಕಂಡು ಬಂದರೆ, ಮಜಲು ವಾಹನದ ಪರ್ಮಿಟ್ಟನ್ನು ನೀಡಲು ನಿರಾಕರಿಸತಕ್ಕದ್ದು:

ಪರಂತು, ಅಂಥ ನಿರಾಕರಣೆಗೆ ಮುಂಚೆ, ಸದರಿ ಉಪಬಂಧಗಳಿಗೆ ಅನುಗುಣವಾಗಿ ವೇಳಾ ಪಟ್ಟಿಯನ್ನು ತಿದ್ದುಪಡಿ ಮಾಡಲು ಅರ್ಜಿದಾರನಿಗೆ ಅವಕಾಶವನ್ನು ಕೊಡತಕ್ಕದ್ದು.

(3) (ಎ) ರಾಜ್ಯ ಸರ್ಕಾರವು, ವಾಹನಗಳ ಸಂಖ್ಯೆ, ರಸ್ತೆಯ ಸ್ಥಿತಿಗತಿ ಮತ್ತು ಇತರ ಸಂಬಂಧಪಟ್ಟ ವಿಷಯಗಳನ್ನು ಗಮನಿಸಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿಗದಿಪಡಿಸಿ ನಿರ್ದಿಷ್ಟಪಡಿಸಬಹುದಾದಂತೆ ಐದು ಲಕ್ಷಗಳಿಗಿಂತ ಕಡಿಮೆಯಿಲ್ಲದ ಜನಸಂಖ್ಯೆಯಿರುವ ಪಟ್ಟಣಗಳಲ್ಲಿನ ನಗರ ಮಾರ್ಗಗಳಲ್ಲಿ ಓಡಾಡುವ, ಸಾಮಾನ್ಯವಾಗಿ ಮಜಲು ವಾಹನಗಳ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಮಾದರಿಯ ವಾಹನಗಳ ಸಂಖ್ಯೆಯನ್ನು ಮಿತಿಗೊಳಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ನಿರ್ದೇಶಿಸತಕ್ಕದ್ದೆಂದು ನಿರ್ದೇಶಿಸಿದರೆ ಹಾಗೆ ಮಾಡತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಮಜಲು ವಾಹನಗಳ ಸಂಖ್ಯೆಯನ್ನು ನಿಗದಿಪಡಿಸಿರುವಲ್ಲಿ, ಆ ರಾಜ್ಯ ಸರ್ಕಾರವು, ರಾಜ್ಯದಲ್ಲಿ ಸರ್ಕಾರಿ ಸೇವೆಗಳಿಗೆ ನೇರ ನೌಕರಿ ಭರ್ತಿಯ ಮೂಲಕ ಮಾಡುವ ನೇಮಕಾತಿಗಳ ಸಂದರ್ಭದಲ್ಲಿ ಹೇಗೋ ಹಾಗೆ ಅದೇ ಪ್ರಮಾಣದಲ್ಲಿ ಆ ರಾಜ್ಯದಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮಜಲು ವಾಹನದ ಪರ್ಮಿಟ್ಟುಗಳಲ್ಲಿ ನಿರ್ದಿಷ್ಟ ಶೇಕಡಾವಾರನ್ನು ಮೀಸಲಿಡತಕ್ಕದ್ದು.

(ಸಿ) (ಎ) ಖಂಡದ ಮೇರೆಗೆ ಮಜಲು ವಾಹನಗಳ ಸಂಖ್ಯೆಯನ್ನು ನಿಗದಿಪಡಿಸಿರುವಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ (ಬಿ)ಖಂಡದ ಮೇರೆಗೆ ರಾಜ್ಯ ಸರ್ಕಾರವು ನಿಗಡಿಪಡಿಸಬಹುದಾದಂಥ ಸಂಖ್ಯೆಯ ಪರ್ಮಿಟ್ಟುಗಳನ್ನು ಮೀಸಲಿಡತಕ್ಕದ್ದು.

(ಡಿ) (ಸಿ) ಖಂಡದಲ್ಲಿ ಉಲ್ಲೇಖಿಸಲಾದಂಥ ಸಂಖ್ಯೆಯ ಪರ್ಮಿಟ್ಟುಗಳನ್ನು ಮೀಸಲಿಟ್ಟ ತರುವಾಯ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಅರ್ಜಿಯನ್ನು ಪರಿಶೀಲಿಸುವಾಗ, ಈ ಕೆಳಕಂಡ ವಿಷಯಗಳನ್ನು ಗಮನಿಸತಕ್ಕದ್ದು, ಎಂದರೆ:-

(i) ಅರ್ಜಿದಾರನ ಆರ್ಥಿಕ ಸ್ಥಿತಿಗತಿ;

(ii) ಅರ್ಜಿದಾರನು ಮಜಲು ವಾಹನದ ನಿರ್ವಾಹಕನಾಗಿರುವಲ್ಲಿ ಅಥವಾ ನಿರ್ವಾಹಕನಾಗಿದ್ದಿರುವಲ್ಲಿ ತೆರಿಗೆಯ ಸಂದಾಯವೂ ಸೇರಿದಂತೆ ಮಜಲು ವಾಹನದ ನಿರ್ವಾಹಕನಾಗಿ ಅವನ ಕಾರ್ಯವು ತೃಪ್ತಿಕರವಾಗಿರುವುದು; ಮತ್ತು

(iii) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಇತರ ವಿಷಯಗಳು:

ಪರಂತು, ಇತರ ಪರಿಸ್ಥಿತಿಗಳು ಸಮಾನವಾಗಿರುವಲ್ಲಿ,-

(i) ರಾಜ್ಯ ಸಾರಿಗೆ ಉದ್ಯಮಗಳು;

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿವೆ ಎಂದು ಭಾವಿಸಲಾದ ಸಹಕಾರ ಸಂಘಗಳು; [x x x]

(iii) ಮಾಜಿ ಸೈನಿಕರು; ಅಥವಾ

(iv) ರಾಜ್ಯ ಸರ್ಕಾರವು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಅವಶ್ಯವೆಂದು ಪರಿಗಣಿಸಬಹುದಾದಂಥ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳು

- ಇವರು ಪರ್ಮಿಟ್ಟಿಗಾಗಿ ಸಲ್ಲಿಸಿದ ಅರ್ಜಿಗಳಿಗೆ ಆದ್ಯತೆ ನೀಡತಕ್ಕದ್ದು.

[(4) x x x x]

[(5) x x x x]

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮು ಅಥವಾ ಇತರ ವ್ಯಕ್ತಿಗಳ ಸಂಘ; ಮತ್ತು ಒಂದು ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

72. ಮಜಲು ವಾಹನದ ಪರ್ಮಿಟ್ಟಿನ ನೀಡಿಕೆ:- (1) 71ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, 70ನೇ ಪ್ರಕರಣದ ಮೇರೆಗೆ ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಆ ಅರ್ಜಿಗೆ ಅನುಸಾರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಮಾಡಿ ಮಜಲು ವಾಹನದ ಪರ್ಮಿಟ್ಟನ್ನು ನೀಡಬಹುದು ಅಥವಾ ಅಂಥ ಪರ್ಮಿಟ್ಟನ್ನು ನೀಡಲು ನಿರಾಕರಿಸಬಹುದು:

ಪರಂತು, ಆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರದ ಯಾವುದೇ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಅಂಥ ಯಾವುದೇ ಪರ್ಮಿಟ್ಟನ್ನು ನೀಡತಕ್ಕದ್ದಲ್ಲ.

(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಮಜಲು ವಾಹನದ ಪರ್ಮಿಟ್ಟನ್ನು ನೀಡಲು ತೀರ್ಮಾನಿಸಿದರೆ, ಅದು ನಿರ್ದಿಷ್ಟ ವಿವರಣೆಯ ಮಜಲು ವಾಹನಕ್ಕೆ ಪರ್ಮಿಟ್ಟನ್ನು ನೀಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು ಈ ಕೆಳಕಂಡ ಷರತ್ತುಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ಷರತ್ತುಗಳನ್ನು ಆ ಪರ್ಮಿಟ್ಟಿಗೆ ಲಗತ್ತಿಸಬಹುದು, ಎಂದರೆ:-

(i) ವಾಹನಗಳನ್ನು ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ಮಾರ್ಗ ಅಥವಾ ಮಾರ್ಗಗಳಲ್ಲಿ ಮಾತ್ರ ಉಪಯೋಗಿಸತಕ್ಕದ್ದು;

(ii) ಮಜಲು ವಾಹನದ ಓಡಾಟವನ್ನು ನಿರ್ದಿಷ್ಟ ದಿನಾಂಕದಿಂದ ಪ್ರಾರಂಭಿಸತಕ್ಕದ್ದು;

(iii) ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ದಿನಗಳು ಮತ್ತು ಸಂದರ್ಭಗಳಲ್ಲಿ ಯಾವುದೇ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಏರ್ಪಡಿಸುವ ದೈನಿಕ ಟ್ರಿಪ್ಪುಗಳ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆ;

(iv) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅನುಮೋದಿಸಿದ ಮಜಲು ವಾಹನದ ವೇಳಾಪಟ್ಟಿಯ ಪ್ರತಿಗಳನ್ನು ವಾಹನಗಳ ಮೇಲೆ ಮತ್ತು ಮಾರ್ಗದಲ್ಲಿ ಅಥವಾ ಕ್ಷೇತ್ರದಲ್ಲಿ ನಿರ್ದಿಷ್ಟಪಡಿಸಿದ ನಿಲ್ದಾಣಗಳಲ್ಲಿ ಮತ್ತು ನಿಲುಗಡೆಗಳಲ್ಲಿ ಪ್ರದರ್ಶಿಸತಕ್ಕದ್ದು;

(v) ಮಜಲು ವಾಹನವನ್ನು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಅನುಮೋದಿತ ವೇಳಾಪಟ್ಟಿಯ ಮಾರ್ಗಾಂತರಣ ಮಿತಿಗಳೊಳಗೆ ಓಡಾಡಿಸತಕ್ಕದ್ದು;

(vi) ಪೌರಸಭೆಯ ಮಿತಿಗಳು ಮತ್ತು ನಿಯಮಿಸಬಹುದಾದಂಥ ಇತರ ಕ್ಷೇತ್ರಗಳು ಮತ್ತು ಸ್ಥಳಗಳೊಳಗೆ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಹೊರತು, ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಹತ್ತಿಸಿಕೊಳ್ಳತಕ್ಕದ್ದಲ್ಲ ಅಥವಾ ಇಳಿಸತಕ್ಕದ್ದಲ್ಲ;

(vii) ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ಸಂದರ್ಭಗಳಲ್ಲಿ ಅಥವಾ ನಿರ್ದಿಷ್ಟ ಸಮಯಗಳಲ್ಲಿ ಮತ್ತು ಕಾಲಗಳಲ್ಲಿ ಮಜಲು ವಾಹನದಲ್ಲಿ ಒಯ್ಯಬಹುದಾದ ಪ್ರಯಾಣಿಕರ ಗರಿಷ್ಠ ಸಂಖ್ಯೆ ಮತ್ತು ಸಾಮಾನುಗಳ ಗರಿಷ್ಠ ತೂಕ;

(viii) ಉಚಿತವಾಗಿ ಒಯ್ಯತಕ್ಕ ಪ್ರಯಾಣಿಕರ ಸಾಮಾನುಗಳ ತೂಕ ಮತ್ತು ಸ್ವರೂಪ ಪ್ರತಿಯೊಬ್ಬ ಪ್ರಯಾಣಿಕನಿಗೆ ಸಂಬಂಧಿಸಿ ಒಯ್ಯಬಹುದಾದ ಸಾಮಾನಿನ ಒಟ್ಟು ತೂಕ ಮತ್ತು ಪ್ರಯಾಣಿಕರಿಗೆ ಅನಾನುಕೂಲ ಉಂಟು ಮಾಡದೆ ಸಾಮಾನುಗಳನ್ನು ಒಯ್ಯಲು ಒದಗಿಸತಕ್ಕ ವ್ಯವಸ್ಥೆಗಳು;

(ix) ಉಚಿತ ಪ್ರಯಾಣಕ್ಕೆ ಮೀರಿದ ಪ್ರಯಾಣಿಕರ ಸಾಮಾನುಗಳ ಮೇಲೆ ವಿಧಿಸಬಹುದಾದ ಚಾರ್ಜಿನ ದರ;

(x) ಅನುಮೋದಿತ ವಿಶಿಷ್ಟ ವಿವರಣೆಯ ಒಡಲನ್ನು ಜೋಡಿಸಿರತಕ್ಕ ನಿರ್ದಿಷ್ಟ ಬಗೆಯ ವಾಹನಗಳನ್ನು ಉಪಯೋಗಿಸುವುದು:

ಪರಂತು, ಪರ್ಮಿಟ್ಟಿಗೆ ಈ ಷರತ್ತಿನ ಜೋಡಣೆಯು, ಅನುಮೋದಿತ ವಿಶಿಷ್ಟ ವಿವರಣೆಗಳ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಆ ದಿನಾಂಕದಂದು ಓಡಾಡುತ್ತಿರುವ ಯಾವುದೇ ವಾಹನದ ಉಪಯೋಗದ ಮುಂದುವರಿಕೆಯನ್ನು ತಡೆಯತಕ್ಕದ್ದಲ್ಲ;

(xi) ನಿರ್ದಿಷ್ಟಪಡಿಸಿದ ಗುಣಮಟ್ಟದ ಸೌಕರ್ಯ ಮತ್ತು ನೈರ್ಮಲ್ಯವನ್ನು ವಾಹನಗಳಲ್ಲಿ ಒದಗಿಸತಕ್ಕದ್ದು;

(xii) ಯಾವ ಷರತ್ತುಗಳಿಗೊಳಪಟ್ಟು ಯಾವುದೇ ಮಜಲು ವಾಹನದಲ್ಲಿ ಪ್ರಯಾಣಿಕರೊಂದಿಗೆ ಅಥವಾ ಪ್ರಯಾಣಿಕರಿಲ್ಲದೆ ಸರಕುಗಳನ್ನು ಸಾಗಿಸಬಹುದೋ ಆ ಷರತ್ತುಗಳು;

(xiii) ಪ್ರಯಾಣದ ಹಾಸಲುಗಳನ್ನು ಅನುಮೋದಿತ ಹಾಸಲು ಪಟ್ಟಿಗನುಸಾರವಾಗಿ ವಿಧಿಸತಕ್ಕದ್ದು;

(xiv) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅನುಮೋದಿಸಿದ ಹಾಸಲು ಪಟ್ಟಿಯ ಒಂದು ಪ್ರತಿಯನ್ನು ಅಥವಾ ಅದರ ಎತ್ತಿಕೊಂಡ ಭಾಗವನ್ನು ಮತ್ತು ವಿಶಿಷ್ಟ ಸಂದರ್ಭಗಳಿಗಾಗಿ ಅನುಮೋದಿತವಾದ ಯಾವುವೇ ವಿಶೇಷ ಹಾಸಲುಗಳ ಅಥವಾ ಹಾಸಲು ದರಗಳ ವಿವರಗಳನ್ನು ಮಜಲು ವಾಹನದಲ್ಲಿ ಮತ್ತು ನಿರ್ದಿಷ್ಟ ನಿಲ್ದಾಣಗಳು ಮತ್ತು ನಿಲುಗಡೆಗಳಲ್ಲಿ ಪ್ರದರ್ಶಿಸತಕ್ಕದ್ದು;

(xv) ನಿರ್ದಿಷ್ಟಪಡಿಸಿದ ವಿವರಗಳನ್ನು ಹೊಂದಿರುವ ಟಿಕೆಟ್ಟುಗಳನ್ನು ಪ್ರಯಾಣಿಕರಿಗೆ ನೀಡತಕ್ಕದ್ದು ಮತ್ತು ಅವು ವಾಸ್ತವವಾಗಿ ವಿಧಿಸಿದ ಹಾಸಲುಗಳನ್ನು ತೋರಿಸತಕ್ಕದ್ದು ಮತ್ತು ನೀಡಿದ ಟಿಕೆಟ್ಟುಗಳ ದಾಖಲೆಯನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಇಡತಕ್ಕದ್ದು;

(xvi) ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು (ಟಪಾಲನ್ನು ಒಯ್ಯುವ ಸಮಯ ಮತ್ತು ವಿಧಿಸಬಹುದಾದ ಚಾರ್ಜುಗಳಿಗೆ ಸಂಬಂಧಿಸಿದ ಷರತ್ತುಗಳೂ ಸೇರಿ) ವಾಹನದಲ್ಲಿ ಟಪಾಲನ್ನು ಒಯ್ಯತಕ್ಕದ್ದು;

(xvii) ಓಡಾಟವನ್ನು ನಿರ್ವಹಿಸಲು ಮತ್ತು ವಿಶೇಷ ಸಂದರ್ಭಗಳಲ್ಲಿ ಓಡಾಟದ ವ್ಯವಸ್ಥೆ ಮಾಡಲು ಪರ್ಮಿಟ್ಟು ಧಾರಕನು ಮೀಸಲಿಡಬೇಕಾದ ವಾಹನಗಳು;

(xviii) ಯಾವ ಷರತ್ತಿಗೆ ಒಳಪಟ್ಟು, ವಾಹನವನ್ನು ಕರಾರು ವಾಹನವನ್ನಾಗಿ ಉಪಯೋಗಿಸಬಹುದೋ ಆ ಷರತ್ತುಗಳು;

(xix) ವಾಹನಗಳಿಗೆ ಸ್ಥಳ ವ್ಯವಸ್ಥೆ, ಅವುಗಳ ನಿರ್ವಹಣೆ ಮತ್ತು ದುರಸ್ತಿಯ ಬಗ್ಗೆ ಮಾಡತಕ್ಕ ನಿರ್ದಿಷ್ಟ ವ್ಯವಸ್ಥೆಗಳು;

(xx) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ವ್ಯವಸ್ಥೆ ಮಾಡಿರುವ ಯಾವುದೇ ನಿರ್ದಿಷ್ಟ ಬಸ್ ನಿಲ್ದಾಣ ಅಥವಾ ಆಸರೆಯನ್ನು ಉಪಯೋಗಿಸತಕ್ಕದ್ದು ಮತ್ತು ಅಂಥ ಉಪಯೋಗಕ್ಕೆ ನಿರ್ದಿಷ್ಟ ಬಾಡಿಗೆ ಅಥವಾ ಫೀಜನ್ನು ಸಂದಾಯ ಮಾಡತಕ್ಕದ್ದು;

(xxi) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಯ ಹೊರತು, ಪರ್ಮಿಟ್ಟಿನ ಷರತ್ತುಗಳನ್ನು ಉಲ್ಲಂಘಿಸತಕ್ಕದ್ದಲ್ಲ;

(xxii) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಒಂದು ತಿಂಗಳಿಗೆ ಕಡಿಮೆಯಿಲ್ಲದ ನೋಟೀಸು ಕೊಟ್ಟ ತರುವಾಯ,-

(ಎ) ಪರ್ಮಿಟ್ಟಿನ ಷರತ್ತುಗಳನ್ನು ಬದಲಾಯಿಸಬಹುದು;

(ಬಿ) ಮತ್ತಷ್ಟು ಷರತ್ತುಗಳನ್ನು ಪರ್ಮಿಟ್ಟಿಗೆ ಲಗತ್ತಿಸಬಹುದು:

ಪರಂತು, (1) ನೇ ಖಂಡದ ಅನುಸರಣೆಯಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಮೂಲ ಮಾರ್ಗದಲ್ಲಿ ಒಳಗೊಂಡ ದೂರವನ್ನು 24 ಕಿಲೋಮೀಟರುಗಳಿಗಿಂತ ಅಧಿಕವಾಗುವ ಹಾಗೆ ಬದಲಾಯಿಸತಕ್ಕದ್ದಲ್ಲ ಮತ್ತು ಅಂಥ ಮಿತಿಗಳೊಳಗಿನ ಯಾವುದೇ ಬದಲಾವಣೆಯನ್ನು ಅಂಥ ಬದಲಾವಣೆಯು ಸಾರ್ವಜನಿಕರಿಗೆ ಅನುಕೂಲವಾಗುವುದೆಂದು ಮತ್ತು ಹಾಗೆ ಬದಲಾಯಿಸಿದ ಮೂಲ ಮಾರ್ಗಕ್ಕೆ ಅಥವಾ ಅದರ ಭಾಗಕ್ಕೆ ಸಂಬಂಧಿಸಿ ಒಂದು ಪ್ರತ್ಯೇಕ ಪರ್ಮಿಟ್ಟನ್ನು ನೀಡುವುದು ಯುಕ್ತವಲ್ಲವೆಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಮನದಟ್ಟಾದ ತರುವಾಯ ಮಾತ್ರವೇ ಮಾಡತಕ್ಕದ್ದು;

(xxiii) ಪರ್ಮಿಟ್ಟುಧಾರಕನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಿಯತಕಾಲಿಕ ವಿವರಣ ಪಟ್ಟಿಕೆಗಳು, ಅಂಕಿ ಅಂಶಗಳು ಮತ್ತು ಇತರ ಮಾಹಿತಿಯನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು;

(xxiv) ನಿಯಮಿಸಬಹುದಾದ ಯಾವುದೇ ಇತರ ಷರತ್ತುಗಳು.

73. ಕರಾರು ವಾಹನದ ಪರ್ಮಿಟ್ಟಿಗೆ ಅರ್ಜಿ:- (ಈ ಅಧ್ಯಾಯದಲ್ಲಿ ಕರಾರು ವಾಹನದ ಪರ್ಮಿಟ್ಟು ಎಂದು ಉಲ್ಲೇಖಿಸಲಾಗುವ) ಕರಾರು ವಾಹನಕ್ಕೆ ಸಂಬಂಧಿಸಿದ ಪರ್ಮಿಟ್ಟಿಗೆ ಸಲ್ಲಿಸುವ ಅರ್ಜಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ವಾಹನದ ಮಾದರಿ ಮತ್ತು ಆಸನಾವಕಾಶ;

(ಬಿ) ಪರ್ಮಿಟ್ಟು ಯಾವ ಕ್ಷೇತ್ರಕ್ಕೆ ಅವಶ್ಯವಾಗಿದೆಯೋ ಆ ಕ್ಷೇತ್ರ;

(ಸಿ) ನಿಯಮಿಸಬಹುದಾದಂಥ ಯಾವುವೇ ಇತರ ವಿವರಗಳು.

74. ಕರಾರು ವಾಹನದ ಪರ್ಮಿಟ್ಟು ನೀಡಿಕೆ:- (1) (3) ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು 73 ನೇ ಪ್ರಕರಣದ ಮೇರೆಗೆ ಅದಕ್ಕೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಆ ಅರ್ಜಿಗನುಸಾರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟು ಮಾಡಿ ಕರಾರು ವಾಹನದ ಪರ್ಮಿಟ್ಟನ್ನು ನೀಡಬಹುದು ಅಥವಾ ಅಂಥ ಪರ್ಮಿಟ್ಟನ್ನು ನೀಡಲು ನಿರಾಕರಿಸಬಹುದು:

ಪರಂತು, ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿ ಪರ್ಮಿಟ್ಟನ್ನು ನೀಡತಕ್ಕದ್ದಲ್ಲ.

(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಕರಾರು ವಾಹನದ ಪರ್ಮಿಟ್ಟನ್ನು ನೀಡಲು ನಿರ್ಧರಿಸಿದರೆ, ಅದು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು ಆ ಪರ್ಮಿಟ್ಟಿಗೆ ಈ ಕೆಳಕಂಡ ಷರತ್ತುಗಳ ಪೈಕಿ ಯಾವುದೇ ಒಂದು ಅಥವಾ ಹೆಚ್ಚಿನ ಷರತ್ತುಗಳನ್ನು ಲಗತ್ತಿಸಬಹುದು, ಎಂದರೆ:-

(i) ವಾಹನಗಳನ್ನು ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ಮಾರ್ಗ ಅಥವಾ ಮಾರ್ಗಗಳಲ್ಲಿ ಮಾತ್ರ ಉಪಯೋಗಿಸತಕ್ಕದ್ದು;

(ii) ನಿರ್ದಿಷ್ಟ ಷರತ್ತುಗಳಿಗನುಸಾರವಾಗಿ ಹೊರತು, ಅಸ್ತಿತ್ವದಲ್ಲಿರುವ ಕರಾರಿನ ವಿಸ್ತರಣೆ ಅಥವಾ ಮಾರ್ಪಾಟನ್ನುಳಿದು ನಿರ್ದಿಷ್ಟಪಡಿಸಿದ ಕ್ಷೇತ್ರದ ಹೊರಗೆ ಯಾವುದೇ ಬಾಡಿಗೆ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(iii) ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ಸಂದರ್ಭಗಳಲ್ಲಿ ಅಥವಾ ನಿರ್ದಿಷ್ಟ ಸಮಯಗಳಲ್ಲಿ ಮತ್ತು ಕಾಲಗಳಲ್ಲಿ ವಾಹನಗಳಲ್ಲಿ ಒಯ್ಯಬಹುದಾದ ಪ್ರಯಾಣಿಕರ ಗರಿಷ್ಠ ಸಂಖ್ಯೆ ಮತ್ತು ಸಾಮಾನುಗಳ ಗರಿಷ್ಠ ತೂಕ;

(iv) ಯಾವ ಷರತ್ತುಗಳಿಗೆ ಒಳಪಟ್ಟು, ಯಾವುದೇ ಕರಾರು ವಾಹನದಲ್ಲಿ ಪ್ರಯಾಣಿಕರೊಂದಿಗೆ ಅಥವಾ ಪ್ರಯಾಣಿಕರಿಲ್ಲದೆ ಸರಕುಗಳನ್ನು ಸಾಗಿಸಬಹುದೋ ಆ ಷರತ್ತುಗಳು;

(v) ಮೋಟಾರು ಕ್ಯಾಬ್‌ಗಳ ಸಂದರ್ಭದಲ್ಲಿ, ನಿರ್ದಿಷ್ಟಪಡಿಸಿದ ಹಾಸಲುಗಳು ಅಥವಾ ಹಾಸಲು ದರಗಳನ್ನು ವಿಧಿಸತಕ್ಕದ್ದು ಮತ್ತು ಹಾಸಲು ಪಟ್ಟಿಯ ಒಂದು ಪ್ರತಿಯನ್ನು ವಾಹನದಲ್ಲಿ ಪ್ರದರ್ಶಿಸತಕ್ಕದ್ದು;

(vi) ಮೋಟಾರು ಕ್ಯಾಬ್‌ಗಳನ್ನು ಹೊರತುಪಡಿಸಿ ಇತರ ವಾಹನಗಳ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಮಿತಿಯನ್ನು ಮೀರದ ಬಾಡಿಗೆಯ ನಿರ್ದಿಷ್ಟ ದರಗಳನ್ನು ವಿಧಿಸತಕ್ಕದ್ದು;

(vii) ಮೋಟಾರು ಕ್ಯಾಬ್‌ಗಳ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ತೂಕದ ಪ್ರಯಾಣಿಕರ ಸಾಮಾನುಗಳನ್ನು ಚಾರ್ಜು ಇಲ್ಲದೆಯೇ ಒಯ್ಯತಕ್ಕದ್ದು ಮತ್ತು ಅದಕ್ಕಿಂತ ಹೆಚ್ಚಿನ ಯಾವುದೇ ಸಾಮಾನು ಇದ್ದಲ್ಲಿ ಅದರ ಚಾರ್ಜು ನಿರ್ದಿಷ್ಟಪಡಿಸಿದ ದರದಲ್ಲಿರತಕ್ಕದ್ದು;

(viii) ಮೋಟಾರು ಕ್ಯಾಬ್‌ಗಳ ಸಂದರ್ಭದಲ್ಲಿ ಟ್ಯಾಕ್ಸಿ ಮೀಟರನ್ನು ನಿಯಮಿಸಲಾಗಿದ್ದರೆ ಅದನ್ನು ಜೋಡಿಸಿ ಸೂಕ್ತ ಕಾರ್ಯಸ್ಥಿತಿಯಲ್ಲಿ ಇಡತಕ್ಕದ್ದು;

(ix) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಒಂದು ತಿಂಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ತರುವಾಯ,-

(ಎ) ಪರ್ಮಿಟ್ಟಿನ ಷರತ್ತುಗಳನ್ನು ಬದಲಾಯಿಸಬಹುದು;

(ಬಿ) ಆ ಪರ್ಮಿಟ್ಟಿಗೆ ಮತ್ತಷ್ಟು ಷರತ್ತುಗಳನ್ನು ಲಗತ್ತಿಸಬಹುದು;

(x) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಯ ಹೊರತು ಪರ್ಮಿಟ್ಟಿನ ಷರತ್ತುಗಳನ್ನು ಉಲ್ಲಂಘಿಸತಕ್ಕದ್ದಲ್ಲ;

(xi) ನಿರ್ದಿಷ್ಟಪಡಿಸಿದ ಗುಣಮಟ್ಟದ ಸೌಕರ್ಯ ಮತ್ತು ನೈರ್ಮಲ್ಯವನ್ನು ವಾಹನಗಳಲ್ಲಿ ಒದಗಿಸತಕ್ಕದ್ದು;

(xii) ಅಪವಾದಾತ್ಮಕ ಸ್ವರೂಪದ ಸಂದರ್ಭಗಳನ್ನು ಹೊರತುಪಡಿಸಿ ವಾಹನ ಓಡಾಟವನ್ನು ಅಥವಾ ಪ್ರಯಾಣಿಕರನ್ನು ಒಯ್ಯುವುದನ್ನು ನಿರಾಕರಿಸತಕ್ಕದ್ದಲ್ಲ;

(xiii) ನಿಯಮಿಸಬಹುದಾದಂಥ ಯಾವುವೇ ಇತರ ಷರತ್ತುಗಳು.

(3) (ಎ) ರಾಜ್ಯ ಸರ್ಕಾರವು ವಾಹನಗಳ ಸಂಖ್ಯೆ, ರಸ್ತೆಯ ಸ್ಥಿತಿಗತಿ ಮತ್ತು ಇತರ ಸಂಬಂಧಪಟ್ಟ ವಿಷಯಗಳನ್ನು ಗಮನಿಸಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿಗದಿಪಡಿಸಿ ನಿರ್ದಿಷ್ಟಪಡಿಸಬಹುದಾದಂತೆ ಐದು ಲಕ್ಷಗಳಿಗಿಂತ ಕಡಿಮೆಯಿಲ್ಲದ ಜನಸಂಖ್ಯೆಯಿರುವ ಪಟ್ಟಣಗಳಲ್ಲಿನ ನಗರ ಮಾರ್ಗಗಳಲ್ಲಿ ಓಡಾಡುವ, ಸಾಮಾನ್ಯವಾಗಿ ಕರಾರು ವಾಹನಗಳ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಮಾದರಿಯ ವಾಹನಗಳ ಸಂಖ್ಯೆಯನ್ನು ಮಿತಿಗಳಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ನಿರ್ದೇಶಿಸತಕ್ಕದ್ದೆಂದು ನಿರ್ದೇಶಿಸಿದರೆ ಹಾಗೆ ಮಾಡತಕ್ಕದ್ದು;

(ಬಿ) (ಎ) ಖಂಡದ ಮೇರೆಗೆ ಕರಾರು ವಾಹನಗಳ ಸಂಖ್ಯೆಯನ್ನು ನಿಗದಿಪಡಿಸಿರುವಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಂಥ ಯಾವುದೇ ಕರಾರು ವಾಹನಕ್ಕೆ ಸಂಬಂಧಿಸಿ ಪರ್ಮಿಟ್ಟು ನೀಡಿಕೆಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುವಲ್ಲಿ ಈ ಕೆಳಕಂಡ ವಿಷಯಗಳನ್ನು ಗಮನಿಸತಕ್ಕದ್ದು, ಎಂದರೆ:-

(i) ಅರ್ಜಿದಾರನ ಆರ್ಥಿಕ ಸ್ಥಿತಿಗತಿ;

(ii) ಅರ್ಜಿದಾರನು, ಕರಾರು ವಾಹನದ ನಿರ್ವಾಹಕನಾಗಿರುವಲ್ಲಿ ಅಥವಾ ನಿರ್ವಾಹಕನಾಗಿದ್ದಿರುವಲ್ಲಿ ತೆರಿಗೆಯ ಸಂದಾಯವೂ ಸೇರಿದಂತೆ ಕರಾರು ವಾಹನದ ನಿರ್ವಾಹಕನಾಗಿ ಅವನ ಕಾರ್ಯವು ತೃಪ್ತಿಕರವಾಗಿರುವುದು; ಮತ್ತು

(iii) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಇತರ ವಿಷಯಗಳು:

ಪರಂತು, ಇತರ ಪರಿಸ್ಥಿತಿಗಳು ಸಮಾನವಾಗಿರುವಲ್ಲಿ,-

(i) ಭಾರತ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ;

(ii) ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ;

(iii) ರಾಜ್ಯ ಪ್ರವಾಸೋದ್ಯಮ ಇಲಾಖೆಗಳು;

(iv) ರಾಜ್ಯ ಸಾರಿಗೆ ಉದ್ಯಮಗಳು;

(v) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿವೆಯೆಂದು ಭಾವಿಸಲಾದ ಸಹಕಾರ ಸಂಘಗಳು;

(vi) ಮಾಜಿ ಸೈನಿಕರು

- ಇವರು ಪರ್ಮಿಟ್ಟಿಗಾಗಿ ಸಲ್ಲಿಸಿದ ಅರ್ಜಿಗಳಿಗೆ ಆದ್ಯತೆ ನೀಡತಕ್ಕದ್ದು.

75. ಮೋಟಾರು ಕ್ಯಾಬ್‌ಗಳನ್ನು ಬಾಡಿಗೆಗೆ ಕೊಡುವ ಯೋಜನೆ:- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಮ್ಮ ಸ್ವಂತ ಉಪಯೋಗಕ್ಕಾಗಿ ಸ್ವತಃ ಅಥವಾ ಚಾಲಕರ ಮೂಲಕ ಮೋಟಾರು ಕ್ಯಾಬ್‌ಗಳನ್ನು ಅಥವಾ ಮೋಟಾರು ಸೈಕಲ್ಲುಗಳನ್ನು ನಡೆಸಲು ಇಚ್ಛಿಸುವ ವ್ಯಕ್ತಿಗಳಿಗೆ ಮೋಟಾರು ಕ್ಯಾಬ್‌ಗಳನ್ನು ಅಥವಾ ಮೋಟಾರು ಸೈಕಲ್ಲುಗಳನ್ನು ಬಾಡಿಗೆಗೆ

ಕೊಡುವ ವ್ಯವಹಾರವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಒಂದು ಯೋಜನೆಯನ್ನು ಮಾಡಬಹುದು.

(2) (1) ನೇ ಉಪ ಪ್ರಕರಣದ ಮೇರೆಗೆ ಮಾಡಲಾದ ಯೋಜನೆಯು, ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) ಲೈಸೆನ್ಸುಗಳ ನೀಡಿಕೆ, ನವೀಕರಣ ಮತ್ತು ರದ್ದಿಯಾತಿಯೂ ಸೇರಿದಂತೆ, ಯೋಜನೆ ಮೇರೆಗೆ ನಿರ್ವಾಹಕರಿಗೆ ಲೈಸೆನ್ಸ್ ನೀಡುವುದು;

(ಬಿ) ಅರ್ಜಿ ನಮೂನೆ ಮತ್ತು ಲೈಸೆನ್ಸುಗಳ ನಮೂನೆ ಮತ್ತು ಅವು ಒಳಗೊಂಡಿರಬೇಕಾದ ವಿವರಗಳು;

(ಸಿ) ಅಂಥ ಲೈಸೆನ್ಸುಗಳಿಗಾಗಿ ಸಲ್ಲಿಸುವ ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು;

(ಡಿ) ಅರ್ಜಿಯನ್ನು ಯಾವ ಪ್ರಾಧಿಕಾರಗಳಿಗೆ ಸಲ್ಲಿಸತಕ್ಕದ್ದೋ ಆ ಪ್ರಾಧಿಕಾರಗಳು;

(ಇ) ಅಂಥ ಲೈಸೆನ್ಸುಗಳನ್ನು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬಹುದೋ, ನವೀಕರಿಸಬಹುದೋ ಅಥವಾ ರದ್ದುಗೊಳಿಸಬಹುದೋ ಆ ಷರತ್ತುಗಳು;

(ಎಫ್) ಅಂಥ ಲೈಸೆನ್ಸುಗಳನ್ನು ನೀಡುವುದಕ್ಕೆ ಅಥವಾ ನವೀಕರಿಸುವುದಕ್ಕೆ ನಿರಾಕರಿಸುವ ಆದೇಶಗಳ ವಿರುದ್ಧ ಅಪೀಲುಗಳು ಮತ್ತು ಅಂಥ ಲೈಸೆನ್ಸುಗಳನ್ನು ರದ್ದುಗೊಳಿಸುವ ಆದೇಶಗಳ ವಿರುದ್ಧ ಅಪೀಲುಗಳು;

(ಜಿ) ಯಾವ ಷರತ್ತುಗಳಿಗೆ ಒಳಪಟ್ಟು ಮೋಟಾರು ಕ್ಯಾಬ್‌ಗಳನ್ನು ಬಾಡಿಗೆಗೆ ಕೊಡಬಹುದೋ ಆ ಷರತ್ತುಗಳು;

(ಹೆಚ್) ದಾಖಲೆಗಳನ್ನು ಇಡುವುದು ಮತ್ತು ಅಂಥ ದಾಖಲೆಗಳ ಪರಿಶೀಲನೆ;

(ಐ) ಈ ಪ್ರಕರಣದ ಉದ್ದೇಶಗಳನ್ನು ಈಡೇರಿಸಲು ಅವಶ್ಯಕವಾಗಬಹುದಾದಂತಹ ಇತರ ವಿಷಯಗಳು.

76. ಖಾಸಗಿ ಸೇವಾ ವಾಹನದ ಪರ್ಮಿಟ್ಟಿಗೆ ಅರ್ಜಿ:- (1) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಆ ಅರ್ಜಿಗನುಸಾರವಾಗಿ ಅಥವಾ ಅದು ಸೂಕ್ತವೆಂದು ಭಾವಿಸುವಂಥ ಮಾರ್ಪಾಟು ಮಾಡಿ ಖಾಸಗಿ ಸೇವಾ ವಾಹನದ ಪರ್ಮಿಟ್ಟು ನೀಡಬಹುದು ಅಥವಾ ಅಂಥ ಪರ್ಮಿಟ್ಟನ್ನು ನೀಡಲು ನಿರಾಕರಿಸಬಹುದು:

ಪರಂತು, ಅಂಥ ಪರ್ಮಿಟ್ಟನ್ನು ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕ್ಷೇತ್ರ ಅಥವಾ ಮಾರ್ಗಕ್ಕೆ ಸಂಬಂಧಿಸಿ ನೀಡತಕ್ಕದ್ದಲ್ಲ.

(2) ಮೋಟಾರು ವಾಹನವನ್ನು ಖಾಸಗಿ ಸೇವಾ ವಾಹನವನ್ನಾಗಿ ಉಪಯೋಗಿಸಲು ಪರ್ಮಿಟ್ಟಿಗಾಗಿ ಸಲ್ಲಿಸುವ ಅರ್ಜಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ವಾಹನದ ಮಾದರಿ ಮತ್ತು ಆಸನಾವಕಾಶ;

(ಬಿ) ಅರ್ಜಿಗೆ ಸಂಬಂಧಿಸಿದ ಕ್ಷೇತ್ರ ಅಥವಾ ಮಾರ್ಗ ಅಥವಾ ಮಾರ್ಗಗಳು;

(ಸಿ) ಅರ್ಜಿದಾರನು ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ಅಥವಾ ಅವನು ನಡೆಸುವ ವ್ಯಾಪಾರ ಅಥವಾ ವ್ಯವಹಾರದ ಸಂಬಂಧದಲ್ಲಿ ಹೊರತು, ವ್ಯಕ್ತಿಗಳನ್ನು ಒಯ್ಯುವ ಉದ್ದೇಶವನ್ನು ವಾಹನವು ಈಡೇರಿಸುವುದೆಂದು ಕ್ಲೇಮು ಮಾಡುವ ರೀತಿ; ಮತ್ತು

(ಡಿ) ನಿಯಮಿಸಬಹುದಾದ ಯಾವುವೇ ಇತರ ವಿವರಗಳು.

(3) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಅದು ಪರ್ಮಿಟ್ಟನ್ನು ನೀಡಲು ನಿರ್ಧರಿಸಿದರೆ ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು ಪರ್ಮಿಟ್ಟಿಗೆ ಈ ಕೆಳಕಂಡ ಷರತ್ತುಗಳಲ್ಲಿ ಯಾವುದೇ ಒಂದನ್ನು ಅಥವಾ ಅದಕ್ಕಿಂತ ಹೆಚ್ಚು ಷರತ್ತುಗಳನ್ನು ಲಗತ್ತಿಸಬಹುದು, ಎಂದರೆ:-

(i) ವಾಹನವನ್ನು ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ಮಾರ್ಗ ಅಥವಾ ಮಾರ್ಗಗಳಲ್ಲಿ ಮಾತ್ರವೇ ಉಪಯೋಗಿಸಬೇಕು;

(ii) ಒಯ್ಯಬಹುದಾದ ವ್ಯಕ್ತಿಗಳ ಗರಿಷ್ಠ ಸಂಖ್ಯೆ ಮತ್ತು ಸಾಮಾನುಗಳ ಗರಿಷ್ಠ ತೂಕ;

(iii) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಒಂದು ತಿಂಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ತರುವಾಯ,-

(ಎ) ಪರ್ಮಿಟ್ಟಿನ ಷರತ್ತುಗಳನ್ನು ಬದಲಾಯಿಸಬಹುದು;

(ಬಿ) ಪರ್ಮಿಟ್ಟಿಗೆ ಮತ್ತಷ್ಟು ಷರತ್ತುಗಳನ್ನು ಲಗತ್ತಿಸಬಹುದು;

(iv) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಯ ಹೊರತು ಪರ್ಮಿಟ್ಟಿನ ಷರತ್ತುಗಳನ್ನು ಉಲ್ಲಂಘಿಸತಕ್ಕದ್ದಲ್ಲ;

(v) ನಿರ್ದಿಷ್ಟಪಡಿಸಿದ ಗುಣಮಟ್ಟದ ಸೌಕರ್ಯ ಮತ್ತು ನೈರ್ಮಲ್ಯವನ್ನು ವಾಹನಗಳಲ್ಲಿ ಒದಗಿಸತಕ್ಕದ್ದು;

(vi) ಪರ್ಮಿಟ್ಟುಧಾರಕನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ನಿಯತಕಾಲಿಕ ವಿವರಪಟ್ಟಿಕೆಗಳು, ಅಂಕಿ ಅಂಶಗಳು ಮತ್ತು ಇತರ ಮಾಹಿತಿ

- ಇವುಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು; ಮತ್ತು

(vii) ನಿಯಮಿಸಬಹುದಾದಂಥ ಇತರ ಷರತ್ತುಗಳು.

77. ಸರಕು ವಾಹನದ ಪರ್ಮಿಟ್ಟಿಗೆ ಅರ್ಜಿ:- ಸರಕುಗಳನ್ನು ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಒಯ್ಯಲು ಅಥವಾ ಅರ್ಜಿದಾರನು ನಡೆಸುವ ವ್ಯಾಪಾರ ಅಥವಾ ವ್ಯವಹಾರದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿ ಸರಕುಗಳನ್ನು ಒಯ್ಯಲು ಮೋಟಾರು ವಾಹನವನ್ನು ಉಪಯೋಗಿಸಲು ( ಈ ಅಧ್ಯಾಯದಲ್ಲಿ ಸರಕು ವಾಹನದ ಪರ್ಮಿಟ್ಟು ಎಂದು ಉಲ್ಲೇಖಿಸಲಾಗುವ) ಪರ್ಮಿಟ್ಟಿಗಾಗಿ ಸಲ್ಲಿಸುವ ಅರ್ಜಿಯು ಸಾಧ್ಯವಾದಷ್ಟು ಮಟ್ಟಿಗೆ ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಅರ್ಜಿಗೆ ಸಂಬಂಧಿಸಿದ ಕ್ಷೇತ್ರ ಅಥವಾ ಮಾರ್ಗ ಅಥವಾ ಮಾರ್ಗಗಳು;

(ಬಿ) ವಾಹನದ ಮಾದರಿ ಮತ್ತು ಸಾಮರ್ಥ್ಯ;

(ಸಿ) ಒಯ್ಯಲು ಉದ್ದೇಶಿಸಲಾದ ಸರಕುಗಳ ಸ್ವರೂಪ;

(ಡಿ) ವಾಹನಗಳಿಗೆ ಸ್ಥಳ ವ್ಯವಸ್ಥೆ, ಅವುಗಳ ನಿರ್ವಹಣೆ ಮತ್ತು ದುರಸ್ತಿಯ ಬಗ್ಗೆ ಮತ್ತು ಸರಕುಗಳ ದಾಸ್ತಾನು ಮತ್ತು ಸಂರಕ್ಷಣೆ ಮಾಡಲು ಉದ್ದೇಶಿಸಿದ ವ್ಯವಸ್ಥೆಗಳು;

(ಇ) ಅರ್ಜಿದಾರನು, ಅರ್ಜಿಯನ್ನು ಸಲ್ಲಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಸರಕುಗಳ ವಾಹಕನಾಗಿ ನಡೆಸುವ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂಥ ವಿವರಗಳನ್ನು ಮತ್ತು ಅರ್ಜಿದಾರನು ವಿಧಿಸಿದ ದರಗಳ ವಿವರಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಗತ್ಯಪಡಿಸಬಹುದು;

(ಎಫ್) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಪ್ರದೇಶದೊಳಗೆ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಸರಕುಗಳ ಸಾಗಣೆಯ ಸೌಲಭ್ಯಗಳ ವ್ಯವಸ್ಥೆಯ ಯಾವುದೇ ಪ್ರಧಾನ ಅಂಶವನ್ನು ಬಾಧಿಸುವಂತೆ ಅಂಥ ಸೌಲಭ್ಯಗಳನ್ನು ಆ ಪ್ರದೇಶದೊಳಗೆ ಅಥವಾ ಹೊರಗೆ ಒದಗಿಸುವ ಯಾರೇ ಇತರ ವ್ಯಕ್ತಿಯೊಡನೆ ಅರ್ಜಿದಾರನು ಮಾಡಿಕೊಂಡ ಯಾವುದೇ ಒಪ್ಪಂದ ಅಥವಾ ವ್ಯವಸ್ಥೆಯ ವಿವರಗಳು;

(ಜಿ) ನಿಯಮಿಸಬಹುದಾದಂಥ ಯಾವುವೇ ಇತರ ವಿವರಗಳು.

78. ಸರಕು ವಾಹನ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯ ಪರಿಶೀಲನೆ:- ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಸರಕು ವಾಹನ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸುವಾಗ ಈ ಕೆಳಕಂಡ ವಿಷಯಗಳನ್ನು ಗಮನಿಸತಕ್ಕದ್ದು, ಎಂದರೆ:-

(ಎ) ಮಾನವ ಜೀವಕ್ಕೆ ಅಪಾಯಕರವಾದ ಅಥವಾ ಸಂಕಟಕರವಾದ ಸರಕುಗಳ ಸ್ವಭಾವಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ ಒಯ್ಯಲಾಗುವ ಆ ಸರಕುಗಳ ಸ್ವಭಾವ;

(ಬಿ) ಮಾನವ ಜೀವದ ಸುರಕ್ಷತೆಗೆ ವಿಶೇಷವಾಗಿ ಸಂಬಂಧಿಸಿದಂತೆ ಒಯ್ಯಲಾಗುವ ರಾಸಾಯನಿಕಗಳು ಅಥವಾ ಸ್ಫೋಟಕಗಳ ಸ್ವಭಾವ.

79. ಸರಕು ವಾಹನ ಪರ್ಮಿಟ್ಟು ನೀಡಿಕೆ:- (1) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, 77 ನೇ ಪ್ರಕರಣದ ಮೇರೆಗೆ ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ರಾಜ್ಯದಾದ್ಯಂತ ಸಿಂಧುವಾದ ಅಥವಾ ಅರ್ಜಿಗೆ ಅನುಸಾರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳನ್ನು ಮಾಡಿ ಸರಕು ವಾಹನ ಪರ್ಮಿಟ್ಟನ್ನು ನೀಡಬಹುದು ಅಥವಾ ಅಂಥ ಪರ್ಮಿಟ್ಟನ್ನು ನೀಡಲು ನಿರಾಕರಿಸಬಹುದು:

ಪರಂತು, ಅಂಥ ಪರ್ಮಿಟ್ಟನ್ನು ಅರ್ಜಿಯಲ್ಲಿ ನಿರ್ದಿಷ್ಟಪಡಿಸಿಲ್ಲದ ಯಾವುದೇ ಕ್ಷೇತ್ರ ಅಥವಾ ಮಾರ್ಗಕ್ಕೆ ಸಂಬಂಧಿಸಿ ನೀಡತಕ್ಕದ್ದಲ್ಲ.

(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಸರಕು ವಾಹನದ ಪರ್ಮಿಟ್ಟನ್ನು ನೀಡಲು ಅದು ನಿರ್ಧರಿಸಿದರೆ, ಪರ್ಮಿಟ್ಟನ್ನು ನೀಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಬಹುದಾದಂಥ ಯಾವುವೇ ನಿಯಮಗಳಿಗೆ ಒಳಪಟ್ಟು, ಈ ಕೆಳಕಂಡ ಷರತ್ತುಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚಿನ ಷರತ್ತುಗಳನ್ನು ಪರ್ಮಿಟ್ಟಿಗೆ ಲಗತ್ತಿಸಬಹುದು, ಎಂದರೆ:-

(i) ವಾಹನವನ್ನು ನಿರ್ದಿಷ್ಟಪಡಿಸಿದ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟಪಡಿಸಿದ ಮಾರ್ಗ ಅಥವಾ ಮಾರ್ಗಗಳಲ್ಲಿ ಮಾತ್ರ ಉಪಯೋಗಿಸತಕ್ಕದ್ದು;

(ii) ಉಪಯೋಗಿಸಿದ ಯಾವುದೇ ವಾಹನದ ಒಟ್ಟು ತೂಕವು ನಿರ್ದಿಷ್ಟಪಡಿಸಿದ ಗರಿಷ್ಠ ತೂಕವನ್ನು ಮೀರತಕ್ಕದ್ದಲ್ಲ;

(iii) ನಿರ್ದಿಷ್ಟಪಡಿಸಿದ ಸ್ವಭಾವದ ಸರಕುಗಳನ್ನು ಒಯ್ಯತಕ್ಕದ್ದಲ್ಲ;

(iv) ಸರಕುಗಳನ್ನು ನಿರ್ದಿಷ್ಟಪಡಿಸಿದ ದರಗಳಲ್ಲಿ ಒಯ್ಯತಕ್ಕದ್ದು;

(v) ವಾಹನಗಳಿಗೆ ಸ್ಥಳ ವ್ಯವಸ್ಥೆ, ಅವುಗಳ ನಿರ್ವಹಣೆ ಮತ್ತು ದುರಸ್ತಿಯ ಬಗ್ಗೆ ಮತ್ತು ಒಯ್ಯಲಾಗುವ ಸರಕುಗಳ ದಾಸ್ತಾನು ಮತ್ತು ಸುರಕ್ಷತೆಗೆ ನಿರ್ದಿಷ್ಟ ವ್ಯವಸ್ಥೆಗಳನ್ನು ಮಾಡತಕ್ಕದ್ದು;

(vi) ಪರ್ಮಿಟ್ಟು ಧಾರಕನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ನಿಯತಕಾಲಿಕ ವಿವರ ಪಟ್ಟಿಕೆಗಳು, ಅಂಕಿ ಅಂಶಗಳು ಮತ್ತು ಇತರ ಮಾಹಿತಿ - ಇವುಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು;

(vii) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಒಂದು ತಿಂಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ತರುವಾಯ,-

(ಎ) ಪರ್ಮಿಟ್ಟಿನ ಷರತ್ತುಗಳನ್ನು ಬದಲಾಯಿಸಬಹುದು;

(ಬಿ) ಆ ಪರ್ಮಿಟ್ಟಿಗೆ ಮತ್ತಷ್ಟು ಷರತ್ತುಗಳನ್ನು ಲಗತ್ತಿಸಬಹುದು;

(viii) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಯ ಹೊರತು, ಪರ್ಮಿಟ್ಟಿನ ಷರತ್ತುಗಳನ್ನು ಉಲ್ಲಂಘಿಸತಕ್ಕದ್ದಲ್ಲ;

(ix) ನಿಯಮಿಸಬಹುದಾದಂಥ ಯಾವುವೇ ಇತರ ಷರತ್ತುಗಳು.

(3) (2) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳು, ಮಾನವ ಜೀವಕ್ಕೆ ಅಪಾಯಕರ ಅಥವಾ ಸಂಕಟಕರ ಸ್ವಭಾವದ ಸರಕುಗಳನ್ನು ಪ್ಯಾಕು ಮಾಡುವುದಕ್ಕೆ ಮತ್ತು ಒಯ್ಯುವುದಕ್ಕೆ ಸಂಬಂಧಿಸಿದ ಷರತ್ತುಗಳನ್ನೂ ಒಳಗೊಂಡಿರಬಹುದು.

80. ಪರ್ಮಿಟ್ಟುಗಳಿಗಾಗಿ ಅರ್ಜಿ ಸಲ್ಲಿಸುವ ಮತ್ತು ಅವುಗಳ ನೀಡಿಕೆಯ ಪ್ರಕ್ರಿಯೆ:- (1) ಯಾವುದೇ ಬಗೆಯ ಪರ್ಮಿಟ್ಟಿಗೆ ಯಾವುದೇ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ 66 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಲಾದ ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಯಾವುದೇ ಸಮಯದಲ್ಲಿ ಯಾವುದೇ ಬಗೆಯ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ಸಾಮಾನ್ಯವಾಗಿ ನಿರಾಕರಿಸತಕ್ಕದ್ದಲ್ಲ:

ಪರಂತು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ 66 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಲಾದ ಪ್ರಾಧಿಕಾರವು ಅರ್ಜಿಗೆ ಅನುಸಾರವಾಗಿ ಯಾವುದೇ ಪರ್ಮಿಟ್ಟನ್ನು ನೀಡಿದರೆ, 71 ನೇ ಪ್ರಕರಣದ (3) ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ರಾಜಪತ್ರದಲ್ಲಿನ ಅಧಿಸೂಚನೆಯಲ್ಲಿ ನಿಗದಿಪಡಿಸಿ ನಿರ್ದಿಷ್ಟಪಡಿಸಿದ ಮಜಲು ವಾಹನಗಳ ಅಥವಾ 74 ನೇ ಪ್ರಕರಣದ (3) ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ರಾಜಪತ್ರದಲ್ಲಿನ ಅಧಿಸೂಚನೆಯಲ್ಲಿ ನಿಗದಿಪಡಿಸಿ ನಿರ್ದಿಷ್ಟಪಡಿಸಿದ ಕರಾರು ವಾಹನಗಳ ಸಂಖ್ಯೆಯು ಹೆಚ್ಚಾಗುವ ಸಂಭವವಿರುವಲ್ಲಿ ಆ ಅರ್ಜಿಯನ್ನು ಕ್ಷಿಪ್ರವಾಗಿ ನಿರಾಕರಿಸಬಹುದು:

ಮತ್ತೂ ಪರಂತು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ 66ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಲಾದ ಯಾವುದೇ ಪ್ರಾಧಿಕಾರ ಈ ಅಧಿನಿಯಮದ ಮೇರೆಗೆ ಯಾವುದೇ ಬಗೆಯ ಪರ್ಮಿಟ್ಟಿಗೆ ಸಲ್ಲಿಸಿದ ಅರ್ಜಿಯನ್ನು ನಿರಾಕರಿಸಿರುವಲ್ಲಿ, ಅದು ಅದರ ನಿರಾಕರಣೆಯ ಕಾರಣಗಳನ್ನು ಬರಹದಲ್ಲಿ ಅರ್ಜಿದಾರನಿಗೆ ಕೊಡತಕ್ಕದ್ದು ಮತ್ತು ಆ ವಿಷಯಕ್ಕೆ ಸಂಬಂಧಪಟ್ಟಂತೆ ಅವನಿಗೆ ಸುನಾವಣೆಯ ಅವಕಾಶವನ್ನು ಕೊಡತಕ್ಕದ್ದು.

(3) ಹೊಸ ಮಾರ್ಗ ಅಥವಾ ಮಾರ್ಗಗಳನ್ನು ಅಥವಾ ಹೊಸ ಕ್ಷೇತ್ರವನ್ನು ಸೇರಿಸಿ ಅಥವಾ ಅದು ಒಳಗೊಂಡ ಮಾರ್ಗ ಅಥವಾ ಮಾರ್ಗಗಳನ್ನು ಅಥವಾ ಕ್ಷೇತ್ರವನ್ನು ಬದಲಾಯಿಸಿ ಅಥವಾ ಮಜಲುವಾಹನದ ಪರ್ಮಿಟ್ಟಿನ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಟ್ರಿಪ್ಪುಗಳ ಗರಿಷ್ಠ ಸಂಖ್ಯೆಯನ್ನು ಹೆಚ್ಚಿಸಿ ಅಥವಾ ಪರ್ಮಿಟ್ಟಿನಲ್ಲಿ ನಿರ್ದಿಷ್ಟಪಡಿಸಿದ ಮಾರ್ಗ ಅಥವಾ ಮಾರ್ಗಗಳು ಅಥವಾ ಕ್ಷೇತ್ರವನ್ನು ವ್ಯತ್ಯಾಸಗೊಳಿಸಿ, ವಿಸ್ತರಿಸಿ ಅಥವಾ ಮೊಟಕುಗೊಳಿಸಿ ತಾತ್ಕಾಲಿಕ ಪರ್ಮಿಟ್ಟಿಗೆ ಹೊರತಾದ, ಯಾವುದೇ ಪರ್ಮಿಟ್ಟಿನ ಷರತ್ತುಗಳನ್ನು ವ್ಯತ್ಯಾಸಗೊಳಿಸಲು ಕೋರಿ ಸಲ್ಲಿಸಿದ ಅರ್ಜಿಯನ್ನು ಹೊಸ ಪರ್ಮಿಟ್ಟು ನೀಡಲು ಸಲ್ಲಿಸಿದ ಅರ್ಜಿ ಎಂದು ಪರಿಗಣಿಸತಕ್ಕದ್ದು:

ಪರಂತು, ಯಾವುದೇ ಮಾರ್ಗದಲ್ಲಿ ಏಕಮಾತ್ರ ಸೇವೆಯನ್ನು ಒದಗಿಸುವ ಮಜಲು ವಾಹನದ ಪರ್ಮಿಟ್ಟು ಧಾರಕನು ವಾಹನಗಳ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳವಿಲ್ಲದೆ ಹಾಗೆ ಒದಗಿಸಲಾದ ಸೇವೆಯ ಬಾರಿಗಳನ್ನು ಹೆಚ್ಚಿಸಲು ಸಲ್ಲಿಸಿದ ಅರ್ಜಿಯನ್ನು ಹಾಗೆ ಪರಿಗಣಿಸುವುದು ಅಗತ್ಯವಾಗತಕ್ಕದ್ದಲ್ಲ:

ಮತ್ತೂ ಪರಂತು,

(i) ವ್ಯತ್ಯಾಸದ ಸಂದರ್ಭದಲ್ಲಿ, ಕೊನೆ ನಿಲ್ದಾಣಗಳನ್ನು ಬದಲಾಯಿಸತಕ್ಕದ್ದಲ್ಲ ಮತ್ತು ಆ ಬದಲಾವಣೆಯು ಒಳಗೊಳ್ಳುವ ದೂರವು ಇಪ್ಪತ್ತನಾಲ್ಕು ಕಿಲೋಮೀಟರುಗಳನ್ನು ಮೀರತಕ್ಕದ್ದಲ್ಲ;

(ii) ವಿಸ್ತರಣೆಯ ಸಂದರ್ಭದಲ್ಲಿ ವಿಸ್ತರಣೆಯಲ್ಲಿ ಒಳಗೊಂಡ ದೂರವು, ಕೊನೆ ನಿಲ್ದಾಣಗಳಿಂದ ಇಪ್ಪತ್ನಾಲ್ಕು ಕಿಲೋಮೀಟರುಗಳನ್ನು ಮೀರತಕ್ಕದ್ದಲ್ಲ

- ಮತ್ತು ಅಂಥ ಪರಿಮಿತಿಗಳೊಳಗೆ ಅಂಥ ಯಾವುದೇ ವ್ಯತ್ಯಾಸ ಅಥವಾ ವಿಸ್ತರಣೆಯನ್ನು ಅಂಥ ವ್ಯತ್ಯಾಸವು ಸಾರ್ವಜನಿಕರಿಗೆ ಅನುಕೂಲವಾಗುವುದೆಂದು ಮತ್ತು ಹಾಗೆ ವ್ಯತ್ಯಾಸಗೊಳಿಸಿದ ಅಥವಾ ವಿಸ್ತರಿಸಿದ ಮೂಲ ಮಾರ್ಗದ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ ಪ್ರತ್ಯೇಕ ಪರ್ಮಿಟ್ಟನ್ನು ನೀಡುವುದು ಯುಕ್ತವಲ್ಲವೆಂದು ಸಾರಿಗೆ ಪ್ರಾಧಿಕಾರಕ್ಕೆ ಮನದಟ್ಟಾದ ತರುವಾಯ ಮಾತ್ರ ಮಾಡತಕ್ಕದ್ದು.

(4) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ 66ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಲಾದ ಯಾವುದೇ ಪ್ರಾಧಿಕಾರವು ಈ ಬಗ್ಗೆ ಅದು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಸದರಿ ದಿನಾಂಕಕ್ಕೆ ಮುಂಚೆ ತಾನು ನೀಡಿದ ಯಾವುದೇ ಪರ್ಮಿಟ್ಟಿಗೆ ಬದಲಾಗಿ ಸಂದರ್ಭಾನುಸಾರ, 72ನೇ ಪ್ರಕರಣ ಅಥವಾ 74ನೇ ಪ್ರಕರಣ ಅಥವಾ 76ನೇ ಪ್ರಕರಣ ಅಥವಾ 79ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಹೊಸ ಪರ್ಮಿಟ್ಟನ್ನು ನೀಡಬಹುದು ಮತ್ತು ಆ ಹೊಸ ಪರ್ಮಿಟ್ಟು, ಹಿಂದಿನ ಪರ್ಮಿಟ್ಟು ಸಿಂಧುವಾಗಿದ್ದ ಅದೇ ಮಾರ್ಗ ಅಥವಾ ಮಾರ್ಗಗಳು ಅಥವಾ ಅದೇ ಪ್ರದೇಶಕ್ಕಾಗಿ ಸಿಂಧುವಾಗಿರತಕ್ಕದ್ದು:

ಪರಂತು, ಹೊಸ ಪರ್ಮಿಟ್ಟಿಗೆ, ಹಿಂದಿನ ಪರ್ಮಿಟ್ಟಿಗೆ ಈಗಾಗಲೇ ಲಗತ್ತಿಸಲಾಗಿದ್ದ ಅಥವಾ ಆ ಪರ್ಮಿಟ್ಟನ್ನು ನೀಡಿದಾಗ ಜಾರಿಯಲ್ಲಿದ್ದ ಕಾನೂನಿನ ಮೇರೆಗೆ ಅದಕ್ಕೆ ಲಗತ್ತಿಸಬಹುದಾಗಿದ್ದ ಷರತ್ತನ್ನು ಹೊರತುಪಡಿಸಿ ಇತರ ಯಾವುದೇ ಷರತ್ತನ್ನು ಫರ್ಮಿಟ್ಟುಧಾರಕನ ಲಿಖಿತ ಸಮ್ಮತಿಯ ಹೊರತು ಲಗತ್ತಿಸತಕ್ಕದ್ದಲ್ಲ.

(5) 81ನೇ ಪ್ರಕರಣದಲ್ಲಿ ಏನೇ ಇದ್ದರೂ, (4)ನೇ ಉಪ ಪ್ರಕರಣದ ಉಪಬಂಧಗಳ ಮೇರೆಗೆ ನೀಡಿದ ಪರ್ಮಿಟ್ಟು, ಹಿಂದಿನ ಪರ್ಮಿಟ್ಟು ಹಾಗೆ ಪರಿಣಾಮಕಾರಿಯಾಗಿರಬಹುದಾಗಿದ್ದ ಉಳಿದ ಅವಧಿಗೆ ನವೀಕರಣವಿಲ್ಲದೆಯೇ ಪರಿಣಾಮಕಾರಿಯಾಗಿರತಕ್ಕದ್ದು.

81. ಪರ್ಮಿಟ್ಟುಗಳ ಅವಧಿ ಮತ್ತು ನವೀಕರಣ:- (1) 87ನೇ ಪ್ರಕರಣದ ಮೇರೆಗೆ ನೀಡಲಾದ ತಾತ್ಕಾಲಿಕ ಪರ್ಮಿಟ್ಟು ಅಥವಾ 88ನೇ ಪ್ರಕರಣದ (8)ನೇ ಉಪ ಪ್ರಕರಣದ ಮೇರೆಗೆ ನೀಡಲಾದ ವಿಶೇಷ ಪರ್ಮಿಟ್ಟಿಗೆ ಹೊರತಾದ ಪರ್ಮಿಟ್ಟು, ಅದನ್ನು ನೀಡಿದ ಅಥವಾ ನವೀಕರಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪರಿಣಾಮಕಾರಿಯಾಗಿರತಕ್ಕದ್ದು:

ಪರಂತು, ಪರ್ಮಿಟ್ಟಿಗೆ 88ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ, ಮೇಲು ರುಜು ಮಾಡಿರುವಲ್ಲಿ ಅಂಥ ಮೇಲು ರುಜು, ಪ್ರಾಥಮಿಕ ಪರ್ಮಿಟ್ಟಿನ ಸಿಂಧುತ್ವದ ಅವಧಿಯೊಂದಿಗೆ ಮೇಳೈಸುವಂಥ ಅವಧಿಗಾಗಿ ನವೀಕರಣವಿಲ್ಲದೆಯೇ ಪರಿಣಾಮಕಾರಿಯಾಗಿರತಕ್ಕದ್ದು.

(2) ಪರ್ಮಿಟ್ಟನ್ನು ಅದರ ಮುಕ್ತಾಯದ ದಿನಾಂಕಕ್ಕೆ ಮುಂಚೆ ಹದಿನೈದು ದಿನಗಳಿಗಿಂತ ಕಡಿಮೆಯಿಲ್ಲದಂತೆ ಸಲ್ಲಿಸಲಾದ ಅರ್ಜಿಯ ಮೇಲೆ ನವೀಕರಿಸಬಹುದು.

(3) (2)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಥವಾ ರಾಜ್ಯ ಸಾರಿಗೆ ಪ್ರಾಧಿಕಾರವು, ಅರ್ಜಿದಾರನು ನಿರ್ದಿಷ್ಟ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸೂಕ್ತ ಮತ್ತು ಸಾಕಷ್ಟು ಕಾರಣದಿಂದ ತಡೆಯಲ್ಪಟ್ಟಿದ್ದನೆಂದು ಅದಕ್ಕೆ ಮನದಟ್ಟಾದರೆ ಆ ಉಪ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದ ಕೊನೆಯ ದಿನಾಂಕದ ತರುವಾಯ ಪರ್ಮಿಟ್ಟಿನ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಅಂಗೀಕರಿಸಬಹುದು.

(4) ಸಂದರ್ಭಾನುಸಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಥವಾ ರಾಜ್ಯ ಸಾರಿಗೆ ಪ್ರಾಧಿಕಾರವು ಪರ್ಮಿಟ್ಟಿನ ನವೀಕರಣಕ್ಕೆ ಸಲ್ಲಿಸಿದ ಅರ್ಜಿಯನ್ನು ಈ ಕೆಳಕಂಡ ಕಾರಣಗಳಲ್ಲಿ ಒಂದು ಅಥವಾ ಹೆಚ್ಚಿನ ಕಾರಣಗಳಿಗಾಗಿ ನಿರಾಕರಿಸಬಹುದು, ಎಂದರೆ:-

(ಎ) ಅರ್ಜಿಯ ಪರಿಶೀಲನೆಯ ದಿನಾಂಕಕ್ಕೆ ಮುಂಚೆ ಮೂವತ್ತು ದಿನಗಳ ಅವಧಿಯವರೆಗೆ ಋಣಗಳನ್ನು ತೀರಿಸದಿರುವುದು, ದಿವಾಳಿತನದಿಂದ ಅಥವಾ ಡಿಕ್ರಿಗಳಿಂದ ಕಂಡು ಬಂದಂತೆ ಅರ್ಜಿದಾರನ ಹಣಕಾಸಿನ ಸ್ಥಿತಿ;

(ಬಿ) ಅರ್ಜಿಯ ಪರಿಶೀಲನೆಯ ದಿನಾಂಕಕ್ಕೆ ಮುಂಚೆ ಹದಿನೈದು ದಿನಗಳಿಂದ ಲೆಕ್ಕ ಹಾಕಿದ ಹನ್ನೆರಡು ತಿಂಗಳೊಳಗೆ ಅರ್ಜಿದಾರನು ಮಜಲು ವಾಹನ ಸೇವೆಯನ್ನು ನಡೆಸಿದ ಕಾರಣದಿಂದ ಎಸಗಿದ ಈ ಕೆಳಕಂಡ ಅಪರಾಧಗಳಲ್ಲಿ ಯಾವುದೇ ಅಪರಾಧಕ್ಕಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಲ ಅರ್ಜಿದಾರನು ದಂಡಿತನಾಗಿರುವುದು, ಎಂದರೆ:-

(i) (1) ಅಂಥ ವಾಹನದ ಮೇಲೆ ಬಾಕಿಯಿರುವ ತೆರಿಗೆಯನ್ನು ಸಂದಾಯ ಮಾಡದೆ;

(2) ಅಂಥ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಸಲಾದ ಹೆಚ್ಚಿನ ಅವಧಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೆ ಮತ್ತು ಆ ತರುವಾಯ ಅಂಥ ವಾಹನವನ್ನು ನಡೆಸುವುದನ್ನು ನಿಲ್ಲಿಸದೆ;

(3) ಯಾವುದೇ ಅನಧಿಕೃತ ಮಾರ್ಗದಲ್ಲಿ ಯಾವುದೇ ವಾಹನವನ್ನು ನಡೆಸುವುದು;

(ii) ಅನಧಿಕೃತ ಟ್ರಿಪ್ಪುಗಳನ್ನು ನಡೆಸುವುದು:

ಪರಂತು, (ಬಿ) ಖಂಡದ ಉದ್ದೇಶಕ್ಕಾಗಿ ದಂಡನೆಗಳ ಸಂಖ್ಯೆಯನ್ನು ಲೆಕ್ಕ ಹಾಕುವಾಗ ಅಪೀಲು ಪ್ರಾಧಿಕಾರದ ಆದೇಶದಿಂದ ತಡೆಹಿಡಿದ ಯಾವುದೇ ದಂಡನೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಈ ಉಪ ಪ್ರಕರಣದ ಮೇರೆಗಿನ ಯಾವುದೇ ಅರ್ಜಿಯನ್ನು, ಅರ್ಜಿದಾರನಿಗೆ ಸುನಾವಣೆಗಾಗಿ ಒಂದು ಅವಕಾಶವನ್ನು ಕೊಟ್ಟ ಹೊರತು ನಿರಾಕರಿಸತಕ್ಕದ್ದಲ್ಲ.

(5) ಪರ್ಮಿಟ್ಟಿನ ಅವಧಿ ಮುಗಿದ ತರುವಾಯ, ಈ ಪ್ರಕರಣದ ಮೇರೆಗೆ ಅದನ್ನು ನವೀಕರಿಸಿದ್ದಲ್ಲಿ ಅಂಥ ನವೀಕರಣೆಯು, 87ನೇ ಪ್ರಕರಣದ (ಡಿ) ಖಂಡದ ಮೇರೆಗೆ ತಾತ್ಕಾಲಿಕ ಪರ್ಮಿಟ್ಟನ್ನು ನೀಡಿರಲಿ ಅಥವಾ ಇಲ್ಲದಿರಲಿ ಅಂಥ ಮುಕ್ತಾಯದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು ಮತ್ತು ತಾತ್ಕಾಲಿಕ ಪರ್ಮಿಟ್ಟನ್ನು ನೀಡಿರುವಲ್ಲಿ, ಅಂಥ ತಾತ್ಕಾಲಿಕ ಪರ್ಮಿಟ್ಟಿನ ಸಂಬಂಧದಲ್ಲಿ ಸಂದಾಯ ಮಾಡಿದ ಫೀಜನ್ನು ಮರುಪಾವತಿ ಮಾಡತಕ್ಕದ್ದು.

82. ಪರ್ಮಿಟ್ಟಿನ ವರ್ಗಾವಣೆ:- (1) (2)ನೇ ಉಪ ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು, ಪರ್ಮಿಟ್ಟನ್ನು, ಅದನ್ನು ನೀಡಿದ ಸಾರಿಗೆ ಪ್ರಾಧಿಕಾರದ ಅನುಮತಿಯಿಂದ ಹೊರತು, ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ವರ್ಗಾಯಿಸತಕ್ಕದ್ದಲ್ಲ ಮತ್ತು ಅಂಥ ಅನುಮತಿಯಿಲ್ಲದೆ ಈ ಪರ್ಮಿಟ್ಟಿಗೆ ಒಳಪಟ್ಟ ವಾಹನವನ್ನು ಯಾವ ವ್ಯಕ್ತಿಗೆ ವರ್ಗಾಯಿಸಲಾಗಿದೆಯೋ ಆ ಯಾರೇ ವ್ಯಕ್ತಿಗೆ ಪರ್ಮಿಟ್ಟಿನ ಮೂಲಕ ಅಧಿಕೃತಗೊಳಿಸಿದ ರೀತಿಯಲ್ಲಿ ಆ ವಾಹನವನ್ನು ಉಪಯೋಗಿಸಲು ಯಾವುದೇ ಹಕ್ಕನ್ನು ನೀಡತಕ್ಕದ್ದಲ್ಲ.

(2) ಪರ್ಮಿಟ್ಟುಧಾರಕನು ಮೃತನಾದಲ್ಲಿ ಆ ಪರ್ಮಿಟ್ಟಿಗೆ ಒಳಪಟ್ಟಿರುವ ವಾಹನದ ಸ್ವಾಧೀನವನ್ನು ಪಡೆಯುವ ವ್ಯಕ್ತಿಯು ಆ ಪರ್ಮಿಟ್ಟನ್ನು ತನಗೆ ನೀಡಲಾಗಿತ್ತು ಎಂಬಂತೆ ಮೂರು ತಿಂಗಳುಗಳ ಅವಧಿಯವರೆಗೆ ಅದನ್ನು ಉಪಯೋಗಿಸಬಹುದು:

ಪರಂತು, ಅಂಥ ವ್ಯಕ್ತಿಯು ಪರ್ಮಿಟ್ಟುಧಾರಕನು ಮೃತನಾದ ಮೂವತ್ತು ದಿನಗಳೊಳಗಾಗಿ ಧಾರಕನು ಮೃತಪಟ್ಟ ಬಗ್ಗೆ ಮತ್ತು ಪರ್ಮಿಟ್ಟನ್ನು ತಾನು ಉಪಯೋಗಿಸುವ ಆಶಯದ ಬಗ್ಗೆ ಪರ್ಮಿಟ್ಟು ನೀಡಿದ ಸಾರಿಗೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಪರ್ಮಿಟ್ಟನ್ನು, ಮೃತನಾದ ಪರ್ಮಿಟ್ಟುಧಾರಕನು ಅದನ್ನು ನವೀಕರಿಸದೆ ಇದ್ದು ಯಾವ ದಿನಾಂಕದಂದು ಅದು ಪರಿಣಾಮಕಾರಿಯಾಗಿರುವುದು ಮುಕ್ತಾಯವಾಗುತ್ತಿತ್ತೋ ಆ ದಿನಾಂಕದ ತರುವಾಯ ಹಾಗೆ ಉಪಯೋಗಿಸತಕ್ಕದ್ದಲ್ಲ.

(3) ಸಾರಿಗೆ ಪ್ರಾಧಿಕಾರವು ಪರ್ಮಿಟ್ಟುಧಾರಕನ ಮರಣದ ತರುವಾಯ ಮೂರು ತಿಂಗಳೊಳಗೆ ತನಗೆ ಸಲ್ಲಿಸಿದ ಅರ್ಜಿಯ ಮೇಲೆ ಆ ಪರ್ಮಿಟ್ಟಿಗೆ ಒಳಪಟ್ಟಿರುವ ವಾಹನಗಳ ಸ್ವಾಧೀನವನ್ನು ಹೊಂದುವ ವ್ಯಕ್ತಿಗೆ ಆ ಪರ್ಮಿಟ್‌ನ್ನು ವರ್ಗಾಯಿಸಬಹುದು:

ಪರಂತು, ಸಾರಿಗೆ ಪ್ರಾಧಿಕಾರವು, ಅರ್ಜಿದಾರನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸೂಕ್ತ ಮತ್ತು ಸಾಕಷ್ಟು ಕಾರಣದಿಂದ ತಡೆಯಲ್ಪಟ್ಟಿದ್ದನೆಂದು ಅದಕ್ಕೆ ಮನದಟ್ಟಾದರೆ ಸದರಿ ಮೂರು ತಿಂಗಳ ಅವಧಿಯು ಮುಕ್ತಾಯವಾದ ತರುವಾಯ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಬಹುದು.

83. ವಾಹನಗಳ ಬದಲಾವಣೆ:- ಪರ್ಮಿಟ್ಟುಧಾರಕನು, ಪರ್ಮಿಟ್‌ನ್ನು ನೀಡಿದ ಪ್ರಾಧಿಕಾರದ ಅನುಮತಿಯನ್ನು ಪಡೆದು ಪರ್ಮಿಟ್ಟಿಗೆ ಒಳಪಟ್ಟ ಯಾವುದೇ ವಾಹನಕ್ಕೆ ಬದಲಾಗಿ ಅದೇ ಬಗೆಯ ಯಾವುದೇ ಇತರ ವಾಹನವನ್ನು ಪಡೆದುಕೊಳ್ಳಬಹುದು.

84. ಎಲ್ಲ ಪರ್ಮಿಟ್ಟುಗಳಿಗೆ ಲಗತ್ತಿಸುವ ಸಾಮಾನ್ಯ ಷರತ್ತುಗಳು:- ಈ ಕೆಳಕಂಡ ಷರತ್ತುಗಳು ಪ್ರತಿಯೊಂದು ಪರ್ಮಿಟ್ಟಿನ ಷರತ್ತುಗಳಾಗಿರತಕ್ಕದ್ದು,-

(ಎ) ಪರ್ಮಿಟ್ಟಿಗೆ ಸಂಬಂಧಪಟ್ಟ ವಾಹನವು, 56ನೇ ಪ್ರಕರಣದ ಮೇರೆಗೆ ನೀಡಲಾದ, ಸಿಂಧುವಾದ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಎಲ್ಲಾ ಸಮಯಗಳಲ್ಲಿ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪೂರೈಸುವ ಹಾಗೆ ಇಟ್ಟುಕೊಂಡು ಬರತಕ್ಕದ್ದು;

(ಬಿ) ಪರ್ಮಿಟ್ಟಿಗೆ ಸಂಬಂಧಪಟ್ಟ ವಾಹನವನ್ನು, ಈ ಅಧಿನಿಯಮದ ಮೇರೆಗೆ ಅನುಮತಿಸಲಾದ ವೇಗದ ಮಿತಿಯನ್ನು ಮೀರಿ ಓಡಿಸತಕ್ಕದ್ದಲ್ಲ;

(ಸಿ) ವಿಧಿಸಲಾದ ಯಾವುದೇ ನಿಷೇಧ ಅಥವಾ ನಿರ್ಬಂಧವನ್ನು ಮತ್ತು 67ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಮೂಲಕ ನಿಗಡಿಪಡಿಸಿದ ಯಾವುವೇ ಹಾಸಲುಗಳು ಅಥವಾ ಸಾಗಣೆ ಬಾಡಿಗೆಗಳನ್ನು ಪರ್ಮಿಟ್ಟಿಗೆ ಸಂಬಂಧಪಟ್ಟ ವಾಹನದ ಸಂಬಂಧದಲ್ಲಿ ವಿಧಿಸತಕ್ಕದ್ದು;

(ಡಿ) ಪರ್ಮಿಟ್ಟಿಗೆ ಸಂಬಂಧಪಟ್ಟ ವಾಹನವನ್ನು, 5ನೇ ಪ್ರಕರಣದ ಅಥವಾ 113ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಓಡಿಸತಕ್ಕದ್ದಲ್ಲ;

(ಇ) ಚಾಲಕರ ಕೆಲಸದ ವೇಳೆಯನ್ನು ಮಿತಿಗೊಳಿಸುವ ಈ ಅಧಿನಿಯಮದ ಉಪಬಂಧಗಳನ್ನು ಪರ್ಮಿಟ್ಟಿಗೆ ಸಂಬಂಧಪಟ್ಟ ಯಾವುದೇ ವಾಹನ ಅಥವಾ ವಾಹನಗಳ ಸಂಬಂಧದಲ್ಲಿ ಪಾಲಿಸತಕ್ಕದ್ದು;

(ಎಫ್) X, XI ಮತ್ತು XII ನೇ ಅಧ್ಯಾಯಗಳ ಉಪಬಂಧಗಳನ್ನು ಪರ್ಮಿಟ್ಟುಧಾರಕನಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಅವುಗಳನ್ನು ಪಾಲಿಸತಕ್ಕದ್ದು; ಮತ್ತು

(ಜಿ) ನಿರ್ವಹಣೆಗಾರನ ಹೆಸರು ಮತ್ತು ವಿಳಾಸವನ್ನು ಪರ್ಮಿಟ್ಟಿಗೆ ಸಂಬಂಧಪಟ್ಟ ಪ್ರತಿಯೊಂದು ವಾಹನದ ಒಡಲಿನ ಹೊರಭಾಗದ ಮೇಲೆ ಅದರ ಎರಡೂ ಕಡೆಗಳಲ್ಲಿ ಕಿಟಕಿ ಸಾಲಿನ ಕೆಳಗೆ ಸಾಧ್ಯವಾದಷ್ಟು ಎತ್ತರದಲ್ಲಿ ವಾಹನದ ಬಣ್ಣಕ್ಕೆ ಸ್ಪಷ್ಟವಾಗಿ ವ್ಯತಿರಿಕ್ತವಾದ ಬಣ್ಣ ಅಥವಾ ಬಣ್ಣಗಳಲ್ಲಿ ದಪ್ಪ ಅಕ್ಷರಗಳಲ್ಲಿ ಬರೆಯತಕ್ಕದ್ದು ಅಥವಾ ಅನ್ಯಥಾ ಸ್ಥಿರವಾಗಿ ಅದಕ್ಕೆ ಅಂಟಿಸತಕ್ಕದ್ದು.

85. ಪರ್ಮಿಟ್ಟುಗಳ ಸಾಮಾನ್ಯ ನಮೂನೆ:- ಈ ಅಧಿನಿಯಮದ ಮೇರೆಗೆ ನೀಡಲಾದ ಪ್ರತಿಯೊಂದು ಪರ್ಮಿಟ್ಟು, ಸ್ವಯಂ ಪೂರ್ಣವಾಗಿರತಕ್ಕದ್ದು ಮತ್ತು ಪರ್ಮಿಟ್ಟಿನ ಎಲ್ಲಾ ಅವಶ್ಯಕ ವಿವರಗಳನ್ನು ಮತ್ತು ಅದಕ್ಕೆ ಲಗತ್ತಿಸಿದ ಷರತ್ತುಗಳನ್ನು ಒಳಗೊಂಡಿರತಕ್ಕದ್ದು.

86. ಪರ್ಮಿಟ್ಟುಗಳ ರದ್ದಿಯಾತಿ ಮತ್ತು ಅಮಾನತು:- (1) ಪರ್ಮಿಟ್ಟನ್ನು ನೀಡುವ ಸಾರಿಗೆ ಪ್ರಾಧಿಕಾರವು,-

(ಎ) 84ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಷರತ್ತನ್ನು ಅಥವಾ ಪರ್ಮಿಟ್ಟಿನಲ್ಲಿರುವ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಪರ್ಮಿಟ್ಟುಧಾರಕನು, ಪರ್ಮಿಟ್ಟಿನಿಂದ ಅಧಿಕೃತಗೊಳಿಸದ ಯಾವುದೇ ರೀತಿಯಲ್ಲಿ ವಾಹನವನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸುವಂತೆ ಮಾಡಿದರೆ ಅಥವಾ ಉಪಯೋಗಿಸಲು ಅವಕಾಶ ಕೊಟ್ಟರೆ; ಅಥವಾ

(ಸಿ) ಪರ್ಮಿಟ್ಟುಧಾರಕನು ಪರ್ಮಿಟ್ಟಿಗೆ ಒಳಪಟ್ಟಿರುವ ವಾಹನವನ್ನು ಹೊಂದಿರುವುದು ನಿಂತುಹೋದರೆ; ಅಥವಾ

(ಡಿ) ಪರ್ಮಿಟ್ಟುಧಾರಕನು ಮೋಸದಿಂದ ಅಥವಾ ತಪ್ಪು ನಿರೂಪಣೆಯ ಮೂಲಕ ಪರ್ಮಿಟ್ಟನ್ನು ಪಡೆದಿದ್ದರೆ; ಅಥವಾ

(ಇ) ಸರಕು ವಾಹನದ ಪರ್ಮಿಟ್ಟುಧಾರಕನು ಯಾವ ಉದ್ದೇಶಗಳಿಗಾಗಿ ಪರ್ಮಿಟ್ಟನ್ನು ನೀಡಲಾಗಿದೆಯೋ ಆ ಉದ್ದೇಶಗಳಿಗಾಗಿ ಆ ವಾಹನವನ್ನು ಯುಕ್ತ ಕಾರಣಗಳಿಲ್ಲದೆ ಉಪಯೋಗಿಸಲು ತಪ್ಪಿದರೆ; ಅಥವಾ

(ಎಫ್) ಪರ್ಮಿಟ್ಟು ಧಾರಕನು ಯಾವುದೇ ವಿದೇಶದ ಪೌರತ್ವವನ್ನು ಪಡೆದರೆ

- ಪರ್ಮಿಟ್ಟನ್ನು ರದ್ದುಗೊಳಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಅವಧಿಗೆ ಅಮಾನತುಗೊಳಿಸಬಹುದು:

ಪರಂತು, ಪರ್ಮಿಟ್ಟು ಧಾರಕನಿಗೆ, ಅವನ ವಿವರಣೆಯನ್ನು ಒದಗಿಸಲು ಅವಕಾಶವನ್ನು ಕೊಟ್ಟ ಹೊರತು ಯಾವುದೇ ಪರ್ಮಿಟ್ಟನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತುಗೊಳಿಸತಕ್ಕದ್ದಲ್ಲ.

(2) ಸಾರಿಗೆ ಪ್ರಾಧಿಕಾರವು, (1)ನೇ ಉಪ ಪ್ರಕರಣದ ಮೇರೆಗೆ ತನಗೆ ಪ್ರದಾನ ಮಾಡಿದ ಅಧಿಕಾರಗಳನ್ನು, 68ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ, ಈ ಬಗ್ಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾದ ಯಾವುದೇ ಪ್ರಾಧಿಕಾರ ಅಥವಾ ಯಾರೇ ವ್ಯಕ್ತಿಯು ನೀಡಿದ ಪರ್ಮಿಟ್ಟಿನ ಸಂಬಂಧದಲ್ಲಿ, ಸದರಿ ಪರ್ಮಿಟ್ಟನ್ನು ಸಾರಿಗೆ ಪ್ರಾಧಿಕಾರ ನೀಡಿದ್ದ ಪರ್ಮಿಟ್ಟು ಎಂಬಂತೆ ಚಲಾಯಿಸಬಹುದು.

(3) ಸಾರಿಗೆ ಪ್ರಾಧಿಕಾರವು ಪರ್ಮಿಟ್ಟನ್ನು ರದ್ದುಗೊಳಿಸಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ಅದು ತಾನು ಕೈಗೊಂಡ ಕ್ರಮದ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ಪರ್ಮಿಟ್ಟುಧಾರಕನಿಗೆ ತಿಳಿಸತಕ್ಕದ್ದು.

(4) ಪರ್ಮಿಟ್ಟನ್ನು ನೀಡಿದ್ದ ಸಾರಿಗೆ ಪ್ರಾಧಿಕಾರವು, (ಪರ್ಮಿಟ್ಟನ್ನು ರದ್ದುಗೊಳಿಸುವ ಅಧಿಕಾರವನ್ನು ಹೊರತುಪಡಿಸಿ) (1)ನೇ ಉಪ ಪ್ರಕರಣದ ಮೇರೆಗೆ ಚಲಾಯಿಸಬಹುದಾದ ಅಧಿಕಾರಗಳನ್ನು, 68ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಅಂಥ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾದ ಯಾವುದೇ ಪ್ರಾಧಿಕಾರವು ಅಥವಾ ವ್ಯಕ್ತಿಯು ಚಲಾಯಿಸಬಹುದು.

(5) (1)ನೇ ಉಪ ಪ್ರಕರಣದ (ಎ) ಖಂಡ ಅಥವಾ (ಬಿ)ಖಂಡ ಅಥವಾ (ಇ) ಖಂಡದ ಮೇರೆಗೆ ಪರ್ಮಿಟ್ಟು ರದ್ದಿಯಾತಿಗೆ ಅಥವಾ ಅಮಾನತಿಗೆ ಗುರಿಯಾಗಬಹುದಾಗಿರುವಲ್ಲಿ ಮತ್ತು ಸಾರಿಗೆ ಪ್ರಾಧಿಕಾರವು ಆ ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿರಿಸಿ ಪರ್ಮಿಟ್ಟುಧಾರಕನು ನಿರ್ದಿಷ್ಟ ಹಣದ ಮೊತ್ತವನ್ನು ಸಂದಾಯ ಮಾಡಲು ಒಪ್ಪಿದರೆ, ಪರ್ಮಿಟ್ಟನ್ನು ಹಾಗೆ ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಅಗತ್ಯವಿಲ್ಲವೆಂದು ಅಥವಾ ಹಾಗೆ ಮಾಡುವುದು ಯುಕ್ತವಲ್ಲವೆಂದು ಅಭಿಪ್ರಾಯಪಟ್ಟರೆ, (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಸಾರಿಗೆ ಪ್ರಾಧಿಕಾರವು ಸಂದರ್ಭಾನುಸಾರ ಪರ್ಮಿಟ್ಟನ್ನು ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಅಗತ್ಯವಿಲ್ಲವೆಂದು ಅಥವಾ ಹಾಗೆ ಮಾಡುವುದು ಯುಕ್ತವಲ್ಲವೆಂದು ಅಭಿಪ್ರಾಯಪಟ್ಟರೆ, (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಸಾರಿಗೆ ಪ್ರಾಧಿಕಾರವು ಸಂದರ್ಭಾನುಸಾರ ಪರ್ಮಿಟ್ಟನ್ನು ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಬದಲು, ಕೊಡಲು ಒಪ್ಪಿಕೊಂಡ ಹಣದ ಮೊತ್ತವನ್ನು ಪರ್ಮಿಟ್ಟುಧಾರಕನಿಂದ ವಸೂಲು ಮಾಡಬಹುದು.

(6) ಸಾರಿಗೆ ಪ್ರಾಧಿಕಾರವು, (5)ನೇ ಉಪ ಪ್ರಕರಣದ ಮೇರೆಗೆ ಚಲಾಯಿಸಬಹುದಾದ ಅಧಿಕಾರಗಳನ್ನು, 89ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲಾಗಿರುವಲ್ಲಿ ಅಪೀಲು ಪ್ರಾಧಿಕಾರವೂ ಚಲಾಯಿಸಬಹುದು.

(7) 88ನೇ ಪ್ರಕರಣದ (9)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಪರ್ಮಿಟ್ಟಿಗೆ ಸಂಬಂಧಿಸಿದ ಪರ್ಮಿಟ್ಟನ್ನು ನೀಡಿದ ಸಾರಿಗೆ ಪ್ರಾಧಿಕಾರವು, (1)ನೇ ಉಪ ಪ್ರಕರಣದ ಮೇರೆಗೆ ಚಲಾಯಿಸಬಹುದಾದ (ಪರ್ಮಿಟ್ಟನ್ನು ರದ್ದುಗೊಳಿಸುವ ಅಧಿಕಾರವನ್ನು ಹೊರತುಪಡಿಸಿ) ಅಧಿಕಾರಗಳನ್ನು, 68ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಈ ಬಗ್ಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುವ ಯಾವುದೇ ಸಾರಿಗೆ ಪ್ರಾಧಿಕಾರ ಮತ್ತು ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಗಳು, ಸದರಿ ಪರ್ಮಿಟ್ಟನ್ನು ಅಂಥ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಗಳು ನೀಡಿದ್ದ ಪರ್ಮಿಟ್ಟು ಎಂಬಂತೆ ಚಲಾಯಿಸಬಹುದು.

87. ತಾತ್ಕಾಲಿಕ ಪರ್ಮಿಟ್ಟುಗಳು:- ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮತ್ತು ರಾಜ್ಯ ಸಾರಿಗೆ ಪ್ರಾಧಿಕಾರವು, 80ನೇ ಪ್ರಕರಣದಲ್ಲಿ ವಿಧಿಸಲಾದ ಪ್ರಕ್ರಿಯೆಯನ್ನು ಅನುಸರಿಸದೆ,-

(ಎ) ಜಾತ್ರೆಗಳು ಮತ್ತು ಧಾರ್ಮಿಕ ಕೂಟಗಳಿಗೆ ಕರೆದುಕೊಂಡು ಹೋಗಿ ಬರುವಂಥ ವಿಶೇಷ ಸಂದರ್ಭಗಳಲ್ಲಿ ಪ್ರಯಾಣಿಕರನ್ನು ಸಾಗಿಸಲು; ಅಥವಾ

(ಬಿ) ಸಾಮಯಿಕ ವ್ಯವಹಾರದ ಉದ್ದೇಶಗಳಿಗಾಗಿ; ಅಥವಾ

(ಸಿ) ಒಂದು ನಿರ್ದಿಷ್ಟ ತಾತ್ಕಾಲಿಕ ಅವಶ್ಯಕತೆಯನ್ನು ಪೂರೈಸಲು; ಅಥವಾ

(ಡಿ) ಪರ್ಮಿಟ್ಟಿನ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯ ತೀರ್ಮಾನದವರೆಗೆ

- ಸಾರಿಗೆ ವಾಹನವನ್ನು ತಾತ್ಕಾಲಿಕವಾಗಿ ಉಪಯೋಗಿಸಲು ಅಧಿಕೃತಗೊಳಿಸುವ ಯಾವುದೇ ಸಂದರ್ಭದಲ್ಲಿ ನಾಲ್ಕು ತಿಂಗಳನ್ನು ಮೀರದ ಒಂದು ಸೀಮಿತ ಅವಧಿಗೆ ಜಾರಿಯಲ್ಲಿರಲು ಪರ್ಮಿಟ್ಟುಗಳನ್ನು ನೀಡಬಹುದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ಷರತ್ತುಗಳನ್ನು ಅಂಥ ಯಾವುದೇ ಪರ್ಮಿಟ್ಟಿಗೆ ಲಗತ್ತಿಸಬಹುದು:

ಪರಂತು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸಾರಿಗೆ ಪ್ರಾಧಿಕಾರವು, ಸರಕು ವಾಹನಗಳ ಸಂದರ್ಭದಲ್ಲಿ ಅಸಾಧಾರಣ ಸ್ವರೂಪದ ಪರಿಸ್ಥಿತಿಗಳಲ್ಲಿ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನಾಲ್ಕು ತಿಂಗಳುಗಳಿಗೆ ಮೀರಿದ, ಆದರೆ ಒಂದು ವರ್ಷಕ್ಕೆ ಮೀರದ ಅವಧಿಗೆ ಪರ್ಮಿಟ್ಟನ್ನು ನೀಡಬಹುದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ,-

(i) ನ್ಯಾಯಾಲಯ ಅಥವಾ ಇತರ ಸಕ್ಷಮ ಪ್ರಾಧಿಕಾರವು, ಯಾವುದೇ ಮಾರ್ಗ ಅಥವಾ ಕ್ಷೇತ್ರದ ಸಂಬಂಧದಲ್ಲಿ ಪರ್ಮಿಟ್ಟು ನೀಡುವುದನ್ನು ನಿರ್ಬಂಧಿಸಿ ಆದೇಶವನ್ನು ಮಾಡಿರುವ ಕಾರಣದಿಂದಾಗಿ 72ನೇ ಪ್ರಕರಣ ಅಥವಾ 74ನೇ ಪ್ರಕರಣ ಅಥವಾ 76ನೇ ಪ್ರಕರಣ ಅಥವಾ 79ನೇ ಪ್ರಕರಣದ ಮೇರೆಗೆ ಯಾವುದೇ ಪರ್ಮಿಟ್ಟನ್ನು ನೀಡಲು ಸಾಧ್ಯವಿಲ್ಲದಿರುವಲ್ಲಿ, ಪರ್ಮಿಟ್ಟು ನೀಡಿಕೆಯನ್ನು ಯಾವ ಅವಧಿಗಾಗಿ ನಿರ್ಬಂಧಿಸಲಾಗಿದೆಯೋ ಆ ಅವಧಿಯನ್ನು ಮೀರದ ಅವಧಿಗೆ; ಅಥವಾ

(ii) ಯಾವುದೇ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದೇ ವಾಹನದ ಪರ್ಮಿಟ್ಟನ್ನು ನ್ಯಾಯಾಲಯ ಅಥವಾ ಇತರ ಸಕ್ಷಮ ಪ್ರಾಧಿಕಾರವು ಅಮಾನತುಗೊಳಿಸಿದ ಪರಿಣಾಮವಾಗಿ ಆ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಸಿಂಧುವಾದ ಪರ್ಮಿಟ್ಟನ್ನು ಹೊಂದಿದ ಅದೇ ವರ್ಗದ ಸಾರಿಗೆ ವಾಹನವಿಲ್ಲದಿರುವಲ್ಲಿ ಅಥವಾ ಆ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಅಂಥ ವಾಹನಗಳು ಸಾಕಷ್ಟು ಸಂಖ್ಯೆಯಲ್ಲಿ ಇರದಿರುವಲ್ಲಿ ಅಂಥ ಅಮಾನತ್ತಿನ ಅವಧಿಯನ್ನು ಮೀರಿದ ಅವಧಿಗೆ

- ಆ ಯಾವುದೇ ಮಾರ್ಗಕ್ಕೆ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಅವುಗಳ ಮೇರೆಗೆ ತಾತ್ಕಾಲಿಕ ಪರ್ಮಿಟ್ಟನ್ನು ನೀಡಬಹುದು:

ಪರಂತು, ಯಾವ ಸಾರಿಗೆ ವಾಹನಗಳ ಸಂಬಂಧದಲ್ಲಿ ತಾತ್ಕಾಲಿಕ ಪರ್ಮಿಟ್ಟುಗಳನ್ನು ಹಾಗೆ ನೀಡಲಾಗಿದೆಯೋ ಆ ವಾಹನಗಳ ಸಂಖ್ಯೆಯು, ಪರ್ಮಿಟ್ಟು ನೀಡಿಕೆಯನ್ನು ನಿರ್ಬಂಧಿಸಲಾಗಿರುವ ಅಥವಾ ಪರ್ಮಿಟ್ಟನ್ನು ಅಮಾನತುಗೊಳಿಸಲಾಗಿರುವ ವಾಹನಗಳ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

88. ಪರ್ಮಿಟ್ಟುಗಳನ್ನು ನೀಡಿರುವ ಪ್ರದೇಶದ ಹೊರಗೆ ಉಪಯೋಗಕ್ಕಾಗಿ ಅವುಗಳನ್ನು ಸಿಂಧುಗೊಳಿಸುವುದು:- (1) ಅನ್ಯಥಾ ನಿಯಮಿಸಬಹುದಾದಂತೆ ಹೊರತು, ಯಾವುದೇ ಒಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ನೀಡಿದ ಪರ್ಮಿಟ್ಟು, ಅದು ಯಾವುದೇ ಇತರ ಪ್ರದೇಶದಲ್ಲಿ ಆ ಇತರ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದಕ್ಕೆ ಮೇಲುರುಜು ಮಾಡಿದ ಹೊರತು ಸಿಂಧುವಾಗಿರತಕ್ಕದ್ದಲ್ಲ ಮತ್ತು ಯಾವುದೇ ಒಂದು ರಾಜ್ಯದಲ್ಲಿ ನೀಡಿದ ಪರ್ಮಿಟ್ಟು ಯಾವುದೇ ಇತರ ರಾಜ್ಯದಲ್ಲಿ, ಆ ಇತರ ರಾಜ್ಯದ ಸಾರಿಗೆ ಪ್ರಾಧಿಕಾರವು ಅಥವಾ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದಕ್ಕೆ ಮೇಲು ರುಜು ಮಾಡಿದ ಹೊರತು ಸಿಂಧುವಾಗಿರತಕ್ಕದ್ದಲ್ಲ:

ಪರಂತು, ಯಾವುದೇ ಒಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಅದೇ ರಾಜ್ಯದೊಳಗಿನ ಯಾವುದೇ ಇತರ ಪ್ರದೇಶ ಅಥವಾ ಪ್ರದೇಶಗಳಲ್ಲಿನ ಯಾವುದೇ ಕ್ಷೇತ್ರಕ್ಕಾಗಿ ನೀಡಿದ ಸರಕು ವಾಹನದ ಪರ್ಮಿಟ್ಟು, ಆ ಇತರ ಪ್ರದೇಶದ ಅಥವಾ ಸಂಬಂಧಪಟ್ಟ ಇತರ ಪ್ರದೇಶಗಳಲ್ಲಿನ ಪ್ರತಿಯೊಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮೇಲು ರುಜುವಿಲ್ಲದೆ ಆ ಕ್ಷೇತ್ರದಲ್ಲಿ ಸಿಂಧುವಾಗಿರತಕ್ಕದ್ದು:

ಮತ್ತೂ ಪರಂತು, ಮಾರ್ಗದ ಆರಂಭ ಸ್ಥಳ ಮತ್ತು ಕೊನೆಯ ಸ್ಥಳಗಳೆರಡೂ ಒಂದೇ ರಾಜ್ಯದೊಳಗಿದ್ದು, ಆದರೆ ಅಂಥ ಮಾರ್ಗದ ಭಾಗವು ಇತರ ಯಾವುದೇ ರಾಜ್ಯದಲ್ಲಿದ್ದರೆ ಮತ್ತು ಅಂಥ ಭಾಗದ ಉದ್ದವು ಹದಿನಾರು ಕಿಲೋಮೀಟರುಗಳನ್ನು ಮೀರದಿದ್ದರೆ, ಆ ಪರ್ಮಿಟ್ಟು, ಅಂಥ ಪರ್ಮಿಟ್ಟಿಗೆ ಇತರ ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮೇಲುರುಜು ಮಾಡದಿದ್ದರೂ ಇನ್ನೊಂದು ರಾಜ್ಯದಲ್ಲಿರುವ ಮಾರ್ಗದ ಆ ಭಾಗಕ್ಕೆ ಸಂಬಂಧಿಸಿ ಆ ಇನ್ನೊಂದು ರಾಜ್ಯದಲ್ಲಿಯೂ ಸಿಂಧುವಾಗಿರತಕ್ಕದ್ದು:

ಇದೂ ಅಲ್ಲದೆ,-

(ಎ) ಒಂದು ರಾಜ್ಯದಲ್ಲಿ ನೀಡಿದ ಪರ್ಮಿಟ್ಟಿಗೆ ಒಳಪಟ್ಟ ಮೋಟಾರು ವಾಹನವನ್ನು ಇತರ ಯಾವುದೇ ರಾಜ್ಯದಲ್ಲಿ ರಕ್ಷಣಾ ಉದ್ದೇಶಗಳಿಗಾಗಿ ಉಪಯೋಗಿಸಬೇಕಾಗಿರುವಲ್ಲಿ ಅಂಥ ವಾಹನವು ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಗೆ, ರಕ್ಷಣಾ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸತಕ್ಕದ್ದು ಎಂಬುದಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಪ್ರಾಧಿಕಾರವು ನೀಡಿದ ಒಂದು ಪ್ರಮಾಣ ಪತ್ರವನ್ನು ಪ್ರದರ್ಶಿಸತಕ್ಕದ್ದು; ಮತ್ತು

(ಬಿ) ಅಂಥ ಯಾವುದೇ ಪರ್ಮಿಟ್ಟು, ಆ ಇನ್ನೊಂದು ರಾಜ್ಯದಲ್ಲಿ, ಆ ಇನ್ನೊಂದು ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದಕ್ಕೆ ಮೇಲು ರುಜು ಮಾಡದಿದ್ದರೂ ಸಿಂಧುವಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸಾರಿಗೆ ಪ್ರಾಧಿಕಾರವು ನೀಡಿದ ಅಥವಾ ಮೇಲು ರುಜು ಮಾಡಿದ ಪರ್ಮಿಟ್ಟು, ಇಡೀ ರಾಜ್ಯದಲ್ಲಿ ಅಥವಾ ಆ ಪರ್ಮಿಟ್ಟಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯದೊಳಗಿನ ಅಂಥ ಪ್ರದೇಶಗಳಲ್ಲಿ ಸಿಂಧುವಾಗಿರತಕ್ಕದ್ದು.

(3) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಪರ್ಮಿಟ್ಟಿಗೆ ಮೇಲು ರುಜು ಮಾಡುವಾಗ, ಆ ಪರ್ಮಿಟ್ಟನ್ನು ತಾನು ನೀಡಿದ್ದರೆ ತಾನು ವಿಧಿಸಬಹುದಾಗಿದ್ದ ಯಾವುದೇ ಷರತ್ತನ್ನು ಆ ಪರ್ಮಿಟ್ಟಿಗೆ ಲಗತ್ತಿಸಬಹುದು ಮತ್ತು ಅದೇ ರೀತಿಯಲ್ಲಿ ಪರ್ಮಿಟ್ಟನ್ನು ನೀಡಿದ ಪ್ರಾಧಿಕಾರವು ಪರ್ಮಿಟ್ಟಿಗೆ ಲಗತ್ತಿಸಿದ ಯಾವುದೇ ಷರತ್ತನ್ನು ವ್ಯತ್ಯಾಸಗೊಳಿಸಬಹುದು.

(4) ಪರ್ಮಿಟ್ಟುಗಳ ನೀಡಿಕೆ ರದ್ದಿಯಾತಿ ಮತ್ತು ಅಮಾನತು ಇವುಗಳಿಗೆ ಸಂಬಂಧಪಟ್ಟ ಈ ಅಧ್ಯಾಯದ ಉಪಬಂಧಗಳು, ಪರ್ಮಿಟ್ಟುಗಳಿಗೆ ಮೇಲು ರುಜು ಮಾಡುವುದು, ಅವುಗಳ ರದ್ದಿಯಾತಿ ಮತ್ತು ಅಮಾನತು ಇವುಗಳಿಗೆ ಅನ್ವಯವಾಗತಕ್ಕದ್ದು:

ಪರಂತು, (5)ನೇ ಉಪ ಪ್ರಕರಣದ ಅಗತ್ಯತೆಗಳನ್ನು ಪಾಲಿಸಿದ ತರುವಾಯ ರಾಜ್ಯಗಳ ನಡುವೆ ಮಾಡಿಕೊಂಡ ಯಾವುದೇ ಒಪ್ಪಂದದ ಪರಿಣಾಮವಾಗಿ, ಯಾವುದೇ ಒಂದು ರಾಜ್ಯದಲ್ಲಿ ನೀಡಲಾದ ಪರ್ಮಿಟ್ಟುಗಳಿಗೆ ಇನ್ನೊಂದು ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮೇಲು ರುಜು ಮಾಡಬೇಕಾಗಿರುವಲ್ಲಿ, ಪರ್ಮಿಟ್ಟುಗಳಿಗೆ ಮೇಲುರುಜು ಮಾಡುವ ಬಗ್ಗೆ 80ನೇ ಪ್ರಕರಣದಲ್ಲಿ ವಿಧಿಸಲಾದ ಪ್ರಕ್ರಿಯೆಯನ್ನು ಅನುಸರಿಸುವುದು ಅವಶ್ಯಕವಾಗತಕ್ಕದ್ದಲ್ಲ.

(5) ಪ್ರತಿಯೊಂದು ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ನೀಡಲು ಅಥವಾ ಮೇಲುರುಜು ಮಾಡಲು ಪ್ರಸ್ತಾವಿಸಲಾದ ಪರ್ಮಿಟ್ಟುಗಳ ಸಂಖ್ಯೆಯನ್ನು ನಿಗದಿಪಡಿಸಲು ರಾಜ್ಯಗಳ ನಡುವೆ ಒಪ್ಪಂದವನ್ನು ಮಾಡಿಕೊಳ್ಳುವ ಪ್ರತಿಯೊಂದು ಪ್ರಸ್ತಾವವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳಲ್ಲಿ ಪ್ರತಿಯೊಂದು ಸರ್ಕಾರವು ರಾಜಪತ್ರದಲ್ಲಿ ಮತ್ತು ಒಪ್ಪಂದಕ್ಕೆ ಒಳಪಡಿಸಲು ಪ್ರಸ್ತಾವಿಸಲಾದ ಪ್ರದೇಶ ಅಥವಾ ಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚು ಪ್ರಾದೇಶಿಕ ಭಾಷಾ ವೃತ್ತ ಪತ್ರಿಕೆಗಳಲ್ಲಿ, ಯಾವ ನೋಟೀಸಿನ ದಿನಾಂಕಕ್ಕೆ ಮುಂಚೆ ಅದಕ್ಕೆ ಸಂಬಂಧಿಸಿದ ಮನವಿಗಳನ್ನು ಸಲ್ಲಿಸಬಹುದೋ ಆ ನೋಟೀಸಿನೊಂದಿಗೆ ಮತ್ತು ಅದಕ್ಕೆ ಸಂಬಂಧಿಸಿ ಸ್ವೀಕರಿಸಲಾಗುವ ಪ್ರಸ್ತಾವ ಮತ್ತು ಯಾವುದೇ ಮನವಿಯನ್ನು ಯಾವ ದಿನಾಂಕದಂದು ಪರಿಶೀಲಿಸಲಾಗುವುದೋ ಆ ದಿನಾಂಕ, ರಾಜಪತ್ರದಲ್ಲಿ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳಿಗಿಂತ ಕಡಿಮೆ ಇಲ್ಲದ ದಿನಾಂಕವಾಗಿರತಕ್ಕದ್ದು. ಅದನ್ನು ಯಾವ ಪ್ರಾಧಿಕಾರವು ಪರಿಶೀಲಿಸುವುದೋ ಆ ಪ್ರಾಧಿಕಾರ ಮತ್ತು ಯಾವ ಸಮಯ ಮತ್ತು ಸ್ಥಳದಲ್ಲಿ ಪರಿಶೀಲಿಸಲಾಗುವುದೋ ಆ ಸಮಯ ಮತ್ತು ಸ್ಥಳವನ್ನು ಪ್ರಕಟಿಸತಕ್ಕದ್ದು.

(6) ರಾಜ್ಯಗಳ ನಡುವೆ ಮಾಡಿಕೊಂಡ ಪ್ರತಿಯೊಂದು ಒಪ್ಪಂದವನ್ನು ಪರ್ಮಿಟ್ಟುಗಳಿಗೆ ಮೇಲು ರುಜು ಮಾಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳಲ್ಲಿ ಪ್ರತಿಯೊಂದು ಸರ್ಕಾರವು, ರಾಜಪತ್ರದಲ್ಲಿ ಮತ್ತು ಒಪ್ಪಂದಕ್ಕೆ ಒಳಪಡುವ ಕ್ಷೇತ್ರ ಅಥವಾ ಮಾರ್ಗದಲ್ಲಿ ಪ್ರಸಾರದಲ್ಲಿರುವ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪ್ರಾದೇಶಿಕ ಭಾಷೆಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಂಬಂಧಪಟ್ಟ ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅದನ್ನು ಕಾರ್ಯಗತಗೊಳಿಸತಕ್ಕದ್ದು.

(7) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಒಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಇನ್ನೊಂದು ಪ್ರದೇಶದಲ್ಲಿ ಅಥವಾ ರಾಜ್ಯದಲ್ಲಿ ಸಿಂಧುವಾಗಿರಲು, ಸಂದರ್ಭಾನುಸಾರ ಆ ಇನ್ನೊಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಥವಾ ಆ ಇನ್ನೊಂದು ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರವು ಸಾಮಾನ್ಯವಾಗಿ ಅಥವಾ ವಿಶೇಷ ಸಂದರ್ಭಕ್ಕಾಗಿ ಕೊಟ್ಟಂಥ ಸಹಮತಿಯೊಂದಿಗೆ 87ನೇ ಪ್ರಕರಣದ ಮೇರೆಗೆ ಒಂದು ತಾತ್ಕಾಲಿಕ ಪರ್ಮಿಟ್ಟನ್ನು ನೀಡಬಹುದು.

(8) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಆದರೆ, ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು ಯಾವುದೇ ಒಂದು ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸಾರಿಗೆ ಪ್ರಾಧಿಕಾರವು, 72ನೇ ಪ್ರಕರಣದ ಮೇರೆಗೆ ಅಥವಾ 74ನೇ ಪ್ರಕರಣದ ಮೇರೆಗೆ ಅಥವಾ ಈ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ (ಮೀಸಲು ಮಜಲು ವಾಹನವೂ ಸೇರಿ) ನೀಡಲಾದ ವಿಶೇಷ ಪರ್ಮಿಟ್ಟಿಗೆ ಒಳಪಟ್ಟು ಯಾವುದೇ ವಾಹನ ಸೇರಿದಂತೆ ಸಾರ್ವಜನಿಕ ಸೇವಾ ವಾಹನ ವ್ಯಕ್ತ ಅಥವಾ ಇಂಗಿತ ಕರಾರಿನ ಮೇರೆಗೆ, ಆ ಕರಾರಿನಲ್ಲಿ ಸೇರಿಸಿಲ್ಲದ ಪ್ರಯಾಣಿಕರನ್ನು ಮಾರ್ಗದ ಉದ್ದಕ್ಕೂ ಹತ್ತಿಸಿಕೊಳ್ಳಲು ಅಥವಾ ಇಳಿಸಲು ನಿಲ್ಲಿಸದೆ, ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಪ್ರಯಾಣಿಕ ಅಥವಾ ಪ್ರಯಾಣಿಕರನ್ನು ಒಯ್ಯಲು, ಇಡೀ ವಾಹನವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಒಂದು ವಿಶೇಷ ಪರ್ಮಿಟ್ಟನ್ನು ನೀಡಬಹುದು ಮತ್ತು ಅಂಥ ವಿಶೇಷ ಪರ್ಮಿಟ್ಟನ್ನು ನೀಡಿರುವ ಪ್ರತಿಯೊಂದು ಸಂದರ್ಭದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ನಮೂನೆ ಮತ್ತು ರೀತಿಯಲ್ಲಿ ಒಂದು ವಿಶೇಷ ವಿಭಿನ್ನಕ ಗುರುತನ್ನು ಆ ವಾಹನದ ಮೇಲೆ ಪ್ರದರ್ಶಿಸಲು ಅದಕ್ಕೆ ಕೊಡತಕ್ಕದ್ದು ಮತ್ತು ಅಂಥ ವಿಶೇಷ ಪರ್ಮಿಟ್ಟು, ಯಾವುದೇ ಇತರ ಪ್ರದೇಶ ಅಥವಾ ರಾಜ್ಯದಲ್ಲಿ ಸಂದರ್ಭಾನುಸಾರ ಆ ಇತರ ಪ್ರದೇಶದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಥವಾ ಆ ರಾಜ್ಯದ ರಾಜ್ಯ ಸಾರಿಗೆ ಪ್ರಾಧಿಕಾರದ ಮೇಲು ರುಜುವಿಲ್ಲದೆ ಸಿಂಧುವಾಗಿರತಕ್ಕದ್ದು.

(9) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಆದರೆ, (14)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಯಾವುದೇ ರಾಜ್ಯ ಸಾರಿಗೆ ಪ್ರಾಧಿಕಾರವು, ಪ್ರವಾಸೋದ್ಯಮದ ಪ್ರವರ್ತನೆಯ ಉದ್ದೇಶಕ್ಕಾಗಿ, ಇಡೀ ಭಾರತದಲ್ಲಿ ಅಥವಾ ಅರ್ಜಿಯಲ್ಲಿ ಸೂಚಿಸಲಾಗಿರುವ ಆಯ್ಕೆಗೆ ಅನುಸಾರವಾಗಿ ಪರ್ಮಿಟ್ಟಿನಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವ ರಾಜ್ಯದಲ್ಲಿ ಪರ್ಮಿಟ್ಟನ್ನು ನೀಡಲಾಗಿದೆಯೋ ಆ ರಾಜ್ಯವು ಸೇರಿದಂತೆ ಮೂರಕ್ಕಿಂತ ಕಡಿಮೆಯಿಲ್ಲದಂತೆ ಹೊಂದಿಕೊಂಡಿರುವ ರಾಜ್ಯಗಳಲ್ಲಿ ಸಿಂಧುವಾಗಿರಲು ಪ್ರವಾಸಿ ವಾಹನಗಳ ಸಂಬಂಧದಲ್ಲಿ ಪರ್ಮಿಟ್ಟುಗಳನ್ನು ನೀಡಬಹುದು ಮತ್ತು 73, 74, 80, 81, 82, 83, 84, 85, 86 ಮತ್ತು 87ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡ ಮತ್ತು 89ನೇ ಪ್ರಕರಣಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅಂಥ ಪರ್ಮಿಟ್ಟುಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

[(10) x x x x ]

(11) (9)ನೇ ಉಪಪ್ರಕರಣದ ಮೇರೆಗೆ ನೀಡಲಾದ ಪ್ರತಿಯೊಂದು ಪರ್ಮಿಟ್ಟಿಗೆ ಈ ಕೆಳಕಂಡವುಗಳು ಷರತ್ತುಗಳಾಗಿರತಕ್ಕದ್ದು, ಎಂದರೆ:-

(i) ಅಂಥ ಪರ್ಮಿಟ್ಟನ್ನು ನೀಡಲಾಗಿರುವ ಪ್ರತಿಯೊಂದು ಮೋಟಾರು ವಾಹನವು, ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವರ್ಣನೆ, ಆಸನ ಸಾಮರ್ಥ್ಯ, ಸೌಲಭ್ಯಗಳ ಗುಣಮಟ್ಟ, ಸೌಕರ್ಯಗಳು ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಅಗತ್ಯಗಳಿಗೆ ಅನುಗುಣವಾಗಿರತಕ್ಕದ್ದು;

(ii) ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅರ್ಹತೆಗಳನ್ನು ಹೊಂದಿರುವ ಮತ್ತು ಅಂಥ ಷರತ್ತುಗಳನ್ನು ಪೂರೈಸುವ ವ್ಯಕ್ತಿಯು ಅಂಥ ಪ್ರತಿಯೊಂದು ಮೋಟಾರು ವಾಹನವನ್ನು ನಡೆಸತಕ್ಕದ್ದು; ಮತ್ತು

(iii) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಷರತ್ತುಗಳು.

(12) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಆದರೆ (14)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಬಹುದಾದ ನಿಯಮಗಳಿಗೊಳಪಟ್ಟು, ಸಮುಚಿತ ಪ್ರಾಧಿಕಾರವು, ಹೆಚ್ಚು ದೂರದ ಅಂತರ ರಾಜ್ಯ ರಸ್ತೆ ಸಾರಿಗೆಗೆ ಉತ್ತೇಜನ ಕೊಡುವ ಉದ್ದೇಶಕ್ಕಾಗಿ, ಆ ರಾಜ್ಯದಲ್ಲಿ ಸರಕು ವಾಹನಗಳ ಸಂಬಂಧದಲ್ಲಿ ರಾಷ್ಟ್ರೀಯ ಪರ್ಮಿಟ್ಟುಗಳನ್ನು ನೀಡಬಹುದು ಮತ್ತು 69, 77, 79, 80, 81, 82, 83, 84, 85, 86, 87ನೇ ಪ್ರಕರಣದ (1)ನೇ ಉಪಪ್ರಕರಣದ (2)ನೇ ಖಂಡ ಮತ್ತು 89ನೇ ಪ್ರಕರಣಗಳ ಉಪಬಂಧಗಳು, ರಾಷ್ಟ್ರೀಯ ಪರ್ಮಿಟ್ಟುಗಳ ನೀಡಿಕೆಗೆ ಅಥವಾ ಅದಕ್ಕೆ ಸಂಬಂಧಿಸಿ ಸಾಧ್ಯವಾದ ಮಟ್ಟಿಗೆ ಅನ್ವಯವಾಗತಕ್ಕದ್ದು.

[(13) x x x x ]

(14) (ಎ) ಕೇಂದ್ರ ಸರ್ಕಾರವು ಈ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(ಬಿ) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ವಿಷಯಗಳಿಗೆ ಅಥವಾ ಅವುಗಳಲ್ಲಿ ಯಾವುದೇ ಒಂದಕ್ಕೆ ಉಪಬಂಧಿಸಬಹುದು, ಎಂದರೆ:-

(i) (9) ಮತ್ತು (12)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಿದ ಪರ್ಮಿಟ್ಟಿನ ನೀಡಿಕೆಗೆ ಸಂದಾಯಮಾಡಬೇಕಾದ ಪ್ರಾಧಿಕೃತ ಫೀಜು;

(ii) ಮೋಟಾರು ವಾಹನದ ಹೇರು ತೂಕವನ್ನು ನಿಗದಿಪಡಿಸುವುದು;

(iii) ಮೋಟಾರು ವಾಹನದಲ್ಲಿ ಅಥವಾ ಅದರ ಮೇಲೆ ಇರಬೇಕಾದ ಅಥವಾ ಪ್ರದರ್ಶಿಸಬೇಕಾದ ವಿಭಿನ್ನಕ ವಿವರಗಳು ಅಥವಾ ಗುರುತುಗಳು;

(iv) ಮೋಟಾರು ವಾಹನಕ್ಕೆ ಹಚ್ಚಬೇಕಾದ ಬಣ್ಣ ಅಥವಾ ಬಣ್ಣಗಳು;

(v) ರಾಷ್ಟ್ರೀಯ ಪರ್ಮಿಟ್ಟನ್ನು ನೀಡುವಲ್ಲಿ ಸಮುಚಿತ ಪ್ರಾಧಿಕಾರವು ಪರಿಶೀಲಿಸುವಂಥ ಇತರ ವಿಷಯಗಳು.

ವಿವರಣೆ:- ಈ ಪ್ರಕರಣದಲ್ಲಿ,-

(ಎ) ರಾಷ್ಟ್ರೀಯ ಪರ್ಮಿಟ್ಟಿಗೆ ಸಂಬಂಧಿಸಿ "ಸಮುಚಿತ ಪ್ರಾಧಿಕಾರ" ಎಂದರೆ ಸರಕು ವಾಹನ ಪರ್ಮಿಟ್ಟನ್ನು ನೀಡಲು ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಪ್ರಾಧಿಕಾರ;

(ಬಿ) "ಪ್ರಾಧಿಕೃತ ಫೀಜು" ಎಂದರೆ ಒಂದು ರಾಜ್ಯದ ಸಮುಚಿತ ಪ್ರಾಧಿಕಾರವು (9) ಮತ್ತು (12)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದ ಪರ್ಮಿಟ್ಟಿಗೆ ಒಳಪಟ್ಟ ಮೋಟಾರು ವಾಹನವನ್ನು ಇತರ ರಾಜ್ಯಗಳಲ್ಲಿ ಉಪಯೋಗಿಸಲು ಸಾಧ್ಯವಾಗುವಂತೆ ಸಂಬಂಧಪಟ್ಟ ರಾಜ್ಯಗಳು ವಿಧಿಸುವ ತೆರಿಗೆಗಳು ಅಥವಾ ಫೀಜುಗಳು ಯಾವುವಾದರೂ ಇದ್ದರೆ ಅವುಗಳ ಸಂದಾಯಕ್ಕೆ ಒಳಪಟ್ಟು ಒಂದು ಸಾವಿರ ರೂಪಾಯಿಗಳಿಗೆ ಮೀರದಂತೆ ವಿಧಿಸಬಹುದಾದ ವಾರ್ಷಿಕ ಫೀಜು;

(ಸಿ) "ರಾಷ್ಟ್ರೀಯ ಪರ್ಮಿಟ್ಟು" ಎಂದರೆ ಭಾರತದ ರಾಜ್ಯ ಕ್ಷೇತ್ರದಾದ್ಯಂತ ಅಥವಾ ಅರ್ಜಿಯಲ್ಲಿ ಸೂಚಿಸಿರುವ ಆಯ್ಕೆಗೆ ಅನುಸಾರವಾಗಿ ಅಂಥ ಪರ್ಮಿಟ್ಟಿನಲ್ಲಿ, ಪರ್ಮಿಟ್ಟು ನೀಡಿದಂತೆ ರಾಜ್ಯವು ಸೇರಿ, ನಾಲ್ಕಕ್ಕಿಂತ ಕಡಿಮೆ ಇಲ್ಲದ ನಿರ್ದಿಷ್ಟಪಡಿಸಬಹುದಾದಂಥ, ಹೊಂದಿಕೊಂಡಂಥ ರಾಜ್ಯಗಳಲ್ಲಿ ಓಡಾಡಿಸಲು ಸರಕು ವಾಹನಗಳಿಗೆ ನೀಡಲಾದ ಪರ್ಮಿಟ್ಟು.

89. ಅಪೀಲುಗಳು:- (1) ಯಾರೇ ವ್ಯಕ್ತಿಯು,-

(ಎ) ರಾಜ್ಯ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪರ್ಮಿಟ್ಟನ್ನು ನೀಡಲು ನಿರಾಕರಿಸಿದುದರಿಂದ ಅಥವಾ ಅವನಿಗೆ ನೀಡಿದ ಪರ್ಮಿಟ್ಟಿಗೆ ಲಗತ್ತಿಸಿದ ಯಾವುದೇ ಷರತ್ತಿನಿಂದ ಬಾಧಿತನಾದರೆ; ಅಥವಾ

(ಬಿ) ಪರ್ಮಿಟ್ಟಿನ ಹಿಂತೆಗೆದುಕೊಳ್ಳುವಿಕೆ ಅಥವಾ ಅಮಾನತಿನಿಂದ ಅಥವಾ ಅದರ ಷರತ್ತುಗಳಲ್ಲಿ ಮಾಡಿದ ಯಾವುದೇ ವ್ಯತ್ಯಾಸದಿಂದ ಬಾಧಿತನಾದರೆ; ಅಥವಾ

(ಸಿ) 82ನೇ ಪ್ರಕರಣದ ಮೇರೆಗೆ ಪರ್ಮಿಟ್ಟನ್ನು ವರ್ಗಾಯಿಸಲು ನಿರಾಕರಿಸಿದುದರಿಂದ ಬಾಧಿತನಾದರೆ; ಅಥವಾ

(ಡಿ) ರಾಜ್ಯ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪರ್ಮಿಟ್ಟಿಗೆ ಮೇಲು ರುಜು ಮಾಡಲು ನಿರಾಕರಿಸಿದುದರಿಂದ ಅಥವಾ ಹಾಗೆ ಮೇಲೆ ರುಜು ಮಾಡಿ ಲಗತ್ತಿಸಿದ ಯಾವುದೇ ಷರತ್ತಿನಿಂದ ಬಾಧಿತನಾದರೆ; ಅಥವಾ

(ಇ) ಪರ್ಮಿಟ್ಟನ್ನು ನವೀಕರಿಸಲು ನಿರಾಕರಿಸಿರುವುದರಿಂದ ಬಾಧಿತನಾದರೆ; ಅಥವಾ

(ಎಫ್) 83ನೇ ಪ್ರಕರಣದ ಮೇರೆಗೆ ಅನುಮತಿ ನೀಡಲು ನಿರಾಕರಿಸಿರುವುದರಿಂದ ಬಾಧಿತನಾದರೆ; ಅಥವಾ

(ಜಿ) ನಿಯಮಿಸಬಹುದಾದ ಯಾವುದೇ ಇತರ ಆದೇಶದಿಂದ ಬಾಧಿತನಾದರೆ

- ನಿಯಮಿಸಿದ ಕಾಲದೊಳಗೆ ಮತ್ತು ನಿಯಮಿಸಿದ ರೀತಿಯಲ್ಲಿ (2)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅದು ಅಂಥ ವ್ಯಕ್ತಿಗೆ ಮತ್ತು ಮೂಲ ಪ್ರಾಧಿಕಾರಕ್ಕೆ ಸುನಾವಣೆಯ ಅವಕಾಶವನ್ನು ಕೊಟ್ಟ ತರುವಾಯ, ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ಅದು ಅಂತಿಮವಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸಾರಿಗೆ ಅಪೀಲು ನ್ಯಾಯಾಧಿಕರಣಗಳನ್ನು ರಚಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ನ್ಯಾಯಾಧಿಕರಣವು ಜಿಲ್ಲಾ ನ್ಯಾಯಾಧೀಶನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ನ್ಯಾಯಿಕ ಅಧಿಕಾರಿಯನ್ನು ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಲು ಅರ್ಹತೆ ಹೊಂದಿರುವ ನ್ಯಾಯಿಕ ಅಧಿಕಾರಿಯನ್ನು ಒಳಗೊಂಡಿರತಕ್ಕದ್ದು ಮತ್ತು ಅದು ಆ ಸರ್ಕಾರವು ಅಧಿಸೂಚಿಸಬಹುದಾದಂಥ ಪ್ರದೇಶದೊಳಗೆ ಅಧಿಕಾರವನ್ನು ಚಲಾಯಿಸತಕ್ಕದ್ದು:

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮ ಪ್ರಾರಂಭವಾದಂದು ಇತ್ಯರ್ಥದಲ್ಲಿದ್ದ ಪ್ರತಿಯೊಂದು ಅಪೀಲನ್ನು, ಈ ಅಧಿನಿಯಮವು ಪಾಸಾಗಿರದಿದ್ದರೆ ಹೇಗೋ ಹಾಗೆ ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

ವಿವರಣೆ:- ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಇದ್ದ ಮೋಟಾರು ವಾಹನಗಳ ಅಧಿನಿಯಮ, 1939 (1939ರ 4)ರ 63ಎ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅಂತರ ರಾಜ್ಯ ಸಾರಿಗೆ ಆಯೋಗವು ಹೊರಡಿಸಿದ ನಿರ್ದೇಶನಕ್ಕನುಸಾರವಾಗಿ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಯಾವುದೇ ಆದೇಶವನ್ನು ಮಾಡಿದಾಗ ಮತ್ತು ಅಂಥ ಆದೇಶವು ನಿರ್ದೇಶನಕ್ಕೆ ಅನುಸಾರವಾಗಿಲ್ಲವೆಂಬ ಕಾರಣದ ಮೇಲೆ ಯಾರೇ ವ್ಯಕ್ತಿಯು ಅದರಿಂದ ಬಾಧಿತನಾಗಿರುವುದಾಗಿ ಭಾವಿಸಿದಾಗ, ಅವನು, (1)ನೇ ಉಪಪ್ರಕರಣದ ಮೇರೆಗೆ ಅಂಥ ಆದೇಶದ ವಿರುದ್ಧ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದೆಂದು, ಆದರೆ ಹಾಗೆ ಹೊರಡಿಸಿದ ನಿರ್ದೇಶನದ ವಿರುದ್ಧ ಅಪೀಲು ಸಲ್ಲಿಸತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

90. ಪುನರೀಕ್ಷಣೆ:- ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣವು ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ಯಾವುದೇ ಅಪೀಲು ಸಲ್ಲಿಸಲು ಅವಕಾಶವಿಲ್ಲದ ರಾಜ್ಯ ಸಾರಿಗೆ ಪ್ರಾಧಿಕಾರವು ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಆದೇಶವನ್ನು ಮಾಡಿರುವ ಯಾವುದೇ ಪ್ರಕರಣದ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ರಾಜ್ಯ ಸಾರಿಗೆ ಪ್ರಾಧಿಕಾರವು ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮಾಡಿದ ಆದೇಶವು ಯುಕ್ತವಾಗಿಲ್ಲವೆಂದು ಅಥವಾ ಕಾನೂನು ವಿರುದ್ಧವಾಗಿದೆ ಎಂದು ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಕಂಡು ಬಂದರೆ, ಆ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣವು, ಆ ಪ್ರಕರಣಕ್ಕೆ ಸಂಬಂಧಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು ಮತ್ತು ಅಂಥ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು:

ಪರಂತು, ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣವು ರಾಜ್ಯ ಸಾರಿಗೆ ಪ್ರಾಧಿಕಾರದ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ವ್ಯಕ್ತಿಯು, ಆದೇಶವನ್ನು ಮಾಡಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಅರ್ಜಿಯನ್ನು ಸಲ್ಲಿಸದಿದ್ದರೆ, ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ:

ಮತ್ತೂ ಪರಂತು, ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣವು, ಅರ್ಜಿದಾರನು ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸದಂತೆ ಸಮಂಜಸ ಮತ್ತು ಸಾಕಷ್ಟು ಕಾರಣದಿಂದ ತಡೆಯಲ್ಪಟ್ಟಿದ್ದನೆಂದು ಅದಕ್ಕೆ ಮನದಟ್ಟಾದರೆ, ಸದರಿ ಮೂವತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಬಹುದು:

ಮತ್ತೂ ಅಲ್ಲದೆ, ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣವು, ಯಾರೇ ವ್ಯಕ್ತಿಗೆ ಸುನಾವಣೆಯ ಸೂಕ್ತ ಅವಕಾಶವನ್ನು ಕೊಟ್ಟಹೊರತು, ಅವನಿಗೆ ಬಾಧಕವಾಗುವ ಆದೇಶವನ್ನು ಈ ಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

91. ಚಾಲಕರ ಕೆಲಸದ ವೇಳೆಯ ಬಗ್ಗೆ ನಿರ್ಬಂಧ:- (1) ಸಾರಿಗೆ ವಾಹನವನ್ನು ಓಡಿಸಲು ನಿಯೋಜಿತನಾದ ಯಾರೇ ವ್ಯಕ್ತಿಯ ಕೆಲಸದ ವೇಳೆಯು ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, 1961 (1961ರ 27) ಇದರಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತುರ್ತು ಸಂದರ್ಭಗಳಿಗಾಗಿ ಅಥವಾ ಅನಿರೀಕ್ಷಿತ ಕಾರಣಗಳಿಂದಾಗಿ ಉಂಟಾಗುವ ವಿಳಂಬಗಳಿಗಾಗಿ, (1)ನೇ ಉಪಪ್ರಕರಣದ ಉಪಬಂಧಗಳಿಂದ ತಾನು ಸೂಕ್ತವೆಂದು ಭಾವಿಸುವಂಥ ವಿನಾಯತಿಗಳನ್ನು ನೀಡಬಹುದು.

(3) ರಾಜ್ಯ ಸರ್ಕಾರವು ಅಥವಾ 96ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದರೆ, ರಾಜ್ಯ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಯಾವ ಕೆಲಸವು (1)ನೇ ಉಪಪ್ರಕರಣದ ಉಪಬಂಧಗಳಲ್ಲಿ ಯಾವುದೇ ಉಪಬಂಧಕ್ಕೆ ಒಳಪಟ್ಟಿರುವುದೋ ಅಂಥ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವ ವ್ಯಕ್ತಿಗಳನ್ನು ಆ ಉಪಬಂಧಗಳಿಗೆ ಅನುಗುಣವಾಗಿರುವಂತೆ ಅಂಥ ವ್ಯಕ್ತಿಗಳ ಕೆಲಸದ ವೇಳೆಯನ್ನು ಮುಂಚಿತವಾಗಿ ನಿಗದಿಪಡಿಸುವಂತೆ ಅಗತ್ಯಪಡಿಸಬಹುದು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ದಾಖಲಿಸಲು ವ್ಯವಸ್ಥೆ ಮಾಡಬಹುದು.

(4) ಯಾರೇ ವ್ಯಕ್ತಿಗಾಗಿ, (3)ನೇ ಉಪಪ್ರಕರಣದ ಮೇರೆಗೆ ಕೆಲಸಕ್ಕಾಗಿ ನಿಗದಿಪಡಿಸಿದ ಅಥವಾ ದಾಖಲಿಸಿದ ವೇಳೆಯನ್ನು ಮೀರಿ ಯಾರೇ ವ್ಯಕ್ತಿಯು ಕೆಲಸ ಮಾಡತಕ್ಕದ್ದಲ್ಲ ಅಥವಾ ಯಾರೇ ಇತರ ವ್ಯಕ್ತಿಯನ್ನು ಕೆಲಸ ಮಾಡುವಂತೆ ಮಾಡತಕ್ಕದ್ದಲ್ಲ ಅಥವಾ ಕೆಲಸ ಮಾಡಲು ಅನುಮತಿ ನೀಡತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು, ವಾಹನದ ಚಾಲಕನು ಕೆಲಸದಲ್ಲಿ ತೊಡಗಿರದಿದ್ದರೂ, ವಾಹನದಲ್ಲಿ ಅಥವಾ ವಾಹನದ ಹತ್ತಿರ ಇರುವಂತೆ ಅಗತ್ಯಪಡಿಸಲಾದ ಅವಧಿಯನ್ನು ಯಾವ ಸಂದರ್ಭಗಳಲ್ಲಿ (1)ನೇ ಉಪಪ್ರಕಣದ ಅರ್ಥ ವ್ಯಾಪ್ತಿಯಲ್ಲಿ ವಿಶ್ರಾಂತಿಯ ಕಾಲವೆಂದು ಭಾವಿಸಬಹುದೋ ಆ ಸಂದರ್ಭಗಳನ್ನು ನಿಯಮಿಸಬಹುದು.

92. ಹೊಣೆಗಾರಿಕೆಯನ್ನು ನಿರ್ಬಂಧಿಸುವ ಕರಾರುಗಳು ಶೂನ್ಯವಾಗಿರುವುದು:- ಈ ಅಧ್ಯಾಯದ ಮೇರೆಗೆ ಪರ್ಮಿಟ್ಟನ್ನು ನೀಡಲಾಗಿರುವ ಮಜಲು ವಾಹನ ಅಥವಾ ಕರಾರು ವಾಹನದಲ್ಲಿ ಒಬ್ಬ ಪ್ರಯಾಣಿಕನನ್ನು ಒಯ್ಯುವ ಸಲುವಾಗಿ ಮಾಡಿಕೊಂಡ ಯಾವುದೇ ಕರಾರು, ಆ ಪ್ರಯಾಣಿಕನನ್ನು ವಾಹನದಲ್ಲಿ ಒಯ್ಯುವಾಗ ಅವನು ವಾಹನವನ್ನು ಹತ್ತುವಾಗ ಅಥವಾ ಅದರಿಂದ ಇಳಿಯುವಾಗ ಅವನು ಮರಣ ಹೊಂದಿದ ಅಥವಾ ಅವನಿಗೆ ದೈಹಿಕ ಕ್ಷತಿಯುಂಟಾದ ಸಂಬಂಧದಲ್ಲಿ ಆ ವ್ಯಕ್ತಿಯ ವಿರುದ್ಧವಾಗಿ ಮಾಡಲಾದ ಯಾವುದೇ ಕ್ಲೇಮಿನ ಬಗ್ಗೆ ಯಾರೇ ವ್ಯಕ್ತಿಯ ಹೊಣೆಗಾರಿಕೆಯನ್ನು ನಿರಾಕರಿಸುವ ಅಥವಾ ನಿರ್ಬಂಧಿಸುವ ತಾತ್ಪರ್ಯವಾಗುವಷ್ಟರಮಟ್ಟಿಗೆ ಅಥವಾ ಅಂಥ ಯಾವುದೇ ಹೊಣೆಗಾರಿಕೆ ಜಾರಿಗೆ ಸಂಬಂಧಿಸಿ ಯಾವುವೇ ಷರತ್ತುಗಳನ್ನು ವಿಧಿಸುವ ತಾತ್ಪರ್ಯವಾಗುವಷ್ಟರಮಟ್ಟಿಗೆ ಶೂನ್ಯವಾಗತಕ್ಕದ್ದು.

93. ಏಜೆಂಟನು ಅಥವಾ ಪ್ರಚಾರಕನು ಲೈಸೆನ್ಸು ಪಡೆದಿರುವುದು:- (1) ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಪ್ರಾಧಿಕಾರದಿಂದ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನು ಪಡೆದ ಹೊರತು,-

(i) ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣ ಮಾಡುವ ಸಲುವಾಗಿ ಟಿಕೆಟ್ಟುಗಳ ಮಾರಾಟದಲ್ಲಿ ಅಥವಾ ಅಂಥ ವಾಹನಗಳಿಗೆ ಅನ್ಯ ರೀತಿಯಲ್ಲಿ ಗಿರಾಕಿಗಳನ್ನು ಕೋರುವ ಕಾರ್ಯದಲ್ಲಿ ಏಜೆಂಟನಾಗಿ ಅಥವಾ ಪ್ರಚಾರಕನಾಗಿ; ಅಥವಾ

(ii) ಸರಕು ವಾಹನಗಳಲ್ಲಿ ಒಯ್ಯಲಾಗುವ ಸರಕುಗಳನ್ನು ಸಂಗ್ರಹಿಸುವ, ಕಳುಹಿಸಿಕೊಡುವ ಅಥವಾ ವಿತರಣೆ ಮಾಡುವ ವ್ಯವಹಾರದಲ್ಲಿ ಏಜೆಂಟನಾಗಿ

- ತೊಡಗಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳು ಈ ಕೆಳಕಂಡ ಎಲ್ಲ ವಿಷಯಗಳನ್ನು ಅಥವಾ ಅವುಗಳಲ್ಲಿ ಯಾವುವೇ ವಿಷಯಗಳನ್ನು ಒಳಗೊಂಡಿರಬಹುದು, ಎಂದರೆ:-

(ಎ) ಲೈಸೆನ್ಸನ್ನು ನೀಡಬಹುದಾದ ಅಥವಾ ನವೀಕರಿಸಬಹುದಾದ ಅವಧಿ;

(ಬಿ) ಲೈಸೆನ್ಸು ನೀಡಿಕೆ ಅಥವಾ ನವೀಕರಣಕ್ಕೆ ಸಂದಾಯ ಮಾಡಬೇಕಾದ ಫೀಜು;

(ಸಿ) (i) ಸರಕು ವಾಹನಗಳಲ್ಲಿ ಒಯ್ಯಲಾಗುವ ಸರಕುಗಳನ್ನು ಸಂಗ್ರಹಿಸುವ, ಕಳುಹಿಸಿಕೊಡುವ ಅಥವಾ ವಿತರಣೆ ಮಾಡುವ ವ್ಯವಹಾರದ ಏಜೆಂಟನ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗೆ ಮೀರದ ಮೊತ್ತದ;

(ii) ಇತರೆ ಯಾರೇ ಏಜೆಂಟನ ಅಥವಾ ಪ್ರಚಾರಕನ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗೆ ಮೀರದ ಮೊತ್ತದ

- ಭದ್ರತಾ ಠೇವಣಿ ಮತ್ತು ಭದ್ರತಾ ಠೇವಣಿಯನ್ನು ಯಾವ ಸಂದರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದೋ ಆ ಸಂದರ್ಭಗಳು;

(ಡಿ) ರವಾನೆಯಲ್ಲಿರುವ ಸರಕುಗಳ ವಿಮೆಯ ಬಗ್ಗೆ ಏಜೆಂಟನು ಮಾಡಬೇಕಾದ ವ್ಯವಸ್ಥೆ;

(ಇ) ಲೈಸೆನ್ಸನ್ನು ಯಾವ ಪ್ರಾಧಿಕಾರವು ಮತ್ತು ಯಾವ ಸಂದರ್ಭಗಳಲ್ಲಿ ಅಮಾನತುಗೊಳಿಸಬಹುದೋ ಅಥವಾ ರದ್ದುಗೊಳಿಸಬಹುದೋ ಆ ಪ್ರಾಧಿಕಾರ ಮತ್ತು ಸಂದರ್ಭಗಳು;

(ಎಫ್) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಇತರ ಷರತ್ತುಗಳು.

(3) ಲೈಸೆನ್ಸು ನೀಡಲಾದ ಯಾರೇ ಏಜೆಂಟ್ ಅಥವಾ ಪ್ರಚಾರಕನು ಯಾವುದೇ ವೃತ್ತಪತ್ರಿಕೆ, ಪುಸ್ತಕ, ಪಟ್ಟಿ, ವರ್ಗೀಕೃತ ಡೈರೆಕ್ಟರಿ ಅಥವಾ ಇತರ ಪ್ರಕಟಣೆಯಲ್ಲಿ ಕಂಡು ಬರುವ ಜಾಹೀರಾತಿನಲ್ಲಿ ಲೈಸನ್ಸು ಸಂಖ್ಯೆ, ಲೈಸೆನ್ಸಿನ ಮುಕ್ತಾಯದ ದಿನಾಂಕ

ಮತ್ತು ಲೈಸೆನ್ಸು ನೀಡಿದ ಪ್ರಾಧಿಕಾರದ ವಿವರಗಳು ಇದ್ದ ಹೊರತು, ಅಂಥ ವೃತ್ತಪತ್ರಿಕೆ, ಪುಸ್ತಕ, ಪಟ್ಟಿ, ವರ್ಗೀಕೃತ ಡೈರೆಕ್ಟರಿ ಅಥವಾ ಇತರ ಪ್ರಕಟಣೆಯಲ್ಲಿ ಜಾಹೀರಾತು ನೀಡತಕ್ಕದ್ದಲ್ಲ.

94. ಸಿವಿಲ್ ನ್ಯಾಯಾಲಯಗಳ ಪ್ರತಿಷೇಧ ಅಥವಾ ಅಧಿಕಾರ ವ್ಯಾಪ್ತಿ:- ಈ ಅಧಿನಿಯಮದ ಮೇರೆಗೆ ಪರ್ಮಿಟ್ಟಿನ ನೀಡಿಕೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಸ್ವೀಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಪರ್ಮಿಟ್ಟು ನೀಡಿಕೆಗೆ ಸಂಬಂಧಿಸಿ ಈ ಅಧಿನಿಯಮದ ಮೇರೆಗೆ ಯಥಾಕ್ರಮದಲ್ಲಿ ರಚಿತವಾದ ಪ್ರಾಧಿಕಾರಗಳ ಮೂಲಕ ತೆಗೆದುಕೊಂಡ ಅಥವಾ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಿಸಿ ಯಾವುದೇ ನಿರ್ಬಂಧಕಾಜ್ಞೆಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ಸ್ವೀಕರಿಸತಕ್ಕದ್ದಲ್ಲ.

95. ಮಜಲು ವಾಹನಗಳು ಮತ್ತು ಕರಾರು ವಾಹನಗಳ ಬಗ್ಗೆ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು, ಮಜಲು ವಾಹನಗಳು ಮತ್ತು ಕರಾರು ವಾಹನಗಳು ಮತ್ತು ಅಂಥ ವಾಹನಗಳಲ್ಲಿ ಪ್ರಯಾಣಿಕರ ವರ್ತನೆಯ ಸಂಬಂಧದಲ್ಲಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಉಪಬಂಧದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) ನಿಯಮಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯನ್ನು, ಚಾಲಕನು ಅಥವಾ ನಿರ್ವಾಹಕನು ಅಥವಾ ಚಾಲಕನ ಅಥವಾ ನಿರ್ವಾಹಕನ ಅಥವಾ ಯಾರೇ ಪ್ರಯಾಣಿಕನ ಕೋರಿಕೆಯ ಮೇರೆಗೆ ಯಾರೇ ಪೊಲೀಸು ಅಧಿಕಾರಿಯು ಅಂಥ ವಾಹನದಿಂದ ಹೊರಹಾಕಲು ಅಧಿಕೃತಗೊಳಿಸಬಹುದು;

(ಬಿ) ನಿಯಮಗಳನ್ನು ಉಲ್ಲಂಘಿಸುವನೆಂದು ಚಾಲಕನು ಅಥವಾ ನಿರ್ವಾಹಕನು ಸಕಾರಣವಾಗಿ ಶಂಕಿಸುವಂಥ ಪ್ರಯಾಣಿಕನನ್ನು ಕೇಳಿದಾಗ, ಪೊಲೀಸ್ ಅಧಿಕಾರಿಗೆ ಅಥವಾ ಚಾಲಕನಿಗೆ ಅಥವಾ ನಿರ್ವಾಹಕನಿಗೆ ತನ್ನ ಹೆಸರು ಮತ್ತು ವಿಳಾಸಗಳನ್ನು ಕೊಡುವಂತೆ ಅಗತ್ಯಪಡಿಸಬಹುದು;

(ಸಿ) ಚಾಲಕನು ಅಥವಾ ನಿರ್ವಾಹಕನು ಯಾರೇ ಪ್ರಯಾಣಿಕನಿಗೆ ಆ ವಾಹನದಲ್ಲಿ ಅವನು ಮಾಡಬಯಸುವ ಅಥವಾ ಮಾಡಿದ ಪ್ರಯಾಣದ ಬಗ್ಗೆ ಕೇಳಿದಾಗ ಹಾಗೆ ಹೇಳುವಂತೆ ಮತ್ತು ಅಂಥ ಇಡೀ ಪ್ರಯಾಣಕ್ಕೆ ಹಾಸಲು ಸಂದಾಯ ಮಾಡುವಂತೆ ಮತ್ತು ಆ ಬಗ್ಗೆ ನೀಡುವ ಯಾವುದೇ ಟಿಕೆಟ್‌ನ್ನು ತೆಗೆದುಕೊಳ್ಳುವಂತೆ ಅಗತ್ಯಪಡಿಸಬಹುದು;

(ಡಿ) ಚಾಲಕನು ಅಥವಾ ನಿರ್ವಾಹಕನು ಅಥವಾ ವಾಹನದ ಒಡೆಯರಿಂದ ಅಧಿಕೃತನಾದ ಯಾರೇ ಇತರ ವ್ಯಕ್ತಿಯು ಟಿಕೆಟ್ ಧಾರಕನನ್ನು ಅವನಿಗೆ ನೀಡಿದ ಯಾವುದೇ ಟಿಕೆಟ್‌ನ್ನು ಕೋರಿದಾಗ ಪ್ರಯಾಣ ಕಾಲದಲ್ಲಿ ಅದನ್ನು ತೋರಿಸುವಂತೆ ಅಥವಾ ಪ್ರಯಾಣದ ಕೊನೆಯಲ್ಲಿ ವಾಪಸು ಮಾಡುವಂತೆ ಅಗತ್ಯಪಡಿಸಬಹುದು;

(ಇ) ಚಾಲಕನು ಅಥವಾ ನಿರ್ವಾಹಕನು, ಪ್ರಯಾಣಿಕನು ಯಾವ ಪ್ರಯಾಣಕ್ಕಾಗಿ ಹಾಸಲು ಸಂದಾಯ ಮಾಡಿರುವನೋ, ಆ ಪ್ರಯಾಣ ಪೂರೈಸುತ್ತಲೇ ವಾಹನದಿಂದ ಇಳಿದುಹೋಗಲು ಕೋರಿದರೆ, ಅವನನ್ನು ಹಾಗೆ ಮಾಡುವಂತೆ ಅಗತ್ಯಪಡಿಸಬಹುದು;

(ಎಫ್) ಯಾವ ಅವಧಿಗಾಗಿ ಟಿಕೆಟ್‌ನ್ನು ಅವನಿಗೆ ನೀಡಲಾಗಿದೆಯೋ ಆ ಅವಧಿ ಮುಕ್ತಾಯವಾಗುತ್ತಲೇ ಅದನ್ನು ಅದರ ಧಾರಕನು ಹಿಂದಿರುಗಿಸುವಂತೆ ಅಗತ್ಯಪಡಿಸಬಹುದು;

(ಜಿ) ವಾಹನದ ಕಾರ್ಯನಿರ್ವಹಣೆಗೆ ಅಡಚಣೆಯಾಗಬಹುದಾದ ಅಥವಾ ಹಸ್ತಕ್ಷೇಪವಾಗಬಹುದಾದ ಅಥವಾ ವಾಹನದ ಯಾವುದೇ ಭಾಗಕ್ಕೆ ಅಥವಾ ಅದರ ಸಲಕರಣೆಗೆ ಹಾನಿಯಾಗಬಹುದಾದ ಅಥವಾ ಯಾರೇ ಇತರ ಪ್ರಯಾಣಿಕನಿಗೆ ಕ್ಷತಿ ಅಥವಾ ತೊಂದರೆಯಾಗಬಹುದಾದ ಯಾವುದೇ ಕೃತ್ಯವನ್ನು ಮಾಡದಿರುವಂತೆ ಪ್ರಯಾಣಿಕನನ್ನು ಅಗತ್ಯಪಡಿಸಬಹುದು;

(ಹೆಚ್) ಧೂಮಪಾನವನ್ನು ನಿಷೇಧಿಸುವ ನೋಟೀಸನ್ನು ಪ್ರದರ್ಶಿಸಿರುವ ಯಾವುದೇ ವಾಹನದಲ್ಲಿ ಧೂಮಪಾನ ಮಾಡದಿರುವಂತೆ ಪ್ರಯಾಣಿಕನನ್ನು ಅಗತ್ಯಪಡಿಸಬಹುದು;

(ಐ) ಮಜಲು ವಾಹನಗಳ ದೂರು ಪುಸ್ತಕ ಇಡುವಂತೆ ಅಗತ್ಯಪಡಿಸಬಹುದು ಮತ್ತು ಯಾವ ಸಂದರ್ಭಗಳಲ್ಲಿ ದೂರುಗಳನ್ನು ಅದರಲ್ಲಿ ಪ್ರಯಾಣಿಕರು ದಾಖಲಿಸಬಹುದೋ ಆ ಸಂದರ್ಭಗಳನ್ನು ನಿಯಮಿಸಬಹುದು.

96. ಈ ಅಧ್ಯಾಯದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲ ವಿಷಯಗಳ ಅಥವಾ ಅವುಗಳಲ್ಲಿ ಯಾವುದೇ ವಿಷಯದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಬಹುದು, ಎಂದರೆ:-

(i) ಪ್ರಾದೇಶಿಕ ಮತ್ತು ರಾಜ್ಯ ಸಾರಿಗೆ ಪ್ರಾಧಿಕಾರಗಳ ನೇಮಕಾತಿಯ ಅವಧಿ ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಅವುಗಳಿಂದ ವ್ಯವಹಾರ ನಿರ್ವಹಣೆ ಮತ್ತು ಅವು ಸಲ್ಲಿಸಬೇಕಾದ ವರದಿಗಳು;

(ii) (ಅಧ್ಯಕ್ಷನೂ ಸೇರಿದಂತೆ) ಅದರ ಯಾರೇ ಸದಸ್ಯನ ಗೈರುಹಾಜರಿಯಲ್ಲಿ ಅಂಥ ಯಾವುದೇ ಪ್ರಾಧಿಕಾರದಿಂದ ವ್ಯವಹಾರ ನಿರ್ವಹಣೆ ಮತ್ತು ಅವು ನಡೆಸಬೇಕಾದ ವ್ಯವಹಾರದ ಸ್ವರೂಪ, ಅವುಗಳನ್ನು ನಡೆಸಬೇಕಾದ ಸಂದರ್ಭಗಳು ಮತ್ತು ರೀತಿ;

(iii) ಈ ಅಧ್ಯಾಯದ ಮೇರೆಗೆ ಅದಕ್ಕೆ ಸಲ್ಲಿಸಬಹುದಾದ ಅಪೀಲುಗಳನ್ನು ನಡೆಸುವುದು ಮತ್ತು ಅವುಗಳ ಸುನಾವಣೆ, ಅಂಥ ಅಪೀಲುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಂಥ ಫೀಜುಗಳ ಮರುಪಾವತಿ;

(iv) ಪರ್ಮಿಟ್ಟುಗಳ ನಮೂನೆಗಳೂ ಸೇರಿ, ಈ ಅಧ್ಯಾಯದ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ನಮೂನೆಗಳು;

(v) ಪರ್ಮಿಟ್ಟುಗಳು ಕಳೆದುಹೋದಾಗ, ನಾಶಹೊಂದಿದಾಗ ಅಥವಾ ವಿರೂಪಗೊಂಡಾಗ ಅವುಗಳ ಬದಲಾಗಿ ಪರ್ಮಿಟ್ಟುಗಳ ಪ್ರತಿಗಳ ನೀಡಿಕೆ;

(vi) ಸಾರಿಗೆ ವಾಹನಗಳು ಹೊಂದಿರಬೇಕಾದ ದಸ್ತಾವೇಜುಗಳು, ಫಲಕಗಳು ಮತ್ತು ಗುರುತುಗಳು - ಅವುಗಳನ್ನು ಹೊಂದಿರಬೇಕಾದ ರೀತಿ ಮತ್ತು ಅಂಥ ಯಾವುವೇ ದಸ್ತಾವೇಜುಗಳನ್ನು ಬರೆಯಬೇಕಾಗಿರುವ ಭಾಷೆಗಳು;

(vii) ಪರ್ಮಿಟ್ಟು ಅರ್ಜಿಗಳ, ದ್ವಿಪ್ರತಿ ಪರ್ಮಿಟ್ಟುಗಳ ಮತ್ತು ಫಲಕಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು;

(viii) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲ ಫೀಜುಗಳ ಅಥವಾ ಯಾವುದೇ ಫೀಜು ಅಥವಾ ಅದರ ಯಾವುದೇ ಭಾಗದ ಸಂದಾಯದಿಂದ ನಿಯಮಿಸಲಾದ ವ್ಯಕ್ತಿಗಳು ಅಥವಾ ನಿಯಮಿಸಲಾದ ವ್ಯಕ್ತಿಗಳ ವರ್ಗಗಳಿಗೆ ವಿನಾಯಿತಿ;

(ix) ಪರ್ಮಿಟ್ಟುಗಳನ್ನು ಹಿಂತೆಗೆದುಕೊಂಡ ಅಥವಾ ಅವುಗಳ ಸಮಾಪ್ತಿಯ ಮೇಲೆ ಅವುಗಳ ಅಭಿರಕ್ಷೆ, ಸಾದರಪಡಿಸುವಿಕೆ ಮತ್ತು ರದ್ದಿಯಾತಿ ಮತ್ತು ರದ್ದುಗೊಳಿಸಲಾದ ಪರ್ಮಿಟ್ಟುಗಳ ವಾಪಸಾತಿ;

(x) ಬೇರೊಂದು ರಾಜ್ಯದಲ್ಲಿ ನೀಡಲಾದ ಪರ್ಮಿಟ್ಟು ಯಾವ ಷರತ್ತುಗಳಿಗೊಳಪಟ್ಟು ಮತ್ತು ಎಷ್ಟರಮಟ್ಟಿಗೆ ರಾಜ್ಯದಲ್ಲಿ ಮೇಲು ರುಜುವಿಲ್ಲದೆ ಸಿಂಧುವಾಗಿರತಕ್ಕದ್ದು;

(xi) ರಾಜ್ಯದ ಒಂದು ಪ್ರದೇಶದಲ್ಲಿ ನೀಡಲಾದ ಪರ್ಮಿಟ್ಟು ಯಾವ ಷರತ್ತುಗಳಿಗೊಳಪಟ್ಟು ಮತ್ತು ಎಷ್ಟರಮಟ್ಟಿಗೆ ಇನ್ನೊಂದು ಪ್ರದೇಶದಲ್ಲಿ ಮೇಲು ರುಜುವಿಲ್ಲದೆ ಸಿಂಧುವಾಗಿರತಕ್ಕದ್ದು;

(xii) 67ನೇ ಪ್ರಕರಣದ (1)ನೇ ಉಪಪ್ರಕರಣದ (iii)ನೇ ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಒಪ್ಪಂದವನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಪರ್ಮಿಟ್ಟಿಗೆ ಲಗತ್ತಿಸಬೇಕಾದ ಷರತ್ತುಗಳು;

(xiii) ಅಪೀಲುಗಳನ್ನು ಯಾವ ಪ್ರಾಧಿಕಾರಿಗಳಿಗೆ, ಯಾವ ಕಾಲದೊಳಗೆ ಮತ್ತು ಯಾವ ರೀತಿಯಲ್ಲಿ ಸಲ್ಲಿಸಬಹುದೋ ಆ ಪ್ರಾಧಿಕಾರಗಳು, ಸಮಯ ಮತ್ತು ರೀತಿ;

(xiv) ಸಾಮಾನ್ಯವಾಗಿ ಅಥವಾ ನಿರ್ದಿಷ್ಟಪಡಿಸಿದ ಪ್ರದೇಶಗಳಲ್ಲಿ ಮಜಲು ಮತ್ತು ಕರಾರು ವಾಹನಗಳ ರಚನೆ ಮತ್ತು ಜೋಡಣೆಗಳು ಮತ್ತು ಅವು ಜೊತೆಗೆ ಒಯ್ಯಬೇಕಾದ ಸಲಕರಣೆಗಳು;

(xv) ಮಜಲು ಅಥವಾ ಕರಾರು ವಾಹನವನ್ನು ಎಷ್ಟು ಜನ ಪ್ರಯಾಣಿಕರನ್ನು ಒಯ್ಯಲು ಅಳವಡಿಸಿಕೊಳ್ಳಲಾಗಿದೆಯೋ ಆ ಪ್ರಯಾಣಿಕರ ಸಂಖ್ಯೆಯ ನಿರ್ಧರಣೆ ಮತ್ತು ಒಯ್ಯಬಹುದಾದ ಪ್ರಯಾಣಿಕರ ಸಂಖ್ಯೆ;

(xvi) ಮಜಲು ಅಥವಾ ಕರಾರು ವಾಹನಗಳಲ್ಲಿ ಪ್ರಯಾಣಿಕರ ಬದಲಾಗಿ ಭಾಗಶಃ ಅಥವಾ ಪೂರ್ಣವಾಗಿ ಯಾವ ಷರತ್ತುಗಳಿಗೊಳಪಟ್ಟು ಸರಕುಗಳನ್ನು ಒಯ್ಯಬಹುದೋ ಆ ಷರತ್ತುಗಳು;

(xvii) ಮಜಲು ಅಥವಾ ಕರಾರು ವಾಹನದಲ್ಲಿ ಬಿಟ್ಟುಹೋದ ಸ್ವತ್ತುಗಳ ಅಭಿರಕ್ಷೆ ಮತ್ತು ವಿಲೆ;

(xviii) ಸಾರಿಗೆ ವಾಹನಗಳಿಗೆ ಬಣ್ಣ ಹಚ್ಚುವುದು ಅಥವಾ ಗುರುತು ಹಾಕುವುದನ್ನು ಮತ್ತು ಅವುಗಳ ಮೇಲೆ ಜಾಹೀರಾತು ವಿಷಯಗಳನ್ನು ಪ್ರದರ್ಶಿಸುವುದನ್ನು ನಿಯಂತ್ರಿಸುವುದು ಮತ್ತು ವಿಶೇಷತ: ವಾಹನವನ್ನು ಟಪ್ಪಾಲು ಸಾಗಣೆಗೆ ಬಳಸಲಾಗುತ್ತಿದೆ ಎಂದು ಯಾರೇ ವ್ಯಕ್ತಿಯು ನಂಬುವಂತೆ ಮಾಡುವಂಥ ಬಣ್ಣದಲ್ಲಿ ಅಥವಾ ರೀತಿಯಲ್ಲಿ ಸಾರಿಗೆ ವಾಹನಗಳಿಗೆ ಬಣ್ಣ ಹಚ್ಚುವುದು ಅಥವಾ ಗುರುತು ಮಾಡುವುದನ್ನು ನಿಷೇಧಿಸುವುದು;

(xix) ಮಜಲು ಅಥವಾ ಕರಾರು ವಾಹನಗಳಲ್ಲಿ ಶವಗಳನ್ನು ಅಥವಾ ಯಾವುದೇ ಸಾಂಕ್ರಾಮಿಕ ಅಥವಾ ಅಂಟುರೋಗದಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಅಥವಾ ಪ್ರಯಾಣಿಕರಿಗೆ ತೊಂದರೆ ಅಥವಾ ಹಾನಿಯನ್ನು ಉಂಟುಮಾಡಬಹುದಾದಂಥ ಸರಕುಗಳನ್ನು ಒಯ್ಯುವುದು ಮತ್ತು ಅಂಥ ಉದ್ದೇಶಗಳಿಗಾಗಿ ವಾಹನಗಳನ್ನು ಉಪಯೋಗಿಸಿದಲ್ಲಿ ಅಂಥ ವಾಹನಗಳ ಪರಿಶೀಲನೆ ಮತ್ತು ಸೋಂಕು ನಿವಾರಣೆ;

(xx) ಮೋಟಾರು ಕ್ಯಾಬುಗಳಿಗೆ ಟ್ಯಾಕ್ಸಿ ಮೀಟರುಗಳ ವ್ಯವಸ್ಥೆ, ಉಪಯೋಗಿಸಬೇಕಾದ ಟ್ಯಾಕ್ಸಿ ಮೀಟರುಗಳಿಗೆ ಅನುಮೋದನೆ ಅಥವಾ ಮಾನಕ ಮಾದರಿಗಳನ್ನು ಅಗತ್ಯಪಡಿಸುವುದು ಮತ್ತು ಟ್ಯಾಕ್ಸಿ ಮೀಟರುಗಳ ತಪಾಸಣೆ, ಪರೀಕ್ಷಣೆ ಮತ್ತು ಅವುಗಳನ್ನು ಮೊಹರು ಮಾಡುವುದು;

(xxi) ನಿರ್ದಿಷ್ಟ ಸ್ಥಳಗಳಲ್ಲಿ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಅಥವಾ ಯಥಾಕ್ರಮವಾಗಿ ಅಧಿಸೂಚಿಸಲಾದ ನಿಲ್ದಾಣಗಳು ಅಥವಾ ನಿಲುಗಡೆಗಳಿಗೆ ಹೊರತಾದ ಇತರ ಸ್ಥಳಗಳಲ್ಲಿ ಮಜಲು ಅಥವಾ ಕರಾರು ವಾಹನಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದನ್ನು ಅಥವಾ ಇಳಿಸುವುದನ್ನು ನಿಷೇಧಿಸುವುದು ಮತ್ತು ಅಧಿಸೂಚಿಸಲಾದ ನಿಲುಗಡೆ ಸ್ಥಳದಲ್ಲಿ ವಾಹನಕ್ಕೆ ಹತ್ತಬಯಸುವ ಅಥವಾ ಅದರಿಂದ ಇಳಿಯಬಯಸುವ ಪ್ರಯಾಣಿಕನು ಯುಕ್ತ ಕಾಲದವರೆಗೆ ವಾಹನವನ್ನು ನಿಲ್ಲಿಸುವಂತೆ ಮತ್ತು ಕದಲದೆ ಇರುವಂತೆ ಕೇಳಿಕೊಂಡಾಗ ಹಾಗೆ ಮಾಡುವಂತೆ ಮಜಲು ವಾಹನದ ಚಾಲಕನನ್ನು ಅಗತ್ಯಪಡಿಸುವುದು;

(xxii) ಯಥಾಕ್ರಮದಲ್ಲಿ ಅಧಿಸೂಚಿಸಲಾದ ಯಾವುದೇ ನಿಲ್ದಾಣವನ್ನು ಅಥವಾ ನಿಲುಗಡೆ ಸ್ಥಳವನ್ನು ನಿರ್ಮಿಸುವುದು ಮತ್ತು ಅವುಗಳನ್ನು ಬಳಸುವ ಎಲ್ಲ ಜನರ ಅನುಕೂಲಕ್ಕಾಗಿ ಸಾಕಷ್ಟು ಸಲಕರಣೆಗಳು ಮತ್ತು ಸೌಕರ್ಯಗಳ ವ್ಯವಸ್ಥೆ; ಅಂಥ ಅನುಕೂಲಗಳನ್ನು ಬಳಸಿಕೊಳ್ಳುವುದಕ್ಕೆ ವಿಧಿಸಬಹುದಾದ ಫೀಜು ಯಾವುದಾದರೂ ಇದ್ದರೆ ಆ ಫೀಜು, ಅಂಥ ನಿಲ್ದಾಣ ಅಥವಾ ಸ್ಥಳಗಳಲ್ಲಿ ಇಡಬೇಕಾದ ದಾಖಲೆಗಳು, ಅಲ್ಲಿ ನಿಯೋಜಿಸಬೇಕಾದ ಸಿಬ್ಬಂದಿ ಮತ್ತು ಅಂಥ ಸಿಬ್ಬಂದಿಯ ಕರ್ತವ್ಯಗಳು ಮತ್ತು ವರ್ತನೆ ಮತ್ತು ಸಾಮಾನ್ಯವಾಗಿ ಅಂಥ ನಿಲ್ದಾಣಗಳು ಮತ್ತು ಸ್ಥಳಗಳನ್ನು ಉಪಯೋಗ ಯೋಗ್ಯ ಹಾಗೂ ಸ್ವಚ್ಛ ಸ್ಥಿತಿಯಲ್ಲಿ ಇಡುವುದು - ಇವುಗಳಿಗೆ ಸಂಬಂಧಪಟ್ಟಂತೆ ಪಾಲಿಸಬೇಕಾದ ಅಗತ್ಯತೆಗಳು;

(xxiii) ಮೋಟಾರು ಕ್ಯಾಬು ದರ್ಜೆಗಳ ನಿಯಂತ್ರಣ;

(xxiv) ಸಾರಿಗೆಯ ವಾಹನಗಳ ಒಡೆಯರನ್ನು, ವಿಳಾಸದಲ್ಲಿ ಆದ ಯಾವುದೇ ಬದಲಾವಣೆಯನ್ನು ಅಧಿಸೂಚಿಸುವಂತೆ ಅಥವಾ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ಪ್ರಯಾಣಿಕರನ್ನು ಒಯ್ಯಲು ಉಪಯೋಗಿಸುವ ಯಾವುದೇ ವಾಹನವು ಕೆಟ್ಟುಹೋದ ಅಥವಾ ಅದಕ್ಕೆ ಹಾನಿಯುಂಟಾದ ಬಗ್ಗೆ ವರದಿ ಮಾಡುವಂತೆ ಅಗತ್ಯಪಡಿಸುವುದು;

(xxv) ಪರ್ಮಿಟ್ಟು ಧಾರಕರು ತಮ್ಮ ವ್ಯವಹಾರದ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಎಲ್ಲ ಆವರಣಗಳನ್ನು ಎಲ್ಲ ಯುಕ್ತ ಕಾಲಗಳಲ್ಲಿ ಪ್ರವೇಶಿಸಲು ಮತ್ತು ಪರಿಶೀಲಿಸಲು ನಿರ್ದಿಷ್ಟ ವ್ಯಕ್ತಿಗಳನ್ನು ಅಧಿಕೃತಗೊಳಿಸುವುದು;

(xxvi) ಕಾನೂನು ಸಮ್ಮತ ಅಥವಾ ವಾಡಿಕೆಯ ಹಾಸಲನ್ನು ಕೊಡುವ ಯಾರೇ ವ್ಯಕ್ತಿಯನ್ನು ಒಯ್ಯುವಂತೆ ಮಜಲು ವಾಹನದ ಪ್ರಭಾರವನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವುದು;

(xxvii) ಯಾವ ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ಮಾದರಿಯ ಧಾರಕಗಳಲ್ಲಿ ಅಥವಾ ವಾಹನಗಳಲ್ಲಿ, ಪ್ರಾಣಿಗಳನ್ನು ಅಥವಾ ಪಕ್ಷಿಗಳನ್ನು ಒಯ್ಯಬಹುದೋ ಆ ಷರತ್ತುಗಳು ಮತ್ತು ಆ ಮಾದರಿಯ ಧಾರಕಗಳು ಅಥವಾ ವಾಹನಗಳು ಮತ್ತು ಯಾವ ಕಾಲಗಳಲ್ಲಿ ಪ್ರಾಣಿಗಳನ್ನು ಅಥವಾ ಪಕ್ಷಿಗಳನ್ನು ಒಯ್ಯಬಹುದೋ ಅಥವಾ ಒಯ್ಯತಕ್ಕದ್ದಲ್ಲವೋ ಆ ಕಾಲಗಳು;

(xxviii) ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣಕ್ಕಾಗಿ ಟಿಕೆಟ್ಟುಗಳನ್ನು ಮಾರುವಲ್ಲಿ ಅಥವಾ ಅನ್ಯಥಾ ಅಂಥ ವಾಹನಗಳಿಗೆ ಗಿರಾಕಿಗಳನ್ನು ಕೋರುವಲ್ಲಿ ತೊಡಗಿರುವ ಏಜೆಂಟ್‌ರು ಅಥವಾ ಪ್ರಚಾರಕರಿಗೆ ಲೈಸನ್ಸು ನೀಡುವುದು ಮತ್ತು ಅವರ ವರ್ತನೆಯನ್ನು ವಿನಿಯಮಿಸುವುದು;

(xxix) ಸರಕು ವಾಹನಗಳು ಒಯ್ಯುವ ಸರಕುಗಳನ್ನು ಸಂಗ್ರಹಿಸುವ, ಕಳುಹಿಸಿಕೊಡುವ ಮತ್ತು ವಿತರಣೆ ಮಾಡುವ ವ್ಯವಹಾರದಲ್ಲಿ ತೊಡಗಿರುವ ಏಜೆಂಟರಿಗೆ ಲೈಸನ್ಸು ನೀಡುವುದು;

(xxx) ಸಾರಿಗೆ ವಾಹನಗಳನ್ನು ಮತ್ತು ಅವುಗಳಲ್ಲಿರುವ ವಸ್ತುಗಳನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ಪರ್ಮಿಟ್ಟುಗಳನ್ನು ಪರಿಶೀಲಿಸುವುದು;

(xxxi) ಸರಕು ವಾಹನಗಳಲ್ಲಿ ಚಾಲಕನನ್ನು ಹೊರತುಪಡಿಸಿ ಇತರ ವ್ಯಕ್ತಿಗಳನ್ನು ಒಯ್ಯುವುದು;

(xxxii) ಸಾರಿಗೆ ವಾಹನಗಳ ಒಡೆಯರು ಇಡಬೇಕಾದ ದಾಖಲೆಗಳು ಮತ್ತು ಒದಗಿಸಬೇಕಾದ ವಿವರ ಪಟ್ಟಿಕೆಗಳು;

(xxxiii) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

## ಅಧ್ಯಾಯ - **VI**

### ರಾಜ್ಯ ಸಾರಿಗೆ ಉದ್ಯಮಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು

97. ಪರಿಭಾಷೆ:- ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ರಸ್ತೆ ಸಾರಿಗೆ ಸೇವೆ" ಎಂದರೆ ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ರಸ್ತೆಯ ಮೂಲಕ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಅವೆರಡನ್ನೂ ಒಯ್ಯುವ ಮೋಟಾರು ವಾಹನಗಳ ಸೇವೆ.

98. **V**ನೇ ಅಧ್ಯಾಯ ಮತ್ತು ಇತರ ಕಾನೂನುಗಳನ್ನು ಅಧ್ಯಾರೋಹಿಸುವ ಅಧ್ಯಾಯ:- ಈ ಅಧ್ಯಾಯದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಮಾಡಿದ ಆದೇಶಗಳು, ಅವುಗಳಿಗೆ ಅಸಂಗತವಾಗಿ Vನೇ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಕಾನೂನಿನ ಕಾರಣದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಏನೇ ಇದ್ದರೂ, ಪರಿಣಾಮ ಹೊಂದಿರತಕ್ಕದ್ದು.

99. ರಾಜ್ಯ ಸಾರಿಗೆ ಉದ್ಯಮದ ರಸ್ತೆ ಸಾರಿಗೆ ಸೇವೆಗೆ ಸಂಬಂಧಿಸಿದ ಪ್ರಸ್ತಾವದ ತಯಾರಿಕೆ ಮತ್ತು ಪ್ರಕಟಣೆ:- (1) ಯಾವುದೇ ರಾಜ್ಯ ಸರ್ಕಾರವು ದಕ್ಷ, ಪರ್ಯಾಪ್ತ, ಲಾಭದಾಯಕ ಮತ್ತು ಯಥೋಚಿತವಾಗಿ ಸಮನ್ವಯಿತ ರಸ್ತೆ ಸಾರಿಗೆ ಸೇವೆಯನ್ನು ಒದಗಿಸುವ ಉದ್ದೇಶಕ್ಕಾಗಿ ಯಾವುದೇ ಕ್ಷೇತ್ರಕ್ಕೆ ಅಥವಾ ಮಾರ್ಗಕ್ಕೆ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ರಸ್ತೆ ಸಾರಿಗೆ ಸೇವೆಗಳನ್ನು ಅಥವಾ ಅಂಥ ಸೇವೆಯ ಯಾವುದೇ ವಿಶಿಷ್ಟ ವರ್ಗವನ್ನು, ರಾಜ್ಯ ಸಾರಿಗೆ ಉದ್ಯಮವು, ಇತರ ವ್ಯಕ್ತಿಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಹೊರತುಪಡಿಸಿ ಅಥವಾ ಅನ್ಯಥಾ ನಡೆಸತಕ್ಕದ್ದೆಂದು ಮತ್ತು ಸಂಚಾಲನ ಮಾಡತಕ್ಕದ್ದೆಂದು ಅಭಿಪ್ರಾಯಪಡುವಲ್ಲಿ, ಆ ರಾಜ್ಯ ಸರ್ಕಾರವು, ಒದಗಿಸಲು ಪ್ರಸ್ತಾವಿಸಿದ ಸೇವೆಗಳ ಸ್ವರೂಪ, ಆ ಸೇವೆಗೆ ಒಳಪಡಿಸಲು ಪ್ರಸ್ತಾವಿಸಿದ ಕ್ಷೇತ್ರ ಅಥವಾ ಮಾರ್ಗ ಇವುಗಳ ವಿವರಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿವರಗಳನ್ನು ಒಳಗೊಂಡ ಯೋಜನೆಗೆ ಸಂಬಂಧಿಸಿದ ಪ್ರಸ್ತಾವವನ್ನು ತಯಾರಿಸಬಹುದು ಮತ್ತು ಅಂಥ ಪ್ರಸ್ತಾವವನ್ನು ರೂಪಿಸುವ ರಾಜ್ಯದ ರಾಜಪತ್ರದಲ್ಲಿ ಮತ್ತು ಅಂಥ ಯೋಜನೆಗೆ ಒಳಪಡಿಸಲು ಪ್ರಸ್ತಾವಿಸಲಾದ ಕ್ಷೇತ್ರ ಅಥವಾ ಮಾರ್ಗದಲ್ಲಿ ಪ್ರಸಾರದಲ್ಲಿರುವ ಪ್ರಾದೇಶಿಕ ಭಾಷೆಯ ಕನಿಷ್ಠ ಒಂದು ವೃತ್ತ ಪತ್ರಿಕೆಯಲ್ಲಾದರೂ ಮತ್ತು ಅಂಥ ಪ್ರಸ್ತಾವವನ್ನು ರೂಪಿಸುವ ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವಂಥ ಇತರ ರೀತಿಯಲ್ಲಿಯೂ ಅದನ್ನು ಪ್ರಕಟಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಆ ಉಪಪ್ರಕರಣದ ಮೇರೆಗೆ ಒಂದು ಪ್ರಸ್ತಾವವನ್ನು ಪ್ರಕಟಿಸುವಾಗ, ಅಂಥ ಪ್ರಸ್ತಾವವನ್ನು ಪ್ರಕಟಿಸಿದ ದಿನಾಂಕದಿಂದ ಆ ಪ್ರಸ್ತಾವವು ಇತ್ಯರ್ಥದಲ್ಲಿರುವ ಅವಧಿಯಲ್ಲಿ ತಾತ್ಕಾಲಿಕ ಪರ್ಮಿಟ್ಟನ್ನು ಹೊರತುಪಡಿಸಿ ಯಾರೇ ವ್ಯಕ್ತಿಗೆ ಯಾವುದೇ ಪರ್ಮಿಟ್ಟನ್ನು ಕೊಡತಕ್ಕದ್ದಲ್ಲ ಮತ್ತು ಅಂಥ ತಾತ್ಕಾಲಿಕ ಪರ್ಮಿಟ್ಟನ್ನು ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಥವಾ 100ನೇ ಪ್ರಕರಣದ ಮೇರೆಗೆ ಆ ಯೋಜನೆಯನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದವರೆಗೆ ಇವೆರಡರಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಮಾತ್ರ ಅಂಥ ತಾತ್ಕಾಲಿಕ ಪರ್ಮಿಟ್ಟು ಸಿಂಧುವಾಗಿರತಕ್ಕದ್ದು.

100. ಪ್ರಸ್ತಾವಕ್ಕೆ ಆಕ್ಷೇಪಣೆ:- (1) ಯೋಜನೆಗೆ ಸಂಬಂಧಿಸಿ ಯಾವುದೇ ಪ್ರಸ್ತಾವವನ್ನು ರಾಜಪತ್ರದಲ್ಲಿ ಮತ್ತು ಅಂಥ ಪ್ರಸ್ತಾವಕ್ಕೆ ಒಳಪಡಬೇಕಾಗಿರುವ ಕ್ಷೇತ್ರ ಅಥವಾ ಮಾರ್ಗದಲ್ಲಿ ಪ್ರಸಾರದಲ್ಲಿರುವ ಪ್ರಾದೇಶಿಕ ಭಾಷೆಯ ಕನಿಷ್ಠ ಒಂದು ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದ ಮೇಲೆ, ಯಾರೇ ವ್ಯಕ್ತಿಯು, ರಾಜಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಆಕ್ಷೇಪಣೆಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು.

(2) ರಾಜ್ಯ ಸರ್ಕಾರವು, ಆಕ್ಷೇಪಣೆಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಆಕ್ಷೇಪಣೆಕಾರನಿಗೆ ಅಥವಾ ಅವನ ಪ್ರತಿನಿಧಿಗಳಿಗೆ ಮತ್ತು ರಾಜ್ಯ ಸಾರಿಗೆ ಉದ್ಯಮದ ಪ್ರತಿನಿಧಿಗಳಿಗೆ ಅವರು ಆ ವಿಷಯದಲ್ಲಿ ಸುನಾವಣೆಯನ್ನು ಅಪೇಕ್ಷಿಸಿದರೆ, ಅದಕ್ಕೆ ಅವಕಾಶ ಕೊಟ್ಟ ತರುವಾಯ ಅಂಥ ಪ್ರಸ್ತಾವವನ್ನು ಅನುಮೋದಿಸಬಹುದು ಅಥವಾ ಅದರಲ್ಲಿ ಮಾರ್ಪಾಟು ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಅನುಮೋದಿತವಾದ ಅಥವಾ ಮಾರ್ಪಾಟು ಮಾಡಲಾದ ಪ್ರಸ್ತಾವಕ್ಕೆ ಸಂಬಂಧಿಸಿದ ಯೋಜನೆಯನ್ನು, ಅಂಥ ಯೋಜನೆಯನ್ನು ತಯಾರಿಸುವ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಮತ್ತು ಅಂಥ ಯೋಜನೆಗೆ ಒಳಪಡುವ ಕ್ಷೇತ್ರದಲ್ಲಿ ಅಥವಾ ಮಾರ್ಗದಲ್ಲಿ ಪ್ರಸಾರದಲ್ಲಿರುವ ಪ್ರಾದೇಶಿಕ ಭಾಷೆಯ ಕನಿಷ್ಠ ಒಂದು ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಅಂತಿಮವಾಗತಕ್ಕದ್ದು ಮತ್ತು ಅದನ್ನು ಅನುಮೋದಿತ ಯೋಜನೆಯೆಂದು ಕರೆಯತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರ ಅಥವಾ ಮಾರ್ಗವನ್ನು ಅಧಿಸೂಚಿತ ಕ್ಷೇತ್ರ ಅಥವಾ ಅಧಿಸೂಚಿತ ಮಾರ್ಗವೆಂದು ಕರೆಯತಕ್ಕದ್ದು:

ಪರಂತು, ಯಾವುದೇ ಅಂತರ್‌ರಾಜ್ಯ ಮಾರ್ಗಕ್ಕೆ ಸಂಬಂಧಿಸಿದ ಅಂಥ ಯಾವುದೇ ಯೋಜನೆಯನ್ನು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದ ಹೊರತು ಅನುಮೋದಿತ ಯೋಜನೆಯೆಂಬುದಾಗಿ ಭಾವಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಯೋಜನೆಗೆ ಸಂಬಂಧಿಸಿದ ಪ್ರಸ್ತಾವವನ್ನು ಪ್ರಕಟಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಆ ಯೋಜನೆಯನ್ನು (3)ನೇ ಉಪಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಅನುಮೋದಿತ ಯೋಜನೆಯೆಂಬುದಾಗಿ ಪ್ರಕಟಿಸದಿರುವಲ್ಲಿ ಆ ಪ್ರಸ್ತಾವವು ರದ್ದಾಗಿರುವುದಾಗಿ ಭಾವಿಸತಕ್ಕದ್ದು.

ವಿವರಣೆ:- ಈ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಒಂದು ವರ್ಷದ ಅವಧಿಯನ್ನು ಲೆಕ್ಕಹಾಕುವಲ್ಲಿ, (3)ನೇ ಉಪಪ್ರಕರಣದ ಮೇರೆಗೆ ಅನುಮೋದಿತ ಯೋಜನೆಯ ಪ್ರಕಟಣೆಯು ಯಾವ ಅವಧಿ ಅಥವಾ ಅವಧಿಗಳಲ್ಲಿ, ಯಾವುದೇ ನ್ಯಾಯಾಲಯದ ಯಾವುದೇ ತಡೆ ಅಥವಾ ನಿರ್ಬಂಧಕಾಜ್ಞೆಯ ಕಾರಣದಿಂದ ತಡೆಯಲಾಗಿತ್ತೋ, ಆ ಅವಧಿ ಅಥವಾ ಅವಧಿಗಳನ್ನು ಹೊರತುಪಡಿಸತಕ್ಕದ್ದು.

101. ಕೆಲವು ಸಂದರ್ಭಗಳಲ್ಲಿ ರಾಜ್ಯ ಸಾರಿಗೆ ಉದ್ಯಮವು ಹೆಚ್ಚಿನ ಸೇವೆಗಳ ಸಂಚಾಲನ ಮಾಡುವುದು:- 87ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸಾರಿಗೆ ಉದ್ಯಮವು, ಸಾರ್ವಜನಿಕ ಹಿತದೃಷ್ಟಿಯಿಂದ ಜಾತ್ರೆಗಳು ಮತ್ತು ಧಾರ್ಮಿಕ ಸಭೆ ಸಮಾರಂಭಗಳಂಥ ವಿಶೇಷ ಸಂದರ್ಭಗಳಲ್ಲಿ ಹೋಗಿಬರುವುದಕ್ಕೆ ಪ್ರಯಾಣಿಕರನ್ನು ಸಾಗಿಸಲು ಹೆಚ್ಚಿನ ಸೇವೆಗಳ ಸಂಚಾಲನ ಮಾಡಬಹುದು:

ಪರಂತು, ರಾಜ್ಯ ಸಾರಿಗೆ ಉದ್ಯಮವು, ಅಂಥ ಹೆಚ್ಚಿನ ಸೇವೆಗಳ ಸಂಚಾಲನೆಯ ಬಗ್ಗೆ ವಿಳಂಬವಿಲ್ಲದೆ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

102. ಯೋಜನೆಯ ರದ್ದಿಯಾತಿ ಅಥವಾ ಮಾರ್ಪಾಟು:- (1) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಲ್ಲಿ ಯಾವುದೇ ಅನುಮೋದಿತ ಯೋಜನೆಯನ್ನು ಮಾರ್ಪಾಟುಗೊಳಿಸುವುದು ಅವಶ್ಯವೆಂದು ಯಾವುದೇ ಸಮಯದಲ್ಲಿ ಪರಿಗಣಿಸಿದರೆ,-

(i) ರಾಜ್ಯ ಸಾರಿಗೆ ಉದ್ಯಮಕ್ಕೆ; ಮತ್ತು

(ii) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಪ್ರಸ್ತಾವಿತ ಮಾರ್ಪಾಟಿನಿಂದ ಬಾಧಿತನಾಗುವ ಸಂಭವವಿರುವ ಯಾರೇ ಇತರ ವ್ಯಕ್ತಿಗೆ

- ಪ್ರಸ್ತಾವಿತ ಮಾರ್ಪಾಟಿನ ಬಗ್ಗೆ ಸುನಾವಣೆಯ ಅವಕಾಶವನ್ನು ಕೊಟ್ಟ ತರುವಾಯ ಹಾಗೆ ಮಾರ್ಪಾಟು ಮಾಡಬಹುದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಪ್ರಸ್ತಾವಿಸಿದ ಯಾವುದೇ ಮಾರ್ಪಾಟನ್ನು, ರಾಜಪತ್ರದಲ್ಲಿ ಮತ್ತು ಅಂಥ ಮಾರ್ಪಾಟಿಗೆ ಒಳಪಡಿಸಲು ಪ್ರಸ್ತಾವಿಸಿದ ಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ಪ್ರಾದೇಶಿಕ ಭಾಷೆಯ ವೃತ್ತಪತ್ರಿಕೆಗಳ ಪೈಕಿ ಯಾವೊಂದರಲ್ಲಿ, ರಾಜಪತ್ರದಲ್ಲಿ ಅಂಥ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಿಗೆ ಕಡಿಮೆಯಿಲ್ಲದಿರತಕ್ಕ ದಿನಾಂಕ ಮತ್ತು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸ್ವೀಕರಿಸಿದ ಯಾವುದೇ ಮನವಿಯ ಸುನಾವಣೆ ನಡೆಸುವ ವೇಳೆ ಮತ್ತು ಸ್ಥಳಗಳು ಇವುಗಳ ಸಮೇತ ಪ್ರಕಟಿಸತಕ್ಕದ್ದು.

103. ರಾಜ್ಯ ಸಾರಿಗೆ ಉದ್ಯಮಗಳಿಗೆ ಪರ್ಮಿಟ್ಟುಗಳ ನೀಡಿಕೆ:- (1) ಅನುಮೋದಿತ ಯೋಜನೆಗನುಸಾರವಾಗಿ ಯಾವುದೇ ರಾಜ್ಯ ಸಾರಿಗೆ ಉದ್ಯಮವು, ಅಧಿಸೂಚಿತ ಕ್ಷೇತ್ರ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ ಮಜಲು ವಾಹನದ ಪರ್ಮಿಟ್ಟಿಗೆ

ಅಥವಾ ಸರಕು ವಾಹನದ ಪರ್ಮಿಟ್ಟಿಗೆ ಅಥವಾ ಕರಾರು ವಾಹನದ ಪರ್ಮಿಟ್ಟಿಗೆ, ರಾಜ್ಯ ಸರ್ಕಾರವು ಈ ಬಗ್ಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಸದರಿ ಕ್ಷೇತ್ರ ಅಥವಾ ಮಾರ್ಗವು ಒಂದಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ಇರುವ ಯಾವುದೇ ಸಂದರ್ಭದಲ್ಲಿ, ರಾಜ್ಯ ಸಾರಿಗೆ ಪ್ರಾಧಿಕಾರವು ಮತ್ತು ಯಾವುದೇ ಇತರ ಸಂದರ್ಭದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, Vನೇ ಅಧ್ಯಾಯದಲ್ಲಿ ಅದಕ್ಕೆ ಪ್ರತಿಕೂಲವಾಗಿರುವುದು ಏನೇ ಇದ್ದರೂ, ರಾಜ್ಯ ಸಾರಿಗೆ ಉದ್ಯಮಕ್ಕೆ ಅಂಥ ಪರ್ಮಿಟ್ಟನ್ನು ನೀಡತಕ್ಕದ್ದು.

(2) ಅಧಿಸೂಚಿತ ಕ್ಷೇತ್ರ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ ಅನುಮೋದಿತ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಆದೇಶದ ಮೂಲಕ,-

(ಎ) ಇತರ ಯಾವುದೇ ಪರ್ಮಿಟ್ಟಿನ ನೀಡಿಕೆ ಅಥವಾ ನವೀಕರಣದ ಯಾವುದೇ ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಬಹುದು ಅಥವಾ ಇತ್ಯರ್ಥದಲ್ಲಿರುವಂಥ ಯಾವುದೇ ಅರ್ಜಿಯನ್ನು ತಿರಸ್ಕರಿಸಬಹುದು;

(ಬಿ) ಅಸ್ತಿತ್ವದಲ್ಲಿರುವ ಯಾವುದೇ ಪರ್ಮಿಟ್ಟನ್ನು ರದ್ದುಗೊಳಿಸಬಹುದು;

(ಸಿ) ಅಸ್ತಿತ್ವದಲ್ಲಿರುವ ಯಾವುದೇ ಪರ್ಮಿಟ್ಟಿನ ನಿಬಂಧನೆಗಳನ್ನು,-

(i) ಒಂದು ನಿರ್ದಿಷ್ಟ ದಿನಾಂಕವಾದ ಮೇಲೆ ಪರ್ಮಿಟ್ಟನ್ನು ನಿಷ್ಪರಿಣಾಮಗೊಳಿಸುವಂತೆ;

(ii) ಪರ್ಮಿಟ್ಟಿನ ಅಡಿಯಲ್ಲಿ ಉಪಯೋಗಿಸಲು ಅಧಿಕೃತಗೊಳಿಸಿದ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ;

(iii) ಅಧಿಸೂಚಿತ ಕ್ಷೇತ್ರ ಅಥವಾ ಅಧಿಸೂಚಿತ ಮಾರ್ಗಕ್ಕೆ ಅಂಥ ಪರ್ಮಿಟ್ಟು ಸಂಬಂಧಪಡುವಷ್ಟರ ಮಟ್ಟಿಗೆ ಆ ಪರ್ಮಿಟ್ಟಿಗೆ ಒಳಪಡುವ ಕ್ಷೇತ್ರ ಅಥವಾ ಮಾರ್ಗವನ್ನು ಕಡಿಮೆ ಮಾಡುವಂತೆ

- ಮಾರ್ಪಾಟು ಮಾಡಬಹುದು.

(3) ಸಂದೇಹಗಳ ನಿವಾರಣೆಗಾಗಿ, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ರಾಜ್ಯದ ಸಾರಿಗೆ ಪ್ರಾಧಿಕಾರ ಅಥವಾ ಯಾವುದೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ತೆಗೆದುಕೊಂಡ ಯಾವುದೇ ಕ್ರಮ ಅಥವಾ ಮಾಡಿದ ಆದೇಶದ ವಿರುದ್ಧ ಯಾವುದೇ ಅಪೀಲಿಗೆ ಅವಕಾಶ ಇರತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

104. ಅಧಿಸೂಚಿತ ಪ್ರದೇಶ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ ಪರ್ಮಿಟ್ಟುಗಳನ್ನು ನೀಡುವುದಕ್ಕೆ ನಿರ್ಬಂಧ:- ಯಾವುದೇ ಅಧಿಸೂಚಿತ ಪ್ರದೇಶ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ 100ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯೋಜನೆಯನ್ನು ಪ್ರಕಟಿಸಿರುವಲ್ಲಿ, ರಾಜ್ಯ ಸಾರಿಗೆ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಯೋಜನೆಯ ಉಪಬಂಧಗಳಿಗನುಸಾರವಾಗಿ ಹೊರತು, ಯಾವುದೇ ಪರ್ಮಿಟ್ಟನ್ನು ನೀಡತಕ್ಕದ್ದಲ್ಲ:

ಪರಂತು, ಅನುಮೋದಿತ ಯೋಜನೆಗೆ ಅನುಸಾರವಾಗಿ ಯಾವುದೇ ಅಧಿಸೂಚಿತ ಪ್ರದೇಶ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ ರಾಜ್ಯ ಸಾರಿಗೆ ಉದ್ಯಮವು ಪರ್ಮಿಟ್ಟಿಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸದಿರುವಲ್ಲಿ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅಂಥ ಅಧಿಸೂಚಿತ ಪ್ರದೇಶ ಅಥವಾ ಅಧಿಸೂಚಿತ ಮಾರ್ಗದ ಸಂಬಂಧದಲ್ಲಿ, ಆ ಪ್ರದೇಶ ಅಥವಾ ಮಾರ್ಗದ ಸಂಬಂಧದಲ್ಲಿ ರಾಜ್ಯ ಸಾರಿಗೆ ಉದ್ಯಮಕ್ಕೆ ಪರ್ಮಿಟ್ಟು ನೀಡಿದ ಮೇಲೆ ಅಂಥ ಪರ್ಮಿಟ್ಟು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದೆಂಬ ಷರತ್ತಿಗೊಳಪಟ್ಟು ಯಾರೇ ವ್ಯಕ್ತಿಗೆ ತಾತ್ಕಾಲಿಕ ಪರ್ಮಿಟ್ಟುಗಳನ್ನು ನೀಡಬಹುದು.

105. ಪರಿಹಾರವನ್ನು ನಿರ್ಧರಿಸುವ ಮತ್ತು ಅದರ ಸಂದಾಯದ ಸೂತ್ರಗಳು ಮತ್ತು ವಿಧಾನ:- (1) 103ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದ ಮೇರೆಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಅಸ್ತಿತ್ವದಲ್ಲಿರುವ ಯಾವುದೇ ಪರ್ಮಿಟ್ಟನ್ನು ರದ್ದುಗೊಳಿಸಿದರೆ ಅಥವಾ ಅದರ ನಿಬಂಧನೆಯನ್ನು ಮಾರ್ಪಾಟು ಮಾಡಿದರೆ, ಪರ್ಮಿಟ್ಟು ಧಾರಕನಿಗೆ ರಾಜ್ಯ ಸಾರಿಗೆ ಉದ್ಯಮವು ಪರಿಹಾರವನ್ನು ಸಂದಾಯ ಮಾಡತಕ್ಕದ್ದು ಮತ್ತು ಅದರ ಮೊಬಲಗನ್ನು (4)ನೇ ಉಪಪ್ರಕರಣ ಅಥವಾ ಸಂದರ್ಭಾನುಸಾರ (5)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಅಸ್ತಿತ್ವದಲ್ಲಿರುವ ಪರ್ಮಿಟ್ಟಿಗೆ ಬದಲಾಗಿ, ಬದಲಿ ಮಾರ್ಗ ಅಥವಾ ಕ್ಷೇತ್ರಕ್ಕೆ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಪರ್ಮಿಟ್ಟನ್ನು ಕೊಟ್ಟಿರುವಾಗ

ಹಾಗೂ ಅದನ್ನು ಪರ್ಮಿಟ್ಟು ಧಾರಕನು ಅಂಗೀಕರಿಸಿರುವಾಗ, ಆ ಪರ್ಮಿಟ್ಟಿನ ರದ್ದಿಯಾತಿ ಅಥವಾ ಅದರ ನಿಬಂಧನೆಗಳ ಯಾವುದೇ ಮಾರ್ಪಾಟಿನ ನಿಮಿತ್ತ ಯಾವುದೇ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(3) ಸಂದೇಹಗಳ ನಿವಾರಣೆಗಾಗಿ, 103ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಪರ್ಮಿಟ್ಟಿನ ನವೀಕರಣದ ನಿರಾಕರಣೆಯ ನಿಮಿತ್ತ ಯಾವುದೇ ಪರಿಹಾರವು ಸಂದಾಯವಾಗತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(4) 103ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ (i)ನೇ ಉಪಖಂಡದ ಅಥವಾ (ii)ನೇ ಉಪಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಪರ್ಮಿಟ್ಟು ಧಾರಕನಿಗೆ ಅದರ ಮೇರೆಗೆ ಯಾವ ಅವಧಿಯವರೆಗೆ ಆ ಪರ್ಮಿಟ್ಟು ಅನ್ಯಥಾ ಪರಿಣಾಮಕಾರಿಯಾಗಿರಬಹುದಾಗಿತ್ತೋ ಆ ಪೂರ್ಣ ಅವಧಿಯವರೆಗೆ ವಾಹನವನ್ನು ಉಪಯೋಗಿಸದಂತೆ ಪರ್ಮಿಟ್ಟು ಧಾರಕನನ್ನು ತಡೆಗಟ್ಟುವ ಹಾಗೆ ಅಸ್ತಿತ್ವದಲ್ಲಿರುವ ಯಾವುದೇ ಪರ್ಮಿಟ್ಟನ್ನು ರದ್ದುಗೊಳಿಸಿದಾಗ ಅಥವಾ ಅದರ ನಿಬಂಧನೆಗಳು ಮಾರ್ಪಾಟಾದಾಗ, ಅಂಥ ರದ್ದಿಯಾತಿ ಅಥವಾ ಮಾರ್ಪಾಟಿನಿಂದ ಬಾಧಿತವಾದ ಪ್ರತಿಯೊಂದು ವಾಹನದ ಬಗ್ಗೆ ಪರ್ಮಿಟ್ಟು ಧಾರಕನಿಗೆ ಸಂದಾಯವಾಗಬೇಕಾದ ಪರಿಹಾರವನ್ನು ಈ ಕೆಳಕಂಡಂತೆ ಲೆಕ್ಕಹಾಕತಕ್ಕದ್ದು:-

(ಎ) ಪರ್ಮಿಟ್ಟಿನ ಉಳಿದ ಅವಧಿಯ ಹದಿನೈದು ದಿನಗಳನ್ನು ಮೀರದ ಪ್ರತಿಯೊಂದು ಪೂರ್ಣ ತಿಂಗಳಿಗೆ ಅಥವಾ ಅದರ ಭಾಗಕ್ಕೆ : ಎರಡುನೂರು ರೂಪಾಯಿ

(ಬಿ) ಪರ್ಮಿಟ್ಟಿನ ಉಳಿದ ಅವಧಿಯ ಹದಿನೈದು ದಿನಗಳನ್ನು ಮೀರದ ತಿಂಗಳ ಭಾಗಕ್ಕೆ : ನೂರು ರೂಪಾಯಿ:

ಪರಂತು, ಪರಿಹಾರದ ಮೊಬಲಗು, ಯಾವುದೇ ಸಂದರ್ಭದಲ್ಲಿ ನಾಲ್ಕು ನೂರು ರೂಪಾಯಿಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

(5) 103ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ (iii)ನೇ ಉಪಖಂಡದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಅಸ್ತಿತ್ವದಲ್ಲಿರುವ ಪರ್ಮಿಟ್ಟಿನ ಮೇರೆಗೆ ಉಪಯೋಗಿಸಲು ಅಧಿಕೃತಗೊಳಿಸಿದ ವಾಹನದ ಕ್ಷೇತ್ರ ಅಥವಾ ಮಾರ್ಗವನ್ನು ಕಡಿಮೆ ಮಾಡುವ ಹಾಗೆ ಆ ಪರ್ಮಿಟ್ಟಿನ ನಿಬಂಧನೆಗಳನ್ನು ಮಾರ್ಪಾಟುಗೊಳಿಸಿದಾಗ ಹಾಗೆ ಕಡಿಮೆ ಮಾಡಿದ ಕಾರಣದಿಂದ ಪರ್ಮಿಟ್ಟು ಧಾರಕನಿಗೆ ಸಂದಾಯವಾಗಬೇಕಾದ ಪರಿಹಾರವು ಈ ಕೆಳಕಂಡ ಸೂತ್ರಕ್ಕನುಸಾರವಾಗಿ ಲೆಕ್ಕಹಾಕಲಾದ ಮೊಬಲಗು ಆಗಿರತಕ್ಕದ್ದು, ಎಂದರೆ:-

$$\frac{\text{ವೈ} \times \text{ಎ}}{\text{ಆರ್}}$$

ವಿವರಣೆ:- ಈ ಸೂತ್ರದಲ್ಲಿ,-

(i) "ವೈ" ಎಂದರೆ ಪರ್ಮಿಟ್ಟು ಒಳಗೊಂಡಿರುವ ಮಾರ್ಗ ಅಥವಾ ಕ್ಷೇತ್ರವನ್ನು ಎಷ್ಟು ಉದ್ದ ಅಥವಾ ಕ್ಷೇತ್ರದಷ್ಟು ಕಡಿಮೆ ಮಾಡಲಾಗಿದೆಯೋ ಆ ಉದ್ದ ಅಥವಾ ಕ್ಷೇತ್ರ;

(ii) "ಎ" ಎಂದರೆ (4)ನೇ ಉಪಪ್ರಕರಣಕ್ಕನುಸಾರವಾಗಿ ಲೆಕ್ಕಹಾಕಿದ ಮೊಬಲಗು;

(iii) "ಆರ್" ಎಂದರೆ ಪರ್ಮಿಟ್ಟು ಒಳಗೊಂಡಿರುವ ಮಾರ್ಗದ ಒಟ್ಟು ಉದ್ದ ಅಥವಾ ಒಟ್ಟು ಕ್ಷೇತ್ರ.

(6) ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗನ್ನು, ರಾಜ್ಯ ಸಾರಿಗೆ ಉದ್ಯಮವು ಅದಕ್ಕೆ ಹಕ್ಕುಳ್ಳವನಾದ/ ರಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಪರ್ಮಿಟ್ಟಿನ ರದ್ದಿಯಾತಿ ಅಥವಾ ಮಾರ್ಪಾಟು ಪರಿಣಾಮಕಾರಿಯಾದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸಂದಾಯ ಮಾಡತಕ್ಕದ್ದು:

ಪರಂತು, ರಾಜ್ಯ ಸಾರಿಗೆ ಉದ್ಯಮವು ಸದರಿ ಒಂದು ತಿಂಗಳ ಅವಧಿಯೊಳಗೆ ಸಂದಾಯ ಮಾಡಲು ತಪ್ಪಿದರೆ, ಅದು ಸಂದಾಯವಾಗಬೇಕಾಗಿದ್ದ ದಿನಾಂಕದಿಂದ ಪ್ರತಿ ವರ್ಷಕ್ಕೆ ಶೇಕಡಾ ಏಳರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

106. ವಾಹನಗಳಲ್ಲಿ ಕಂಡುಬಂದ ವಸ್ತುಗಳ ವಿಲೆ:- ರಾಜ್ಯ ಸಾರಿಗೆ ಉದ್ಯಮವು ಸಂಚಾಲನ ಮಾಡುತ್ತಿರುವ ಯಾವುದೇ ಸಾರಿಗೆ ವಾಹನದಲ್ಲಿ ಕಂಡುಬಂದ ಯಾವುದೇ ವಸ್ತುವನ್ನು, ನಿಯಮಿಸಲಾದ ಅವಧಿಯೊಳಗೆ ಅದರ ಒಡೆಯನು ಕ್ಲೇಮು ಮಾಡದಿರುವಲ್ಲಿ, ರಾಜ್ಯ ಸಾರಿಗೆ ಉದ್ಯಮವು ಆ ವಸ್ತುವನ್ನು ನಿಯಮಿಸಲಾದ ರೀತಿಯಲ್ಲಿ ಮಾರಾಟ ಮಾಡಬಹುದು ಮತ್ತು ಅದರ ಮಾರಾಟದ ಉತ್ಪತ್ತಿಯನ್ನು ಆ ಮಾರಾಟಕ್ಕೆ ಸಂಬಂಧಪಟ್ಟ ಖರ್ಚುಗಳನ್ನು ಕಳೆದ ತರುವಾಯ ಒಡೆಯನು ಕೇಳಿದ ಮೇಲೆ ಅವನಿಗೆ ಸಂದಾಯ ಮಾಡತಕ್ಕದ್ದು.

107. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ವಿಷಯಗಳು ಅಥವಾ ಆ ಪೈಕಿ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಯೋಜನೆಗೆ ಸಂಬಂಧಿಸಿದ ಯಾವುದೇ ಪ್ರಸ್ತಾವವನ್ನು 99ನೇ ಪ್ರಕರಣದ ಮೇರೆಗೆ ಪ್ರಕಟಿಸಬಹುದಾದ ನಮೂನೆ;

(ಬಿ) 100ನೇ ಪ್ರಕರಣದ 1ನೇ ಉಪಪ್ರಕರಣದ ಮೇರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾದ ರೀತಿ;

(ಸಿ) 100ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆಕ್ಷೇಪಣೆಗಳನ್ನು ಪರಿಶೀಲಿಸಿ ವಿಲೆ ಮಾಡಬಹುದಾದ ರೀತಿ;

(ಡಿ) 100ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಅನುಮೋದಿತ ಯೋಜನೆಯನ್ನು ಪ್ರಕಟಿಸಬಹುದಾದ ರೀತಿ;

(ಇ) 103ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಬಹುದಾದ ರೀತಿ;

(ಎಫ್) 106ನೇ ಪ್ರಕರಣದ ಮೇರೆಗೆ ಯಾವುದೇ ಸಾರಿಗೆ ವಾಹನದಲ್ಲಿ ಬಿಟ್ಟುಹೋಗಿರುವುದಾಗಿ ಕಂಡುಬಂದ ಯಾವುದೇ ವಸ್ತುವನ್ನು ಒಡೆಯನು ಕ್ಲೇಮು ಮಾಡಬಹುದಾದ ಅವಧಿ ಮತ್ತು ಅಂಥ ವಸ್ತುವನ್ನು ಮಾರಾಟ ಮಾಡುವ ರೀತಿ;

(ಜಿ) ಈ ಅಧ್ಯಾಯದ ಮೇರೆಗೆ ಆದೇಶಗಳನ್ನು ಜಾರಿ ಮಾಡುವ ರೀತಿ;

(ಹೆಚ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

108. ರಾಜ್ಯ ಸರ್ಕಾರದ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರವು ಚಲಾಯಿಸುವುದು:- ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಮತ್ತು ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳ ಒಡೆತನ ಅಥವಾ ನಿಯಂತ್ರಣಕ್ಕೆ ಒಳಪಟ್ಟ ನಿಗಮ ಅಥವಾ ಕಂಪನಿಯ ಸಂಬಂಧದಲ್ಲಿ ಈ ಅಧ್ಯಾಯದ ಮೇರೆಗೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಅಂತರರಾಜ್ಯ ಮಾರ್ಗ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಮಾತ್ರ ಚಲಾಯಿಸತಕ್ಕದ್ದು.

## ಅಧ್ಯಾಯ - **VII**

### ಮೋಟಾರು ವಾಹನಗಳ ನಿರ್ಮಾಣ, ಸಜ್ಜು ಸಲಕರಣೆ ಮತ್ತು ನಿರ್ವಹಣೆ

109. ವಾಹನಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಾಮಾನ್ಯ ಉಪಬಂಧ:- (1) ಪ್ರತಿಯೊಂದು ಮೋಟಾರು ವಾಹನವು ಅದನ್ನು ನಡೆಸುವ ವ್ಯಕ್ತಿಯ ಪರಿಣಾಮಕಾರಿ ನಿಯಂತ್ರಣಕ್ಕೆ ಎಲ್ಲಾ ಕಾಲದಲ್ಲೂ ಒಳಪಡುವ ಹಾಗೆ ಅದನ್ನು ನಿರ್ಮಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಪ್ರತಿಯೊಂದು ಮೋಟಾರು ವಾಹನವು ನಿಯಮಿಸಲಾದ ಸ್ವರೂಪದ ಯಾಂತ್ರಿಕ ಅಥವಾ ವಿದ್ಯುತ್ ಸಂಕೇತ ಸೂಚಕ ಉಪಕರಣದಿಂದ ಅದನ್ನು ಸಜ್ಜುಗೊಳಿಸಿದ್ದ ಹೊರತು, ಅದನ್ನು ಬಲಗಡೆಗೆ ಸ್ಟಿಯರಿಂಗ್ ನಿಯಂತ್ರಣ ಇರುವ ಹಾಗೆ ನಿರ್ಮಿಸತಕ್ಕದ್ದು.

(3) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತಯಾರಕನು ಬಳಸಿದ ಯಾವುದೇ ವಸ್ತು ಅಥವಾ ಪ್ರಕ್ರಿಯೆಯು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಗುಣಮಟ್ಟಕ್ಕೆ ಅನುಸಾರವಾಗಿರತಕ್ಕದ್ದು ಎಂದು ಅಧಿಸೂಚಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯ ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

110. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು ಈ ಕೆಳಕಂಡ ಎಲ್ಲಾ ವಿಷಯಗಳು ಅಥವಾ ಆ ಪೈಕಿ ಯಾವುದೇ ವಿಷಯಗಳಿಗೆ ಸಂಬಂಧಿಸಿ ಮೋಟಾರು ವಾಹನಗಳ ಮತ್ತು ಹಿಂಬಂಡಿಗಳ ನಿರ್ಮಾಣ, ಸಜ್ಜು ಸಲಕರಣೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) ವಾಹನಗಳ ಮತ್ತು ಒಯ್ಯಲಾಗುವ ಹೇರುಗಳ ಅಗಲ, ಎತ್ತರ, ಉದ್ದ ಮತ್ತು ಚಾಚುಭಾಗ;

(ಬಿ) ಟೈರುಗಳ ಮೇಲೆ ತಯಾರಿಕೆಯ ದಿನಾಂಕ ಮತ್ತು ವರ್ಷ ಮತ್ತು ಗರಿಷ್ಠ ಭಾರ ಒಯ್ಯುವ ಸಾಮರ್ಥ್ಯವನ್ನು ಉಬ್ಬಚ್ಚು ಮಾಡುವುದನ್ನು ಒಳಗೊಂಡಂತೆ ಟೈರುಗಳ ಗಾತ್ರ, ಸ್ವರೂಪ, ಗರಿಷ್ಠ ಸಗಟು ಬೆಲೆ ಮತ್ತು ಸ್ಥಿತಿಗತಿ;

(ಸಿ) ಬ್ರೇಕುಗಳು ಮತ್ತು ಸ್ಟಿಯರಿಂಗ್ ಗಿಯರ್;

(ಡಿ) ಬಣ್ಣದ ರಕ್ಷಣಾ ಗಾಜುಗಳ ಉಪಯೋಗದ ನಿಷೇಧವೂ ಸೇರಿ ರಕ್ಷಣಾ ಗಾಜುಗಳ ಉಪಯೋಗ;

(ಇ) ಸಂಕೇತ ಸೂಚಕ ಉಪಕರಣಗಳು, ದೀಪಗಳು ಮತ್ತು ಪ್ರತಿಬಿಂಬಕಗಳು;

(ಎಫ್) ವೇಗ ನಿಯಂತ್ರಕಗಳು;

(ಜಿ) ಹೊಗೆ, ಕಾಣುವ ಹಬೆ, ಕಿಡಿಗಳು, ಬೂದಿ, ಕಲ್ಲು, ಮರಳಿನ ಕಣಗಳ ಮತ್ತು ಎಣ್ಣೆಯ ವಿಸರ್ಜನೆ;

(ಹೆಚ್) ವಾಹನಗಳು ಹೊಮ್ಮಿಸುವ ಅಥವಾ ಅವುಗಳಿಂದುಂಟಾಗುವ ಶಬ್ದವನ್ನು ತಗ್ಗಿಸುವುದು;

(ಐ) ಚಾಸಿಸ್ ಸಂಖ್ಯೆ ಮತ್ತು ಇಂಜಿನ್ ಸಂಖ್ಯೆ ಮತ್ತು ನಿರ್ಮಾಣದ ದಿನಾಂಕವನ್ನು ಉಬ್ಬಚ್ಚು ಮಾಡುವುದು;

(ಜೆ) ಚಾಲಕರು, ಪ್ರಯಾಣಿಕರು ಮತ್ತು ಇತರ ರಸ್ತೆ ಬಳಕೆದಾರರ ಸುರಕ್ಷೆಗೆ ಅಗತ್ಯವಿರತಕ್ಕ ಸುರಕ್ಷಾ ಬೆಲ್ಟ್‌ಗಳು, ಮೋಟಾರು ಸೈಕಲ್‌ಗಳ ಹ್ಯಾಂಡಲ್ ಬಾರ್‌ಗಳು, ಆಟೋ ಡಿಪ್ಪರ್‌ಗಳು ಮತ್ತು ಇತರ ಸಜ್ಜು ಸಲಕರಣೆ;

(ಕೆ) ಅಂತರ್ ನಿರ್ಮಿತ ಸುರಕ್ಷಾ ಸಾಧನಗಳಾಗಿ ವಾಹನಗಳಲ್ಲಿ ಉಪಯೋಗಿಸಲಾದ ಭಾಗಗಳ ಗುಣಮಟ್ಟ;

(ಎಲ್) ಮನುಷ್ಯ ಜೀವಕ್ಕೆ ಅಪಾಯಕರವಾದ ಅಥವಾ ಸಂಕಟಕರ ಸ್ವರೂಪದ ಸರಕುಗಳ ಸಾಗಣೆಗೆ ವ್ಯವಸ್ಥೆ;

(ಎಂ) ವಾಯು ಮಾಲಿನ್ಯಕಾರಕಗಳನ್ನು ಹೊರಕ್ಕೆ ಬಿಡಬಹುದಾದ ಪ್ರಮಾಣದ ಮಟ್ಟ;

(ಎನ್) ಗೊತ್ತುಪಡಿಸಬೇಕಾದ ವರ್ಗದ ವಾಹನಗಳಲ್ಲಿ ವೇಗವರ್ಧನ ಪರಿವರ್ತಕಗಳನ್ನು ಸ್ಥಾಪಿಸುವುದು;

(ಒ) ಸಾರ್ವಜನಿಕ ವಾಹನಗಳಲ್ಲಿ ಶ್ರವ್ಯ -ದೃಶ್ಯ ಸಾಧನಗಳು ಅಥವಾ ರೇಡಿಯೋ ಅಥವಾ ಟೇಪ್‌ರೆಕಾರ್ಡರ್‌ನಂಥ ಸಾಧನಗಳನ್ನು ಅಳವಡಿಸುವುದು;

(ಪಿ) ವಾಹನವನ್ನು ಮಾರಾಟ ಮಾಡಿದ ಮೇಲೆ ಖಾತರಿ ಮತ್ತು ಆ ಬಗೆಗಿನ ಮಾನಕಗಳು:

ಪರಂತು, ಪರಿಸರ ರಕ್ಷಣೆಯನ್ನು ವ್ಯವಹರಿಸುವ ವಿಷಯಗಳಿಗೆ ಸಂಬಂಧಿಸುವ ಯಾವುದೇ ನಿಯಮಗಳನ್ನು, ಸಾಧ್ಯವಾಗುವಷ್ಟು ಮಟ್ಟಿಗೆ, ಪರಿಸರ ವಿಷಯವನ್ನು ವ್ಯವಹರಿಸುವ ಭಾರತ ಸರ್ಕಾರದ ಮಂತ್ರಾಲಯದೊಂದಿಗೆ ಸಮಾಲೋಚಿಸಿದ ತರುವಾಯ ರಚಿಸತಕ್ಕದ್ದು.

(2) ಸಾಮಾನ್ಯವಾಗಿ ಮೋಟಾರು ವಾಹನಗಳಿಗೆ ಅಥವಾ ಹಿಂಬಂಡಿಗಳಿಗೆ ಸಂಬಂಧಿಸಿದಂತೆ ಅಥವಾ ವಿಶಿಷ್ಟ ವರ್ಗದ ಅಥವಾ ವಿಶಿಷ್ಟ ಸಂದರ್ಭಗಳಲ್ಲಿನ ಮೋಟಾರು ವಾಹನಗಳು ಅಥವಾ ಹಿಂಬಂಡಿಗಳಿಗೆ ಸಂಬಂಧಿಸಿದಂತೆ ಅಂಥ ವಿಷಯಗಳ ಪಾಲನೆಯನ್ನು ಮತ್ತು ಅಂಥ ವಿಷಯಗಳಿಗೆ ಸಂಬಂಧಿಸಿ ಮೋಟಾರು ವಾಹನಗಳ ನಿರ್ವಹಣೆಯನ್ನು ಸುನಿಶ್ಚಿತಗೊಳಿಸುವ ರೀತಿಯೂ ಸೇರಿ (1)ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳಿಗೆ ಸಂಬಂಧಿಸಿ ಅದರ ಮೇರೆಗೆ ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದಲ್ಲಿ ಏನೇ ಇದ್ದರೂ,-

(ಎ) ಕೇಂದ್ರ ಸರ್ಕಾರವು, ಯಾವುದೇ ವರ್ಗದ ಮೋಟಾರು ವಾಹನಗಳಿಗೆ ಈ ಅಧ್ಯಾಯದ ಉಪಬಂಧಗಳಿಂದ ವಿನಾಯಿತಿ ನೀಡಬಹುದು;

(ಬಿ) ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದ ಷರತ್ತಿಗೊಳಪಟ್ಟು, ಯಾವುದೇ ಮೋಟಾರು ವಾಹನ ಅಥವಾ ಯಾವುದೇ ವರ್ಗ ಅಥವಾ ವರ್ಣನೆಯ ಮೋಟಾರು ವಾಹನಗಳಿಗೆ (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಂದ ವಿನಾಯಿತಿ ನೀಡಬಹುದು.

111. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು, 110ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಹೊರತುಪಡಿಸಿ, ಎಲ್ಲಾ ವಿಷಯಗಳ ಸಂಬಂಧದಲ್ಲಿ ಮೋಟಾರು ವಾಹನಗಳ ಮತ್ತು ಹಿಂಬಂಡಿಗಳ ನಿರ್ಮಾಣ, ಸಜ್ಜು ಸಲಕರಣೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸುವ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸಾಮಾನ್ಯವಾಗಿ ಮೋಟಾರು ವಾಹನಗಳ ಅಥವಾ ಹಿಂಬಂಡಿಗಳ ಸಂಬಂಧದಲ್ಲಿ ಅಥವಾ ವಿಶಿಷ್ಟ ವರ್ಗದ ಅಥವಾ ವರ್ಣನೆಯ ಅಥವಾ ವಿಶಿಷ್ಟ ಸಂದರ್ಭಗಳಲ್ಲಿನ

ಮೋಟಾರು ವಾಹನಗಳ ಅಥವಾ ಹಿಂಬಂಡಿಗಳ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಈ ಕೆಳಕಂಡ ಎಲ್ಲಾ ವಿಷಯಗಳ ಅಥವಾ ಅವುಗಳ ಪೈಕಿ ಯಾವುವೇ ವಿಷಯಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) ಸಾರ್ವಜನಿಕ ಸೇವಾ ವಾಹನಗಳಲ್ಲಿ ಆಸನಗಳ ವ್ಯವಸ್ಥೆ ಮತ್ತು ಹವಾಮಾನದ ವಿರುದ್ಧ ಪ್ರಯಾಣಿಕರಿಗೆ ರಕ್ಷಣೆ;

(ಬಿ) ಕೆಲವು ಸಮಯಗಳಲ್ಲಿ ಅಥವಾ ಕೆಲವು ಸ್ಥಳಗಳಲ್ಲಿ ಶ್ರವಣ ಸಂಕೇತಗಳ ಉಪಯೋಗವನ್ನು ನಿಷೇಧಿಸುವುದು ಅಥವಾ ನಿರ್ಬಂಧಿಸುವುದು;

(ಸಿ) ಕಿರುಕುಳ ಅಥವಾ ಅಪಾಯವನ್ನು ಉಂಟುಮಾಡಬಹುದಾದಂಥ ಸಾಧನಗಳನ್ನು ಒಯ್ಯುವುದನ್ನು ನಿಷೇಧಿಸುವುದು;

(ಡಿ) ನಿಯಮಿಸಲಾದ ಪ್ರಾಧಿಕಾರಗಳಿಂದ ನಿಯತಕಾಲಗಳಲ್ಲಿ ವಾಹನಗಳ ಪರೀಕ್ಷೆ ಮತ್ತು ತಪಾಸಣೆ ಮತ್ತು ಅಂಥ ಪರೀಕ್ಷೆಗಾಗಿ ವಿಧಿಸಬೇಕಾದ ಫೀಜು;

(ಇ) ನೋಂದಣಿ ಗುರುತುಗಳನ್ನು ಹೊರತುಪಡಿಸಿ ವಾಹನಗಳಲ್ಲಿ ಪ್ರದರ್ಶಿಸಬೇಕಾದ ಇತರ ವಿವರಗಳು ಮತ್ತು ಅವುಗಳನ್ನು ಪ್ರದರ್ಶಿಸತಕ್ಕ ರೀತಿ;

(ಎಫ್) ಮೋಟಾರು ವಾಹನಗಳೊಂದಿಗೆ ಹಿಂಬಂಡಿಗಳ ಬಳಕೆ;

[(ಜಿ) x x x x ].

## ಅಧ್ಯಾಯ - **VIII**

### ಸಂಚಾರ ನಿಯಂತ್ರಣ

112. ವೇಗ ಮಿತಿ:- (1) ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಸಾರ್ವಜನಿಕ ಸ್ಥಳದಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ವಾಹನಕ್ಕೆ ನಿಗದಿಪಡಿಸಿದ ಗರಿಷ್ಠ ವೇಗವನ್ನು ಮೀರಿ ಅಥವಾ ಕನಿಷ್ಠ ವೇಗಕ್ಕಿಂತ ಕಡಿಮೆ ವೇಗದಲ್ಲಿ ಮೋಟಾರು ವಾಹನವನ್ನು ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ನಡೆಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅಂಥ ಗರಿಷ್ಠ ವೇಗವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು, ಯಾವುದೇ ಮೋಟಾರು ವಾಹನಕ್ಕೆ ಅಥವಾ ಯಾವುದೇ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳಿಗೆ ನಿಗದಿಪಡಿಸಿದ ಗರಿಷ್ಠ ಮಿತಿಯನ್ನು ಯಾವುದೇ ಸಂದರ್ಭದಲ್ಲಿ ಮೀರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, ಸಾರ್ವಜನಿಕ ಸುರಕ್ಷೆ ಅಥವಾ ಸೌಕರ್ಯದ ಹಿತದೃಷ್ಟಿಯಿಂದ ಯಾವುದೇ ರಸ್ತೆಯ ಅಥವಾ ಸೇತುವೆಯ ಸ್ವರೂಪದ ನಿಮಿತ್ತ ಮೋಟಾರು ವಾಹನಗಳ ವೇಗವನ್ನು ನಿರ್ಬಂಧಿಸುವುದು ಅಗತ್ಯವೆಂದು ಮನಗಂಡಲ್ಲಿ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು 116ನೇ ಪ್ರಕರಣದ ಮೇರೆಗೆ ಸೂಕ್ತ ಸ್ಥಳಗಳಲ್ಲಿ ಸಮುಚಿತ ಸಂಚಾರ ಸಂಕೇತಗಳನ್ನು ಇಡುವಂತೆ ಅಥವಾ ನಿಲ್ಲಿಸುವಂತೆ ಮಾಡುವ ಮೂಲಕ, ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ರಸ್ತೆ ಅಥವಾ ರಸ್ತೆಗಳಲ್ಲಿ ಮೋಟಾರು ವಾಹನಗಳಿಗೆ ಅಥವಾ ಯಾವುದೇ ನಿರ್ದಿಷ್ಟ ವರ್ಗದ ಅಥವಾ ವರ್ಣನೆಯ ಮೋಟಾರು ವಾಹನಗಳಿಗೆ ಅಥವಾ ಹಿಂಬಂಡಿ ಜೋಡಿಸಿದ ಮೋಟಾರು ವಾಹನಗಳಿಗೆ ತಾನು ಸೂಕ್ತವೆಂದು ಭಾವಿಸುವಂಥ ವೇಗದ ಗರಿಷ್ಠ ಅಥವಾ ಕನಿಷ್ಠ ಮಿತಿಗಳನ್ನು ನಿಗದಿಪಡಿಸಬಹುದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ನಿರ್ಬಂಧವು ಒಂದು ತಿಂಗಳಿಗೆ ಮೀರಿದ ಅವಧಿಗೆ ಜಾರಿಯಲ್ಲಿ ಇರಬೇಕಾಗಿದ್ದಲ್ಲಿ ಅಂಥ ಯಾವುದೇ ಅಧಿಸೂಚನೆಯ ಅಗತ್ಯವಿರುವುದಿಲ್ಲ.

(3) ಈ ಪ್ರಕರಣದಲ್ಲಿ ಇರುವುದು ಯಾವುದೂ, 60ನೇ ಪ್ರಕರಣದ ಮೇರೆಗೆ ನೋಂದಾಯಿತವಾದ ಯಾವುದೇ ವಾಹನಕ್ಕೆ, ಸೇನಾಚಾಲನ, ಯುದ್ಧಾಭ್ಯಾಸ, ಬಯಲಿನಲ್ಲಿ ಗುಂಡುಹಾರಿಸುವುದು ಮತ್ತು ಫಿರಂಗಿ ಅಭ್ಯಾಸ ಅಧಿನಿಯಮ, 1938ರ 2ನೇ ಪ್ರಕರಣದ (1)ನೇ ಉಪಪ್ರಕಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಕ್ಷೇತ್ರದೊಳಗೆ ಮತ್ತು ಅವಧಿಯಲ್ಲಿ ಅದನ್ನು ಯುದ್ಧಾಭ್ಯಾಸ ನಡೆಸಲು ಉಪಯೋಗಿಸಿದಾಗ ಅನ್ವಯವಾಗತಕ್ಕದ್ದಲ್ಲ.

113. ತೂಕದ ಮಿತಿಗಳು ಮತ್ತು ಬಳಕೆಯ ಮೇಲಣ ಪರಿಮಿತಿಗಳು:- (1) ರಾಜ್ಯ ಸರ್ಕಾರವು, ರಾಜ್ಯ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳು ಸಾರಿಗೆ ವಾಹನಗಳಿಗೆ ಪರ್ಮಿಟ್ಟುಗಳನ್ನು ನೀಡಲು ಷರತ್ತುಗಳನ್ನು ನಿಯಮಿಸಬಹುದು ಮತ್ತು ಯಾವುದೇ ಕ್ಷೇತ್ರದಲ್ಲಿ ಅಥವಾ ಮಾರ್ಗದಲ್ಲಿ ಅಂಥ ವಾಹನಗಳ ಉಪಯೋಗವನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

(2) ಅನ್ಯಥಾ ನಿಯಮಿಸಬಹುದಾದಂತೆ ಹೊರತು, ಯಾರೇ ವ್ಯಕ್ತಿಯು, ಗಾಳಿ ತುಂಬಿದ ಟೈರುಗಳನ್ನು ಜೋಡಿಸಿರದ ಯಾವುದೇ ಮೋಟಾರು ವಾಹನವನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ನಡೆಸಲು ಅನುಮತಿಸತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು, ಯಾವ ಮೋಟಾರು ವಾಹನ ಅಥವಾ ಹಿಂಬಂಡಿಯು,-

(ಎ) ಹೇರದ ತೂಕವು ವಾಹನದ ನೋಂದಣಿ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಹೇರದ ತೂಕವನ್ನು ಮೀರುವುದೋ; ಅಥವಾ

(ಬಿ) ಹೇರಿದ ತೂಕವು ನೋಂದಣಿ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ವಾಹನದ ತೂಕವನ್ನು ಮೀರುವುದೋ

- ಆ ಯಾವುದೇ ಮೋಟಾರು ವಾಹನವನ್ನು ಅಥವಾ ಹಿಂಬಂಡಿಯನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ನಡೆಸಲು ಅನುಮತಿಸತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ (ಎ) ಖಂಡವನ್ನು ಉಲ್ಲಂಘಿಸಿ ನಡೆಸಿದ ಮೋಟಾರು ವಾಹನದ ಅಥವಾ ಹಿಂಬಂಡಿಯ ಚಾಲಕನು ಅಥವಾ ಅದರ ಪ್ರಭಾರವನ್ನು ಹೊಂದಿರುವ ವ್ಯಕ್ತಿಯು ಅದರ ಒಡೆಯನಾಗಿಲ್ಲದಿರುವ ಸಂದರ್ಭದಲ್ಲಿ, ಅಪರಾಧವನ್ನು ಮೋಟಾರು ವಾಹನದ ಅಥವಾ ಹಿಂಬಂಡಿಯ ಒಡೆಯನ ತಿಳಿವಳಿಕೆಯಲ್ಲಿ ಅಥವಾ ಅವನ ಆದೇಶಗಳ ಮೇರೆಗೆ ಮಾಡಲಾಗಿದೆ ಎಂದು ನ್ಯಾಯಾಲಯವು ಪೂರ್ವಭಾವನೆ ಮಾಡಬಹುದು.

114. ವಾಹನವನ್ನು ತೂಕ ಮಾಡಿಸಲು ಅಧಿಕಾರ:- (1) ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಅಧಿಕೃತನಾದ ಮೋಟಾರು ವಾಹನ ಇಲಾಖೆಯ ಯಾರೇ ಅಧಿಕಾರಿಗೆ, 113ನೇ ಪ್ರಕರಣವನ್ನು ಉಲ್ಲಂಘಿಸಿ ಆ ಸರಕು ವಾಹನವನ್ನು ಅಥವಾ ಟ್ರೈಲರನ್ನು ಬಳಸಲಾಗುತ್ತಿದೆ ಎಂದು ನಂಬಲು ಕಾರಣವಿರುವಲ್ಲಿ, ಮುನ್ನಡೆ ಮಾರ್ಗದಲ್ಲಿರುವ ಯಾವುದೇ ಸ್ಥಳದಿಂದ ಹತ್ತು ಕಿಲೋ ಮೀಟರುಗಳ ಅಂತರದಲ್ಲಿ ಅಥವಾ ವಾಹನದ ಗಮ್ಯ ಸ್ಥಾನದಿಂದ ಇಪ್ಪತ್ತು ಕಿಲೋಮೀಟರುಗಳ ಅಂತರದಲ್ಲಿ ತೂಕದ ಸಾಧನ ಯಾವುದಾದರೂ ಇದ್ದರೆ, ಅಲ್ಲಿಗೆ ತೂಕ ಮಾಡುವ ಸಲುವಾಗಿ ವಾಹನವನ್ನು ಸಾಗಿಸುವಂತೆ ಚಾಲಕನನ್ನು ಅಗತ್ಯಪಡಿಸಬಹುದು; ಮತ್ತು ಹಾಗೆ ತೂಕ ಮಾಡಿದ ಅನಂತರ, ತೂಕಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ 113ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯಾಗಿರುವುದು ಕಂಡುಬಂದರೆ, ಅವನು ಲಿಖಿತ ಆದೇಶದ ಮೂಲಕ, ಚಾಲಕನ ಸ್ವಂತ ಜವಾಬ್ದಾರಿಯ ಮೇಲೆ ಅಧಿಕ ಭಾರವನ್ನು ಕಡಿಮೆ ಮಾಡುವಂತೆ ಮತ್ತು ಭರ್ತಿಯಾದ ವಾಹನದ ತೂಕವನ್ನು ಕಡಿಮೆ ಮಾಡುವವರೆಗೆ ಅಥವಾ ವಾಹನ ಅಥವಾ ಹಿಂಬಂಡಿಯ ವಿಷಯದಲ್ಲಿ 113ನೇ ಪ್ರಕರಣವನ್ನು ಪಾಲಿಸುವಂತೆ ಅನ್ಯಥಾ ವ್ಯವಹರಿಸುವವರೆಗೆ ಆ ಸ್ಥಳದಿಂದ ಆ ವಾಹನವನ್ನು ಅಥವಾ ಹಿಂಬಂಡಿಯನ್ನು ಕದಲಿಸದಂತೆ ಚಾಲಕನಿಗೆ ನಿರ್ದೇಶಿಸಬಹುದು ಮತ್ತು ಚಾಲಕನು ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಕೃತನಾದ ವ್ಯಕ್ತಿಯು ಸದರಿ ಲಿಖಿತ ಆದೇಶವನ್ನು ಮಾಡಿರುವಲ್ಲಿ, ಅವನು, ಸರಕು ವಾಹನದ ಪರ್ಮಿಟ್ಟಿನ ಮೇಲೆ ಅತಿ ಭಾರದ ಸಂಬಂಧಪಟ್ಟ ವಿವರಗಳನ್ನು ಸಹ ಹಿಂಬರೆಯತಕ್ಕದ್ದು ಮತ್ತು ಆ ಪರ್ಮಿಟ್ಟನ್ನು ನೀಡಿದ ಪ್ರಾಧಿಕಾರಕ್ಕೆ ಸಹ ಅಂಥ ಹಿಂಬರಹದ ಸಂಗತಿಯನ್ನು ತಿಳಿಸತಕ್ಕದ್ದು.

115. ವಾಹನಗಳ ಉಪಯೋಗವನ್ನು ನಿರ್ಬಂಧಿಸುವ ಅಧಿಕಾರ:- ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, ಅದಕ್ಕೆ ಸಾರ್ವಜನಿಕ ಸುರಕ್ಷೆ ಅಥವಾ ಅನುಕೂಲದ ಹಿತದೃಷ್ಟಿಯಿಂದ ಅಥವಾ ಯಾವುದೇ ರಸ್ತೆ ಅಥವಾ ಸೇತುವೆಯ ಸ್ವರೂಪದ ಕಾರಣ ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ಮಾರ್ಗದಲ್ಲಿ ಮೋಟಾರು ವಾಹನಗಳನ್ನು ಅಥವಾ ಯಾವುದೇ ನಿರ್ದಿಷ್ಟ ವರ್ಗದ ಅಥವಾ ವಿವರಣೆಯ ಮೋಟಾರು ವಾಹನಗಳನ್ನು ನಡೆಸುವುದನ್ನು ಅಥವಾ ಹಿಂಬಂಡಿಗಳ ಬಳಕೆಯನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಮತ್ತು ಷರತ್ತುಗಳಿಗೊಳಪಟ್ಟು ನಿಷೇಧಿಸುವುದು ಅಥವಾ ನಿರ್ಬಂಧಿಸುವುದು ಅಗತ್ಯವೆಂದು ಮನದಟ್ಟಾದರೆ ಹಾಗೆ ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು ಮತ್ತು ಅಂಥ ಯಾವುದೇ ನಿಷೇಧ

ಅಥವಾ ನಿರ್ಬಂಧವನ್ನು ವಿಧಿಸಿದಾಗ, ಸೂಕ್ತ ಸ್ಥಳಗಳಲ್ಲಿ, ಯುಕ್ತ ಸಂಚಾರ ಚಿಹ್ನೆಗಳನ್ನು ಇಡುವಂತೆ ಅಥವಾ ನಿಲ್ಲಿಸುವಂತೆ ಮಾಡತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ನಿಷೇಧ ಅಥವಾ ನಿರ್ಬಂಧವು ಒಂದು ತಿಂಗಳಿಗೆ ಮೀರದಂತೆ ಜಾರಿಯಲ್ಲಿರಬೇಕಾಗಿರುವಲ್ಲಿ, ಆ ಬಗ್ಗೆ ರಾಜಪತ್ರದಲ್ಲಿ ಅಧಿಸೂಚಿಸುವ ಅಗತ್ಯವಿರತಕ್ಕದ್ದಲ್ಲ, ಆದರೆ ಅಂಥ ನಿಷೇಧ ಅಥವಾ ನಿರ್ಬಂಧದ ಬಗ್ಗೆ, ಪರಿಸ್ಥಿತಿಗನುಸಾರವಾದಂಥ ಸ್ಥಳೀಯ ಪ್ರಚಾರವನ್ನು ಕೊಡತಕ್ಕದ್ದು.

116. ಸಂಚಾರ ಚಿಹ್ನೆಗಳನ್ನು ಸ್ಥಾಪಿಸುವ ಅಧಿಕಾರ:- (1) (ಎ) ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, 112ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿರುವ ಯಾವುವೇ ವೇಗಮಿತಿಗಳನ್ನು ಅಥವಾ 115ನೇ ಪ್ರಕರಣದ ಮೇರೆಗೆ ವಿಧಿಸಲಾದ ಯಾವುವೇ ನಿಷೇಧಗಳನ್ನು ಅಥವಾ ನಿರ್ಬಂಧಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಉದ್ದೇಶಕ್ಕಾಗಿ ಅಥವಾ ಸಾಮಾನ್ಯವಾಗಿ ಮೋಟಾರು ವಾಹನಗಳ ಸಂಚಾರವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಂಚಾರ ಚಿಹ್ನೆಗಳನ್ನು ಇಡುವಂತೆ ಅಥವಾ ಸ್ಥಾಪಿಸುವಂತೆ ಮಾಡಬಹುದು ಅಥವಾ ಇಡಲು ಅಥವಾ ಸ್ಥಾಪಿಸಲು ಅನುಮತಿ ನೀಡಬಹುದು.

(ಬಿ) ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಥವಾ ಅನುಸೂಚಿಯ ಎ ಭಾಗದಲ್ಲಿ ಉಲ್ಲೇಖಿಸಿರುವ ಯುಕ್ತ ಸಂಚಾರ ಚಿಹ್ನೆಗಳನ್ನು ಸೂಕ್ತ ಸ್ಥಳಗಳಲ್ಲಿ ಸ್ಥಾಪಿಸುವ ಮೂಲಕ ಕೇಂದ್ರ ಸರ್ಕಾರವು ರಚಿಸಿದ ಚಾಲನ ವಿನಿಯಮಗಳ ಉದ್ದೇಶಕ್ಕಾಗಿ ಕೆಲವು ರಸ್ತೆಗಳನ್ನು ಮುಖ್ಯ ರಸ್ತೆಗಳೆಂದು ಹೆಸರಿಸಬಹುದು.

(2) ಅನುಸೂಚಿಯಲ್ಲಿ ಉಪಬಂಧಿಸಲಾಗಿರುವ ಯಾವುದೇ ಉದ್ದೇಶಕ್ಕಾಗಿ (1)ನೇ ಉಪಪ್ರಕರಣದ ಮೇರೆಗೆ ಇಡಲಾದ ಅಥವಾ ಸ್ಥಾಪಿಸಲಾದ ಸಂಚಾರ ಚಿಹ್ನೆಗಳು, ಅನುಸೂಚಿಯಲ್ಲಿ ತಿಳಿಸಿರುವ ಗಾತ್ರ, ಬಣ್ಣ ಮತ್ತು ಮಾದರಿಯಲ್ಲಿರತಕ್ಕದ್ದು ಮತ್ತು ಅರ್ಥವನ್ನು ಹೊಂದಿರತಕ್ಕದ್ದು, ಆದರೆ ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, ಸದರಿ ಅನುಸೂಚಿಯಲ್ಲಿ ವಿವರಿಸಿರುವ ಯಾವುದೇ ಚಿಹ್ನೆಗೆ, ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಪದಗಳ, ಅಕ್ಷರಗಳ ಅಥವಾ ಚಿತ್ರಗಳ ಅನುಲಿಪಿಯನ್ನು ಸೇರಿಸಬಹುದು ಅಥವಾ ಸೇರಿಸಲು ಅಧಿಕೃತಗೊಳಿಸಬಹುದು, ಪರಂತು, ಆ ಅನುಲಿಪಿಗಳು ಅನುಸೂಚಿಯಲ್ಲಿ ನಿರೂಪಿಸಿದ ಪದಗಳು, ಅಕ್ಷರಗಳು ಅಥವಾ ಚಿತ್ರಗಳ ಅದೇ ಅಳತೆ ಮತ್ತು ಅದೇ ಬಣ್ಣದಲ್ಲಿ ಇರತಕ್ಕದ್ದು.

(3) (1)ನೇ ಉಪಪ್ರಕರಣದಿಂದ ಉಪಬಂಧಿಸಿದಂತೆ ಹೊರತು, ಯಾವುದೇ ಸಂಚಾರ ಚಿಹ್ನೆಯನ್ನು, ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಯಾವುದೇ ರಸ್ತೆಯಲ್ಲಿ ಅಥವಾ ಅದರ ಹತ್ತಿರ ಇಡತಕ್ಕದ್ದಲ್ಲ ಅಥವಾ ಸ್ಥಾಪಿಸತಕ್ಕದ್ದಲ್ಲ; ಆದರೆ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಸಕ್ಷಮ ಪ್ರಾಧಿಕಾರವು ಇಟ್ಟ ಅಥವಾ ಸ್ಥಾಪಿಸಿದ ಎಲ್ಲ ಸಂಚಾರ ಚಿಹ್ನೆಗಳನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ, (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಇಡಲಾದ ಅಥವಾ ಸ್ಥಾಪಿಸಲಾದ ಸಂಚಾರ ಚಿಹ್ನೆಗಳೆಂದು ಭಾವಿಸತಕ್ಕದ್ದು.

(4) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪೊಲೀಸ್ ಸೂಪರಿಂಟೆಂಡೆಂಟ್‌ನ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಗೆ, ಅವನ ಅಭಿಪ್ರಾಯದಲ್ಲಿ ಯಾವುದೇ ಸಂಚಾರ ಚಿಹ್ನೆಯು, ದೃಷ್ಟಿಗೆ ಗೋಚರವಾಗದಂತೆ ಇಡಲಾದ ಯಾವುದೇ ಚಿಹ್ನೆ ಅಥವಾ ಜಾಹೀರಾತನ್ನು ಅಥವಾ ಅವನ ಅಭಿಪ್ರಾಯದಲ್ಲಿ ತಪ್ಪುದಾರಿಗೆ ಎಳೆಯುವ ಹಾಗೆ ಸಂಚಾರ ಚಿಹ್ನೆಯಂತೆಯೇ ಇರುವ ಅಥವಾ ಅವನ ಅಭಿಪ್ರಾಯದಲ್ಲಿ ಚಾಲಕನ ಗಮನ ಅಥವಾ ಏಕಾಗ್ರತೆಯನ್ನು ಬೇರೆ ಕಡೆಗೆ ಸೆಳೆಯುವ ಸಂಭವವಿರುವ ಯಾವುದೇ ಚಿಹ್ನೆ ಅಥವಾ ಜಾಹೀರಾತನ್ನು ತೆಗೆದುಹಾಕಲು ಅಥವಾ ತೆಗೆದುಹಾಕುವಂತೆ ಮಾಡಲು ಅಧಿಕಾರ ನೀಡಬಹುದು.

(5) ಈ ಪ್ರಕರಣದ ಮೇರೆಗೆ ಇಡಲಾದ ಅಥವಾ ಸ್ಥಾಪಿಸಲಾದ ಯಾವುವೇ ಸಂಚಾರ ಚಿಹ್ನೆಗಳನ್ನು ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ತೆಗೆದುಹಾಕತಕ್ಕದ್ದಲ್ಲ, ವ್ಯತ್ಯಾಸಗೊಳಿಸತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಅಕ್ರಮವಾಗಿ ತಿದ್ದತಕ್ಕದ್ದಲ್ಲ.

(6) ಯಾರೇ ವ್ಯಕ್ತಿಯು ಆಕಸ್ಮಿಕವಾಗಿ ಯಾವುದೇ ಸಂಚಾರ ಚಿಹ್ನೆಗೆ, ಅದನ್ನು ಈ ಪ್ರಕರಣದ ಮೇರೆಗೆ ಯಾವ ಉದ್ದೇಶಕ್ಕಾಗಿ ಇಡಲಾಗಿದೆಯೋ ಅಥವಾ ಸ್ಥಾಪಿಸಲಾಗಿದೆಯೋ ಆ ಉದ್ದೇಶವನ್ನು ನಿರುಪಯುಕ್ತಗೊಳಿಸುವ ಹಾಗೆ ಹಾನಿಯುಂಟುಮಾಡಿದರೆ,

ಆ ಘಟನೆಯ ಸಂದರ್ಭಗಳನ್ನು ಪೊಲೀಸ್ ಅಧಿಕಾರಿಗೆ ಅಥವಾ ಪೊಲೀಸ್ ಠಾಣೆಗೆ ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಘಟನೆಯ ಇಪ್ಪತ್ತನಾಲ್ಕು ಗಂಟೆಗಳೊಳಗೆ ವರದಿ ಮಾಡತಕ್ಕದ್ದು.

(7) ಮೊದಲನೇ ಅನುಸೂಚಿಯಲ್ಲಿ ನಿರೂಪಿಸಿದ ಚಿಹ್ನೆಗಳನ್ನು ಮೋಟಾರು ಸಂಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ತತ್ಕಾಲದಲ್ಲಿ ಪಕ್ಷಕಾರವಾಗಿರುವ ಯಾವುದೇ ಅಂತರ ರಾಷ್ಟ್ರೀಯ ಒಡಂಬಡಿಕೆಗೆ ಅನುಗುಣವಾಗಿರುವಂತೆ ಮಾಡುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಯಾವುದೇ ಚಿಹ್ನೆಗೆ ಯಾವುದೇ ಸೇರ್ಪಡೆಯನ್ನು ಅಥವಾ ಬದಲಾವಣೆಯನ್ನು ಮಾಡಬಹುದು ಮತ್ತು ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮೊದಲನೇ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

117. ವಾಹನ ನಿಲ್ಲಿಸುವ ಸ್ಥಳಗಳು ಮತ್ತು ನಿಲ್ದಾಣಗಳು:- ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು, ಸಂಬಂಧಪಟ್ಟ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸಿ, ಮೋಟಾರು ವಾಹನಗಳನ್ನು ಅನಿರ್ದಿಷ್ಟವಾಗಿ ಅಥವಾ ನಿರ್ದಿಷ್ಟ ಅವಧಿಗೆ ನಿಲ್ಲಿಸಬಹುದಾದ ಸ್ಥಳಗಳನ್ನು ನಿರ್ಧರಿಸಬಹುದು ಮತ್ತು ಸಾರ್ವಜನಿಕ ಸೇವಾ ವಾಹನಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮತ್ತು ಇಳಿಸಲು ಅಗತ್ಯವಾದುದಕ್ಕಿಂತ ಹೆಚ್ಚು ಸಮಯದವರೆಗೆ ನಿಲ್ಲಿಸಬಹುದಾದ ಸ್ಥಳಗಳನ್ನು ನಿರ್ಧರಿಸಬಹುದು.

118. ಚಾಲನ ವಿನಿಯಮಗಳು:- ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮೋಟಾರು ವಾಹನಗಳ ಚಾಲನೆಯ ಬಗ್ಗೆ ವಿನಿಯಮಗಳನ್ನು ರಚಿಸಬಹುದು.

119. ಸಂಚಾರ ಚಿಹ್ನೆಗಳನ್ನು ಪಾಲಿಸುವ ಕರ್ತವ್ಯ:- (1) ಮೋಟಾರು ವಾಹನದ ಪ್ರತಿಯೊಬ್ಬ ಚಾಲಕನು ಕಡ್ಡಾಯ ಸಂಚಾರ ಚಿಹ್ನೆಯು ಸೂಚಿಸಬಹುದಾದ ಯಾವುದೇ ಸೂಚನೆಗನುಗುಣವಾಗಿ ಮತ್ತು ಕೇಂದ್ರ ಸರ್ಕಾರವು ರಚಿಸಿದ ಚಾಲನ ವಿನಿಯಮಗಳಿಗೆ ಅನುಸಾರವಾಗಿ ವಾಹನವನ್ನು ನಡೆಸತಕ್ಕದ್ದು ಮತ್ತು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಂಚಾರ ನಿಯಂತ್ರಣದಲ್ಲಿ ತೊಡಗಿರುವ ಯಾರೇ ಪೊಲೀಸ್ ಅಧಿಕಾರಿಯು ಕೊಡುವ ಎಲ್ಲ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(2) ಈ ಪ್ರಕರಣದಲ್ಲಿ "ಕಡ್ಡಾಯ ಸಂಚಾರ ಚಿಹ್ನೆ" ಎಂದರೆ ಮೊದಲನೇ ಅನುಸೂಚಿಯ 'ಎ' ಭಾಗದಲ್ಲಿ ಸೇರಿಸಿರುವ ಸಂಚಾರ ಚಿಹ್ನೆ ಅಥವಾ 116ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮೋಟಾರು ವಾಹನ ಸಂಚಾರವನ್ನು ವಿನಿಯಮಿಸುವ ಉದ್ದೇಶಕ್ಕಾಗಿ ಇಡಲಾದ ಅಥವಾ ಸ್ಥಾಪಿಸಲಾದ (ಎಂದರೆ ನಕ್ಷೆ, ಪದ ಅಥವಾ ಚಿತ್ರವನ್ನು ಹೊಂದಿರುವ ಅಥವಾ ಒಳಗೊಂಡಿರುವ ವೃತ್ತಾಕಾರದ ಫಲಕ ಮತ್ತು ಕೆಂಪು ತಳಭಾಗ ಅಥವಾ ಅಂಚಿನ ಪಟ್ಟಿಯನ್ನು ಹೊಂದಿರುವ) ಅದೇ ನಮೂನೆಯ ಯಾವುದೇ ಸಂಚಾರ ಚಿಹ್ನೆ.

120. ಎಡಭಾಗದಲ್ಲಿ ನಿಯಂತ್ರಣವನ್ನು ಹೊಂದಿರುವ ವಾಹನಗಳು:- ಎಡಭಾಗದಲ್ಲಿ ಸ್ಟೀರಿಂಗ್ ನಿಯಂತ್ರಣ ಹೊಂದಿರುವ ಯಾವುದೇ ಮೋಟಾರು ವಾಹನವನ್ನು, ಅದು ನಿಯಮಿತ ಸ್ವರೂಪದ ಯಾಂತ್ರಿಕ ಅಥವಾ ವಿದ್ಯುತ್ ಸಂಕೇತ ಸಾಧನದಿಂದ ಸಜ್ಜುಗೊಂಡಿದ್ದ ಹೊರತು, ಯಾರೇ ವ್ಯಕ್ತಿಯು ಅದನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆಸತಕ್ಕದ್ದಲ್ಲ ಅಥವಾ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ನಡೆಸಲು ಅನುಮತಿಸತಕ್ಕದ್ದಲ್ಲ.

121. ಸಂಕೇತಗಳು ಮತ್ತು ಸಂಕೇತ ಸಾಧನಗಳು:- ಮೋಟಾರು ವಾಹನದ ಚಾಲಕನು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಸಂಕೇತಗಳನ್ನು ಅಂಥ ಸಂದರ್ಭಗಳಲ್ಲಿ ಮಾಡತಕ್ಕದ್ದು:

ಪರಂತು, ಬಲಗಡೆಗೆ ಅಥವಾ ಎಡಗಡೆಗೆ ತಿರುಗಿಸುವ ಅಥವಾ ನಿಲ್ಲಿಸುವ ಉದ್ದೇಶದ ಸಂಕೇತವನ್ನು,-

(ಎ) ಬಲಭಾಗದಲ್ಲಿ ಸ್ಟೀರಿಂಗ್ ನಿಯಂತ್ರಣ ಹೊಂದಿರುವ ಮೋಟಾರು ವಾಹನದ ಸಂದರ್ಭದಲ್ಲಿ, ವಾಹನಕ್ಕೆ ಜೋಡಿಸಿದ ನಿಯಮಿಸಿದ ಸ್ವರೂಪದ ಯಾಂತ್ರಿಕ ಅಥವಾ ವಿದ್ಯುತ್ ಸಾಧನದ ಮೂಲಕ ಕೊಡಬಹುದು; ಮತ್ತು

(ಬಿ) ಎಡಭಾಗದಲ್ಲಿ ಸ್ಟೀರಿಂಗ್ ನಿಯಂತ್ರಣ ಹೊಂದಿರುವ ಮೋಟಾರು ವಾಹನದ ಸಂದರ್ಭದಲ್ಲಿ ವಾಹನಕ್ಕೆ ಜೋಡಿಸಿದ ನಿಯಮಿಸಿದ ಸ್ವರೂಪದ ಯಾಂತ್ರಿಕ ಅಥವಾ ವಿದ್ಯುತ್ ಸಾಧನದ ಮೂಲಕ ಕೊಡತಕ್ಕದ್ದು:

ಮತ್ತೂ ಪರಂತು, ರಾಜ್ಯ ಸರ್ಕಾರವು, ಯಾವುದೇ ಕ್ಷೇತ್ರದಲ್ಲಿ ಅಥವಾ ಮಾರ್ಗದಲ್ಲಿನ ರಸ್ತೆಯ ಅಗಲ ಮತ್ತು ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಯಾವುದೇ ಮೋಟಾರು ವಾಹನವನ್ನು ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಮೋಟಾರು

ವಾಹನಗಳನ್ನು, ಆ ಕ್ಷೇತ್ರದಲ್ಲಿ ಅಥವಾ ಮಾರ್ಗದಲ್ಲಿ ಓಡಿಸುವ ಉದ್ದೇಶಕ್ಕಾಗಿ, ಈ ಪ್ರಕರಣದ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು.

122. ವಾಹನವನ್ನು ಅಪಾಯಕಾರಿ ಸ್ಥಿತಿಯಲ್ಲಿ ಬಿಡುವುದು:- ಮೋಟಾರು ವಾಹನದ ಪ್ರಭಾರವನ್ನು ಹೊಂದಿರುವ ಯಾರೇ ವ್ಯಕ್ತಿಯು ಆ ವಾಹನವನ್ನು ಅಥವಾ ಹಿಂಬಂಡಿಯನ್ನು ಸಾರ್ವಜನಿಕ ಸ್ಥಳದ ಇತರ ಬಳಕೆದಾರರಿಗೆ ಅಥವಾ ಪ್ರಯಾಣಿಕರಿಗೆ ಅಪಾಯ, ತಡೆ ಅಥವಾ ಅನುಚಿತ ಅನಾನುಕೂಲವನ್ನು ಉಂಟುಮಾಡುವಂಥ ಅಥವಾ ಮಾಡುವ ಸಂಭವವಿರುವಂಥ ಸ್ಥಿತಿಯಲ್ಲಿ ಅಥವಾ ಪರಿಸ್ಥಿತಿಯಲ್ಲಿ ಅಥವಾ ಸನ್ನಿವೇಶಗಳಲ್ಲಿ ಆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬಿಟ್ಟುಹೋಗುವಂತೆ ಅಥವಾ ವಿರಮಿಸುವಂತೆ ಮಾಡತಕ್ಕದ್ದಲ್ಲ ಅಥವಾ ಮಾಡಲು ಅನುಮತಿಸತಕ್ಕದ್ದಲ್ಲ.

123. ವಾಹನದ ಹತ್ತುವ ಇಳಿಯುವ ಮೆಟ್ಟಲು, ಇತ್ಯಾದಿಗಳ ಮೇಲೆ ಪ್ರಯಾಣ:- (1) ಮೋಟಾರು ವಾಹನವನ್ನು ನಡೆಸುವ ಅಥವಾ ಅದರ ಪ್ರಭಾರವನ್ನು ಹೊಂದಿರುವ ಯಾರೇ ವ್ಯಕ್ತಿಯು, ಹತ್ತುವ ಇಳಿಯುವ ಮೆಟ್ಟಿಲುಗಳ ಮೇಲೆ ಅಥವಾ ವಾಹನದ ಒಳಭಾಗದಲ್ಲಿ ಅಲ್ಲದೆ ಅನ್ಯಥಾ ಯಾರೇ ವ್ಯಕ್ತಿಯನ್ನು ಒಯ್ಯತಕ್ಕದ್ದಲ್ಲ ಅಥವಾ ಆ ರೀತಿ ಒಯ್ಯಲ್ಪಡಲು ಅನುಮತಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ಮೋಟಾರು ವಾಹನದ ಹತ್ತುವ ಇಳಿಯುವ ಮೆಟ್ಟಿಲುಗಳ ಮೇಲೆ ಅಥವಾ ಅದರ ಟಾಪ್ ಮೇಲೆ ಅಥವಾ ಬಾನೆಟ್ ಮೇಲೆ ಪ್ರಯಾಣ ಮಾಡತಕ್ಕದ್ದಲ್ಲ.

124. ಪಾಸು ಅಥವಾ ಟಿಕೇಟ್ ಇಲ್ಲದೆ ಪ್ರಯಾಣ ಮಾಡುವುದರ ವಿರುದ್ಧ ನಿಷೇಧ:- ಯಾರೇ ವ್ಯಕ್ತಿಯು, ತನ್ನ ಬಳಿ ಸೂಕ್ತ ಪಾಸು ಅಥವಾ ಟಿಕೇಟು ಹೊಂದಿದ್ದ ಹೊರತು ಯಾವುದೇ ಮಜಲು ವಾಹನದಲ್ಲಿ ಪ್ರಯಾಣ ಮಾಡುವ ಉದ್ದೇಶಕ್ಕಾಗಿ ಅದನ್ನು ಪ್ರವೇಶಿಸತಕ್ಕದ್ದಲ್ಲ ಅಥವಾ ಅದರಲ್ಲಿ ಇರತಕ್ಕದ್ದಲ್ಲ:

ಪರಂತು, ವ್ಯಕ್ತಿಯು ಪ್ರಯಾಣ ಮಾಡುವ ಮಜಲು ವಾಹನದಲ್ಲಿ ಟಿಕೇಟುಗಳನ್ನು ಕೊಡಲು ವ್ಯವಸ್ಥೆಯನ್ನು ಮಾಡಿರುವಲ್ಲಿ, ವ್ಯಕ್ತಿಯು ಮಜಲು ವಾಹನವನ್ನು ಪ್ರವೇಶಿಸಬಹುದು; ಆದರೆ ಅದರಲ್ಲಿ ಪ್ರವೇಶ ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ನಿರ್ವಾಹಕನಿಗೆ ಅಥವಾ ನಿರ್ವಾಹಕನ ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಚಾಲಕನಿಗೆ ತನ್ನ ಹಾಸಲನ್ನು ಸಂದಾಯ ಮಾಡತಕ್ಕದ್ದು ಮತ್ತು ಸಂದರ್ಭಾನುಸಾರ ಅಂಥ ನಿರ್ವಾಹಕ ಅಥವಾ ಚಾಲಕನಿಂದ ತನ್ನ ಪ್ರಯಾಣದ ಟಿಕೇಟನ್ನು ಪಡೆದುಕೊಳ್ಳತಕ್ಕದ್ದು.

ವಿವರಣೆ:- ಈ ಪ್ರಕರಣದಲ್ಲಿ,-

(ಎ) "ಪಾಸು" ಎಂದರೆ ಅದನ್ನು ಯಾವ ವ್ಯಕ್ತಿಗೆ ಕೊಡಲಾಗಿದೆಯೋ ಆ ವ್ಯಕ್ತಿಗೆ ಮಜಲು ವಾಹನದಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಹಕ್ಕು ನೀಡುವ ಕರ್ತವ್ಯ, ವಿಶೇಷಾಧಿಕಾರ ಅಥವಾ ಗೌರವ ಪಾಸು ಮತ್ತು ಇದು ಮಜಲು ವಾಹನದಲ್ಲಿ, ಅದರಲ್ಲಿ ನಿರ್ದಿಷ್ಟ ಅವಧಿಯವರೆಗೆ ಪ್ರಯಾಣ ಮಾಡಲು ಹಣ ಸಂದಾಯ ಮಾಡಿದ ಮೇಲೆ ನೀಡಿದ ಪಾಸನ್ನು ಒಳಗೊಳ್ಳುತ್ತದೆ;

(ಬಿ) "ಟಿಕೇಟು" ಎಂಬುದು ಒಂಟಿ ಟಿಕೇಟು, ಮರು ಪ್ರಯಾಣ ಟಿಕೇಟು ಅಥವಾ ನಿಯತಕಾಲಿಕ ಟಿಕೇಟನ್ನು ಒಳಗೊಳ್ಳುತ್ತದೆ.

125. ಚಾಲಕನಿಗೆ ಅಡಚಣೆ:- ಮೋಟಾರು ವಾಹನವನ್ನು ನಡೆಸುತ್ತಿರುವ ಯಾರೇ ವ್ಯಕ್ತಿಯು, ಚಾಲಕನಿಗೆ ವಾಹನ ನಿಯಂತ್ರಣ ಕಾರ್ಯದಲ್ಲಿ ಅಡಚಣೆಯುಂಟು ಮಾಡುವ ರೀತಿಯಲ್ಲಿ ಅಥವಾ ಸ್ಥಿತಿಯಲ್ಲಿ ಯಾರೇ ವ್ಯಕ್ತಿಗೆ ನಿಲ್ಲಲು ಅಥವಾ ಕುಳಿತುಕೊಳ್ಳಲು ಅಥವಾ ಯಾವುದೇ ವಸ್ತುವನ್ನು ಇಡಲು ಅನುಮತಿಸತಕ್ಕದ್ದಲ್ಲ.

126. ನಿಂತಿರುವ ವಾಹನಗಳು:- ಮೋಟಾರು ವಾಹನವನ್ನು ನಡೆಸುತ್ತಿರುವ ಅಥವಾ ಅದರ ಪ್ರಭಾರವನ್ನು ಹೊಂದಿರುವ ಯಾರೇ ವ್ಯಕ್ತಿಯು ವಾಹನವನ್ನು, ಅದನ್ನು ನಡೆಸಲು ಕ್ರಮಬದ್ಧವಾಗಿ ಲೈಸನ್ಸನ್ನು ಹೊಂದಿರುವ ವ್ಯಕ್ತಿಯು ಚಾಲಕನ ಜಾಗದಲ್ಲಿ ಇದ್ದ ಹೊರತು ಅಥವಾ ಯಂತ್ರ ವ್ಯವಸ್ಥೆಯಲ್ಲಿ ನಿಲ್ಲಿಸಿ ಬ್ರೇಕು ಅಥವಾ ಬ್ರೇಕುಗಳನ್ನು ಹಾಕಿದ್ದ ಹೊರತು ಅಥವಾ ಚಾಲಕನ ಗೈರು ಹಾಜರಿಯಲ್ಲಿ ವಾಹನವು ಆಕಸ್ಮಿಕವಾಗಿ ಚಲಿಸದಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಇತರ ಕ್ರಮಗಳನ್ನು ಕೈಗೊಂಡಿದ್ದ ಹೊರತು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಿಶ್ಚಲವಾಗಿ ನಿಲ್ಲಿಸುವಂತೆ ಮಾಡತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

127. ಸಾರ್ವಜನಿಕ ಸ್ಥಳದಲ್ಲಿ ಬಿಟ್ಟುಹೋದ ಅಥವಾ ಅಲಕ್ಷಿಸಲ್ಪಟ್ಟ ಮೋಟಾರು ವಾಹನಗಳನ್ನು ಸ್ಥಳಾಂತರಿಸುವುದು:- (1) ಯಾವುದೇ ಮೋಟಾರು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಹತ್ತು ಗಂಟೆಗಳು ಅಥವಾ ಅದಕ್ಕೂ ಮೀರಿ ಬಿಟ್ಟುಹೋಗಿರುವಲ್ಲಿ ಅಥವಾ ಅಲಕ್ಷಿಸಿರುವಲ್ಲಿ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಅಧಿಕಾರಿಯು ಎಳೆದುಕೊಂಡು ಹೋಗುವ ಮೂಲಕ ಅದನ್ನು ಸ್ಥಳಾಂತರಿಸಲು ಅಥವಾ ಅದರ ಚಕ್ರಕ್ಕೆ ಕ್ಲ್ಯಾಂಪು ಹಾಕುವುದೂ ಸೇರಿದಂತೆ ಯಾವುದೇ ವಿಧಾನದ ಮೂಲಕ ಅದನ್ನು ಚಲಿಸದಿರುವಂತೆ ಮಾಡುವುದನ್ನು ಅಧಿಕೃತಗೊಳಿಸಬಹುದು.

(2) ಬಿಟ್ಟುಹೋದ, ಅಲಕ್ಷಿಸಿದ, ಭಗ್ನಗೊಂಡ, ಸುಟ್ಟುಹೋದ ಅಥವಾ ಭಾಗಶಃ ಯಂತ್ರಗಳನ್ನು ಕಳಚಿಹಾಕಿದ ವಾಹನವು, ಸಾರ್ವಜನಿಕ ಸ್ಥಳದಲ್ಲಿ ಅದರ ಸ್ಥಿತಿಯ ಕಾರಣ, ಸಂಚಾರಕ್ಕೆ ಅಪಾಯವನ್ನುಂಟುಮಾಡುವಲ್ಲಿ ಅಥವಾ ಅದರ ಭೌತಿಕ ನೋಟವು ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವಲ್ಲಿ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಅಧಿಕಾರಿಯು ಎಳೆದುಕೊಂಡು ಹೋಗುವ ಮೂಲಕ ಅದನ್ನು ಆ ಕೂಡಲೇ ಸಾರ್ವಜನಿಕ ಸ್ಥಳದಿಂದ ಸ್ಥಳಾಂತರಿಸಲು ಅಧಿಕೃತಗೊಳಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಾಹನವನ್ನು ಸ್ಥಳಾಂತರಿಸಲು ಪೊಲೀಸ್ ಅಧಿಕಾರಿಯು, ಅಧಿಕೃತಗೊಳಿಸಿರುವಲ್ಲಿ, ವಾಹನದ ಒಡೆಯನು ಯಾವುದೇ ಇತರ ದಂಡದ ಜೊತೆಗೆ ಎಳೆ ಸೇವೆಯ ಎಲ್ಲಾ ವೆಚ್ಚಗಳಿಗೆ ಜವಾಬ್ದಾರನಾಗಿರತಕ್ಕದ್ದು.

128. ಚಾಲಕರು ಮತ್ತು ಹಿಂಬದಿ ಸವಾರರಿಗೆ ಸುರಕ್ಷಾ ಕ್ರಮಗಳು:- (1) ದ್ವಿಚಕ್ರ ಮೋಟಾರು ಸೈಕಲ್ಲಿನ ಯಾರೇ ಚಾಲಕನು, ಮೋಟಾರು ಸೈಕಲ್ಲಿನ ಮೇಲೆ ತನ್ನ ಜೊತೆಗೆ ಒಬ್ಬ ವ್ಯಕ್ತಿಗಿಂತ ಹೆಚ್ಚು ವ್ಯಕ್ತಿಗಳನ್ನು ಒಯ್ಯತಕ್ಕದ್ದಲ್ಲ ಮತ್ತು ಚಾಲಕನ ಆಸನದ ಹಿಂಭಾಗದಲ್ಲಿ ಮೋಟಾರು ಸೈಕಲ್ಲಿಗೆ ಸೂಕ್ತ ಸುರಕ್ಷಾ ವ್ಯವಸ್ಥೆಯ ಸಮೇತ ಭದ್ರವಾಗಿ ಜೋಡಿಸಿದ ಸೂಕ್ತ ಆಸನದ ಮೇಲೆ ಅಲ್ಲದೆ ಕುಳ್ಳಿರಿಸಿಕೊಂಡು ಯಾರೇ ವ್ಯಕ್ತಿಯನ್ನು ಒಯ್ಯತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ನಮೂದಿಸಿರುವ ಸುರಕ್ಷಾ ಕ್ರಮಗಳ ಜೊತೆಗೆ, ಕೇಂದ್ರ ಸರ್ಕಾರವು ದ್ವಿಚಕ್ರ ಮೋಟಾರು ಸೈಕಲ್ಲಿನ ಚಾಲಕನ ಮತ್ತು ಅದರ ಹಿಂಬದಿ ಸವಾರನ ಸಲುವಾಗಿ ಇತರ ಸುರಕ್ಷಾ ಕ್ರಮಗಳನ್ನು ನಿಯಮಿಸಬಹುದು.

129. ರಕ್ಷಕ ಶಿರಸ್ತ್ರಾಣವನ್ನು ಧರಿಸುವುದು:- ಮೋಟಾರು ವಾಹನವನ್ನು ನಡೆಸುತ್ತಿರುವ ಅಥವಾ ಸವಾರಿ ಮಾಡುತ್ತಿರುವ (ಯಾವುದೇ ವರ್ಗದ ಅಥವಾ ವಿವರಣೆಯ ಮೋಟಾರು ಸೈಕಲ್ಲಿನ ಮೇಲೆ ಅದರ ಪಕ್ಕ ಬಂಡಿಯಲ್ಲಿ ಅಲ್ಲದೆ) ಪ್ರತಿಯೊಬ್ಬ ವ್ಯಕ್ತಿಯು ಸಾರ್ವಜನಿಕ ಸ್ಥಳದಲ್ಲಿರುವಾಗ ಭಾರತೀಯ ಮಾನಕ ಸಂಸ್ಥೆಯ ಗುಣಮಟ್ಟಕ್ಕೆ ಅನುಸಾರವಾದ ರಕ್ಷಕ ಶಿರಸ್ತ್ರಾಣವನ್ನು ಧರಿಸತಕ್ಕದ್ದು:

ಪರಂತು, ಈ ಪ್ರಕರಣದ ಉಪಬಂಧಗಳು, ಸಿಖ್ ವ್ಯಕ್ತಿಗೆ, ಅವನು ಸಾರ್ವಜನಿಕ ಸ್ಥಳದಲ್ಲಿ ಮೋಟಾರು ಸೈಕಲ್ಲು ನಡೆಸುತ್ತಿರುವಾಗ ಅಥವಾ ಅದರ ಮೇಲೆ ಸವಾರಿ ಮಾಡುತ್ತಿರುವಾಗ ಪೇಟ ಧರಿಸಿದ್ದರೆ ಅನ್ವಯಿಸತಕ್ಕದ್ದಲ್ಲ:

ಮತ್ತೂ ಪರಂತು, ರಾಜ್ಯ ಸರ್ಕಾರವು ಅಂಥ ನಿಯಮಗಳ ಮೂಲಕ ತಾನು ಸೂಕ್ತವೆಂದು ಭಾವಿಸಬಹುದಾದಂಥ ಅಪವಾದಗಳ ಬಗ್ಗೆ ಉಪಬಂಧಿಸಬಹುದು.

ವಿವರಣೆ:- "ರಕ್ಷಕ ಶಿರಸ್ತ್ರಾಣ" ಎಂದರೆ ಯಾವ ಹೆಲ್ಮೆಟ್ಟು,-

(ಎ) ಅಪಘಾತ ಸಂಭವಿಸಿದ ಸಂದರ್ಭದಲ್ಲಿ, ಅದರ ಆಕೃತಿ, ಸಾಮಗ್ರಿ ಮತ್ತು ನಿರ್ಮಾಣ ಇವುಗಳ ಕಾರಣದಿಂದಾಗಿ ಮೋಟಾರು ಸೈಕಲ್ಲನ್ನು ನಡೆಸುತ್ತಿರುವವನಿಗೆ ಅಥವಾ ಸವಾರಿ ಮಾಡುತ್ತಿರುವವನಿಗೆ ಕ್ಷತಿಯಿಂದ ಒಂದಷ್ಟು ಪ್ರಮಾಣದ ರಕ್ಷಣೆಯನ್ನು ಒದಗಿಸಬಹುದೆಂದು ಸಕಾರಣವಾಗಿ ನಿರೀಕ್ಷಿಸಲಾಗುವುದೋ; ಮತ್ತು

(ಬಿ) ಅದರ ಮೇಲೆ ಒದಗಿಸಿರುವ ಕಟ್ಟುಪಟ್ಟಿಗಳ ಅಥವಾ ಇತರ ಬಿಗಿ ಸಾಧನಗಳ ಮೂಲಕ, ಧರಿಸುವವನ ತಲೆಗೆ ಭದ್ರವಾಗಿ ಕಟ್ಟಲಾಗುವುದೋ

- ಆ ಯಾವುದೇ ಹೆಲ್ಮೆಟ್ಟು.

130. ಲೈಸನ್ಸನ್ನು ಮತ್ತು ನೋಂದಣಿ ಪ್ರಮಾಣ ಪತ್ರವನ್ನು ಹಾಜರುಪಡಿಸುವ ಕರ್ತವ್ಯ:- (1) ಮೋಟಾರು ವಾಹನದ ಚಾಲಕನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ, ಸಮವಸ್ತ್ರದಲ್ಲಿರುವ ಯಾರೇ ಪೊಲೀಸ್ ಅಧಿಕಾರಿಯು ಕೇಳಿದಾಗ ತನ್ನ ಲೈಸನ್ಸನ್ನು ಪರೀಕ್ಷೆಗಾಗಿ ಹಾಜರುಪಡಿಸತಕ್ಕದ್ದು:

ಪರಂತು, ಚಾಲಕನು ತನ್ನ ಲೈಸನ್ಸನ್ನು ಈ ಅಧಿನಿಯಮ ಅಥವಾ ಇತರ ಯಾವುದೇ ಅಧಿನಿಯಮದ ಮೇರೆಗೆ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಿಗೆ ಒಪ್ಪಿಸಿರುವಲ್ಲಿ ಅಥವಾ ಆ ಅಧಿಕಾರಿ ಅಥವಾ ಪ್ರಾಧಿಕಾರದಿಂದ ಅದು ಜಪ್ತಿಯಾಗಿರುವಲ್ಲಿ, ಆ ಲೈಸನ್ಸಿಗೆ ಬದಲಾಗಿ ಅದಕ್ಕೆ ಸಂಬಂಧಿಸಿ ಅಂಥ ಅಧಿಕಾರಿ ಅಥವಾ ಪ್ರಾಧಿಕಾರವು ಕೊಟ್ಟ ರಸೀದಿ ಅಥವಾ ಇತರ ಸ್ವೀಕೃತಿಯನ್ನು ಹಾಜರುಪಡಿಸಬಹುದು ಮತ್ತು ಆ ತರುವಾಯ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ರೀತಿಯಲ್ಲಿ ಲೈಸನ್ಸನ್ನು ಕೇಳುವ ಪೊಲೀಸ್ ಅಧಿಕಾರಿಗೆ ಅದನ್ನು ಹಾಜರುಪಡಿಸತಕ್ಕದ್ದು.

(2) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಇರುವ ಮೋಟಾರು ವಾಹನದ ನಿರ್ವಾಹಕರು ಯಾರಾದರೂ ಇದ್ದರೆ ಅವರು, ಈ ಬಗ್ಗೆ ಅಧಿಕೃತನಾದ ಮೋಟಾರು ವಾಹನಗಳ ಇಲಾಖೆಯ ಯಾರೇ ಅಧಿಕಾರಿಯು ಕೇಳಿದಾಗ ಲೈಸನ್ಸನ್ನು ಪರೀಕ್ಷೆಗಾಗಿ ಹಾಜರುಪಡಿಸತಕ್ಕದ್ದು.

(3) 60ನೇ ಪ್ರಕರಣದ ಮೇರೆಗೆ ನೋಂದಾಯಿತವಾದ ವಾಹನಕ್ಕೆ ಹೊರತಾದ ಮೋಟಾರು ವಾಹನದ ಒಡೆಯನು ಅಥವಾ ಅವನ ಗೈರುಹಾಜರಿಯಲ್ಲಿ ಚಾಲಕನು ಅಥವಾ ವಾಹನದ ಪ್ರಭಾರವನ್ನು ಹೊಂದಿರುವ ಇತರ ವ್ಯಕ್ತಿಯು ನೋಂದಣಿ ಪ್ರಾಧಿಕಾರ ಅಥವಾ ಈ ಸಂಬಂಧದಲ್ಲಿ ಮೋಟಾರು ವಾಹನಗಳ ಇಲಾಖೆಯು ಅಧಿಕೃತಗೊಳಿಸಿದ ಇತರ ಯಾರೇ ಅಧಿಕಾರಿಯು ಕೇಳಿದಾಗ, ವಾಹನದ ವಿಮಾ ಪ್ರಮಾಣ ಪತ್ರವನ್ನು ಮತ್ತು ವಾಹನವು ಸಾರಿಗೆ ವಾಹನವಾಗಿರುವಲ್ಲಿ 56ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಹತಾ ಪ್ರಮಾಣ ಪತ್ರವನ್ನು ಮತ್ತು ಪರ್ಮಿಟ್ಟನ್ನು ಸಹ ಹಾಜರುಪಡಿಸತಕ್ಕದ್ದು; ಮತ್ತು ಯಾವುದೇ ಅಥವಾ ಎಲ್ಲಾ ಪ್ರಮಾಣ ಪತ್ರಗಳು ಮತ್ತು ಪರ್ಮಿಟ್ಟು ಅವನ ಬಳಿ ಇಲ್ಲದಿದ್ದರೆ, ತಗಾದೆ ಮಾಡಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಅವುಗಳ ಫೋಟೋ ಪ್ರತಿಗಳಿಗೆ ಸೂಕ್ತವಾಗಿ ದೃಢೀಕರಣ ಮಾಡಿಸಿ ಅದನ್ನು ಹಾಜರುಪಡಿಸುವಂತೆ ತಗಾದೆ ಮಾಡಿದಂಥ ಅಧಿಕಾರಿಗೆ ಖುದ್ದಾಗಿ ಒಪ್ಪಿಸತಕ್ಕದ್ದು ಅಥವಾ ಅದನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಕೊಡತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ವಿಮಾ ಪ್ರಮಾಣ ಪತ್ರ" ಎಂದರೆ 147ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೀಡಲಾದ ಪ್ರಮಾಣ ಪತ್ರ.

(4) ಸಂದರ್ಭಾನುಸಾರ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಲೈಸನ್ಸು ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಮಾಣ ಪತ್ರಗಳು ಅಥವಾ ಪರ್ಮಿಟ್ಟು, ಅವುಗಳನ್ನು ಕೇಳಲಾದ ಸಮಯದಲ್ಲಿ ಕೇಳಲಾದ ವ್ಯಕ್ತಿಯ ಸ್ವಾಧೀನದಲ್ಲಿ ಇಲ್ಲದಿದ್ದರೆ, ಅಂಥ ವ್ಯಕ್ತಿಯು ಅದನ್ನು ಕೇಳಿದ ಪೊಲೀಸ್ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಅವಧಿಯೊಳಗೆ ಲೈಸನ್ಸು ಅಥವಾ ಪ್ರಮಾಣ ಪತ್ರಗಳು ಅಥವಾ ಪರ್ಮಿಟ್ಟನ್ನು ಹಾಜರುಪಡಿಸಿದರೆ ಅದು ಈ ಪ್ರಕರಣದ ಪಾಲನೆಗೆ ಸಾಕಷ್ಟಾಗಿರತಕ್ಕದ್ದು:

ಪರಂತು, ನಿಯಮಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ಮಾರ್ಪಾಟುಗಳನ್ನುಳಿದು, ಈ ಉಪಪ್ರಕರಣದ ಉಪಬಂಧಗಳು, ಸಾರಿಗೆ ವಾಹನದ ನೋಂದಣಿ ಪ್ರಮಾಣ ಪತ್ರವನ್ನು ಅಥವಾ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕಾದ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

131. ಕಾವಲಿಲ್ಲದ ರೈಲ್ವೆ ಹಳಿ ದಾಟುಗಳಲ್ಲಿ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸುವುದು ಚಾಲಕನ ಕರ್ತವ್ಯ:- ಕಾವಲಿಲ್ಲದ ಯಾವುದೇ ರೈಲ್ವೆ ಹಳಿದಾಟು ಸಮೀಪದಲ್ಲಿ ಮೋಟಾರು ವಾಹನದ ಪ್ರತಿಯೊಬ್ಬ ಚಾಲಕನು, ವಾಹನವನ್ನು ನಿಲ್ಲಿಸತಕ್ಕದ್ದು ಮತ್ತು ವಾಹನದ ಚಾಲಕನು ವಾಹನದಲ್ಲಿರುವ ನಿರ್ವಾಹಕ ಅಥವಾ ಕ್ಲೀನರ್ ಅಥವಾ ಪರಿಚಾರಕ ಅಥವಾ ಯಾರೇ ಇತರೆ ವ್ಯಕ್ತಿಯು ಹಳಿದಾಟುವವರೆಗೆ ಹೋಗಿ ಎರಡೂ ಕಡೆಯಿಂದ ಯಾವುದೇ ರೈಲು ಅಥವಾ ಟ್ರ್ಯಾಲಿ ಬರುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ವಾಹನದಲ್ಲಿ ನಿರ್ವಾಹಕ ಅಥವಾ ಕ್ಲೀನರ್ ಅಥವಾ ಪರಿಚಾರಕ ಅಥವಾ ಯಾರೇ ಇತರೆ ವ್ಯಕ್ತಿ ಇಲ್ಲದಿದ್ದಾಗ ವಾಹನದ ಚಾಲಕನೇ ವಾಹನದಿಂದ ಕೆಳಗಿಳಿದು ರೈಲ್ವೆ ಹಳಿಯನ್ನು ದಾಟುವ ಮೊದಲು ಎರಡೂ ಕಡೆಯಿಂದ ರೈಲು ಅಥವಾ ಟ್ರ್ಯಾಲಿ ಬರುತ್ತಿಲ್ಲವೆಂಬುದನ್ನು ಸ್ವತಃ ಖಚಿತಪಡಿಸಿಕೊಳ್ಳತಕ್ಕದ್ದು.

132. ಕೆಲವು ಸಂದರ್ಭಗಳಲ್ಲಿ ವಾಹನವನ್ನು ನಿಲ್ಲಿಸುವುದು ಚಾಲಕನ ಕರ್ತವ್ಯ:- (1) ಮೋಟಾರು ವಾಹನದ ಚಾಲಕನು,-

(ಎ) ವ್ಯಕ್ತಿಗೆ, ಪ್ರಾಣಿಗೆ ಅಥವಾ ವಾಹನಕ್ಕೆ ಅಪಘಾತ ಉಂಟಾಗಿರುವಲ್ಲಿ ಅಥವಾ ಸ್ವತ್ತಿಗೆ ಹಾನಿ ಸಂಭವಿಸಿರುವಲ್ಲಿ, ಒಂದು ವಾಹನವು ಕಾರಣವಾದ ಸಂದರ್ಭದಲ್ಲಿ ಸಮವಸ್ತ್ರದಲ್ಲಿರುವ ಸಬ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆ ದರ್ಜೆಯವನಲ್ಲದ ಯಾರೇ ಪೊಲೀಸ್ ಅಧಿಕಾರಿಯು ವಾಹನವನ್ನು ಹಾಗೆ ಮಾಡಲು ಅಗತ್ಯಪಡಿಸಿದಾಗ; ಅಥವಾ

(ಬಿ) ಒಂದು ಪ್ರಾಣಿಯನ್ನು ಸ್ವಾಧೀನದಲ್ಲಿ ಹೊಂದಿರುವ ಯಾರೇ ವ್ಯಕ್ತಿಯು, ಆ ಪ್ರಾಣಿಯು ವಾಹನದ ಕಾರಣದಿಂದಾಗಿ ಬೆದರಿರುವುದರಿಂದ ಅಥವಾ ಬೆದರಬಹುದಾಗಿರುವುದರಿಂದ ಹತೋಟಿ ತಪ್ಪುವುದೆಂದು ಶಂಕಿಸಿ ವಾಹನವನ್ನು ನಿಲ್ಲಿಸಿ ನಿಶ್ಚಲಗೊಳಿಸಲು ಅಗತ್ಯಪಡಿಸಿದಾಗ;

[(ಸಿ) * * * * *]

- ಆ ವಾಹನವನ್ನು ಅವಶ್ಯವಾಗಬಹುದಾದಷ್ಟು ಯುಕ್ತ ಕಾಲದೊಳಗೆ, ಆದರೆ ಇಪ್ಪತ್ತನಾಲ್ಕು ಗಂಟೆಗಳನ್ನು ಮೀರದ ಸಮಯದವರೆಗೆ ಹಾಗೆ ನಿಲ್ಲಿಸಿ ನಿಶ್ಚಲಗೊಳಿಸತಕ್ಕದ್ದು ಮತ್ತು ಅಂಥ ಯಾವುದೇ ಅಪಘಾತ ಅಥವಾ ಹಾನಿಯಿಂದ ಬಾಧಿತನಾದ

ಯಾರೇ ವ್ಯಕ್ತಿಯು ಕೇಳಿದರೆ, ಪರಂತು ಅಂಥ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸಗಳನ್ನು ಒದಗಿಸಿದರೆ, ಅವನಿಗೆ ತನ್ನ ಹೆಸರು, ವಿಳಾಸ ಮತ್ತು ವಾಹನದ ಒಡೆಯನ ಹೆಸರು ಮತ್ತು ವಿಳಾಸವನ್ನು ನೀಡತಕ್ಕದ್ದು.

(2) ಒಬ್ಬ ವ್ಯಕ್ತಿಯು, ತನ್ನ ಹೆಸರು ಮತ್ತು ವಿಳಾಸವನ್ನು ಕೊಟ್ಟು, 184ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧವನ್ನು ಚಾಲಕನು ಮಾಡಿದ್ದಾನೆಂದು ಆಪಾದಿಸಿ, ಕೇಳಿದರೆ, ಮೋಟಾರು ವಾಹನದ ಆ ಚಾಲಕನು ಆ ವ್ಯಕ್ತಿಗೆ ತನ್ನ ಹೆಸರು ಮತ್ತು ವಿಳಾಸವನ್ನು ನೀಡತಕ್ಕದ್ದು.

(3) ಈ ಪ್ರಕರಣದಲ್ಲಿ 'ಪ್ರಾಣಿ' ಎಂದರೆ ಕುದುರೆ, ದನ, ಆನೆ, ಒಂಟೆ, ಕತ್ತೆ, ಹೇಸರಗತ್ತೆ, ಕುರಿ ಅಥವಾ ಆಡು.

133. ಮಾಹಿತಿಯನ್ನು ಕೊಡುವುದು ಮೋಟಾರು ವಾಹನದ ಒಡೆಯನ ಕರ್ತವ್ಯ:- ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಯಾವ ವಾಹನದ ಚಾಲಕ ಅಥವಾ ನಿರ್ವಾಹಕನು ಆಪಾದಿತನಾಗಿರುವನೋ ಆ ಮೋಟಾರು ವಾಹನದ ಒಡೆಯನು, ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಪೊಲೀಸ್ ಅಧಿಕಾರಿಯು ಕೇಳಿದಾಗ, ಚಾಲಕ ಅಥವಾ ನಿರ್ವಾಹಕನ ಹೆಸರು ಮತ್ತು ವಿಳಾಸದ ಮತ್ತು ಅವನು ಹೊಂದಿದ್ದು, ಅವನ ಸ್ವಾಧೀನದಲ್ಲಿರುವ ಲೈಸನ್ಸಿನ ಅಥವಾ ತಾನು ಸೂಕ್ತ ಎಚ್ಚರಿಕೆ ವಹಿಸಿ ಖಚಿತಪಡಿಸಿಕೊಂಡ ಎಲ್ಲಾ ಮಾಹಿತಿಯನ್ನು ನೀಡತಕ್ಕದ್ದು.

134. ಒಬ್ಬ ವ್ಯಕ್ತಿಗೆ ಅಪಘಾತ ಮತ್ತು ಕ್ಷತಿಯುಂಟಾದ ಸಂದರ್ಭದಲ್ಲಿ ಚಾಲಕನ ಕರ್ತವ್ಯ:- ಮೋಟಾರು ವಾಹನವು ಒಳಗಾಗಿರುವ ಅಪಘಾತದ ಪರಿಣಾಮವಾಗಿ ಯಾರೇ ವ್ಯಕ್ತಿಗೆ ಕ್ಷತಿಯುಂಟಾದಾಗ ಅಥವಾ ಅನ್ಯ ವ್ಯಕ್ತಿಯ ಯಾವುದೇ ಸ್ವತ್ತಿಗೆ ಹಾನಿಯುಂಟಾದಾಗ, ಆ ವಾಹನದ ಚಾಲಕನು ಅಥವಾ ಆ ವಾಹನದ ಪ್ರಭಾರವನ್ನು ಹೊಂದಿರುವ ಇತರ ವ್ಯಕ್ತಿಯು,-

(ಎ) ಅವನ ನಿಯಂತ್ರಣ ಮೀರಿದ ಜನರ ರೋಷದ ನಿಮಿತ್ತ ಅಥವಾ ಇತರ ಯಾವುದೇ ಕಾರಣಕ್ಕಾಗಿ ಕ್ಷತಿಗೊಂಡ ವ್ಯಕ್ತಿಗೆ ವೈದ್ಯಕೀಯ ಉಪಚಾರ ದೊರಕಿಸುವುದು ಸಾಧ್ಯವಾಗದ ಹೊರತು, ಹಾಗೆ ಮಾಡಲು ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಕ್ಷತಿಗೊಂಡ ವ್ಯಕ್ತಿ ಅಥವಾ ಅವನು ಅಪ್ರಾಪ್ತ ವಯಸ್ಕನಾಗಿದ್ದರೆ ಅವನ ಪಾಲಕನು ಅನ್ಯಥಾ ಇಚ್ಛಿಸಿದ ಹೊರತು ಅವನು ಆ ವ್ಯಕ್ತಿಯನ್ನು ಸಮೀಪದ ವೈದ್ಯ ವೃತ್ತಿಗನಲ್ಲಿ ಅಥವಾ ಆಸ್ಪತ್ರೆಗೆ ಕರೆದೊಯ್ಯತಕ್ಕದ್ದು ಮತ್ತು ಯಾವುದೇ ಕಾರ್ಯವಿಧಾನದ ಔಪಚಾರಿಕತೆಗಳಿಗೆ ಕಾಯದೆ ಗಾಯಗೊಂಡ ವ್ಯಕ್ತಿಗೆ ತಕ್ಷಣವೇ ಉಪಚರಿಸುವುದು ಮತ್ತು ವೈದ್ಯಕೀಯ ನೆರವು ಅಥವಾ ಚಿಕಿತ್ಸೆ ನೀಡುವುದು ಪ್ರತಿಯೊಬ್ಬ ನೋಂದಾಯಿತ ವೈದ್ಯ ವೃತ್ತಿಗರ ಅಥವಾ ಆಸ್ಪತ್ರೆಯಲ್ಲಿ ಕಾರ್ಯನಿರತ ವೈದ್ಯನ ಕರ್ತವ್ಯವಾಗಿರತಕ್ಕದ್ದು;

(ಬಿ) ಪೊಲೀಸ್ ಅಧಿಕಾರಿಯು ಕೇಳಿದಾಗ, ಅವನಿಗೆ ಬೇಕಾದ ಮಾಹಿತಿಯನ್ನು ಕೊಡತಕ್ಕದ್ದು ಅಥವಾ ಯಾರೇ ಪೊಲೀಸ್ ಅಧಿಕಾರಿ ಅಲ್ಲಿ ಇರದಿದ್ದರೆ, (ಎ) ಖಂಡದ ಮೇರೆಗೆ ಅಗತ್ಯವಾದ ವೈದ್ಯಕೀಯ ಉಪಚಾರ ದೊರಕಿಸಲು ಯುಕ್ತ ಕ್ರಮಗಳನ್ನು ಕೈಗೊಳ್ಳದಿರುವ ಸಂದರ್ಭಗಳು ಯಾವುವಾದರೂ ಇದ್ದರೆ ಅವು ಸೇರಿ ಆ ಘಟನೆಯ ಸನ್ನಿವೇಶಗಳನ್ನು ಸಾಧ್ಯವಿರುವಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಆ ಘಟನೆಯ 24 ಗಂಟೆಗಳೊಳಗಾಗಿ ಅತೀ ಸಮೀಪದ ಪೊಲೀಸ್ ಠಾಣೆಗೆ ವರದಿ ಮಾಡತಕ್ಕದ್ದು;

(ಸಿ) ವಿಮಾ ಪ್ರಮಾಣ ಪತ್ರವನ್ನು ನೀಡಿರುವಂಥ ವಿಮಾಕರ್ತನಿಗೆ ಅಪಘಾತ ಸಂಭವಿಸಿದ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಲಿಖಿತದಲ್ಲಿ ನೀಡತಕ್ಕದ್ದು, ಎಂದರೆ:-

(i) ವಿಮಾ ಪಾಲಿಸಿಯ ಸಂಖ್ಯೆ ಮತ್ತು ಅದು ಸಿಂಧುವಾಗಿರುವ ಅವಧಿ;

(ii) ಅಪಘಾತ ನಡೆದ ದಿನಾಂಕ, ಸಮಯ ಮತ್ತು ಸ್ಥಳ;

(iii) ಅಪಘಾತದಲ್ಲಿ ಗಾಯಗೊಂಡ ಅಥವಾ ಮೃತ ವ್ಯಕ್ತಿಗಳ ವಿವರಗಳು;

(iv) ಚಾಲಕನ ಹೆಸರು ಮತ್ತು ಅವನ ಚಾಲನ ಲೈಸನ್ಸಿನ ವಿವರಗಳು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ "ಚಾಲಕ" ಎಂಬ ಪದವು ವಾಹನದ ಒಡೆಯನನ್ನು ಒಳಗೊಳ್ಳುತ್ತದೆ.

135. ಅಪಘಾತದ ಸಂದರ್ಭಗಳ ತನಿಖೆಗಾಗಿ ಮತ್ತು ಮಾರ್ಗದಲ್ಲಿ ಸೌಕರ್ಯ, ಇತ್ಯಾದಿ ಒದಗಿಸುವ ಯೋಜನೆಗಳನ್ನು ರೂಪಿಸುವುದು:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ಮೋಟಾರು ವಾಹನ ಅಪಘಾತಗಳ ಕಾರಣಗಳು ಮತ್ತು ವಿಶ್ಲೇಷಣೆಯ ಆಳ ಅಧ್ಯಯನ;

(ಬಿ) ಹೆದ್ದಾರಿಗಳಲ್ಲಿ ಮಾರ್ಗ ಸೌಕರ್ಯಗಳು;

(ಸಿ) ಹೆದ್ದಾರಿಗಳಲ್ಲಿ ಸಂಚಾರ ಸಹಾಯಕ ಕೇಂದ್ರಗಳು; ಮತ್ತು

(ಡಿ) ಹೆದ್ದಾರಿಗುಂಟ ಟ್ರಕ್ ನಿಲ್ಲಿಸುವ ಆವರಣಗಳು

- ಇವುಗಳ ವ್ಯವಸ್ಥೆಗಾಗಿ ಒಂದು ಅಥವಾ ಹೆಚ್ಚು ಯೋಜನೆಗಳನ್ನು ರೂಪಿಸಬಹುದು.

(2) ಯಾವುದೇ ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ರೂಪಿಸಿದ ಪ್ರತಿಯೊಂದು ಯೋಜನೆಯನ್ನು, ಅದನ್ನು ರೂಪಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

136. ಅಪಘಾತಕ್ಕೀಡಾದ ವಾಹನದ ಪರಿಶೀಲನೆ:- ಮೋಟಾರು ವಾಹನವು ಒಳಗಾಗಿರುವ ಯಾವುದೇ ಅಪಘಾತ ಸಂಭವಿಸಿದಾಗ, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಗತ್ಯಪಡಿಸಿದಾಗ ತನ್ನ ಅಧಿಕಾರ ಪತ್ರವನ್ನು ತೋರಿಸಿ, ವಾಹನವನ್ನು ಪರಿಶೀಲಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಯಾವುದೇ ಯುಕ್ತ ಸಮಯದಲ್ಲಿ ವಾಹನವಿರಬಹುದಾದ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ಪರಿಶೀಲನೆಗಾಗಿ ಆ ವಾಹನವನ್ನು ಸ್ಥಳಾಂತರಿಸಬಹುದು:

ಪರಂತು, ಆ ವಾಹನವನ್ನು ಹಾಗೆ ಸ್ಥಳಾಂತರಿಸಲಾದ ಸ್ಥಳದ ಬಗ್ಗೆ ವಾಹನದ ಒಡೆಯನಿಗೆ ತಿಳಿಸತಕ್ಕದ್ದು ಮತ್ತು ಆ ವಾಹನವನ್ನು ಇಪ್ಪತ್ತನಾಲ್ಕು ಗಂಟೆಗಳೊಳಗೆ ವಾಹನದ ಒಡೆಯನಿಗೆ, ಚಾಲಕನಿಗೆ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಗೆ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ತರುವಾಯ ಹಿಂದಿರುಗಿಸತಕ್ಕದ್ದು.

137. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- ಕೇಂದ್ರ ಸರ್ಕಾರವು ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುವೇ ವಿಷಯಗಳಿಗಾಗಿ ಉಪಬಂಧಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) ಮೋಟಾರು ವಾಹನಗಳ ಚಾಲಕರು ಸಂಕೇತಗಳನ್ನು ಮಾಡತಕ್ಕ ಸಂದರ್ಭಗಳು ಮತ್ತು 121ನೇ ಪ್ರಕರಣದ ಮೇರೆಗಿನ ಅಂಥ ಸಂಕೇತಗಳು;

(ಬಿ) 130ನೇ ಪ್ರಕರಣದ ಮೇರೆಗೆ ಪೊಲೀಸ್ ಅಧಿಕಾರಿಗೆ ಲೈಸನ್ಸು ಮತ್ತು ಪ್ರಮಾಣ ಪತ್ರಗಳನ್ನು ಹಾಜರುಪಡಿಸಬಹುದಾದ ರೀತಿ.

138. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು, 137ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಹೊರತುಪಡಿಸಿ, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ಕೆಟ್ಟುಹೋಗಿರುವ ಅಥವಾ ರಸ್ತೆಯ ಮೇಲೆ ನಿಲ್ಲಿಸಿಹೋಗಿರುವ ಅಥವಾ ಬಿಟ್ಟುಹೋಗಿರುವ ವಾಹನಗಳನ್ನು, ಅವುಗಳಲ್ಲಿ ಹೇರಿದ ವಸ್ತುಗಳೂ ಸೇರಿ, ಅವುಗಳ ಸ್ಥಳಾಂತರಣ ಮತ್ತು ಸುರಕ್ಷೆ;

(ಬಿ) ತೂಕಮಾಡುವ ಸಾಧನಗಳ ಸ್ಥಾಪನೆ ಮತ್ತು ಉಪಯೋಗ;

(ಸಿ) ಮಾರ್ಗ ಸೌಕರ್ಯ ಆವರಣಗಳ ನಿರ್ವಹಣೆ ಮತ್ತು ವ್ಯವಸ್ಥೆ;

(ಡಿ) ನಿಯಮಿಸಬಹುದಾದ ಷರತ್ತುಗಳಿಗೊಳಪಟ್ಟು, ಅಗ್ನಿಶಾಮಕ ವಾಹನಗಳು, ಆಂಬುಲೆನ್ಸ್‌ಗಳು ಮತ್ತು ಇತರ ವಿಶೇಷ ವರ್ಗಗಳ ಅಥವಾ ವಿವರಣೆಯ ವಾಹನಗಳಿಗೆ ಈ ಅಧ್ಯಾಯದ ಎಲ್ಲ ಅಥವಾ ಯಾವುವೇ ಉಪಬಂಧಗಳಿಂದ ವಿನಾಯಿತಿ;

(ಇ) ವಾಹನಗಳನ್ನು ನಿಲ್ಲಿಸುವ ಸ್ಥಳಗಳು ಮತ್ತು ನಿಲ್ದಾಣಗಳ ನಿರ್ವಹಣೆ ಮತ್ತು ವ್ಯವಸ್ಥೆ ಮತ್ತು ಅವುಗಳ ಬಳಕೆಗಾಗಿ ವಿಧಿಸಬಹುದಾದ ಫೀಜು ಯಾವುದಾದರೂ ಇದ್ದರೆ, ಅದು;

(ಎಫ್) ಸಾಮಾನ್ಯವಾಗಿ ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ಗೇರನ್ನು ಹಾಕದೆ ಇಳಿಜಾರಿನಲ್ಲಿ ಮೋಟಾರು ವಾಹನ ನಡೆಸುವುದನ್ನು ನಿಷೇಧಿಸುವುದು;

(ಜಿ) ಚಲಿಸುತ್ತಿರುವ ಮೋಟಾರು ವಾಹನ ಹಿಡಿದುಕೊಳ್ಳುವುದನ್ನು ಅಥವಾ ಹತ್ತುವುದನ್ನು ನಿಷೇಧಿಸುವುದು;

(ಹೆಚ್) ಮೋಟಾರು ವಾಹನಗಳು ಕಾಲುದಾರಿ ಅಥವಾ ನೆಲಗಟ್ಟು ದಾರಿ ಬಳಸುವುದನ್ನು ನಿಷೇಧಿಸುವುದು;

(ಐ) ಸಾಮಾನ್ಯವಾಗಿ, ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಅಪಾಯ, ಕ್ಷತಿ ಅಥವಾ ತೊಂದರೆ ಅಥವಾ ಸ್ವತ್ತಿಗೆ ಅಪಾಯ, ಹಾನಿ ಅಥವಾ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ತಡೆಯುವುದು;

(ಜೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ

- ಇವುಗಳಿಗಾಗಿ ಉಪಬಂಧಿಸಬಹುದು.

## ಅಧ್ಯಾಯ - **IX**

### ತಾತ್ಕಾಲಿಕವಾಗಿ ಭಾರತವನ್ನು ಬಿಡುವ ಅಥವಾ ಭಾರತಕ್ಕೆ ಬರುವ ಮೋಟಾರು ವಾಹನಗಳು

139. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಕೆಳಕಂಡ ಎಲ್ಲ ಅಥವಾ ಅವುಗಳ ಪೈಕಿ ಯಾವುವೇ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭಾರತದಿಂದ ಮೋಟಾರು ವಾಹನಗಳನ್ನು ತಾತ್ಕಾಲಿಕವಾಗಿ ತೆಗೆದುಕೊಂಡು ಹೋಗುವ ವ್ಯಕ್ತಿಗಳಿಗೆ ಅಥವಾ ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭಾರತದಿಂದ ತಾತ್ಕಾಲಿಕವಾಗಿ ಹೋಗುವ ಮತ್ತು ಭಾರತದಿಂದ ಹೊರಗಿರುವ ಸಮಯದಲ್ಲಿ ಮೋಟಾರು ವಾಹನವನ್ನು ನಡೆಸಲಿಚ್ಛಿಸುವ ವ್ಯಕ್ತಿಗಳಿಗೆ ಪ್ರಯಾಣದ ಪಾಸುಗಳನ್ನು, ಪ್ರಮಾಣ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ನೀಡುವುದು ಮತ್ತು ಪ್ರಮಾಣೀಕರಿಸುವುದು;

(ಬಿ) ಭಾರತದಲ್ಲಿ ತಾತ್ಕಾಲಿಕವಾಗಿ ಇರಲು ಉದ್ದೇಶಿಸಿ ಯಾವ ಷರತ್ತುಗಳಿಗೊಳಪಟ್ಟು ಭಾರತಕ್ಕೆ ತಾತ್ಕಾಲಿಕವಾಗಿ ಮೋಟಾರು ವಾಹನಗಳನ್ನು ಭಾರತದ ಹೊರಗಿನಿಂದ ತರುವ ವ್ಯಕ್ತಿಗಳು ಅವುಗಳನ್ನು ಹೊಂದಿರಬಹುದೋ ಮತ್ತು ಭಾರತದಲ್ಲಿ ಬಳಸಬಹುದೋ ಆ ಷರತ್ತುಗಳನ್ನು ನಿಯಮಿಸುವುದು; ಮತ್ತು

(ಸಿ) ಭಾರತದಲ್ಲಿ ತಾತ್ಕಾಲಿಕವಾಗಿ ಇರಲು ಭಾರತದ ಹೊರಗಿನಿಂದ ಭಾರತಕ್ಕೆ ಬರುವ ವ್ಯಕ್ತಿಗಳು ಭಾರತದಲ್ಲಿ ಮೋಟಾರು ವಾಹನಗಳನ್ನು ಯಾವ ಷರತ್ತುಗಳಿಗೊಳಪಟ್ಟು ನಡೆಸಬಹುದೋ ಆ ಷರತ್ತುಗಳನ್ನು ನಿಯಮಿಸುವುದು.

(2) ಯಾವುದೇ ಪರಸ್ಪರ ಏರ್ಪಾಡಿನ ಮೇರೆಗೆ ಭಾರತ ಮತ್ತು ಇತರ ಯಾವುದೇ ದೇಶದ ನಡುವೆ ಬಾಡಿಗೆಗೆ ಅಥವಾ ಪ್ರತಿಫಲಕ್ಕೆ ರಸ್ತೆಯ ಮೂಲಕ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಪ್ರಯಾಣಿಕರು ಮತ್ತು ಸರಕುಗಳನ್ನು ಸಾಗಿಸಲು ನಡೆಸುತ್ತಿರುವ ಮೋಟಾರು ವಾಹನಗಳ ಸೇವೆಗಳಿಗೆ ಅನುಕೂಲ ಕಲ್ಪಿಸುವ ಮತ್ತು ಅವುಗಳನ್ನು ವಿನಿಯಮಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಕೆಳಕಂಡ ಎಲ್ಲ ಅಥವಾ ಅವುಗಳ ಪೈಕಿ ಯಾವುದೇ ವಿಷಯಗಳಿಗೆ ಸಂಬಂಧಿಸಿ ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) ಅಂಥ ಸೇವೆಗಳನ್ನು ನಡೆಸುತ್ತಿರುವ ಮೋಟಾರು ವಾಹನಗಳನ್ನು ಯಾವ ಷರತ್ತುಗಳಿಗೊಳಪಟ್ಟು ಭಾರತದ ಹೊರಗಿನಿಂದ ಭಾರತಕ್ಕೆ ತರಬಹುದೋ ಮತ್ತು ಹೊಂದಬಹುದೋ ಮತ್ತು ಭಾರತದಲ್ಲಿ ಉಪಯೋಗಿಸಬಹುದೋ ಆ ಷರತ್ತುಗಳು;

(ಬಿ) ಭಾರತದ ಯಾವುದೇ ಸ್ಥಳದಿಂದ ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಮೋಟಾರು ವಾಹನಗಳನ್ನು ಯಾವ ಷರತ್ತುಗಳಿಗೊಳಪಟ್ಟು ತೆಗೆದುಕೊಂಡು ಹೋಗಬಹುದೋ ಆ ಷರತ್ತುಗಳು;

(ಸಿ) ಅಂಥ ಮೋಟಾರು ವಾಹನಗಳ ಚಾಲಕರಾಗಿ ಅಥವಾ ನಿರ್ವಾಹಕರಾಗಿ ನಿಯೋಜಿತರಾಗಿರುವ ವ್ಯಕ್ತಿಗಳು ಯಾವ ಷರತ್ತುಗಳಿಗೊಳಪಟ್ಟು ಭಾರತಕ್ಕೆ ಬರಬಹುದೋ ಅಥವಾ ಭಾರತದಿಂದ ಹೋಗಬಹುದೋ ಆ ಷರತ್ತುಗಳು;

(ಡಿ) ಅಂಥ ಮೋಟಾರು ವಾಹನಗಳ ಚಾಲಕರಾಗಿ ಅಥವಾ ನಿರ್ವಾಹಕರಾಗಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಪ್ರಯಾಣದ ಪಾಸುಗಳನ್ನು, ಪ್ರಮಾಣ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ನೀಡುವುದು ಮತ್ತು ಪ್ರಮಾಣೀಕರಿಸುವುದು;

(ಇ) ಅಂಥ ಮೋಟಾರು ವಾಹನಗಳು ಪ್ರದರ್ಶಿಸಬೇಕಾದ (ನೋಂದಣಿ ಗುರುತುಗಳನ್ನುಳಿದು) ವಿವರಗಳು ಮತ್ತು ಅಂಥ ವಿವರಗಳನ್ನು ಪ್ರದರ್ಶಿಸಬೇಕಾದ ರೀತಿ;

(ಎಫ್) ಅಂಥ ಮೋಟಾರು ವಾಹನಗಳ ಜೊತೆಗೆ ಹಿಂಬಂಡಿಗಳ ಉಪಯೋಗ;

(ಜಿ) ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳಿಂದ (4) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವವುಗಳನ್ನು ಹೊರತುಪಡಿಸಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಂದ ಅಂಥ ಮೋಟಾರು ವಾಹನಗಳಿಗೆ ಮತ್ತು ಅವುಗಳ ಚಾಲಕರಿಗೆ ಮತ್ತು ನಿರ್ವಾಹಕರಿಗೆ ವಿನಾಯಿತಿ;

(ಹೆಚ್) ಅಂಥ ಮೋಟಾರು ವಾಹನಗಳ ಚಾಲಕರು ಮತ್ತು ನಿರ್ವಾಹಕರನ್ನು ಗುರುತಿಸುವುದು;

(ಐ) ಕಳೆದುಹೋದ ಅಥವಾ ವಿರೂಪಗೊಂಡ ಪ್ರಯಾಣದ ಪಾಸುಗಳು, ಪ್ರಮಾಣ ಪತ್ರಗಳು ಅಥವಾ ಅಧಿಕಾರ ಪತ್ರಗಳು, ಪರ್ಮಿಟ್ಟುಗಳು, ಲೈಸೆನ್ಸುಗಳು ಅಥವಾ ನಿಯಮಿಸಲಾದ ಇತರ ಯಾವುವೇ ದಸ್ತಾವೇಜುಗಳಿಗೆ ಬದಲಾಗಿ ನಿಯಮಿಸಬಹುದಾದ ಫೀಜನ್ನು ಸಂದಾಯ ಮಾಡಿದ ಮೇಲೆ ಬೇರೆಯವುಗಳನ್ನು ನೀಡುವುದು;

(ಜೆ) ಅಂಥ ರಸ್ತೆ ಸಾರಿಗೆ ಸೇವೆಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸೀಮಾ ಸುಂಕ, ಪೊಲೀಸ್ ಅಥವಾ ಆರೋಗ್ಯಕ್ಕೆ ಸಂಬಂಧಿಸಿದ ಕಾನೂನುಗಳ ಉಪಬಂಧಗಳಿಂದ ವಿನಾಯಿತಿ;

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮವು, ಮೋಟಾರು ವಾಹನಗಳ ಅಥವಾ ಅದರ ಬಳಕೆದಾರರ ಮೇಲೆ ಯಾವುದೇ ರಾಜ್ಯದಲ್ಲಿ ವಿಧಿಸಿದ ಯಾವುದೇ ತೆರಿಗೆಯ ಸಂದಾಯದಿಂದ ಆ ರಾಜ್ಯದಲ್ಲಿ ಯಾರೇ ವ್ಯಕ್ತಿಗೆ ಯಾವುದೇ ಉನ್ಮುಕ್ತಿಯನ್ನು ನೀಡುವಂತೆ ಪ್ರವರ್ತಿಸತಕ್ಕದ್ದಲ್ಲ.

(4) (ಎ) ಮೋಟಾರು ವಾಹನಗಳ ನೋಂದಣಿ ಮತ್ತು ಅವುಗಳನ್ನು ಗುರುತಿಸುವುದು; ಅಥವಾ

(ಬಿ) ಮೋಟಾರು ವಾಹನಗಳ ನಿರ್ಮಾಣ, ನಿರ್ವಹಣೆ ಮತ್ತು ಸಜ್ಜು ಸಲಕರಣೆಗಳ ಅಗತ್ಯಗಳು; ಅಥವಾ

(ಸಿ) ಮೋಟಾರು ವಾಹನಗಳ ಚಾಲಕರು ಮತ್ತು ನಿರ್ವಾಹಕರಿಗೆ ಲೈಸನ್ಸು ನೀಡಿಕೆ ಮತ್ತು ಅವರ ಅರ್ಹತೆಗಳು

- ಇವುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮದಲ್ಲಿ ಇರುವುದು ಯಾವುದೂ,-

(i) (1)ನೇ ಉಪಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದ ಮೇರೆಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಅನ್ವಯವಾಗುವ ಯಾವುದೇ ಮೋಟಾರು ವಾಹನಕ್ಕೆ ಅಥವಾ ಮೋಟಾರು ವಾಹನದ ಯಾರೇ ಚಾಲಕನಿಗೆ; ಅಥವಾ

(ii) (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಅನ್ವಯವಾಗುವ ಮೋಟಾರು ವಾಹನದ ಯಾರೇ ನಿರ್ವಾಹಕನಿಗೆ

- ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ - X

### ಕೆಲವು ಸಂದರ್ಭಗಳಲ್ಲಿ ತಪ್ಪಿಲ್ಲದೆಯೇ ಹೊಣೆಗಾರಿಕೆ

140. ಕೆಲವೊಂದು ಸಂದರ್ಭಗಳಲ್ಲಿ ತಪ್ಪಿಲ್ಲದ ತತ್ವದ ಆಧಾರದ ಮೇಲೆ ನಷ್ಟ ಪರಿಹಾರ ಸಂದಾಯ ಮಾಡಲು ಹೊಣೆಗಾರಿಕೆ:- (1) ಮೋಟಾರು ವಾಹನವನ್ನು ಅಥವಾ ಮೋಟಾರು ವಾಹನಗಳನ್ನು ಉಪಯೋಗಿಸುವುದರಿಂದ ಉಂಟಾಗುವ ಅಪಘಾತದಿಂದಾಗಿ ಯಾರೇ ವ್ಯಕ್ತಿಗೆ ಮರಣ ಸಂಭವಿಸಿದರೆ ಅಥವಾ ಖಾಯಂ ಅಸಮರ್ಥತೆಯುಂಟಾದರೆ, ವಾಹನದ ಮಾಲೀಕ ಅಥವಾ ಸಂದರ್ಭಾನುಸಾರವಾಗಿ ವಾಹನಗಳ ಮಾಲೀಕರು, ಅಂಥ ಮರಣ ಅಥವಾ ಅಸಮರ್ಥತೆಯ ಬಗ್ಗೆ ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರರಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯ ಮರಣದ ಸಂಬಂಧದಲ್ಲಿ, (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡತಕ್ಕ ನಷ್ಟ ಪರಿಹಾರದ ಮೊಬಲಗು ಐವತ್ತು ಸಾವಿರ ರೂಪಾಯಿಗಳ ನಿಗದಿತ ಮೊತ್ತ ಆಗಿರತಕ್ಕದ್ದು ಮತ್ತು ಯಾರೇ ವ್ಯಕ್ತಿಯ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ ಆ ಉಪಪ್ರಕರಣದ ಮೇರೆಗೆ ಸಂದಾಯ ಮಾಡತಕ್ಕ ನಷ್ಟ ಪರಿಹಾರದ ಮೊಬಲಗು ಇಪ್ಪತ್ತೈದು ಸಾವಿರ ರೂಪಾಯಿಗಳ ನಿಗದಿತ ಮೊತ್ತ ಆಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ನಷ್ಟ ಪರಿಹಾರದ ಯಾವುದೇ ಕ್ಲೇಮಿನಲ್ಲಿ, ಕ್ಲೇಮುದಾರನನ್ನು ಯಾವ ಮರಣ ಅಥವಾ ಖಾಯಂ ಅಸಮರ್ಥತೆಯ ಬಗ್ಗೆ ಕ್ಲೇಮು ಮಾಡಲಾಗಿದೆಯೋ ಆ ಮರಣ ಅಥವಾ ಖಾಯಂ ಅಸಮರ್ಥತೆಯು ಸಂಬಂಧಪಟ್ಟ ವಾಹನ ಅಥವಾ ವಾಹನಗಳ ಮಾಲೀಕ ಅಥವಾ ಮಾಲೀಕರ ಅಥವಾ ಇತರ ಯಾರೇ ವ್ಯಕ್ತಿಯ ಯಾವುದೇ

ಅಕ್ರಮ ಕೃತ್ಯ, ಉಪೇಕ್ಷೆ ಅಥವಾ ತಪ್ಪಿನಿಂದ ಉಂಟಾದುದು ಎಂದು ವಾದಿಸುವಂತೆ ಮತ್ತು ರುಜುವಾತುಪಡಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಮೇರೆಗಿನ ನಷ್ಟ ಪರಿಹಾರದ ಯಾವುದೇ ಕ್ಲೇಮು, ಯಾವ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಬಗ್ಗೆ ಕ್ಲೇಮನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ಯಾವುದೇ ಅಕ್ರಮ ಕೃತ್ಯ, ಉಪೇಕ್ಷೆ ಅಥವಾ ತಪ್ಪಿನ ಕಾರಣದಿಂದಾಗಿ ವಿಫಲಗೊಳ್ಳತಕ್ಕದ್ದಲ್ಲ, ಅಲ್ಲದೆ ಅಂಥ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ ವಸೂಲು ಮಾಡತಕ್ಕ ನಷ್ಟ ಪರಿಹಾರದ ಪರಿಮಾಣವನ್ನು ಅಂಥ ಮರಣ ಖಾಯಂ ಅಸಮರ್ಥತೆಯ ಸಂಬಂಧದ ಜವಾಬ್ದಾರಿಯಲ್ಲಿ ಅಂಥ ವ್ಯಕ್ತಿಯ ಪಾಲಿನ ಆಧಾರದ ಮೇಲೆ ಕಡಿಮೆ ಮಾಡತಕ್ಕದ್ದಲ್ಲ.

(5) (2)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಯಾರೇ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ವಾಹನದ ಒಡೆಯನು ಆ ಮರಣ ಅಥವಾ ದೈಹಿಕ ಕ್ಷತಿಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಸಹ ಹೊಣೆಗಾರನಾಗಿರತಕ್ಕದ್ದು:

ಪರಂತು, ಯಾವುದೇ ಇತರ ಕಾನೂನಿನ ಮೇರೆಗೆ ಕೊಡಬೇಕಾಗಿರುವಂಥ ನಷ್ಟ ಪರಿಹಾರದ ಮೊಬಲಗನ್ನು ಈ ಪ್ರಕರಣದ ಮೇರೆಗೆ ಅಥವಾ 163ಎ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾಗಿರುವ ನಷ್ಟ ಪರಿಹಾರದ ಮೊಬಲಗಿನಿಂದ ಕಳೆಯತಕ್ಕದ್ದು.

141. ಮರಣ ಅಥವಾ ಖಾಯಂ ಅಸಮರ್ಥತೆಗಾಗಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಇತರ ಹಕ್ಕಿಗೆ ಸಂಬಂಧಿಸಿದ ಉಪಬಂಧಗಳು:- (1) ಯಾರೇ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ 163ಎ ಪ್ರಕರಣದಲ್ಲಿ ಉಲ್ಲೇಖಿಸಲಾದ ಯೋಜನೆಯ ಮೇರೆಗೆ ಕ್ಲೇಮು ಮಾಡುವ ಹಕ್ಕನ್ನು ಹೊರತುಪಡಿಸಿ ಇತರ ಯಾವುದೇ ಹಕ್ಕಿಗೆ (ಅಂಥ ಇತರ ಹಕ್ಕನ್ನು ಈ ಪ್ರಕರಣದಲ್ಲಿ ಇನ್ನುಮುಂದೆ ತಪ್ಪಿನ ತತ್ವದ ಮೇಲಿನ ಹಕ್ಕು ಎಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧದ ಮೇರೆಗೆ ಆ ಬಗ್ಗೆ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಇರುವ ಇತರ ಯಾವುದೇ ಹಕ್ಕಿಗೆ ಜೊತೆಯಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ 140ನೇ ಪ್ರಕರಣದ ಮೇರೆಗೆ ನಷ್ಟ ಪರಿಹಾರಕ್ಕೆ ಸಂಬಂಧಿಸಿದ ಕ್ಲೇಮನ್ನು ಸಾಧ್ಯವಾದಷ್ಟು ತ್ವರಿತವಾಗಿ ವಿಲೆ ಮಾಡತಕ್ಕದ್ದು ಮತ್ತು ಅಂಥ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ 140ನೇ ಪ್ರಕರಣದ ಮೇರೆಗೆ ಮತ್ತು ತಪ್ಪಿನ ತತ್ವದ ಮೇಲಿನ ಯಾವುದೇ ಹಕ್ಕಿಗೆ ಅನುಸಾರವಾಗಿ ಸಹ ನಷ್ಟ ಪರಿಹಾರದ ಕ್ಲೇಮನ್ನು ಮೇಲೆ ಹೇಳಿದಂತೆ ಮೊದಲು ವಿಲೆ ಮಾಡತಕ್ಕದ್ದು.

(3) (1)ನೆಯ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾರೇ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ 140ನೇ ಪ್ರಕರಣದ ಮೇರೆಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಯು, ತಪ್ಪಿನ ತತ್ವದ ಮೇಲಿನ ಹಕ್ಕಿಗೆ ಅನುಸಾರವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಕೂಡ ಹೊಣೆಗಾರನಾಗಿದ್ದಲ್ಲಿ, ಹಾಗೆ ಹೊಣೆಗಾರನಾಗಿರುವ ವ್ಯಕ್ತಿಯು ಮೊದಲು ಹೇಳಿದ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು, ಮತ್ತು,-

(ಎ) ಮೊದಲು ಹೇಳಿದ ನಷ್ಟ ಪರಿಹಾರದ ಮೊಬಲಗು, ಎರಡನೆಯದಾಗಿ ಹೇಳಿದ ನಷ್ಟ ಪರಿಹಾರದ ಮೊಬಲಗಿಗಿಂತ ಕಡಿಮೆಯಾಗಿದ್ದರೆ (ಮೊದಲು ಹೇಳಿದ ನಷ್ಟ ಪರಿಹಾರದ ಜೊತೆಗೆ) ಎರಡನೆಯದಾಗಿ ಹೇಳಿದ ನಷ್ಟ ಪರಿಹಾರವು ಮೊದಲು ಹೇಳಿದ ನಷ್ಟ ಪರಿಹಾರದ ಮೊಬಲಗನ್ನು ಎಷ್ಟು ಮೊತ್ತದಿಂದ ಮೀರುವುದೋ ಅದಕ್ಕೆ ಸಮನಾಗಿರುವಷ್ಟನ್ನು ಮಾತ್ರ ಅವನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು;

(ಬಿ) ಮೊದಲು ಹೇಳಿದ ನಷ್ಟ ಪರಿಹಾರದ ಮೊಬಲಗು, ಎರಡನೆಯದಾಗಿ ಹೇಳಿದ ನಷ್ಟ ಪರಿಹಾರದ ಮೊಬಲಗಿಗೆ ಸಮನಾಗಿರುವಲ್ಲಿ ಅಥವಾ ಅದಕ್ಕಿಂತ ಹೆಚ್ಚಾಗಿರುವಲ್ಲಿ, ಅವನು ಎರಡನೆಯದಾಗಿ ಹೇಳಿದ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದಲ್ಲ.

142. ಖಾಯಂ ಅಸಮರ್ಥತೆ:- ಈ ಅಧ್ಯಾಯದ ಉದ್ದೇಶಗಳಿಗಾಗಿ, ವ್ಯಕ್ತಿಯು ಖಾಯಂ ಅಸಮರ್ಥತೆ ಹೊಂದಿದ ಕಾರಣದಿಂದಾಗಿ,-

(ಎ) ಎರಡೂ ಕಣ್ಣುಗಳಲ್ಲಿ ಯಾವುದಾದರೊಂದರ ದೃಷ್ಟಿ ಶಕ್ತಿಯನ್ನು ಅಥವಾ ಎರಡೂ ಕಿವಿಗಳಲ್ಲಿ ಯಾವುದಾದರೊಂದರ ಶ್ರವಣ ಶಕ್ತಿಯನ್ನು ಖಾಯಂ ಆಗಿ ಕಳೆದುಕೊಳ್ಳುವುದನ್ನು ಅಥವಾ ಯಾವುದೇ ಅವಯವ ಅಥವಾ ಕೀಲನ್ನು ಕಳೆದುಕೊಳ್ಳುವುದನ್ನು; ಅಥವಾ

(ಬಿ) ಯಾವುದೇ ಅವಯವದ ಅಥವಾ ಕೀಲಿನ ಶಕ್ತಿಗಳು ನಾಶಗೊಳ್ಳುವುದನ್ನು ಅಥವಾ ಖಾಯಂ ಆಗಿ ದುರ್ಬಲಗೊಳ್ಳುವುದನ್ನು; ಅಥವಾ

(ಸಿ) ತಲೆ ಅಥವಾ ಮುಖ ಖಾಯಂ ಆಗಿ ವಿರೂಪಗೊಳ್ಳುವುದನ್ನು

- ಒಳಗೊಂಡಿರುವ ಯಾವುದೇ ಕ್ಷತಿ ಅಥವಾ ಕ್ಷತಿಗಳನ್ನು ಅಂಥ ವ್ಯಕ್ತಿಯು ಅನುಭವಿಸಿದ್ದರೆ, 140 ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಸ್ವರೂಪದ ಅಪಘಾತದಿಂದ ಆ ವ್ಯಕ್ತಿಗೆ ಖಾಯಂ ಅಸಮರ್ಥತೆ ಉಂಟಾಗಿದೆಯೆಂದು ಭಾವಿಸತಕ್ಕದ್ದು.

143. 1923 ರ 8 ನೇ ಅಧಿನಿಯಮದ ಮೇರೆಗಿನ ಕೆಲವು ಕ್ಲೇಮುಗಳಿಗೆ ಈ ಅಧ್ಯಾಯದ ಅನ್ವಯ:- **ಈ ಅಧ್ಯಾಯದ ಉಪಬಂಧಗಳು, 140ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಸ್ವರೂಪದ ಒಂದು ಅಪಘಾತದಿಂದ ಯಾರೇ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923ರ ಮೇರೆಗೆ ನಷ್ಟ ಪರಿಹಾರಕ್ಕೆ ಸಂಬಂಧಿಸಿದ ಯಾವುದೇ ಕ್ಲೇಮಿಗೂ ಸಹ ಅನ್ವಯಿಸತಕ್ಕದ್ದು ಮತ್ತು ಈ ಉದ್ದೇಶಗಳಿಗಾಗಿ ಸದರಿ ಉಪಬಂಧಗಳನ್ನು ಅವಶ್ಯಕ ಮಾರ್ಪಾಡುಗಳೊಂದಿಗೆ ಆ ಅಧಿನಿಯಮದ ಭಾಗವೆಂಬಂತೆ ಭಾವಿಸತಕ್ಕದ್ದು.**

144. ಅಧ್ಯಾರೋಹಿ ಪರಿಣಾಮ:- **ಈ ಅಧ್ಯಾಯದ ಉಪಬಂಧಗಳು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಇತರೆ ಯಾವುದೇ ಉಪಬಂಧದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.**

## ಅಧ್ಯಾಯ - **XI**

### ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯದ ಸಂಬಂಧದಲ್ಲಿ ಮೋಟಾರು ವಾಹನಗಳ ವಿಮೆ

145. ಪರಿಭಾಷೆಗಳು:- **ಈ ಅಧ್ಯಾಯದಲ್ಲಿ,-**

(ಎ) "ಅಧಿಕೃತ ವಿಮೆಗಾರ" ಎಂದರೆ ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57) ಮತ್ತು ಆ ಅಧಿನಿಯಮದ ಮೇರೆಗೆ ಸಾಮಾನ್ಯ ವಿಮಾ ವ್ಯವಹಾರವನ್ನು ಮಾಡಲು ಅಧಿಕೃತಗೊಂಡ ಯಾವುದೇ ಸರ್ಕಾರಿ ವಿಮಾ ನಿಧಿಯ ಮೇರೆಗೆ ಭಾರತದಲ್ಲಿ ತತ್ಕಾಲದಲ್ಲಿ ಸಾಮಾನ್ಯ ವಿಮೆ ವ್ಯವಹಾರ ನಡೆಸುವ ವಿಮೆಗಾರ;

(ಬಿ) "ವಿಮಾ ಪ್ರಮಾಣ ಪತ್ರ" ಎಂದರೆ 147ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಅಧಿಕೃತ ವಿಮೆಗಾರನು ಕೊಟ್ಟ ವಿಮಾ ಪ್ರಮಾಣ ಪತ್ರ ಮತ್ತು ನಿಯಮಿಸಬಹುದಾದ ಅಗತ್ಯತೆಗಳನ್ನು ಪಾಲಿಸುವ ನಷ್ಟಪೂರ್ತಿ ಪತ್ರವನ್ನು ಮತ್ತು ಒಂದು ವಿಮೆಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಪ್ರಮಾಣ ಪತ್ರಗಳನ್ನು ಕೊಟ್ಟಿರುವಲ್ಲಿ ಅಥವಾ ಪ್ರಮಾಣ ಪತ್ರದ ಪ್ರತಿಯನ್ನು ಕೊಟ್ಟಿರುವಲ್ಲಿ, ಸಂದರ್ಭಾನುಸಾರ, ಆ ಎಲ್ಲ ಪ್ರಮಾಣ ಪತ್ರಗಳನ್ನು ಅಥವಾ ಆ ಪ್ರತಿಯನ್ನು ಒಳಗೊಳ್ಳುತ್ತದೆ;

(ಸಿ) ಯಾರೇ ವ್ಯಕ್ತಿಯ ಮರಣ ಅಥವಾ ದೇಹಕ್ಷತಿಗೆ ಸಂಬಂಧಿಸಿ ಉಪಯೋಗಿಸಿದಾಗಲೆಲ್ಲ "ಹೊಣೆಗಾರಿಕೆ"ಯು 140ನೇ ಪ್ರಕರಣದ ಮೇರೆಗೆ ಅದರ ಬಗೆಗಿನ ಹೊಣೆಗಾರಿಕೆಯನ್ನು ಒಳಗೊಳ್ಳುತ್ತದೆ;

(ಡಿ) "ವಿಮಾ ಪಾಲಿಸಿ"ಯು "ವಿಮಾ ಪ್ರಮಾಣ ಪತ್ರ"ವನ್ನು ಒಳಗೊಳ್ಳುತ್ತದೆ;

(ಇ) "ಸ್ವತ್ತು" ಎಂಬುದು ಮೋಟಾರು ವಾಹನದಲ್ಲಿ ಒಯ್ಯಲಾಗುವ ಸರಕುಗಳು, ರಸ್ತೆಗಳು, ಸೇತುವೆಗಳು, ಅಡಿಗಾಲುವೆಗಳು, ಒಡ್ಡುದಾರಿಗಳು, ಮರಗಳು, ಮಾರ್ಗದರ್ಶಕ ಸ್ಥಂಭಗಳು ಮತ್ತು ಮೈಲಿಗಲ್ಲುಗಳನ್ನು ಒಳಗೊಳ್ಳುತ್ತದೆ;

(ಎಫ್) "ಪರಸ್ಪರ ಪ್ರವರ್ತಕ ದೇಶ" ಎಂದರೆ ಪರಸ್ಪರತೆಯ ಆಧಾರದ ಮೇಲೆ, ಈ ಅಧ್ಯಾಯದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು ಪರಸ್ಪರ ಪ್ರವರ್ತಕ ದೇಶವೆಂದು ರಾಜಪತ್ರದಲ್ಲಿ ಅಧಿಸೂಚಿಸುವಂಥ ಯಾವುದೇ ದೇಶ;

(ಜಿ) "ಮೂರನೇ ಪಕ್ಷಕಾರ" ಎಂಬುದು ಸರ್ಕಾರವನ್ನು ಒಳಗೊಳ್ಳುತ್ತದೆ.

146. ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯದ ಬಗ್ಗೆ ವಿಮೆಯ ಅವಶ್ಯಕತೆ:- (1) ಸಂದರ್ಭಾನುಸಾರ, ಪ್ರಯಾಣಿಕನಾಗಿ ಅಲ್ಲದೆ ಒಬ್ಬ ವ್ಯಕ್ತಿಯು ಅಥವಾ ಇತರ ವ್ಯಕ್ತಿಯು ಒಂದು ಮೋಟಾರು ವಾಹನವನ್ನು ಬಳಸುವುದಕ್ಕೆ ಸಂಬಂಧಿಸಿದ, ಈ ಅಧ್ಯಾಯದ ಅಗತ್ಯತೆಗಳನ್ನು ಪಾಲಿಸುವಂಥ ವಿಮಾ ಪತ್ರವು ಜಾರಿಯಲ್ಲಿದ್ದ ಹೊರತು, ಆ ವ್ಯಕ್ತಿಯು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಆ ವಾಹನವನ್ನು ನಡೆಸತಕ್ಕದ್ದಲ್ಲ ಅಥವಾ ಆ ಇತರ ವ್ಯಕ್ತಿಯು ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ನಡೆಸಲು ಅವಕಾಶ ಕೊಡತಕ್ಕದ್ದಲ್ಲ:

ಪರಂತು, ಗಂಡಾಂತರಕಾರಿ ಅಥವಾ ಅಪಾಯಕಾರಿ ಸರಕುಗಳನ್ನು ಒಯ್ಯುವ ಅಥವಾ ಒಯ್ಯಲು ಮೀಸಲಿಟ್ಟ ವಾಹನದ ಸಂದರ್ಭದಲ್ಲಿ, ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6)ರ ಮೇರೆಗೆ ವಿಮಾ ಪಾಲಿಸಿ ಇರತಕ್ಕದ್ದು.

ವಿವರಣೆ:- ಕೇವಲ ಸಂಬಳದ ನೌಕರನಾಗಿ ಮೋಟಾರು ವಾಹನವನ್ನು ನಡೆಸುತ್ತಿರುವ ಒಬ್ಬ ವ್ಯಕ್ತಿಯು, ಮೋಟಾರು ವಾಹನದ ಬಳಕೆಗೆ ಸಂಬಂಧಿಸಿ ಈ ಉಪಪ್ರಕರಣದ ಮೇರೆಗೆ ಅಗತ್ಯವಾದ ಯಾವುದೇ ವಿಮಾ ಪತ್ರವು ಜಾರಿಯಲ್ಲಿಲ್ಲದಿರುವಾಗ ಅಂಥ ವಿಮಾ ಪತ್ರವು ಜಾರಿಯಲ್ಲಿಲ್ಲವೆಂದು ಆ ವ್ಯಕ್ತಿಯು ತಿಳಿದಿದ್ದ ಅಥವಾ ನಂಬಲು ಕಾರಣವಿದ್ದ ಹೊರತು, ಈ ಉಪಪ್ರಕರಣವನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದಲ್ಲ.

(2) ಯಾವುದೇ ವಾಣಿಜ್ಯೋದ್ಯಮಗಳಿಗೆ ಸಂಬಂಧಪಡದ ಮತ್ತು ಸರ್ಕಾರದ ಉದ್ದೇಶಗಳಿಗೆ ಬಳಸುವ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಒಡೆತನದ ಯಾವುದೇ ವಾಹನಕ್ಕೆ (1)ನೇ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(3) ಸಮುಚಿತ ಸರ್ಕಾರವು, ಆದೇಶದ ಮೂಲಕ, ಈ ಕೆಳಕಂಡ ಯಾವುವೇ ಪ್ರಾಧಿಕಾರಗಳ ಒಡೆತನದ ಯಾವುದೇ ವಾಹನಕ್ಕೆ (1)ನೇ ಉಪಪ್ರಕರಣದ ಪ್ರವರ್ತನೆಯಿಂದ ವಿನಾಯಿತಿ ಕೊಡಬಹುದು, ಎಂದರೆ:-

(ಎ) ಯಾವುದೇ ವಾಣಿಜ್ಯೋದ್ಯಮಕ್ಕೆ ಸಂಬಂಧಿಸಿದ ಸರ್ಕಾರದ ಉದ್ದೇಶಗಳಿಗಾಗಿ ವಾಹನವನ್ನು ಬಳಸಿದರೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ;

(ಬಿ) ಯಾವುದೇ ಸ್ಥಳೀಯ ಪ್ರಾಧಿಕಾರ;

(ಸಿ) ಯಾವುದೇ ರಾಜ್ಯ ಸಾರಿಗೆ ಉದ್ಯಮ:

ಪರಂತು, ಆ ಪ್ರಾಧಿಕಾರದ ವಾಹನದ ಬಳಕೆಯಿಂದ ಉದ್ಭವಿಸುವ ಪ್ರಾಧಿಕಾರದ ಅಥವಾ ಅದರ ನಿಯೋಜನೆಯಲ್ಲಿರುವ ಯಾರೇ ವ್ಯಕ್ತಿಯು ಮೂರನೇ ಪಕ್ಷಕಾರನ ಬಗೆಗಿನ ಯಾವುದೇ ಹೊಣೆಗಾರಿಕೆಯನ್ನು ಹೊರುವ ಬಗ್ಗೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ ಆ ಪ್ರಾಧಿಕಾರವು ಒಂದು ನಿಧಿಯನ್ನು ಸ್ಥಾಪಿಸಿ ನಿರ್ವಹಿಸಿದ್ದ ಹೊರತು ಯಾವುದೇ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಅಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಸಮುಚಿತ ಸರ್ಕಾರ" ಎಂದರೆ ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ, ಮತ್ತು,-

(i) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಒಡೆತನವನ್ನು ಹೊಂದಿರುವ ಯಾವುದೇ ನಿಗಮ ಅಥವಾ ಕಂಪನಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಎಂದು ಅರ್ಥ;

(ii) ಕೇಂದ್ರ ಸರ್ಕಾರ ಅಥವಾ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ಒಡೆತನವನ್ನು ಹೊಂದಿರುವ ಯಾವುದೇ ನಿಗಮ ಅಥವಾ ಕಂಪನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಎಂದು ಅರ್ಥ;

(iii) ಇತರ ಯಾವುದೇ ರಾಜ್ಯ ಸಾರಿಗೆ ಉದ್ಯಮ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ, ಆ ಉದ್ಯಮ ಅಥವಾ ಪ್ರಾಧಿಕಾರದ ಮೇಲೆ ನಿಯಂತ್ರಣವುಳ್ಳ ಸರ್ಕಾರ ಎಂದು ಅರ್ಥ.

147. ವಿಮಾ ಪಾಲಿಸಿಗಳ ಅಗತ್ಯತೆಗಳು ಮತ್ತು ಹೊಣೆಗಾರಿಕೆಯ ಪರಿಮಿತಿಗಳು:- (1) ಈ ಅಧ್ಯಾಯದ ಅಗತ್ಯತೆಗಳನ್ನು ಪಾಲಿಸಲು ವಿಮಾ ಪಾಲಿಸಿಯು,-

(ಎ) ಅಧಿಕೃತ ವಿಮೆಗಾರನಾದ ಒಬ್ಬ ವ್ಯಕ್ತಿಯಿಂದ ನೀಡಲಾದ; ಮತ್ತು

(ಬಿ) (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಗಳ ಬಗ್ಗೆ,-

(i) ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಬಳಸುವುದರಿಂದ ವಾಹನದಲ್ಲಿ ಒಯ್ಯಲಾದ ಸರಕುಗಳ ಒಡೆಯ ಅಥವಾ ಅವನ ಅಧಿಕೃತ ಪ್ರತಿನಿಧಿಯನ್ನು ಒಳಗೊಂಡಂತೆ ಯಾರೇ ವ್ಯಕ್ತಿಗೆ ಉಂಟಾಗಬಹುದಾದ ಮರಣ ಅಥವಾ ದೈಹಿಕ ಕ್ಷತಿ ಅಥವಾ ಮೂರನೇ ಪಕ್ಷಕಾರನ ಸ್ವತ್ತಿಗುಂಟಾಗುವ ಹಾನಿಯ ಬಗ್ಗೆ ಅವನು ಹೊರಬೇಕಾದ ಹೊಣೆಯ ಸಂಬಂಧದಲ್ಲಿ;

(ii) ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕ ಸೇವಾ ವಾಹನವನ್ನು ಉಪಯೋಗಿಸುವುದರಿಂದ ಅದರ ಯಾರೇ ಪ್ರಯಾಣಿಕನಿಗೆ ಉಂಟಾಗುವ ಅಥವಾ ಉದ್ಭವಿಸುವ ಮರಣ ಅಥವಾ ದೈಹಿಕ ಕ್ಷತಿಯ ಸಂಬಂಧದಲ್ಲಿ

- ಮಾಡಿದ ವಿಮಾ ಪಾಲಿಸಿಯಾಗಿರತಕ್ಕದ್ದು:

ಪರಂತು,-

(i) (ಎ) ವಾಹನವನ್ನು ನಡೆಸುವುದರಲ್ಲಿ ತೊಡಗಿರುವ; ಅಥವಾ

(ಬಿ) ಅದು ಸಾರ್ವಜನಿಕ ಸೇವಾ ವಾಹನವಾದರೆ ಆ ವಾಹನದ ನಿರ್ವಾಹಕನಾಗಿ ಅಥವಾ ವಾಹನದಲ್ಲಿ ಟಿಕೆಟ್ಟುಗಳನ್ನು ಪರೀಕ್ಷಿಸುವ ಕೆಲಸದಲ್ಲಿ ತೊಡಗಿರುವ; ಅಥವಾ

(ಸಿ) ಅದು ಸರಕು ವಾಹನವಾದರೆ ಆ ವಾಹನದಲ್ಲಿ ಪ್ರಯಾಣ ಮಾಡುತ್ತಿರುವ

- ಅಂಥ ಯಾರೇ ನೌಕರನ ಮರಣ ಅಥವಾ ದೈಹಿಕ ಕ್ಷತಿಗೆ ಸಂಬಂಧಿಸಿದಂತೆ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8)ರ ಮೇರೆಗೆ ಉದ್ಭವಿಸುವ ಹೊಣೆಗಾರಿಕೆಯಲ್ಲದ ವಿಮಾ ಪಾಲಿಸಿಯ ಮೂಲಕ ವಿಮೆ ಮಾಡಿಸಿದ ವ್ಯಕ್ತಿಯು ನೌಕರನಿಗೆ, ಅವನ ನೇಮಕಾತಿಯಿಂದ ಉದ್ಭವಿಸುವ ಮತ್ತು ಅವನು ಆ ಕೆಲಸದಲ್ಲಿರುವಾಗ ಉಂಟಾದ ಮರಣದ ಬಗೆಗಿನ ಅಥವಾ ಅವನ ನೇಮಕಾತಿಯಿಂದ ಉದ್ಭವಿಸುವ ಅಥವಾ ಅವನು ಆ ಕೆಲಸದಲ್ಲಿರುವಾಗ ಉಂಟಾಗುವ ದೈಹಿಕ ಕ್ಷತಿಯ ಬಗೆಗಿನ ಹೊಣೆಗಾರಿಕೆಯನ್ನು ಪೂರೈಸತಕ್ಕದ್ದೆಂದು; ಅಥವಾ

(ii) ಯಾವುದೇ ಕರಾರಿನ ಹೊಣೆಗಾರಿಕೆಯನ್ನು ಪೂರೈಸತಕ್ಕದ್ದೆಂದು ವಿಮಾ ಪಾಲಿಸಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

ವಿವರಣೆ:- ಸಂಶಯ ನಿವಾರಣೆಗಾಗಿ, ಯಾರೇ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಯನ್ನು ಮೂರನೇ ಪಕ್ಷಕಾರನ ಯಾವುದೇ ಸ್ವತ್ತಿಗೆ ಆದ ಹಾನಿಯನ್ನು ಮರಣಹೊಂದಿದ ಅಥವಾ ಕ್ಷತಿಗೊಂಡ ವ್ಯಕ್ತಿಯು ಹಾನಿಗೊಳಗಾದ ಸ್ವತ್ತು, ಅಪಘಾತದ ಸಮಯದಲ್ಲಿ ಸಾರ್ವಜನಿಕ ಸ್ಥಳದಲ್ಲಿರದಿದ್ದರೂ ಕೂಡ, ಅಪಘಾತಕ್ಕೆ ಕಾರಣವಾದ ಕೃತ್ಯ ಅಥವಾ ಲೋಪವು ಸಾರ್ವಜನಿಕ ಸ್ಥಳದಲ್ಲಿ ನಡೆದಿದ್ದರೆ, ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಬಳಸುವ ಕಾರಣದಿಂದ ಉಂಟಾದುದೆಂದು ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(2) (1)ನೇ ಉಪಪ್ರಕರಣದ ಪರಂತುಕಕ್ಕೆ ಒಳಪಟ್ಟು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಮಾ ಪಾಲಿಸಿ ಯಾವುದೇ ಅಪಘಾತದಿಂದುಂಟಾದ ಯಾವುದೇ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಈ ಮುಂದೆ ತಿಳಿಸಿರುವ ಪರಿಮಿತಿಗಳವರೆಗೆ ರಕ್ಷಣೆ ಒದಗಿಸತಕ್ಕದ್ದು, ಎಂದರೆ:-

(ಎ) (ಬಿ) ಖಂಡದಲ್ಲಿ ಉಪಬಂಧಿಸಿರುವಂತೆ ಹೊರತು, ವಹಿಸಿದ ಹೊಣೆಗಾರಿಕೆಯ ಮೊಬಲಗು;

(ಬಿ) ಮೂರನೇ ಪಕ್ಷಕಾರನ ಸ್ವತ್ತಿಗೆ ಉಂಟಾದ ಹಾನಿಯ ಸಂಬಂಧದಲ್ಲಿ ಆರು ಸಾವಿರ ರೂಪಾಯಿಗಳ ಪರಿಮಿತಿ:

ಪರಂತು, ಯಾವುದೇ ಪರಿಮಿತ ಹೊಣೆಗಾರಿಕೆ ಸಹಿತ ನೀಡಲಾದ ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ವಿಮಾ ಪಾಲಿಸಿಯು ಅಂಥ ಪ್ರಾರಂಭಕ್ಕೆ ಮುಂಚೆ ನಾಲ್ಕು ತಿಂಗಳ ಅವಧಿಗಾಗಿ ಜಾರಿಗೆ ಬರಬಹುದಾದ ಅಥವಾ ಅಂಥ ಪಾಲಿಸಿಯ ಕೊನೆಯ ದಿನಾಂಕದವರೆಗೆ, ಅವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಯತಕ್ಕದ್ದು.

(3) ವಿಮಾ ಪಾಲಿಸಿಯನ್ನು ಮಾಡಿಸಿರುವ ವ್ಯಕ್ತಿಯ ಪರವಾಗಿ ವಿಮಾಕಾರನು ಯಾವ ಷರತ್ತಿಗೊಳಪಟ್ಟು ವಿಮಾ ಪತ್ರವನ್ನು ನೀಡಲಾಗಿದೆಯೋ ಆ ಯಾವುವೇ ಷರತ್ತುಗಳನ್ನು ಮತ್ತು ಇತರ ಯಾವುವೇ ನಿಯಮಿಸಲಾದ ವಿಷಯಗಳ ನಿಯಮಿಸಿರುವ ವಿವರಗಳನ್ನೊಳಗೊಂಡ ವಿಮಾ ಪ್ರಮಾಣ ಪತ್ರವನ್ನು ನಿಯಮಿಸಲಾದ ನಮೂನೆಯಲ್ಲಿ ನೀಡಿದ ಹೊರತು ಮತ್ತು ನೀಡುವವರೆಗೆ, ಈ ಅಧ್ಯಾಯದ ಉದ್ದೇಶಗಳಿಗಾಗಿ ಪಾಲಿಸಿಯು ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ನಮೂನೆಗಳನ್ನು, ವಿವರಗಳನ್ನು ಮತ್ತು ವಿಷಯಗಳನ್ನು ನಿಯಮಿಸಬಹುದು.

(4) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ವಿಮಾಕಾರನು ರಕ್ಷಾಪತ್ರ ನೀಡಿದ ನಂತರ ನಿಯಮಿಸಿದ ಸಮಯದೊಳಗಾಗಿ ವಿಮಾ ಪಾಲಿಸಿಯನ್ನು ಕೊಡದಿದ್ದಲ್ಲಿ, ರಕ್ಷಾ ಪತ್ರದ ಕಾನೂನು ಮಾನ್ಯತೆಯ ಅವಧಿಯು ಮುಗಿದ ಏಳು ದಿನಗಳೊಳಗೆ ವಿಮಾಕಾರನು, ಆ ರಕ್ಷಾಪತ್ರಕ್ಕೆ ಸಂಬಂಧಿಸಿರುವ ವಾಹನವು ಯಾರ ಅಭಿಲೇಖಗಳಲ್ಲಿ ನೋಂದಾಯಿತವಾಗಿದೆಯೋ ಆ ನೋಂದಣಿ ಪ್ರಾಧಿಕಾರಿಗೆ ಅಥವಾ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಇತರ ಪ್ರಾಧಿಕಾರಿಗೆ, ಈ ಸಂಗತಿಯನ್ನು ತಿಳಿಸತಕ್ಕದ್ದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ವಿಮಾ ಪಾಲಿಸಿಯನ್ನು ನೀಡುವ ವ್ಯಕ್ತಿಯು, ವಿಮಾ ಪಾಲಿಸಿಯಲ್ಲಿ ಗೊತ್ತುಪಡಿಸಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಗಳಿಗೆ, ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ವರ್ಗಗಳ ಸಂಬಂಧದಲ್ಲಿ ವಿಮಾ ಪಾಲಿಸಿಯು ನಷ್ಟ ಭರ್ತಿಮಾಡಲು ಒಳಗೊಳ್ಳುವುದೆಂದು ತಾತ್ಪರ್ಯವಾಗಿರುವ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಹೊಣೆಗಾರನಾಗತಕ್ಕದ್ದು.

148. ಪರಸ್ಪರ ಸಂಬಂಧವುಳ್ಳ ದೇಶಗಳಲ್ಲಿ ಕೊಡಲಾದ ವಿಮಾ ಪಾಲಿಸಿಗಳ ಕಾನೂನು ಮಾನ್ಯತೆ:- ಭಾರತ ಮತ್ತು ಯಾವುದೇ ಪರಸ್ಪರ ಸಂಬಂಧವುಳ್ಳ ದೇಶಗಳ ನಡುವಣ ವ್ಯವಸ್ಥೆಗನುಸಾರವಾಗಿ, ಆ ಸಂಬಂಧಪಟ್ಟ ದೇಶದಲ್ಲಿ ನೋಂದಾಯಿತವಾದ ಯಾವುದೇ ಮೋಟಾರು ವಾಹನವು ಎರಡೂ ದೇಶಗಳಿಗೂ ಸಾಮಾನ್ಯವಾಗಿರುವ ಯಾವುದೇ ಮಾರ್ಗದಲ್ಲಿ ಅಥವಾ ಯಾವುದೇ ಕ್ಷೇತ್ರದಲ್ಲಿ ಸಂಚರಿಸುತ್ತಿದ್ದು ಮತ್ತು ಸಂಬಂಧಪಟ್ಟ ದೇಶದಲ್ಲಿ ಆ ವಾಹನದ ಬಳಕೆಗೆ ಸಂಬಂಧಿಸಿದಂತೆ ಆ ದೇಶದಲ್ಲಿ ಜಾರಿಯಲ್ಲಿರುವ ವಿಮೆ ಕಾನೂನಿನ ಅಗತ್ಯತೆಗಳನ್ನು ಪಾಲಿಸುವ ವಿಮಾ ಪಾಲಿಸಿಯು ಜಾರಿಯಲ್ಲಿದ್ದಾಗ, 147ನೇ ಪ್ರಕರಣದಲ್ಲಿ ಏನೇ ಇದ್ದರೂ, ಆದರೆ 164ನೇ ಪ್ರಕರಣದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಈ ಅಧ್ಯಾಯದ ಅಗತ್ಯತೆಗಳನ್ನು ವಿಮಾ ಪಾಲಿಸಿಯು ಪಾಲಿಸಿದ್ದರೆ ಹೇಗೋ ಹಾಗೆ ಯಾವ ಮಾರ್ಗ ಅಥವಾ ಕ್ಷೇತ್ರದ ಸಂಬಂಧದಲ್ಲಿ ವ್ಯವಸ್ಥೆಯನ್ನು ಮಾಡಲಾಗಿದೆಯೋ ಆ ಮಾರ್ಗ ಅಥವಾ ಕ್ಷೇತ್ರದಾದ್ಯಂತ ಅಂಥ ವಿಮಾ ಪಾಲಿಸಿಯು ಪರಿಣಾಮಕಾರಿಯಾಗಿರತಕ್ಕದ್ದು.

149. ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯಗಳಿಗೆ ಸಂಬಂಧಿಸಿದಂತೆ ವಿಮೆ ಮಾಡಿರುವ ವ್ಯಕ್ತಿಗಳ ವಿರುದ್ಧ ನೀಡಿದ ತೀರ್ಪನ್ನು ಪಾಲಿಸುವಲ್ಲಿ ವಿಮಾಕಾರನ ಕರ್ತವ್ಯ:- (1) 147ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿಮಾ ಪ್ರಮಾಣ ಪತ್ರವನ್ನು ವಿಮೆ ಮಾಡಿಸಿರುವ ವ್ಯಕ್ತಿಗೆ ನೀಡಿದ ತರುವಾಯ, 147ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ (ವಿಮಾ ಪಾಲಿಸಿಯ ನಿಬಂಧನೆಗಳ ಮೂಲಕ ಒಳಗೊಂಡಿರುವ ಹೊಣೆಯಾಗಿದ್ದು) ಅಥವಾ 163ಎ ಪ್ರಕರಣದ ಉಪಬಂಧಗಳ ಮೇರೆಗೆ ವಿಮಾ ಪಾಲಿಸಿಯು ಒಳಗೊಳ್ಳಬೇಕೆಂದು ಅಗತ್ಯಪಡಿಸಲಾದಂಥ ಯಾವುದೇ ಅಂಥ ಹೊಣೆಗಾರಿಕೆಯ ಬಗ್ಗೆ ವಿಮಾ ಪತ್ರದ ಮೂಲಕ ವಿಮೆ ಮಾಡಿಸುವ ಯಾರೇ ವ್ಯಕ್ತಿಯ ವಿರುದ್ಧ ತೀರ್ಪನ್ನು ಅಥವಾ ಐತೀರ್ಪನ್ನು ಪಡೆದರೆ ವಿಮಾಕಾರನು ವಿಮಾ ಪಾಲಿಸಿಯಿಂದ ತಪ್ಪಿಸಿಕೊಳ್ಳಲು ಅಥವಾ ರದ್ದುಪಡಿಸಲು ಹಕ್ಕುಳ್ಳವನಾಗಿರಬಹುದಾಗಿದ್ದರೂ ಅಥವಾ ಅದರಿಂದ ತಪ್ಪಿಸಿಕೊಂಡಿದ್ದರೂ ಅಥವಾ ಅದನ್ನು ರದ್ದುಪಡಿಸಿದ್ದರೂ ಕೂಡ ಅವನು ಈ ಪ್ರಕರಣದ ಉಪಬಂಧಗಳಿಗೊಳಪಟ್ಟು ಡಿಕ್ರಿಯ ಪ್ರಯೋಜನವನ್ನು ಹೊಂದಲು ಹಕ್ಕುಳ್ಳ ವ್ಯಕ್ತಿಗೆ, ಆ ಮೇರೆಗೆ ಸಂದೇಹವಿರುವ ವಿಮಾ ಹಣಕ್ಕೆ ಮೀರದಂತೆ ಯಾವುದೇ ಮೊಬಲಗನ್ನು ಅವನು ತೀರ್ಪುಋಣಿಯಾಗಿದ್ದರೆ ಹೇಗೋ ಹಾಗೆ ಖರ್ಚುಗಳ ಸಂಬಂಧದಲ್ಲಿ ಸಂದೇಹವಿರುವ ಯಾವುದೇ ಮೊಬಲಗು ಮತ್ತು ತೀರ್ಪು ಋಣದ ಮೇಲಿನ ಬಡ್ಡಿಗೆ ಸಂಬಂಧಿಸಿದ ಯಾವುದೇ ಅಧಿನಿಯಮಿತಿಯ ಮೇರೆಗೆ ಆ ಮೊಬಲಗಿನ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯ ಯಾವುದೇ ಮೊಬಲಗಿನ ಸಮೇತ ಸಂದಾಯ ಮಾಡತಕ್ಕದ್ದು.

(2) ಯಾವ ವ್ಯವಹರಣೆಗಳಲ್ಲಿ ತೀರ್ಪು ಕೊಡಲಾಗಿದೆಯೋ ಆ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಆನಂತರ ಆ ವ್ಯವಹರಣೆಗಳನ್ನು ಹೂಡುವ ಬಗ್ಗೆ ಅಪೀಲು ಇತ್ಯರ್ಥವಾಗದೆ ಇದ್ದು, ಅದರ ಮೇಲಿನ ಜಾರಿ ಕ್ರಮಕ್ಕೆ ತಡೆಹಿಡಿಯುವವರೆಗೂ ಆ ತೀರ್ಪಿನ ಬಗ್ಗೆ ನ್ಯಾಯಾಲಯದ ಮೂಲಕ ವಿಮಾಕಾರನಿಗೆ ನೋಟೀಸು ಬಂದ ಹೊರತು, (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಮೊಬಲಗನ್ನು ವಿಮಾಕಾರನು ಸಂದಾಯಮಾಡತಕ್ಕದ್ದಲ್ಲ ಮತ್ತು ಅಂಥ ಯಾವುವೇ ವ್ಯವಹರಣೆಗಳನ್ನು ಹೂಡಿರುವ ಬಗ್ಗೆ ನೋಟೀಸು ಕೊಡಲಾಗಿರುವ ವಿಮಾಕಾರನಿಗೆ ಅದಕ್ಕೆ ಒಬ್ಬ ಪಕ್ಷಕಾರನಾಗಿರಲು ಹಕ್ಕಿರತಕ್ಕದ್ದು ಮತ್ತು ಈ ಕ್ರಮವನ್ನು ಈ ಕೆಳಕಂಡ ಯಾವುವೇ ಕಾರಣಗಳ ಮೇಲೆ ಪ್ರತಿಪಾದಿಸತಕ್ಕದ್ದು, ಎಂದರೆ:-

(ಎ) ಈ ಕೆಳಕಂಡ ಷರತ್ತುಗಳ ಪೈಕಿ, ವಿಮಾಪತ್ರದಲ್ಲಿರುವ ಒಂದು ನಿರ್ದಿಷ್ಟ ಷರತ್ತಿನ ಉಲ್ಲಂಘನೆಯಾಗಿದೆ, ಎಂದರೆ:-

(i) ವಾಹನವನ್ನು,-

(ಎ) ವಿಮಾ ಕರಾರಿನ ದಿನಾಂಕದಂದು, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ವಾಹನವನ್ನು ನಡೆಸಲು ಪರ್ಮಿಟ್ಟಿನಲ್ಲಿ ಒಳಗೊಂಡಿರದ ವಾಹನವಾಗಿದ್ದಲ್ಲಿ, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ; ಅಥವಾ

(ಬಿ) ವ್ಯವಸ್ಥಿತ ವೇಗ ಸ್ಪರ್ಧೆಗಾಗಿ ಮತ್ತು ವೇಗದ ಪರೀಕ್ಷೆಗಾಗಿ; ಅಥವಾ

(ಸಿ) ವಾಹನವು ಸಾರಿಗೆ ವಾಹನವಾಗಿದ್ದಲ್ಲಿ, ಯಾವ ಪರ್ಮಿಟ್ಟಿನ ಮೇರೆಗೆ ಆ ವಾಹನವನ್ನು ಬಳಸಲಾಗುವುದೋ ಆ ಪರ್ಮಿಟ್ಟಿನಲ್ಲಿ ಅವಕಾಶವಿಲ್ಲದ ಉದ್ದೇಶಕ್ಕಾಗಿ; ಅಥವಾ

(ಡಿ) ವಾಹನವು ಮೋಟಾರು ಸೈಕಲ್ ಆಗಿದ್ದಾಗ, ಪಕ್ಕ ಕಾರನ್ನು ಜೋಡಿಸದೆ ಉಪಯೋಗಿಸುವುದನ್ನು ಹೊರತುಪಡಿಸುವ ಷರತ್ತು; ಅಥವಾ

(ii) ಹೆಸರಿಸಲಾದ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಕ್ರಮಬದ್ಧವಾದ ಲೈಸನ್ಸು ಹೊಂದಿರದ ಯಾರೇ ವ್ಯಕ್ತಿಯು ಅಥವಾ ಚಾಲನ ಲೈಸನ್ಸನ್ನು ಹೊಂದಲು ಅಥವಾ ಪಡೆಯಲು ಅನರ್ಹನಾದ ಯಾರೇ ವ್ಯಕ್ತಿಯು, ಆ ಅನರ್ಹತೆಯ ಅವಧಿಯಲ್ಲಿ ಚಾಲನೆ ಮಾಡುವುದನ್ನು ಹೊರತುಪಡಿಸುವ ಷರತ್ತು; ಅಥವಾ

(iii) ಯುದ್ಧ, ಅಂತರ್ಯುದ್ಧ, ದೊಂಬಿ ಅಥವಾ ಪ್ರಜಾಕ್ಷೋಭೆಯ ಪರಿಸ್ಥಿತಿಗಳಿಂದಾದ ಅಥವಾ ಅದಕ್ಕೆ ಸಹಾಯಕವಾದ ಕ್ಷತಿಯ ಬಗೆಗಿನ ಹೊಣೆಗಾರಿಕೆಯನ್ನು ಹೊರತುಪಡಿಸುವ ಷರತ್ತು; ಅಥವಾ

(ಬಿ) ಮುಖ್ಯಾಂಶವನ್ನು ಹೊರಗೆಡಹದೆ ಅಥವಾ ಕೆಲವು ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವ ಸಂಗತಿಯನ್ನು ನಿರೂಪಿಸುವ ಮೂಲಕ ಪಡೆಯಲಾಗಿದೆ ಎಂಬ ಕಾರಣಕ್ಕಾಗಿ ವಿಮಾ ಪಾಲಿಸಿಯು ಶೂನ್ಯವಾಗಿರುತ್ತದೆ.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಯಾವುದೇ ತೀರ್ಪನ್ನು ಪರಸ್ಪರ ಸಂಬಂಧವುಳ್ಳ ದೇಶದ ನ್ಯಾಯಾಲಯದಿಂದ ಪಡೆದಿದ್ದರೆ ಮತ್ತು ವಿದೇಶದ ತೀರ್ಪಿನ ಸಂದರ್ಭದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 13ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ, ಅದು ಯಾವ ವಿಷಯದ ಬಗ್ಗೆ ನ್ಯಾಯ ನಿರ್ಣಯ ಮಾಡಿದೆಯೋ ಅದು ನಿರ್ಣಾಯಕವಾಗಿದ್ದರೆ, (ವಿಮಾಕಾರನು ವಿಮಾ ಅಧಿನಿಯಮ, 1938ರ ಮೇರೆಗೆ ನೋಂದಾಯಿತವಾದ ಮತ್ತು ಪರಸ್ಪರ ಸಂಬಂಧವುಳ್ಳ ದೇಶದಲ್ಲಿನ ಸಂವಾದಿ ಕಾನೂನಿನ ಮೇರೆಗೆ ಅವನು ನೋಂದಾಯಿತನಾಗಿರಲಿ, ಇಲ್ಲದಿರಲಿ) ಡಿಕ್ರಿಯ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳ ವ್ಯಕ್ತಿಗೆ, ಆ ತೀರ್ಪನ್ನು ಭಾರತದ ಒಂದು ನ್ಯಾಯಾಲಯವು ಕೊಟ್ಟಿದ್ದರೆ ಹೇಗೋ ಹಾಗೆ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಹೊಣೆಯಾಗಿರತಕ್ಕದ್ದು:

ಪರಂತು, ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ತೀರ್ಪನ್ನು ಕೊಡಲಾಗಿದೆಯೋ ಆ ವ್ಯವಹರಣೆಗಳು ಪ್ರಾರಂಭವಾಗಿರುವುದಕ್ಕೆ ಮುಂಚೆ ಅಥವಾ ಅನಂತರ, ಆ ವ್ಯವಹರಣೆಗಳನ್ನು ಹೂಡುವ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯದ ಮೂಲಕ ವಿಮಾಕಾರನಿಗೆ ನೋಟೀಸು ಬಂದಿದ್ದ ಹೊರತು ಮತ್ತು ಆ ನೋಟೀಸನ್ನು ಕೊಡಲಾದ ವಿಮಾಕಾರನು ಹಾಗೆ ಪರಸ್ಪರ ಸಂಬಂಧವುಳ್ಳ ದೇಶದ ಸಂವಾದಿ ಕಾನೂನಿನ ಮೇರೆಗೆ, ಆ ವ್ಯವಹರಣೆಗಳಿಗೆ ಒಬ್ಬ ಪಕ್ಷಕಾರನಾಗಲು ಮತ್ತು 2ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂಥ ಕಾರಣಗಳ ಮೇಲೆ ಕ್ರಮವನ್ನು ಪ್ರತಿವಾದಿಸಲು ಹಕ್ಕುಳ್ಳವನಾಗಿದ್ದ ಹೊರತು, ಅಂಥ ಯಾವುದೇ ತೀರ್ಪಿನ ಬಗ್ಗೆ ವಿಮಾಕಾರನು ಯಾವ ಮೊಬಲಗನ್ನೂ ಸಂದಾಯ ಮಾಡತಕ್ಕದ್ದಲ್ಲ.

(4) ಯಾವ ವ್ಯಕ್ತಿಯು ವಿಮೆಯನ್ನು ಮಾಡಿಸಿದ್ದಾನೋ ಆ ವ್ಯಕ್ತಿಗೆ 147ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿಮಾ ಪ್ರಮಾಣ ಪತ್ರವನ್ನು ಕೊಟ್ಟಿರುವಲ್ಲಿ, ಆ ಮೂಲಕ (2)ನೇ ಉಪಪ್ರಕಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಷರತ್ತುಗಳಲ್ಲದೆ ಇತರ ಯಾವುವೇ ಷರತ್ತುಗಳನ್ನು ಉಲ್ಲೇಖಿಸಿ, ವಿಮೆ ಮಾಡಿಸಿದ ವ್ಯಕ್ತಿಗಳ ವಿಮೆಯನ್ನು ನಿರ್ಬಂಧಿಸುವುದೆಂದು ತಾತ್ಪರ್ಯವಾಗುವಷ್ಟರ ಮಟ್ಟಿಗೆ ಆ ವಿಮಾ ಪಾಲಿಸಿಯು, 147ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ, ವಿಮಾ ಪಾಲಿಸಿಯಲ್ಲಿ ಅಡಕವಾಗಬೇಕೆಂದು ಅಗತ್ಯಪಡಿಸಲಾದಂಥ ಹೊಣೆಗಾರಿಕೆಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗಿರತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದ ಆಧಾರದಿಂದ ಮಾತ್ರ, ವಿಮಾ ಪಾಲಿಸಿಯಲ್ಲಿ ಒಳಗೊಂಡಿರುವ, ಯಾರೇ ವ್ಯಕ್ತಿಯ ಯಾವುದೇ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಅಥವಾ ನಿರ್ವಹಣೆಗಾಗಿ ವಿಮಾಕಾರನು ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಆ ವಿಮಾಕಾರನು ಆ ವ್ಯಕ್ತಿಯಿಂದ ವಸೂಲು ಮಾಡಲು ಅವಕಾಶವಿರತಕ್ಕದ್ದು.

(5) ವಿಮಾ ಪಾಲಿಸಿಯಿಂದ ವಿಮೆ ಮಾಡಿಸಿದ ವ್ಯಕ್ತಿಯು ವಹಿಸಿದ ಹೊಣೆಗಾರಿಕೆಗೆ ಸಂಬಂಧಿಸಿ ವಿಮಾದಾರನು ಈ ಪ್ರಕರಣದ ಮೇರೆಗೆ ಸಂದಾಯ ಮಾಡಲು ಬದ್ಧನಾಗತಕ್ಕ ಮೊಬಲಗು, ಆ ಹೊಣೆಗಾರಿಕೆಗೆ ಸಂಬಂಧಿಸಿ ವಿಮಾ ಪಾಲಿಸಿಯ ಮೇರೆಗೆ ಈ ಪ್ರಕರಣದ ಉಪಬಂಧಗಳ ಜೊತೆಗೆ ವಿಮಾದಾರನು ಬದ್ಧನಾಗತಕ್ಕ ಮೊಬಲಗನ್ನು ಮೀರಿದ್ದಲ್ಲಿ ವಿಮಾದಾರನು ಆ ವ್ಯಕ್ತಿಯಿಂದ ಹೆಚ್ಚುವರಿ ಮೊಬಲಗನ್ನು ವಸೂಲು ಮಾಡಲು ಹಕ್ಕು ಹೊಂದಿರತಕ್ಕದ್ದು.

(6) ಈ ಪ್ರಕರಣದಲ್ಲಿ "ಮುಖ್ಯ ಸಂಗತಿ" ಮತ್ತು "ಮುಖ್ಯ ವಿವರ" ಎಂಬ ಪದಾವಳಿಗೆ, ಅನುಕ್ರಮವಾಗಿ, ದೂರದೃಷ್ಟಿಯುಳ್ಳ ವಿಮಾದಾರನು ಸಂಭಾವ್ಯ ನಷ್ಟದ ಹೊಣೆಯನ್ನು ಹೊರಲು ಸಿದ್ಧವಿರುವನೇ ಮತ್ತು ಇದ್ದಲ್ಲಿ ಎಷ್ಟು ಪ್ರೀಮಿಯಂನ ಮೇಲೆ ಮತ್ತು ಯಾವ ಷರತ್ತುಗಳಿಗೊಳಪಟ್ಟು ಎಂಬುದನ್ನು ನಿರ್ಧರಿಸುವಲ್ಲಿ ಅವನ ನಿರ್ಣಯದ ಮೇಲೆ ಪ್ರಭಾವ ಬೀರುವಂತಹ ಸ್ವಭಾವದ ಸಂಗತಿ ಅಥವಾ ವಿವರ ಎಂದು ಅರ್ಥ ಮತ್ತು "ವಿಮಾ ಪಾಲಿಸಿಯ ನಿಬಂಧನೆಗೊಳಪಟ್ಟಿರುವ ಹೊಣೆಗಾರಿಕೆ" ಎಂಬ ಪದಾವಳಿಗೆ ವಿಮಾ ಪಾಲಿಸಿಯಲ್ಲಿ ಅಡಕವಾಗಿರುವ ಅಥವಾ ವಿಮಾದಾರನು ವಿಮಾ ಪಾಲಿಸಿಯಿಂದ ತಪ್ಪಿಸಿಕೊಳ್ಳಲು ಅಥವಾ ರದ್ದುಗೊಳಿಸಲು ಹಕ್ಕುಳ್ಳವನಾಗಿದ್ದ ಹೊರತು ಅಥವಾ ಅದನ್ನು ತಪ್ಪಿಸಿಕೊಂಡಿದ್ದ ಅಥವಾ ರದ್ದುಗೊಳಿಸಿದ್ದ ಹೊರತು, ಹಾಗೆ ಅಡಕವಾಗಬಹುದಾದ ಹೊಣೆಗಾರಿಕೆ ಎಂದು ಅರ್ಥ.

(7) (2)ನೇ ಉಪಪ್ರಕರಣದಲ್ಲಿ ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಯಾವ ವಿಮಾಕಾರನಿಗೆ ಕೊಡಲಾಗಿದೆಯೋ ಆ ವಿಮಾಕಾರನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ತೀರ್ಪು ಅಥವಾ ಐತೀರ್ಪಿನ ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ತೀರ್ಪಿನ ಪ್ರಯೋಜನಕ್ಕೆ, ಸಂದರ್ಭಾನುಸಾರ, (2)ನೇ ಉಪಪ್ರಕರಣದಲ್ಲಿ ಅಥವಾ ಪರಸ್ಪರ ಸಂಬಂಧವುಳ್ಳ ದೇಶದ ಸಂವಾದಿ ಕಾನೂನಿನಲ್ಲಿ ಉಪಬಂಧಿಸಲಾದ ರೀತಿಯಲ್ಲಲ್ಲದೆ, ಹಕ್ಕುಳ್ಳವನಾಗಿರತಕ್ಕ ಯಾರೇ ವ್ಯಕ್ತಿಗೆ ಸಂಬಂಧಿಸಿ ತಾನು ನಿರ್ವಹಿಸತಕ್ಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಹಕ್ಕು ಹೊಂದಿರತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, "ಕ್ಲೇಮು ನ್ಯಾಯ ಮಂಡಲಿ" ಎಂದರೆ 165ನೇ ಪ್ರಕರಣದ ಮೇರೆಗೆ ರಚಿಸಲಾದ ಕ್ಲೇಮು ನ್ಯಾಯ ಮಂಡಲಿ ಮತ್ತು "ಐತೀರ್ಪು" ಎಂದರೆ 168ನೇ ಪ್ರಕರಣದ ಮೇರೆಗೆ ನ್ಯಾಯ ಮಂಡಲಿಯು ನೀಡಿದ ಐತೀರ್ಪು.

150. ವಿಮಾದಾರರ ದಿವಾಳಿಯ ಬಗ್ಗೆ ವಿಮಾಕಾರರ ವಿರುದ್ಧ ಮೂರನೇ ಪಕ್ಷಕಾರರ ಅಧಿಕಾರಗಳು:- (1) ಯಾವೊಬ್ಬ ವ್ಯಕ್ತಿಯು, ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮಾಡಿಕೊಂಡ ಯಾವುದೇ ವಿಮಾ ಕರಾರಿನ ಮೇರೆಗೆ ಒಬ್ಬ ವ್ಯಕ್ತಿಯು ಮೂರನೇ ಪಕ್ಷಕಾರರ ಬಗ್ಗೆ ತಾನು ಗುರಿಯಾಗಬಹುದಾದ ಹೊಣೆಗಾರಿಕೆಯ ವಿರುದ್ಧ ವಿಮೆ ಮಾಡಿಸಿರುವಲ್ಲಿ, ಆಗ,-

(ಎ) ವ್ಯಕ್ತಿಯು ದಿವಾಳಿಯಾಗುವ ಅಥವಾ ತನ್ನ ಸಾಲಿಗರೊಡನೆ ರಾಜಿ ಅಥವಾ ವ್ಯವಸ್ಥೆ ಮಾಡಿಕೊಳ್ಳುವ ಸಂದರ್ಭದಲ್ಲಿ; ಅಥವಾ

(ಬಿ) ವಿಮೆ ಮಾಡಿಸಿಕೊಂಡ ವ್ಯಕ್ತಿಯು ಕಂಪನಿಯಾಗಿರುವಲ್ಲಿ, ಆ ಕಂಪನಿಯ ಸಂಬಂಧದಲ್ಲಿ ಸಮಾಪನ ಆದೇಶವನ್ನು ಮಾಡಿದ ಅಥವಾ ಅದನ್ನು ಸ್ವಯಿಚ್ಛೆಯಿಂದ ಸಮಾಪನ ಮಾಡುವುದಕ್ಕಾಗಿ ನಿರ್ಣಯ ಪಾಸು ಮಾಡಿದ ಅಥವಾ ಕಂಪನಿಯ ವ್ಯವಹಾರದ ಅಥವಾ ಉದ್ಯಮದ ಬಗ್ಗೆ ರಿಸೀವರ್ ಅಥವಾ ವ್ಯವಸ್ಥಾಪಕನನ್ನು ಕ್ರಮಬದ್ಧವಾಗಿ ನೇಮಿಸಲಾದ ಅಥವಾ ಪ್ರಭಾರದಲ್ಲಿರುವ ಅಥವಾ ಅದಕ್ಕೆ ಒಳಪಟ್ಟ ಯಾವುದೇ ಸ್ವತ್ತಿನ ಹಾಲಿ ಭದ್ರತೆಯ ಮೂಲಕ ಭದ್ರತೆಯನ್ನು ಪಡೆದ ಯಾವುದೇ ಬಗೆಯ ಡಿಬೆಂಚರುದಾರರಿಂದ ಅಥವಾ ಅದರ ಪರವಾಗಿ ಸ್ವಾಧೀನಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ,

ಆ ಸಂದರ್ಭಕ್ಕೆ ಮುನ್ನ ಅಥವಾ ಅದರ ತರುವಾಯ ವಿಮೆ ಮಾಡಿಸಿದ ವ್ಯಕ್ತಿಯು ಅಂಥ ಯಾವುದೇ ಹೊಣೆಯನ್ನು ವಹಿಸಿಕೊಂಡರೆ, ವಿಮಾಕಾರನ ವಿರುದ್ಧ ಆ ಹೊಣೆಗಾರಿಕೆಗೆ ಸಂಬಂಧಿಸಿದ ಕರಾರಿನ ಮೇರೆಗಿನ ಅವನ ಅಧಿಕಾರಗಳು ಕಾನೂನಿನ ಯಾವುದೇ ಉಪಬಂಧದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಯಾರ ಬಗ್ಗೆ ಹೊಣೆಗಾರಿಕೆಯನ್ನು ಹಾಗೆ ವಹಿಸಿಕೊಳ್ಳಲಾಗಿತ್ತೋ ಆ ಮೂರನೇ ಪಕ್ಷಕಾರರಿಗೆ ವರ್ಗಾವಣೆ ಆಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) ಮರಣ ಹೊಂದಿದ ಸಾಲಗಾರನ ಸಂಪದದ ಆಡಳಿತಕ್ಕಾಗಿ ದಿವಾಳಿ ಕಾನೂನಿಗನುಸಾರವಾಗಿ ಆದೇಶವನ್ನು ಮಾಡಿರುವಲ್ಲಿ, ಆಗ ಈ ಅಧ್ಯಾಯದ ಉಪಬಂಧಗಳಿಗನುಸಾರ ಮಾಡಿಕೊಂಡ ವಿಮಾ ಕರಾರಿನ ಮೇರೆಗೆ ಯಾವ ಮೂರನೇ ಪಕ್ಷಕಾರನ ವಿರುದ್ಧ ವಿಮೆ ಮಾಡಿಸಲಾಗಿತ್ತೋ ಅವನ ಹೊಣೆಗಾರಿಕೆಯ ಸಂಬಂಧದಲ್ಲಿ ಮೃತ ವ್ಯಕ್ತಿಯಿಂದ ಯಾವುದೇ ಋಣ ಇರುವುದಾಗಿ ದಿವಾಳಿಯಲ್ಲಿ ರುಜುವಾತಾದರೆ, ಆ ಹೊಣೆಗಾರಿಕೆಯ ಸಂಬಂಧದಲ್ಲಿ ವಿಮಾಕಾರನ ವಿರುದ್ಧ ಮೃತಋಣಿಯ ಹಕ್ಕುಗಳು, ಕಾನೂನಿನ ಯಾವುದೇ ಉಪಬಂಧದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಋಣವು ಸಲ್ಲತಕ್ಕ ವ್ಯಕ್ತಿಗೆ ವರ್ಗಾವಣೆ ಆಗತಕ್ಕದ್ದು ಮತ್ತು ಅವನಲ್ಲಿ ನಿಹಿತವಾಗತಕ್ಕದ್ದು.

(3) ಈ ಅಧ್ಯಾಯದ ಉದ್ದೇಶಗಳಿಗಾಗಿ ನೀಡಿದ ಪಾಲಿಸಿಯಲ್ಲಿ ಆ ಪಾಲಿಸಿಯನ್ನು ತಪ್ಪಿಸಿಕೊಳ್ಳುವಂತೆ ಅಥವಾ (1)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಘಟನೆಗಳಲ್ಲಿ ಯಾವೊಂದು ಘಟನೆಯು ವಿಮಾದಾರ ವ್ಯಕ್ತಿಗೆ ಉಂಟಾದ ಮೇಲೆ ಅಥವಾ ದಿವಾಳಿ ಕಾನೂನಿಗೆ ಅನುಸಾರವಾಗಿ ಮೃತ ಋಣಿಯ ಸಂಪದದ ಆಡಳಿತಕ್ಕಾಗಿ ಆದೇಶವನ್ನು

ಮಾಡಿದ ಮೇಲೆ, ಆ ಪಾಲಿಸಿಯ ಪಕ್ಷಕಾರರ ಹಕ್ಕುಗಳನ್ನು ಬದಲಾಯಿಸುವಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾತ್ಪರ್ಯವಾಗುವ ಹಾಗೆ ಇರುವ ಯಾವುದೇ ಷರತ್ತು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ವರ್ಗಾವಣೆ ಮಾಡಿದ ಮೇಲೆ, ವಿಮಾಕಾರನು ವಿಮಾದಾರ ವ್ಯಕ್ತಿಗೆ ಹೇಗೋ ಹಾಗೆ ಮೂರನೇ ಪಕ್ಷಕಾರನಿಗೆ ಸಂಬಂಧಿಸಿ ಅದೇ ಹೊಣೆಗಾರಿಕೆಗೆ ಒಳಪಟ್ಟಿರತಕ್ಕದ್ದು, ಆದರೆ,-

(ಎ) ವಿಮಾದಾರ ವ್ಯಕ್ತಿಗೆ ಸಂಬಂಧಿಸಿದ ವಿಮಾಕಾರನ ಹೊಣೆಗಾರಿಕೆಯು ಮೂರನೇ ಪಕ್ಷಕಾರನಿಗೆ ಸಂಬಂಧಿಸಿದ ವಿಮಾದಾರ ವ್ಯಕ್ತಿಯ ಹೊಣೆಗಾರಿಕೆಯನ್ನು ಮೀರುವಲ್ಲಿ, ಈ ಅಧ್ಯಾಯದಲ್ಲಿರುವುದು ಯಾವುದೂ, ಆ ಹೆಚ್ಚಳಕ್ಕೆ ಸಂಬಂಧಿಸಿ ವಿಮಾಕಾರನ ವಿರುದ್ಧ ವಿಮಾದಾರ ವ್ಯಕ್ತಿಗೆ ಹೊಂದಿರುವ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ, ಮತ್ತು

(ಬಿ) ವಿಮಾದಾರ ವ್ಯಕ್ತಿಗೆ ಸಂಬಂಧಿಸಿದ ವಿಮಾಕಾರನ ಹೊಣೆಗಾರಿಕೆಯು ಮೂರನೇ ಪಕ್ಷಕಾರನಿಗೆ ಸಂಬಂಧಿಸಿದ ವಿಮಾದಾರ ವ್ಯಕ್ತಿಯ ಹೊಣೆಗಾರಿಕೆಗಿಂತ ಕಡಿಮೆಯಾಗಿರುವಲ್ಲಿ, ಈ ಅಧ್ಯಾಯದಲ್ಲಿರುವುದು ಯಾವುದೂ, ಆ ಶಿಲ್ಕಿಗೆ ಸಂಬಂಧಿಸಿ ವಿಮಾಕಾರನ ವಿರುದ್ಧ ಮೂರನೇ ಪಕ್ಷಕಾರನು ಹೊಂದಿರುವ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ.

151. ವಿಮೆಗೆ ಸಂಬಂಧಿಸಿ ಮಾಹಿತಿಯನ್ನು ಒದಗಿಸುವ ಕರ್ತವ್ಯ:- (1) 147ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಹೊಣೆಗಾರಿಕೆಗೆ ಸಂಬಂಧಿಸಿ ಯಾವ ವ್ಯಕ್ತಿಯ ವಿರುದ್ಧ ಕ್ಲೇಮು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಈ ಅಧ್ಯಾಯದ ಉಪಬಂಧಗಳ ಮೇರೆಗೆ ನೀಡಲಾದ ಯಾವುದೇ ಪಾಲಿಸಿಯ ಮೂಲಕ ಅವನು ಆ ಹೊಣೆಗಾರಿಕೆಗೆ ಸಂಬಂಧಿಸಿ ವಿಮೆ ಮಾಡಿಸಿದ್ದನೇ ಅಥವಾ ಇಲ್ಲವೆ ಎಂಬುದನ್ನು ಅಥವಾ ವಿಮಾಕಾರನು ಪಾಲಿಸಿಯನ್ನು ಮಾಡಿಸುವುದನ್ನು ತಪ್ಪಿಸಿಕೊಂಡಿಲ್ಲದಿದ್ದಲ್ಲಿ ಅಥವಾ ರದ್ದುಗೊಳಿಸಿಲ್ಲದಿದ್ದಲ್ಲಿ ಹಾಗೆ ವಿಮೆ ಮಾಡಿಸಬಹುದಾಗಿತ್ತೆಂಬುದನ್ನು ತಿಳಿಸಲು ಕ್ಲೇಮು ಮಾಡುವ ವ್ಯಕ್ತಿಯು ಅಥವಾ ಅವನ ಪರವಾಗಿ ಕೇಳಿದಾಗ ನಿರಾಕರಿಸತಕ್ಕದ್ದಲ್ಲ ಅಥವಾ ಹಾಗೆ ಅವನು ವಿಮೆ ಮಾಡಿಸಿದ್ದರೆ ಅಥವಾ ಮಾಡಿಸುವ ಹಾಗಿದ್ದರೆ, ಅವನು ಆ ಪಾಲಿಸಿಗೆ ಸಂಬಂಧಿಸಿ ನೀಡಲಾದ ವಿಮಾ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿರುವಂತೆ ಅದಕ್ಕೆ ಸಂಬಂಧಿಸಿದಂಥ ವಿವರಗಳನ್ನು ನೀಡಲು ನಿರಾಕರಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ದಿವಾಳಿಯಾಗಿರುವ ಅಥವಾ ಅವನು ತನ್ನ ಲೇಣೆದಾರರೊಂದಿಗೆ ರಾಜಿ ಅಥವಾ ವ್ಯವಸ್ಥೆಯನ್ನು ಮಾಡಿಕೊಂಡಿರುವ ಸಂದರ್ಭದಲ್ಲಿ ಅಥವಾ ಮೃತ ವ್ಯಕ್ತಿಯ ಸಂಪದದ ಆಡಳಿತಕ್ಕಾಗಿ ದಿವಾಳಿ ಕಾನೂನಿಗೆ ಅನುಸಾರವಾಗಿ ಆದೇಶವನ್ನು ಮಾಡಿರುವ ಸಂದರ್ಭದಲ್ಲಿ ಅಥವಾ ಯಾವುದೇ ಕಂಪನಿಗೆ ಸಂಬಂಧಿಸಿ ಸಮಾಪನಾದೇಶವನ್ನು ಮಾಡಿರುವ ಅಥವಾ ಸ್ವಯಿಚ್ಛೆಯಿಂದ ಸಮಾಪನ ಮಾಡುವ ಬಗ್ಗೆ ನಿರ್ಣಯವನ್ನು ತೀರ್ಣಗೊಳಿಸಿರುವ ಅಥವಾ ಕಂಪನಿಯ ವ್ಯವಹಾರ ಅಥವಾ ಉದ್ಯಮದ ಬಗ್ಗೆ ರಿಸೀವರ್ ಅಥವಾ ವ್ಯವಸ್ಥಾಪಕನನ್ನು ಯಥಾಕ್ರಮವಾಗಿ ನೇಮಕ ಮಾಡಿರುವ ಅಥವಾ ಪ್ರಭಾರದಲ್ಲಿರುವ ಅಥವಾ ಅದಕ್ಕೊಳಪಟ್ಟ ಯಾವುದೇ ಸ್ವತ್ತಿನ ಮೇಲಣ ಹಾಲಿ ಭದ್ರತೆಯ ಮೂಲಕ ಭದ್ರಗೊಳಿಸಿದ ಯಾವುವೇ ಡಿಬೆಂಚರುಗಳ ಧಾರಕರು ಅಥವಾ ಅವರ ಪರವಾಗಿ ಸ್ವಾಧೀನ ತೆಗೆದುಕೊಂಡಿರುವ ಸಂದರ್ಭದಲ್ಲಿ, ಸಂದರ್ಭಾನುಸಾರ, ದಿವಾಳಿ ಋಣಿಯು, ಮೃತ ಋಣಿಯ ವೈಯಕ್ತಿಕ ಪ್ರತಿನಿಧಿಯು ಅಥವಾ ಕಂಪನಿಯು ಅಥವಾ ದಿವಾಳಿ ಆಸ್ತಿಯ ಅಧಿಕಾರಿ ಅಥವಾ ದಿವಾಳಿ ರಿಸೀವರನು, ನ್ಯಾಸಧಾರಿ, ಸಮಾಪಕ, ರಿಸೀವರ್ ಅಥವಾ ವ್ಯವಸ್ಥಾಪಕನು ಅಥವಾ ಸ್ವತ್ತಿನ ಸ್ವಾಧೀನ ಹೊಂದಿರುವ ವ್ಯಕ್ತಿಯು, ದಿವಾಳಿ ಋಣಿ, ಮೃತ ಋಣಿ ಅಥವಾ ಕಂಪನಿಯು, ಈ ಅಧ್ಯಾಯದ ಉಪಬಂಧಗಳ ವ್ಯಾಪ್ತಿಗೊಳಪಟ್ಟಂಥ ಹೊಣೆಗಾರಿಕೆಗೆ ಸಂಬಂಧಿಸಿ ತನಗೆ ಅಧೀನನಾಗಿರುವುದಾಗಿ ಕ್ಲೇಮು ಮಾಡುವ ಯಾರೇ ವ್ಯಕ್ತಿಯ ಕೋರಿಕೆಯ ಮೇರೆಗೆ, 150ನೇ ಪ್ರಕರಣದ ಮೂಲಕ ಯಾವುವೇ ಹಕ್ಕುಗಳನ್ನು ಅವನಿಗೆ ವರ್ಗಾಯಿಸಲಾಗಿದೆಯೇ ಅಥವಾ ಅವನಲ್ಲಿ ವಿಹಿತಗೊಳಿಸಲಾಗಿದೆಯೇ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಅಂಥ ಹಕ್ಕುಗಳು, ಯಾವುವಾದರೂ ಇದ್ದರೆ, ಅವುಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಅವನಿಗೆ ಯುಕ್ತವಾಗಿ ಅಗತ್ಯವಿರಬಹುದಾದಂಥ ಮಾಹಿತಿಯನ್ನು ಕೊಡುವುದು ಅವರ ಕರ್ತವ್ಯವಾಗಿರತಕ್ಕದ್ದು ಮತ್ತು ಪೂರ್ವೋಕ್ತ ಸಂದರ್ಭಗಳಲ್ಲಿ ಅಂಥ ಮಾಹಿತಿಯನ್ನು ಒದಗಿಸಿದ ಮೇಲೆ ಪಾಲಿಸಿಯ ಕರಾರಿನಿಂದ ತಪ್ಪಿಸಿಕೊಳ್ಳುವಂತೆ ಅಥವಾ ಅದರ ಪಕ್ಷಕಾರರ ಹಕ್ಕುಗಳನ್ನು ಬದಲಾಯಿಸುವಂತೆ ಅಥವಾ ಸದರಿ ಸಂದರ್ಭಗಳಲ್ಲಿ ಅಂಥ ಮಾಹಿತಿಯನ್ನು ಕೊಡುವುದನ್ನು ಅನ್ಯಥಾ ನಿಷೇಧಿಸುವಂತೆ ಅಥವಾ ಪ್ರತಿಬಂಧಿಸುವಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾತ್ಪರ್ಯವಾಗುವಂಥ ವಿಮಾ ಕರಾರು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(3) (2)ನೇ ಉಪಪ್ರಕರಣಕ್ಕನುಸಾರವಾಗಿ ಅಥವಾ ಅನ್ಯಥಾ ಯಾರೇ ವ್ಯಕ್ತಿಗೆ ಕೊಡಲಾದ ಮಾಹಿತಿಯಿಂದ, ಈ ಅಧ್ಯಾಯದ ಮೇರೆಗೆ ಯಾರೇ ನಿರ್ದಿಷ್ಟ ವಿಮಾಕಾರನ ವಿರುದ್ಧ ಹಕ್ಕುಗಳನ್ನು ಅವನಿಗೆ ವರ್ಗಾಯಿಸಲಾಗಿದೆಯೆಂದು ಅಥವಾ ವರ್ಗಾಯಿಸಿದ್ದಿರಬಹುದೆಂದು ನಂಬಲು ಅವನಿಗೆ ಯುಕ್ತ ಕಾರಣವಿದ್ದರೆ ಆ ವಿಮಾಕಾರನು ಸದರಿ ಉಪಪ್ರಕರಣದ ಮೂಲಕ ಅದರಲ್ಲಿ ನಮೂದಿಸಲಾದ ವ್ಯಕ್ತಿಗಳಿಗೆ ವಿಧಿಸಲಾದ ಅದೇ ಕರ್ತವ್ಯಕ್ಕೆ ಒಳಪಟ್ಟಿರತಕ್ಕದ್ದು.

(4) ಈ ಪ್ರಕರಣದ ಮೂಲಕ ವಿಧಿಸಲಾದ ಮಾಹಿತಿ ಒದಗಿಸುವ ಕರ್ತವ್ಯವು, ಆ ಕರ್ತವ್ಯವನ್ನು ಹಾಗೆ ಯಾರಿಗೆ ವಿಧಿಸಲಾಗಿದೆಯೋ ಆ ವ್ಯಕ್ತಿಯ ಸ್ವಾಧೀನದಲ್ಲಿರುವ ಅಥವಾ ಅಧಿಕಾರದಲ್ಲಿರುವ ಎಲ್ಲಾ ವಿಮಾ ಕರಾರುಗಳನ್ನು, ಪ್ರೀಮಿಯಂ ರಸೀತಿಗಳನ್ನು ಮತ್ತು ಸಂಬಂಧಪಟ್ಟ ಇತರ ದಸ್ತಾವೇಜುಗಳನ್ನು ಪರೀಕ್ಷಿಸಲು ಮತ್ತು ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಲು ಅನುಮತಿಸುವ ಕರ್ತವ್ಯವನ್ನು ಒಳಗೊಂಡಿರತಕ್ಕದ್ದು.

152. ವಿಮಾಕಾರರು ಮತ್ತು ವಿಮಾದಾರ ವ್ಯಕ್ತಿಗಳ ನಡುವಣ ಒಡಂಬಡಿಕೆ:- (1) 147ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಸ್ವರೂಪದ ಯಾವುದೇ ಹೊಣೆಗಾರಿಕೆಗೆ ಸಂಬಂಧಿಸಿ ಮೂರನೇ ಪಕ್ಷಕಾರನು ಮಾಡಬಹುದಾದ ಯಾವುದೇ ಕ್ಲೇಮಿನ ಸಂಬಂಧದಲ್ಲಿ ವಿಮಾಕಾರನು ಮಾಡಿಕೊಂಡ ಯಾವುದೇ ಒಡಂಬಡಿಕೆಯು, ಅಂಥ ಒಡಂಬಡಿಕೆಗೆ ಮೂರನೇ ಪಕ್ಷಕಾರನು ಪಕ್ಷಕಾರನಾಗಿದ್ದ ಹೊರತು ಸಿಂಧುವಾಗತಕ್ಕದ್ದಲ್ಲ.

(2) ಈ ಅಧ್ಯಾಯದ ಉದ್ದೇಶಗಳಿಗಾಗಿ ಕೊಟ್ಟ ಪಾಲಿಸಿಯ ಅಡಿಯಲ್ಲಿ ವಿಮೆ ಮಾಡಿಸಿದ ವ್ಯಕ್ತಿಯು ದಿವಾಳಿಯಾಗಿರುವಲ್ಲಿ, ಅಥವಾ ಅಂಥ ವಿಮಾದಾರ ವ್ಯಕ್ತಿಯು ಒಂದು ಕಂಪನಿಯಾಗಿರುವಲ್ಲಿ, ಆ ಕಂಪನಿಗೆ ಸಂಬಂಧಿಸಿ ಸಮಾಪನಾದೇಶವನ್ನು ಮಾಡಿರುವಲ್ಲಿ ಅಥವಾ ಆ ಕಂಪನಿಗೆ ಸಂಬಂಧಿಸಿ ಸ್ವಯಿಚ್ಛೆಯಿಂದ ಸಮಾಪನಕ್ಕಾಗಿ ನಿರ್ಣಯವನ್ನು ತೀರ್ಣಗೊಳಿಸಿರುವಲ್ಲಿ, ಸಂದರ್ಭಾನುಸಾರ, ಮೂರನೇ ಪಕ್ಷಕಾರನಿಗೆ ಸಂಬಂಧಿಸಿ ಹೊಣೆಗಾರಿಕೆಯು ಸಂಭವಿಸಿದ ತರುವಾಯ ಮತ್ತು ದಿವಾಳಿ ಅಥವಾ ಸಮಾಪನದ ಪ್ರಾರಂಭದ ತರುವಾಯ, ವಿಮಾಕಾರ ಮತ್ತು ವಿಮಾದಾರ ವ್ಯಕ್ತಿಯ ನಡುವೆ ಮಾಡಿಕೊಳ್ಳಲಾದ ಯಾವುದೇ ಒಪ್ಪಂದವು ಅಥವಾ ಪೂರ್ವೋಕ್ತ ಪ್ರಾರಂಭದ ತರುವಾಯ ವಿಮಾದಾರ ವ್ಯಕ್ತಿಯು ಮಾಡಿದ ಯಾವುದೇ ಬಿಟ್ಟುಕೊಡುವಿಕೆ, ಹಸ್ತಾಂತರಣ ಅಥವಾ ಇತರ ವಿಲೆಯು ಅಥವಾ ಅವನಿಗೆ ಮಾಡಿದ ಯಾವುದೇ ಸಂದಾಯವು ಈ ಅಧ್ಯಾಯದ ಮೇರೆಗೆ ಮೂರನೇ ಪಕ್ಷಕಾರನಿಗೆ ವರ್ಗಾಯಿಸಿದ ಹಕ್ಕುಗಳನ್ನು ನಿಷ್ಫಲಗೊಳಿಸಲು ಪರಿಣಾಮಕಾರಿಯಾಗಿರತಕ್ಕದ್ದಲ್ಲ, ಆದರೆ ಆ ಹಕ್ಕುಗಳು, ಅಂಥ ಯಾವುದೇ ಒಪ್ಪಂದ, ಬಿಟ್ಟುಕೊಡುವಿಕೆ, ಹಸ್ತಾಂತರಣ ಅಥವಾ ವಿಲೆ ಅಥವಾ ಸಂದಾಯವು ಆಗಿಲ್ಲದಿದ್ದರೆ ಹೇಗಿರುತ್ತಿದ್ದವೋ ಹಾಗೆ ಇರತಕ್ಕದ್ದು.

153. 150, 151 ಮತ್ತು 152ನೇ ಪ್ರಕರಣಗಳ ಸಂಬಂಧದಲ್ಲಿ ಉಳಿಸುವಿಕೆ:- (1) 150, 151 ಮತ್ತು 152ನೇ ಪ್ರಕರಣಗಳ ಉದ್ದೇಶಗಳಿಗಾಗಿ, ಯಾವುದೇ ವಿಮಾ ಪಾಲಿಸಿಯ ಅಡಿಯಲ್ಲಿ ವಿಮೆ ಮಾಡಿರುವ ವ್ಯಕ್ತಿಗೆ ಸಂಬಂಧಿಸಿ "ಮೂರನೇ ಪಕ್ಷಕಾರನಿಗೆ ಸಂಬಂಧಿಸಿದ ಹೊಣೆಗಾರಿಕೆಗಳು" ಇದಕ್ಕೆ ಮಾಡಲಾದ ಉಲ್ಲೇಖವು ಇತರ ಯಾವುದೇ ವಿಮಾ ಪಾಲಿಸಿಯ ಅಡಿಯಲ್ಲಿ ವಿಮಾಕಾರನಾಗಿ ಆ ವ್ಯಕ್ತಿಯ ಯಾವುದೇ ಹೊಣೆಗಾರಿಕೆಗೆ ಮಾಡಲಾದ ಉಲ್ಲೇಖವನ್ನು ಒಳಗೊಳ್ಳತಕ್ಕದ್ದಲ್ಲ.

(2) 150, 151 ಮತ್ತು 152ನೇ ಪ್ರಕರಣಗಳ ಉಪಬಂಧಗಳು ಯಾವುದೇ ಕಂಪನಿಯನ್ನು ಪುನರ್‌ರಚಿಸುವ ಅಥವಾ ಇನ್ನೊಂದು ಕಂಪನಿಯೊಡನೆ ಸಮ್ಮಿಲನಗೊಳಿಸುವ ಉದ್ದೇಶಗಳಿಗಾಗಿ ಮಾತ್ರವೇ ಸ್ವಯಿಚ್ಛೆಯಿಂದ ಸಮಾಪನಗೊಳಿಸಿರುವಲ್ಲಿ, ಅನ್ವಯವಾಗತಕ್ಕದ್ದಲ್ಲ.

154. ವಿಮಾದಾರ ವ್ಯಕ್ತಿಗಳ ದಿವಾಳಿಯು ವಿಮಾದಾರರ ಹೊಣೆಗಾರಿಕೆಗೆ ಅಥವಾ ಮೂರನೇ ಪಕ್ಷಕಾರರ ಕ್ಲೇಮುಗಳಿಗೆ ಬಾಧಕವಾಗದಿರುವುದು:- ವಿಮಾ ಪಾಲಿಸಿಯನ್ನು ಮಾಡಿಕೊಂಡ ವ್ಯಕ್ತಿಗೆ ವಿಮಾ ಪ್ರಮಾಣ ಪತ್ರವನ್ನು ನೀಡಿರುವಲ್ಲಿ, 150ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ನಮೂದಿಸಿದಂಥ ಯಾವುದೇ ಘಟನೆಯು ಪಾಲಿಸಿಯಿಂದ ವಿಮೆ ಮಾಡಿಸಲ್ಪಟ್ಟ ಯಾರೇ ವ್ಯಕ್ತಿಗೆ ಸಂಬಂಧಿಸಿ ಉಂಟಾದಾಗ ಈ ಅಧ್ಯಾಯದಲ್ಲಿ ಏನೇ ಇದ್ದರೂ, ಅದು 147ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಸ್ವರೂಪದ ವ್ಯಕ್ತಿಯ ಹೊಣೆಗಾರಿಕೆಗೆ ಬಾಧಕವಾಗತಕ್ಕದ್ದಲ್ಲ; ಆದರೆ ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವ ವ್ಯಕ್ತಿಗೆ ಸಂಬಂಧಿಸಿ ಆ ಹೊಣೆಗಾರಿಕೆಯು ಉಂಟಾಯಿತೋ ಅವನಿಗೆ 150, 151 ಮತ್ತು 152ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ವಿಮಾಕಾರನ ವಿರುದ್ಧ ಪ್ರದತ್ತವಾದ ಯಾವುವೇ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ.

155. ಕೆಲವು ವ್ಯಾಜ್ಯ ಕಾರಣಗಳ ಮೇಲೆ ಮರಣದ ಪರಿಣಾಮ:- ಭಾರತ ಉತ್ತರಾಧಿಕಾರ ಅಧಿನಿಯಮ, 1925ರ (1925ರ 39) 306ನೇ ಪ್ರಕರಣದಲ್ಲಿ ಏನೇ ಇದ್ದರೂ, ಯಾವ ವ್ಯಕ್ತಿಯ ಹೆಸರಿಗೆ ವಿಮಾ ಪ್ರಮಾಣ ಪತ್ರವನ್ನು ನೀಡಲಾಗಿದ್ದಿತೋ ಆ ವ್ಯಕ್ತಿಯ ಮರಣವು, ಈ ಅಧ್ಯಾಯದ ಉಪಬಂಧಗಳ ಮೇರೆಗಿನ ಕ್ಲೇಮಿಗೆ ಕಾರಣವಾದ ಘಟನೆಯು ಸಂಭವಿಸಿದ ತರುವಾಯ ಉಂಟಾದರೆ ಸಂಪದದ ವಿರುದ್ಧ ಅಥವಾ ವಿಮಾಕಾರನ ವಿರುದ್ಧ ಸದರಿ ಘಟನೆಯಿಂದ ಉದ್ಭವಿಸುವ ಯಾವುದೇ ವ್ಯಾಜ್ಯ ಕಾರಣ ಉಳಿದುಕೊಳ್ಳುವುದಕ್ಕೆ ಪ್ರತಿಬಂಧವಾಗತಕ್ಕದ್ದಲ್ಲ.

156. ವಿಮಾ ಪ್ರಮಾಣ ಪತ್ರದ ಪರಿಣಾಮ:- ವಿಮಾಕಾರ ಮತ್ತು ವಿಮಾದಾರ ವ್ಯಕ್ತಿಯ ನಡುವಣ ವಿಮಾ ಕರಾರಿನ ಸಂಬಂಧದಲ್ಲಿ ವಿಮಾಕಾರನು ವಿಮೆ ಪ್ರಮಾಣ ಪತ್ರವನ್ನು ಕೊಟ್ಟಿರುವಾಗ,-

(ಎ) ಪ್ರಮಾಣ ಪತ್ರದಲ್ಲಿ ವಿವರಿಸಲಾದ ಪಾಲಿಸಿಯನ್ನು ವಿಮಾಕಾರನು ವಿಮಾದಾರನಿಗೆ ಕೊಟ್ಟಿರದಿದ್ದರೆ ಮತ್ತು ಆವರೆಗೆ ವಿಮಾಕಾರನು ವಿಮಾದಾರನನ್ನು ಹೊರತುಪಡಿಸಿ ತನ್ನ ಮತ್ತು ಯಾರೇ ಇತರ ವ್ಯಕ್ತಿಯ ನಡುವೆ, ಅಂಥ ಪ್ರಮಾಣ ಪತ್ರದಲ್ಲಿ ನಮೂದಿಸಿ ವರ್ಣನೆ ಮತ್ತು ವಿವರಗಳಿಗೆ ಎಲ್ಲಾ ರೀತಿಯಲ್ಲಿ ಅನುರೂಪವಾಗಿರುವಂಥ ವಿಮಾ ಪಾಲಿಸಿಯನ್ನು ವಿಮಾದಾರ ವ್ಯಕ್ತಿಗೆ ಕೊಟ್ಟಿರುವುದಾಗಿ ಭಾವಿಸತಕ್ಕದ್ದು; ಮತ್ತು

(ಬಿ) ವಿಮಾಕಾರನು, ವಿಮಾದಾರನಿಗೆ ಪ್ರಮಾಣ ಪತ್ರದಲ್ಲಿ ವಿವರಿಸಲಾದ ಪಾಲಿಸಿಯನ್ನು ಕೊಟ್ಟಿದ್ದು, ಆದರೆ ಪಾಲಿಸಿಯ ವಾಸ್ತವಿಕ ನಿಬಂಧನೆಗಳು, ವಿಮಾಕಾರನ ವಿರುದ್ಧ ಪ್ರತ್ಯಕ್ಷವಾಗಿ ಅಥವಾ ವಿಮಾದಾರನ ಮೂಲಕ ಪಾಲಿಸಿಯ ಮೇರೆಗೆ ಅಥವಾ ಅದರ ಆಧಾರದ ಮೇಲೆ ಕ್ಲೇಮು ಮಾಡುವ ವ್ಯಕ್ತಿಗಳಿಗೆ ಪ್ರಮಾಣ ಪತ್ರದಲ್ಲಿ ನಿರೂಪಿಸಿದ ಪಾಲಿಸಿಯ ವಿವರಗಳಿಗಿಂತ ಕಡಿಮೆ ಅನುಕೂಲಕರವಾಗಿದ್ದರೆ, ಆ ಪಾಲಿಸಿಯು ವಿಮಾಕಾರ ಮತ್ತು ವಿಮಾದಾರನನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿ, ಇವರ ನಡುವೆ ಪ್ರಮಾಣ ಪತ್ರದಲ್ಲಿ ನಿರೂಪಿಸಿರುವ ವಿವರಗಳಿಗೆ ಎಲ್ಲಾ ರೀತಿಯಲ್ಲಿಯೂ ಅನುರೂಪವಾದ ನಿಬಂಧನೆಗಳನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು.

157. ವಿಮಾ ಪ್ರಮಾಣ ಪತ್ರದ ವರ್ಗಾವಣೆ:- (1) ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ವಿಮಾ ಪ್ರಮಾಣ ಪತ್ರವನ್ನು ಯಾವ ವ್ಯಕ್ತಿಯ ಹೆಸರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯು, ಯಾವ ಮೋಟಾರು ವಾಹನದ ಸಂಬಂಧದಲ್ಲಿ ಅಂಥ ವಿಮೆಯನ್ನು ಮಾಡಲಾಗಿತ್ತೋ ಆ ಮೋಟಾರು ವಾಹನದ ಒಡೆತನವನ್ನು ಅದಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯ ಸಮೇತ ಇನ್ನೊಬ್ಬ ವ್ಯಕ್ತಿಗೆ ವರ್ಗಾಯಿಸಿರುವಲ್ಲಿ, ಆ ವಿಮಾ ಪ್ರಮಾಣ ಪತ್ರವನ್ನು ಮತ್ತು ಆ ಪ್ರಮಾಣ ಪತ್ರದಲ್ಲಿ ವಿವರಿಸಲಾದ ಪಾಲಿಸಿಯನ್ನು, ಮೋಟಾರು ವಾಹನವನ್ನು ಯಾವ ವ್ಯಕ್ತಿಯ ಹೆಸರಿಗೆ ವರ್ಗಾಯಿಸಲಾಗಿದೆಯೋ ಆ ವ್ಯಕ್ತಿಯ ಹೆಸರಿಗೆ ಅದರ ವರ್ಗಾವಣೆಯ ದಿನಾಂಕದಿಂದ ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು.

ವಿವರಣೆ:- ಅಂಥ ಭಾವಿತ ವರ್ಗಾವಣೆಯು ಸದರಿ ವಿಮಾ ಪ್ರಮಾಣ ಪತ್ರ ಮತ್ತು ವಿಮಾ ಪಾಲಿಸಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆಯನ್ನು ಒಳಗೊಳ್ಳತಕ್ಕದ್ದೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

(2) ವರ್ಗಾವಣೆ ಪಡೆದವನು, ವಿಮಾ ಪ್ರಮಾಣ ಪತ್ರದಲ್ಲಿ ಮತ್ತು ಆ ಪ್ರಮಾಣ ಪತ್ರದಲ್ಲಿ ವಿವರಿಸಿದ ಪಾಲಿಸಿಯಲ್ಲಿ ತನ್ನ ಹೆಸರಿಗೆ ವರ್ಗಾವಣೆಯಾದ ಸಂಗತಿಗೆ ಸಂಬಂಧಿಸಿ ಅಗತ್ಯವಾದ ಬದಲಾವಣೆಗಳನ್ನು ಮಾಡುವಂತೆ ವಿಮಾಕಾರನಿಗೆ ನಿಯಮಿಸಲಾದ ನಮೂನೆಯಲ್ಲಿ ವರ್ಗಾವಣೆಯ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ವಿಮಾಕಾರನು ಆ ಪ್ರಮಾಣ ಪತ್ರದಲ್ಲಿ ಮತ್ತು ವಿಮಾ ಪಾಲಿಸಿಯಲ್ಲಿ ವಿಮೆಯ ವರ್ಗಾವಣೆಗೆ ಸಂಬಂಧಿಸಿ ಅಗತ್ಯ ಬದಲಾವಣೆಗಳನ್ನು ಮಾಡತಕ್ಕದ್ದು.

158. ಕೆಲವು ಪ್ರಕರಣಗಳಲ್ಲಿ ಕೆಲವು ಪ್ರಮಾಣ ಪತ್ರಗಳು, ಲೈಸನ್ಸು ಮತ್ತು ಪರ್ಮಿಟ್ಟುಗಳನ್ನು ಹಾಜರುಪಡಿಸುವುದು:- (1) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸುವ ಯಾರೇ ವ್ಯಕ್ತಿಯು, ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಸಮವಸ್ತ್ರ ಧರಿಸಿದ ಪೊಲೀಸ್ ಅಧಿಕಾರಿಯು ವಾಹನ ಉಪಯೋಗಕ್ಕೆ ಸಂಬಂಧಿಸಿದ,-

(ಎ) ವಿಮಾ ಪ್ರಮಾಣ ಪತ್ರ;

(ಬಿ) ನೋಂದಣಿ ಪ್ರಮಾಣ ಪತ್ರ;

(ಸಿ) ಚಾಲನ ಲೈಸನ್ಸು; ಮತ್ತು

(ಡಿ) ಸಾರಿಗೆ ವಾಹನದ ಸಂಬಂಧದಲ್ಲಿ, 56ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅರ್ಹತಾ ಪ್ರಮಾಣ ಪತ್ರವನ್ನು ಮತ್ತು ಪರ್ಮಿಟ್ಟನ್ನು

- ಹಾಜರುಪಡಿಸುವಂತೆ ಅಗತ್ಯಪಡಿಸಿದ ಮೇಲೆ ಅವುಗಳನ್ನು ಹಾಜರುಪಡಿಸತಕ್ಕದ್ದು.

(2) ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವು ಇರುವ ಕಾರಣದಿಂದ, ಇನ್ನೊಬ್ಬ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಯನ್ನೊಳಗೊಂಡ ಅಪಘಾತವು ಸಂಭವಿಸಿದಲ್ಲಿ, ವಾಹನದ ಚಾಲಕನು ಆ ಸಮಯದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಮಾಣ ಪತ್ರಗಳು, ಚಾಲನ ಲೈಸನ್ಸು ಮತ್ತು ಪರ್ಮಿಟ್ಟು ಇವುಗಳನ್ನು ಪೊಲೀಸ್ ಅಧಿಕಾರಿಗೆ ಹಾಜರುಪಡಿಸದಿದ್ದರೆ, ಅವನು 134ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದ ವರದಿಯನ್ನು ಯಾವ ಪೊಲೀಸ್ ಠಾಣೆಯಲ್ಲಿ ಮಾಡುವನೋ ಅಲ್ಲಿ ಸದರಿ ಪ್ರಮಾಣ ಪತ್ರಗಳು, ಲೈಸನ್ಸು ಮತ್ತು ಪರ್ಮಿಟ್ಟು ಇವುಗಳನ್ನು ಹಾಜರುಪಡಿಸತಕ್ಕದ್ದು.

(3) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದ ಮೇರೆಗೆ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಅಗತ್ಯಪಡಿಸಲಾದ ದಿನಾಂಕದಿಂದ ಅಥವಾ ಸಂದರ್ಭಾನುಸಾರ, ಅಪಘಾತ ಸಂಭವಿಸಿದ ದಿನಾಂಕದಿಂದ ಏಳು ದಿನಗಳ ಒಳಗೆ, ಅದನ್ನು ಹಾಜರುಪಡಿಸಲು ತಪ್ಪಿದ್ದು, ಅದನ್ನು ಹಾಜರುಪಡಿಸಲು ಅಗತ್ಯಪಡಿಸಿದ ಪೊಲೀಸ್ ಅಧಿಕಾರಿಗೆ, ತಾನು ನಿರ್ದಿಷ್ಟಪಡಿಸಬಹುದಾದ ಪೊಲೀಸ್ ಠಾಣೆಯಲ್ಲಿ ಅಥವಾ ಸಂದರ್ಭಾನುಸಾರ, ಅಪಘಾತದ ಸ್ಥಳದಲ್ಲಿರುವ ಪೊಲೀಸ್ ಅಧಿಕಾರಿಗೆ ಅಥವಾ ತಾನು ಅಪಘಾತದ ಬಗ್ಗೆ ವರದಿ ಮಾಡಿದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಆ ಪ್ರಮಾಣ ಪತ್ರವನ್ನು ಹಾಜರುಪಡಿಸಿದರೆ, ಆ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅಪರಾಧ ನಿರ್ಣಯಕ್ಕೆ ಗುರಿಯಾಗತಕ್ಕದ್ದಲ್ಲ:

ಪರಂತು, ನಿಯಮಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ಮಾರ್ಪಾಟು ಮಾಡಿದ ಹೊರತು, ಈ ಉಪಪ್ರಕರಣದ ಉಪಬಂಧಗಳು ಸಾರಿಗೆ ವಾಹನದ ಚಾಲಕನಿಗೆ ಅನ್ವಯವಾಗತಕ್ಕದ್ದಲ್ಲ.

(4) ಮೋಟಾರು ವಾಹನದ ಒಡೆಯನು, 146ನೇ ಪ್ರಕರಣವನ್ನು ಉಲ್ಲಂಘಿಸಿ ವಾಹನವನ್ನು ನಡೆಸಲಾಗುತ್ತಿತ್ತೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಪೊಲೀಸ್ ಅಧಿಕಾರಿಯು ಅಥವಾ ಅವನ ಪರವಾಗಿ ಅಗತ್ಯಪಡಿಸಬಹುದಾದ ಮಾಹಿತಿಯನ್ನು ಮತ್ತು ಚಾಲಕನು ತನ್ನ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಈ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಯಾವುದೇ ಸಂದರ್ಭದಲ್ಲಿ ಮಾಹಿತಿಯನ್ನು ಕೊಡತಕ್ಕದ್ದು.

(5) ಈ ಪ್ರಕರಣದಲ್ಲಿ "ತನ್ನ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು" ಎಂಬ ಪದಾವಳಿಗೆ, 146ನೇ ಪ್ರಕರಣವನ್ನು ಉಲ್ಲಂಘಿಸಿ ವಾಹನವನ್ನು ನಡೆಸಲಾಗುತ್ತಿಲ್ಲ ಎಂಬ ಬಗ್ಗೆ ಸಂಬಂಧಪಟ್ಟ ವಿಮಾ ಪ್ರಮಾಣ ಪತ್ರವನ್ನು ಅಥವಾ ನಿಯಮಿಸಬಹುದಾದಂಥ ಇತರ ಸಾಕ್ಷ್ಯವನ್ನು ಪರೀಕ್ಷೆಗಾಗಿ ಹಾಜರುಪಡಿಸುವುದು ಎಂದು ಅರ್ಥ.

(6) ಯಾರೇ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಯನ್ನೊಳಗೊಂಡ ಯಾವುದೇ ಅಪಘಾತಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ದಾಖಲು ಮಾಡಿದ ಅಥವಾ ಈ ಪ್ರಕರಣದ ಮೇರೆಗಿನ ವರದಿಯನ್ನು ಪೂರ್ಣಗೊಳಿಸಿದ ಒಡನೆಯೇ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಪೊಲೀಸು ಅಧಿಕಾರಿಯು ಅದರ ಒಂದು ಪ್ರತಿಯನ್ನು, ಮಾಹಿತಿಯನ್ನು ದಾಖಲು ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಥವಾ ಸಂದರ್ಭಾನುಸಾರ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅಂಥ ವರದಿಯನ್ನು ಸಲ್ಲಿಸಿದ ಮೇಲೆ ಕಳುಹಿಸಿಕೊಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ವಿಮಾಕರ್ತನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಒಂದು ಪ್ರತಿಯನ್ನು ಒಡೆಯನಿಗೆ ದೊರೆಯುವಂತೆ ಮಾಡಿರುವಲ್ಲಿ ಅವನೂ ಸಹ ಅಂಥ ವರದಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ಅದನ್ನು ಅಂಥ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅಥವಾ ವಿಮಾಕರ್ತನಿಗೆ ಕಳುಹಿಸತಕ್ಕದ್ದು.

159. ವಾಹನವನ್ನು ಉಪಯೋಗಿಸಲು ಅಧಿಕಾರ ಕೋರುವ ಅರ್ಜಿ ಸಲ್ಲಿಸುವಾಗ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು:- ರಾಜ್ಯ ಸರ್ಕಾರವು, ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಉಪಯೋಗಿಸಲು ಅಧಿಕಾರ ಕೋರಿ ತೆರಿಗೆ ಸಂದಾಯದ ಮೂಲಕ ಅಥವಾ ಅನ್ಯಥಾ ಮೋಟಾರು ವಾಹನದ ಒಡೆಯನು ಅರ್ಜಿ ಸಲ್ಲಿಸುವಾಗ,-

(ಎ) ವಾಹನವನ್ನು ಉಪಯೋಗಿಸಲು ನೀಡಲಾದ ಅಧಿಕಾರವು ಜಾರಿಗೆ ಬರುವ ದಿನಾಂಕದಂದು, ಅರ್ಜಿದಾರನು ಅಥವಾ ಅವನ ಆದೇಶದ ಅಥವಾ ಅವನ ಅನುಮತಿಯ ಮೇರೆಗೆ ಇತರ ವ್ಯಕ್ತಿಗಳು ಆ ವಾಹನವನ್ನು ಉಪಯೋಗಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯವಾದ ವಿಮಾ ಪ್ರಮಾಣ ಪತ್ರವು ಜಾರಿಯಲ್ಲಿರುವುದೆಂಬುದಕ್ಕೆ; ಅಥವಾ

(ಬಿ) ಆ ವಾಹನವು 146ನೇ ಪ್ರಕರಣವು ಅನ್ವಯವಾಗುವ ವಾಹನವೆಂಬುದಕ್ಕೆ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಸಾಕ್ಷ್ಯವನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವ ನಿಯಮಗಳನ್ನು ರಚಿಸಬಹುದು.

160. ಅಪಘಾತಕ್ಕೆ ಒಳಗಾದ ವಾಹನದ ವಿವರಗಳನ್ನು ಒದಗಿಸುವ ಕರ್ತವ್ಯ:- ನೋಂದಣಿ ಪ್ರಾಧಿಕಾರ ಅಥವಾ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ಮೋಟಾರು ವಾಹನದ ಉಪಯೋಗದಿಂದ ಉಂಟಾದ ಅಪಘಾತದ ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ತಾನು ಹಕ್ಕುಳ್ಳವನಾಗಿರುವುದಾಗಿ ಹೇಳಿಕೊಳ್ಳುವ ವ್ಯಕ್ತಿಯು ಅಥವಾ ಯಾವುದೇ ಮೋಟಾರು ವಾಹನಕ್ಕೆ ಸಂಬಂಧಿಸಿ ಯಾವ ವಿಮಾಕಾರನ ವಿರುದ್ಧ ಕ್ಲೇಮು ಮಾಡಲಾಗಿದೆಯೋ ಆ ವಿಮಾಕಾರನು ಮೋಟಾರು ವಾಹನದ ಗುರುತು ಚಿಹ್ನೆಗಳು ಮತ್ತು ಇತರ ವಿವರಗಳು ಮತ್ತು ಅಪಘಾತದ ಸಮಯದಲ್ಲಿ ವಾಹನವನ್ನು ಉಪಯೋಗಿಸುತ್ತಿದ್ದ ಅಥವಾ ಅದರಿಂದ ಕ್ಷತಿಗೊಳಗಾದ ವ್ಯಕ್ತಿಯ ಹೆಸರು ಮತ್ತು ವಿಳಾಸ ಮತ್ತು ಹಾನಿಗೀಡಾದ ಸ್ವತ್ತು, ಯಾವುದಾದರೂ ಇದ್ದರೆ, ಆ ಸ್ವತ್ತು - ಇವುಗಳಿಗೆ ಸಂಬಂಧಿಸಿ ಸದರಿ ಪ್ರಾಧಿಕಾರ ಅಥವಾ ಸದರಿ ಪೊಲೀಸ್ ಅಧಿಕಾರಿಯ

ಬಳಿಯಿರುವ ಯಾವುದೇ ಮಾಹಿತಿಯನ್ನು, ಕೇಂದ್ರ ಸರ್ಕಾರವು ನಿಯಮಿಸಬಹುದಾದ ನಮೂನೆಯಲ್ಲಿ ಮತ್ತು ಅಷ್ಟು ಸಮಯದೊಳಗೆ ಒದಗಿಸುವಂತೆ ಅಗತ್ಯಪಡಿಸಿದರೆ ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ, ಸಂದರ್ಭಾನುಸಾರ, ಆ ವ್ಯಕ್ತಿಗೆ ಅಥವಾ ವಿಮಾಕಾರನಿಗೆ ಹಾಗೆ ಒದಗಿಸತಕ್ಕದ್ದು.

161. ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತದ ಸಂದರ್ಭದಲ್ಲಿ ಪರಿಹಾರಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು:- (1) ಈ ಪ್ರಕರಣ, 162ನೇ ಪ್ರಕರಣ ಮತ್ತು 163ನೇ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ತೀವ್ರ ಗಾಯ" ಎಂಬುದು ಭಾರತ ದಂಡ ಸಂಹಿತೆಯಲ್ಲಿ (1860ರ 45) ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿ) "ಡಿಕ್ಕಿಹೊಡೆದು ಪರಾರಿ ಮೋಟಾರು ಅಪಘಾತ" ಎಂದರೆ ಯಾವ ಮೋಟಾರು ವಾಹನ ಅಥವಾ ವಾಹನಗಳ ಉಪಯೋಗದಿಂದ ಉಂಟಾದ ಯಾವ ಅಪಘಾತದ ಸಂಬಂಧದಲ್ಲಿ ಅದನ್ನು ಅಥವಾ ಅವುಗಳ ಗುರುತನ್ನು ಪತ್ತೆ ಹಚ್ಚಲು ಸೂಕ್ತ ಪ್ರಯತ್ನಗಳನ್ನು ಮಾಡಿದಾಗ್ಯೂ ಸಾಧ್ಯವಿಲ್ಲವೋ ಆ ಅಪಘಾತ;

(ಸಿ) "ಯೋಜನೆ" ಎಂದರೆ 163ನೇ ಪ್ರಕರಣದ ಮೇರೆಗೆ ರೂಪಿಸಿದ ಯೋಜನೆ.

(2) ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಕಾನೂನು ಬಲವುಳ್ಳ ಯಾವುದೇ ಲಿಖಿತದಲ್ಲಿ ಏನೇ ಇದ್ದರೂ, ಸದರಿ ಅಧಿನಿಯಮದ 9ನೇ ಪ್ರಕರಣದ ಮೇರೆಗೆ ರಚಿತವಾದ ಭಾರತದ ಸಾಮಾನ್ಯ ವಿಮಾ ನಿಗಮ ಮತ್ತು ಭಾರತದಲ್ಲಿ ತತ್ಕಾಲದಲ್ಲಿ ಸಾಮಾನ್ಯ ವಿಮಾ ವ್ಯವಹಾರ ನಡೆಸುತ್ತಿರುವ ವಿಮಾ ಕಂಪನಿಗಳು, ಈ ಅಧಿನಿಯಮದ ಉಪಬಂಧಗಳು ಮತ್ತು ಯೋಜನೆಗನುಸಾರವಾಗಿ, ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತಗಳಿಂದ ಸಂಭವಿಸಿದ ವ್ಯಕ್ತಿಗಳ ಮರಣ ಅಥವಾ ಅವರಿಗೆ ಉಂಟಾದ ತೀವ್ರ ಗಾಯದ ಸಂಬಂಧದಲ್ಲಿ ಪರಿಹಾರವನ್ನು ಸಂದಾಯ ಮಾಡಲು ವ್ಯವಸ್ಥೆ ಮಾಡತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಮತ್ತು ಯೋಜನೆ ಇವುಗಳಿಗೊಳಪಟ್ಟು,-

(ಎ) ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತದಿಂದ ಸಂಭವಿಸಿದ ಯಾರೇ ವ್ಯಕ್ತಿಯ ಮರಣದ ಸಂಬಂಧದಲ್ಲಿ, ಇಪ್ಪತ್ತೈದು ಸಾವಿರ ರೂಪಾಯಿ ನಿಗದಿತ ಮೊತ್ತವನ್ನು;

(ಬಿ) ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತದಿಂದ ಯಾರೇ ವ್ಯಕ್ತಿಗೆ ಉಂಟಾದ ತೀವ್ರ ಗಾಯದ ಸಂಬಂಧದಲ್ಲಿ ಹನ್ನೆರಡು ಸಾವಿರದ ಐದುನೂರು ರೂಪಾಯಿ ನಿಗದಿತ ಮೊತ್ತವನ್ನು

- ಪರಿಹಾರವಾಗಿ ಸಂದಾಯ ಮಾಡತಕ್ಕದ್ದು.

(4) 166ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳು, ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪರಿಹಾರಕ್ಕೆ ಅರ್ಜಿ ಸಲ್ಲಿಸುವ ಉದ್ದೇಶಕ್ಕೆ ಅನ್ವಯವಾಗುವಂತೆಯೇ ಈ ಪ್ರಕರಣದ ಮೇರೆಗೆ ಪರಿಹಾರಕ್ಕೆ ಅರ್ಜಿ ಸಲ್ಲಿಸುವ ಉದ್ದೇಶಕ್ಕೂ ಅನ್ವಯವಾಗತಕ್ಕದ್ದು.

162. 161ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಪರಿಹಾರವನ್ನು ಕೆಲವು ಸಂದರ್ಭಗಳಲ್ಲಿ ಮರುಪಾವತಿ ಮಾಡುವುದು:- (1) 161ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ಮರಣ ಅಥವಾ ಅವನಿಗೆ ಉಂಟಾದ ತೀವ್ರ ಗಾಯದ ಸಂಬಂಧದಲ್ಲಿ ಮಾಡಲಾಗುವ ಪರಿಹಾರದ ಸಂದಾಯವು, ಯಾವುದೇ ಪರಿಹಾರವನ್ನು (ಇಲ್ಲಿ ಇನ್ನು ಮುಂದೆ ಈ ಉಪಪ್ರಕರಣದಲ್ಲಿ ಇತರ ಪರಿಹಾರವೆಂದು ಉಲ್ಲೇಖಿಸಲಾಗಿದೆ) ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಇತರ ಯಾವುದೇ ಉಪಬಂಧದ ಮೇರೆಗೆ ಅಂಥ ಮರಣ ಅಥವಾ ತೀವ್ರ ಗಾಯದ ಸಂಬಂಧದಲ್ಲಿ ಪರಿಹಾರದ ಕ್ಲೇಮಿನ ಬದಲಾಗಿ ಅಥವಾ ಅದರ ತೀರಿಕೆಯ ರೂಪದಲ್ಲಿ ಇತರ ಮೊಬಲಗನ್ನು ಕೊಡಲಾಗಿದ್ದರೆ ಅಥವಾ ಅನ್ಯಥಾ ಇತರ ಪರಿಹಾರದಷ್ಟು ಮೊತ್ತವನ್ನು ಅಥವಾ 161ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಪರಿಹಾರಕ್ಕೆ ಸಮನಾದಂತೆ ಹಿಂದೆ ಹೇಳಿದ ಇತರ ಮೊಬಲಗನ್ನು ವಿಮಾಕಾರನಿಗೆ ಮರುಪಾವತಿ ಮಾಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

(2) ಮೋಟಾರು ವಾಹನ ಅಥವಾ ಮೋಟಾರು ವಾಹನಗಳ ಉಪಯೋಗದಿಂದ ಉಂಟಾಗುವ ಯಾರೇ ವ್ಯಕ್ತಿಯ ಮರಣ ಅಥವಾ ಅವನ ದೈಹಿಕ ಕ್ಷತಿಯನ್ನು ಒಳಗೊಳ್ಳುವ ಅಪಘಾತದ ಸಂಬಂಧದಲ್ಲಿ ಈ ಅಧಿನಿಯಮದ (161ನೇ ಪ್ರಕರಣವನ್ನು ಹೊರತುಪಡಿಸಿ) ಅಥವಾ ಇತರ ಯಾವುದೇ ಕಾನೂನಿನ ಯಾವುದೇ ಉಪಬಂಧದ ಮೇರೆಗೆ ಪರಿಹಾರವನ್ನು ನೀಡುವುದಕ್ಕೆ ಮುಂಚೆ, ನಷ್ಟ ಪರಿಹಾರವನ್ನು ನೀಡುವ ನ್ಯಾಯಾಧಿಕರಣ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು, ಅಂಥ ಮರಣ

ಅಥವಾ ದೈಹಿಕ ಕ್ಷತಿಯ ಸಂಬಂಧದಲ್ಲಿ 161ನೇ ಪ್ರಕರಣದ ಮೇರೆಗೆ ಪರಿಹಾರವನ್ನು ಈಗಾಗಲೇ ಸಂದಾಯ ಮಾಡಲಾಗಿದೆಯೇ ಅಥವಾ ಆ ಪ್ರಕರಣದ ಮೇರೆಗೆ ಪರಿಹಾರದ ಸಂದಾಯಕ್ಕಾಗಿ ಸಲ್ಲಿಸಿದ ಅರ್ಜಿಯು ಇತ್ಯರ್ಥದಲ್ಲಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ನ್ಯಾಯಾಧಿಕರಣ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು,-

(ಎ) 161ನೇ ಪ್ರಕರಣದ ಮೇರೆಗೆ ಪರಿಹಾರವನ್ನು ಆದಾಗಲೇ ಸಂದಾಯ ಮಾಡಿದ್ದರೆ, ತಾನು ನೀಡಿದ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಗೆ, (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಆ ಪೈಕಿ ಮರುಪಾವತಿ ಮಾಡತಕ್ಕದ್ದೆಂದು ಅಗತ್ಯಪಡಿಸಿದಷ್ಟನ್ನು ವಿಮಾಕಾರನಿಗೆ ಮರುಪಾವತಿ ಮಾಡುವಂತೆ ನಿರ್ದೇಶಿಸತಕ್ಕದ್ದು;

(ಬಿ) 161ನೇ ಪ್ರಕರಣದ ಮೇರೆಗೆ ಪರಿಹಾರದ ಸಂದಾಯಕ್ಕಾಗಿ ಸಲ್ಲಿಸಿದ ಅರ್ಜಿಯು ಇತ್ಯರ್ಥದಲ್ಲಿರುವಲ್ಲಿ, ತಾನು ನೀಡಿದ ಪರಿಹಾರಕ್ಕೆ ಸಂಬಂಧಿಸಿದ ವಿವರಗಳನ್ನು ವಿಮಾಕಾರನಿಗೆ ಕಳುಹಿಸತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ, 161ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಸಲ್ಲಿಸಿದ ಅರ್ಜಿಯು,-

(i) ಅಂಥ ಅರ್ಜಿಯನ್ನು ತಿರಸ್ಕರಿಸಲಾಗಿದ್ದರೆ, ಅರ್ಜಿಯ ತಿರಸ್ಕರಣೆಯ ದಿನಾಂಕದವರೆಗೆ; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ, ಅರ್ಜಿಯ ಅನುಸರಣೆಯಲ್ಲಿ ಪರಿಹಾರವನ್ನು ಸಂದಾಯ ಮಾಡುವ ದಿನಾಂಕದವರೆಗೆ

- ಇತ್ಯರ್ಥದಲ್ಲಿರುವುದಾಗಿ ಭಾವಿಸತಕ್ಕದ್ದು.

163. ಡಿಕ್ಕಿ ಹೊಡೆದು ಪರಾರಿ ಮೋಟಾರು ಅಪಘಾತಗಳ ಸಂಬಂಧದಲ್ಲಿ ಪರಿಹಾರ ಸಂದಾಯದ ಯೋಜನೆ:- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಾಮಾನ್ಯ ವಿಮಾ ನಿಗಮವು ಯೋಜನೆಯನ್ನು ನಿರ್ವಹಿಸುವ ರೀತಿ ಮತ್ತು ಪರಿಹಾರಕ್ಕಾಗಿ ಸಲ್ಲಿಸುವ ಅರ್ಜಿಗಳ ನಮೂನೆ, ರೀತಿ ಮತ್ತು ಕಾಲ ಮತ್ತು ಅಂಥ ಅರ್ಜಿಗಳನ್ನು ಯಾವ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಗಳಿಗೆ ಸಲ್ಲಿಸಬೇಕೋ ಆ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು, ಅಂಥ ಅರ್ಜಿಗಳನ್ನು ಪರಿಶೀಲಿಸಿ ಅವುಗಳ ಮೇಲೆ ಆದೇಶಗಳನ್ನು ಮಾಡಲು ಅಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಅನುಸರಿಸತಕ್ಕ ಪ್ರಕ್ರಿಯೆ ಮತ್ತು ಯೋಜನೆಯ ಆಡಳಿತ ಮತ್ತು ಪರಿಹಾರ ಸಂದಾಯಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಇತರ ಎಲ್ಲ ವಿಷಯಗಳನ್ನು ನಿರ್ದಿಷ್ಟಪಡಿಸಿ, ಯೋಜನೆಯನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯೋಜನೆಯು,-

(ಎ) ಅದರ ಯಾವುದೇ ಉಪಬಂಧದ ಉಲ್ಲಂಘನೆಯು, ನಿರ್ದಿಷ್ಟಪಡಿಸಬಹುದಾದ ಅವಧಿಯವರೆಗಿನ, ಆದರೆ ಯಾವುದೇ ಸಂದರ್ಭದಲ್ಲಿ ಮೂರು ತಿಂಗಳುಗಳಿಗೆ ಮೀರದ ಕಾರಾವಾಸದಿಂದ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗಿನ, ಆದರೆ ಯಾವುದೇ ಸಂದರ್ಭದಲ್ಲಿ ಐದುನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದೆಂದು;

(ಬಿ) ಅಂಥ ಯೋಜನೆಯ ಮೂಲಕ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳು, ಪ್ರಕಾರ್ಯಗಳು ಅಥವಾ ಕರ್ತವ್ಯಗಳನ್ನು ಕೇಂದ್ರ ಸರ್ಕಾರದ ಲಿಖಿತ ಪೂರ್ವಾನುಮೋದನೆಯನ್ನು ಪಡೆದು ಅಂಥ ಅಧಿಕಾರಿ ಅಥವಾ ಪ್ರಾಧಿಕಾರವು ಇತರ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ವಹಿಸಿಕೊಡಬಹುದೆಂದು;

(ಸಿ) ಅಂಥ ಯೋಜನೆಯ ಯಾವುದೇ ಉಪಬಂಧವು ಮೋಟಾರು ವಾಹನಗಳ ಅಧಿನಿಯಮ, 1939ರ ಮೇರೆಗಿನ ಸಮಾಧಾನಾರ್ಥ ನಿಧಿಯು, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಇದ್ದ ಹಾಗೆ, ಅದರ ಸ್ಥಾಪನೆಯ ದಿನಾಂಕಕ್ಕೆ ಮುಂಚಿತವಾಗಿಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಪ್ರವರ್ತನೆಯಾಗಬಹುದೆಂದು

- ಉಪಬಂಧಿಸಬಹುದು:

ಪರಂತು, ಅಂಥ ಯಾವುದೇ ಪೂರ್ವಾನ್ವಯ ಪರಿಣಾಮವನ್ನು, ಅಂಥ ಉಪಬಂಧಕ್ಕೊಳಪಡಿಸಬಹುದಾದ ಯಾರೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುವಂತೆ ಕೊಡತಕ್ಕದ್ದಲ್ಲ.

163ಎ. ರೂಪಿಸಲಾದ ಸೂತ್ರದ ಆಧಾರದ ಮೇಲೆ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಬಗ್ಗೆ ವಿಶೇಷ ಉಪಬಂಧಗಳು:- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಕಾನೂನಿನ ಬಲವುಳ್ಳ ಲಿಖಿತದಲ್ಲಿ ಏನೇ ಇದ್ದರೂ, ಅಧಿಕೃತ ವಿಮಾಕರ್ತನ ಮೋಟಾರು ವಾಹನದ ಒಡೆಯನು, ಮೋಟಾರು

ವಾಹನವನ್ನು ಬಳಸಿದ್ದರಿಂದಾಗಿ ಉಂಟಾದ ಅಪಘಾತದ ಕಾರಣದಿಂದ ಮರಣ ಅಥವಾ ಖಾಯಂ ಅಸಮರ್ಥತೆ ಉಂಟಾದ ಸಂದರ್ಭದಲ್ಲಿ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ನಷ್ಟ ಪರಿಹಾರವನ್ನು ಕಾನೂನುಸಮ್ಮತ ಉತ್ತರಾಧಿಕಾರಿಗಳಿಗೆ ಅಥವಾ ಸಂದರ್ಭಾನುಸಾರ ಅಪಘಾತಕ್ಕೊಳಗಾದವನಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ "ಖಾಯಂ ಅಸಮರ್ಥತೆ" ಎಂಬ ಪದವು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8) - ಇದರಲ್ಲಿ ಹೊಂದಿರುವ ಅರ್ಥವನ್ನೇ ಮತ್ತು ವ್ಯಾಪ್ತಿಯನ್ನೇ ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಷ್ಟ ಪರಿಹಾರದ ಯಾವುದೇ ಕ್ಲೇಮಿನಲ್ಲಿ, ಕ್ಲೇಮುದಾರನನ್ನು, ಯಾವ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧದಲ್ಲಿ ಕ್ಲೇಮನ್ನು ಮಾಡಲಾಗಿದೆಯೋ ಆ ಮರಣ ಅಥವಾ ಖಾಯಂ ಅಸಮರ್ಥತೆಯ ಸಂಬಂಧಪಟ್ಟ ವಾಹನದ ಒಡೆಯನ ಅಥವಾ ವಾಹನಗಳ ಒಡೆಯನ ಅಥವಾ ಇತರ ಯಾರೇ ವ್ಯಕ್ತಿಯ ಅಕ್ರಮ ಕೃತ್ಯ ಅಥವಾ ಉಪೇಕ್ಷೆ ಅಥವಾ ತಪ್ಪಿತದಿಂದ ಉಂಟಾಯಿತೆಂದು ವಾದಿಸಲು ಅಥವಾ ಸ್ಥಾಪಿಸಲು ಅಗತ್ಯಪಡಿಸತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು ಜೀವನ ವೆಚ್ಚವನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಕಾಲಕಾಲಕ್ಕೆ ಎರಡನೇ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

163ಬಿ. ಕೆಲವು ಪ್ರಕರಣಗಳಲ್ಲಿ ಕ್ಲೇಮನ್ನು ದಾಖಲ್ಮಾಡಲು ಆಯ್ಕೆಯ ಅವಕಾಶ:- ಒಬ್ಬ ವ್ಯಕ್ತಿಯು 140ನೇ ಪ್ರಕರಣ ಮತ್ತು 163ಎ ಪ್ರಕರಣದ ಮೇರೆಗೆ ನಷ್ಟ ಪರಿಹಾರದ ಕ್ಲೇಮನ್ನು ಸಲ್ಲಿಸಲು ಹಕ್ಕು ಹೊಂದಿದ್ದರೆ, ಅವನು ಸದರಿ ಪ್ರಕರಣಗಳ ಪೈಕಿ ಯಾವುದಾದರೂ ಒಂದು ಪ್ರಕರಣದ ಮೇರೆಗೆ ಕ್ಲೇಮನ್ನು ಸಲ್ಲಿಸತಕ್ಕದ್ದೇ ಹೊರತು ಎರಡೂ ಪ್ರಕರಣಗಳ ಮೇರೆಗೆ ಸಲ್ಲಿಸತಕ್ಕದ್ದಲ್ಲ.

164. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು, 159ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಹೊರತುಪಡಿಸಿ, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ಈ ಅಧ್ಯಾಯದ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ನಮೂನೆಗಳು;

(ಬಿ) ವಿಮಾ ಪ್ರಮಾಣ ಪತ್ರಗಳಿಗಾಗಿ ಅರ್ಜಿ ಸಲ್ಲಿಸುವುದು ಮತ್ತು ಅವುಗಳನ್ನು ನೀಡುವುದು;

(ಸಿ) ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ವಿಮಾ ಪ್ರಮಾಣ ಪತ್ರಗಳಿಗೆ ಬದಲಾದ ಅವುಗಳ ದ್ವಿಪ್ರತಿಗಳನ್ನು ನೀಡುವುದು;

(ಡಿ) ವಿಮಾ ಪ್ರಮಾಣ ಪತ್ರಗಳ ಅಭಿರಕ್ಷೆ, ಹಾಜರಾತಿ, ರದ್ದಿಯಾತಿ ಮತ್ತು ವಾಪಸಾತಿ;

(ಇ) ಈ ಅಧ್ಯಾಯದ ಮೇರೆಗೆ ನೀಡಲಾದ ವಿಮಾ ಪಾಲಿಸಿಗಳ ಬಗ್ಗೆ ವಿಮಾಕಾರನು ಇಡಬೇಕಾದ ದಾಖಲೆಗಳು;

(ಎಫ್) ಈ ಅಧ್ಯಾಯದ ಉಪಬಂಧಗಳಿಂದ ವಿನಾಯಿತಿಗೊಳಿಸಿದ ವ್ಯಕ್ತಿಗಳನ್ನು ಅಥವಾ ವಾಹನಗಳನ್ನು ಪ್ರಮಾಣ ಪತ್ರಗಳಿಂದ ಅಥವಾ ಅನ್ಯಥಾ ಗುರುತಿಸುವುದು;

(ಜಿ) ವಿಮಾಕಾರರು ವಿಮಾ ಪಾಲಿಸಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದು;

(ಹೆಚ್) ಭಾರತದಲ್ಲಿ ತಾತ್ಕಾಲಿಕವಾಗಿ ಉಳಿಯುವ ವ್ಯಕ್ತಿಗಳು ಭಾರತಕ್ಕೆ ತಂದ ವಾಹನಗಳಿಗೆ ಅಥವಾ ಪರಸ್ಪರ ಸಂಬಂಧವುಳ್ಳ ದೇಶದಲ್ಲಿ ನೋಂದಾಯಿತವಾಗಿದ್ದು, ಭಾರತದಲ್ಲಿ ಯಾವುದೇ ಮಾರ್ಗ ಅಥವಾ ಯಾವುದೇ ಕ್ಷೇತ್ರದಲ್ಲಿ ಓಡಾಡುವ ವಾಹನಗಳಿಗೆ ಈ ಅಧ್ಯಾಯದ ಉಪಬಂಧಗಳನ್ನು ನಿಯಮಿಸಲಾದ ಮಾರ್ಪಾಡುಗಳೊಡನೆ ಅನ್ವಯಿಸಿ ಅವುಗಳನ್ನು ಅಳವಡಿಸಿಕೊಳ್ಳುವುದು;

(ಐ) 160ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿವರಗಳನ್ನು ಒದಗಿಸುವ ನಮೂನೆ ಮತ್ತು ಕಾಲಮಿತಿ; ಮತ್ತು

(ಜೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ

- ಇವುಗಳನ್ನು ಉಪಬಂಧಿಸಬಹುದು.

## ಅಧ್ಯಾಯ - XII

### ಕ್ಲೇಮುಗಳ ನ್ಯಾಯಾಧಿಕರಣಗಳು

165. ಕ್ಲೇಮುಗಳ ನ್ಯಾಯಾಧಿಕರಣಗಳು:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ಷೇತ್ರಕ್ಕಾಗಿ, ಮೋಟಾರು ವಾಹನಗಳ ಉಪಯೋಗದಿಂದ ಉಂಟಾಗುವ ವ್ಯಕ್ತಿಗಳ ಮರಣ ಅಥವಾ ಅವರ ದೈಹಿಕ ಕ್ಷತಿಯನ್ನು ಅಥವಾ ಹಾಗೆ ಮೂರನೇ ಪಕ್ಷದ ಅಥವಾ ಇವೆರಡನ್ನೂ ಒಳಗೊಳ್ಳುವ ಅಪಘಾತಗಳ ಸಂಬಂಧದಲ್ಲಿ ಸಲ್ಲಿಸಲಾಗುವ ಪರಿಹಾರದ ಕ್ಲೇಮುಗಳ ಬಗ್ಗೆ ನ್ಯಾಯ ನಿರ್ಣಯ ಮಾಡುವ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಮೋಟಾರು ಅಪಘಾತಗಳ ಕ್ಲೇಮುಗಳ ನ್ಯಾಯಾಧಿಕರಣಗಳನ್ನು (ಇಲ್ಲಿ ಇನ್ನುಮುಂದೆ ಈ ಅಧ್ಯಾಯದಲ್ಲಿ ಕ್ಲೇಮುಗಳ ನ್ಯಾಯಾಧಿಕರಣಗಳೆಂದು ಉಲ್ಲೇಖಿಸಲಾಗಿದೆ) ರಚಿಸಬಹುದು.

ವಿವರಣೆ:- ಸಂದೇಹಗಳ ನಿವಾರಣೆಗಾಗಿ, "ಮೋಟಾರು ವಾಹನಗಳ ಉಪಯೋಗದಿಂದ ಉಂಟಾಗುವ ವ್ಯಕ್ತಿಗಳ ಮರಣ ಅಥವಾ ಅವರ ದೈಹಿಕ ಕ್ಷತಿ ಇವುಗಳನ್ನು ಒಳಗೊಳ್ಳುವ ಅಪಘಾತಗಳಿಗೆ ಸಂಬಂಧಿಸಿ ಪರಿಹಾರಕ್ಕಾಗಿ ಸಲ್ಲಿಸುವ ಕ್ಲೇಮುಗಳು" ಈ ಪದಾವಳಿಯಲ್ಲಿ 140ನೇ ಪ್ರಕರಣದ ಮತ್ತು 163ಎ ಪ್ರಕರಣದ ಮೇರೆಗಿನ ಪರಿಹಾರಕ್ಕಾಗಿ ಸಲ್ಲಿಸಿದ ಕ್ಲೇಮುಗಳು ಒಳಗೊಳ್ಳುತ್ತವೆ ಎಂದು ಈ ಮೂಲಕ ಘೋಷಿಸಲಾಗಿದೆ.

(2) ಕ್ಲೇಮುಗಳ ನ್ಯಾಯಾಧಿಕರಣವು, ರಾಜ್ಯ ಸರ್ಕಾರವು ನೇಮಿಸುವುದು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಅದು ಎರಡು ಅಥವಾ ಹೆಚ್ಚು ಸದಸ್ಯರನ್ನು ಒಳಗೊಂಡಿರುವಲ್ಲಿ, ಅವರಲ್ಲಿ ಒಬ್ಬರನ್ನು ಅದರ ಅಧ್ಯಕ್ಷನನ್ನಾಗಿ ನೇಮಿಸತಕ್ಕದ್ದು.

(3) ಒಬ್ಬ ವ್ಯಕ್ತಿಯು,-

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು; ಅಥವಾ

(ಬಿ) ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು; ಅಥವಾ

(ಸಿ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ಜಿಲ್ಲಾ ನ್ಯಾಯಾಧೀಶನಾಗಿ ನೇಮಕವಾಗಲು ಅರ್ಹನಾಗಿದ್ದ ಹೊರತು

- ಕ್ಲೇಮು ನ್ಯಾಯಾಧಿಕರಣದ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(4) ಯಾವುದೇ ಪ್ರದೇಶಕ್ಕಾಗಿ ಎರಡು ಅಥವಾ ಹೆಚ್ಚು ಕ್ಲೇಮುಗಳ ನ್ಯಾಯಾಧಿಕರಣಗಳು ರಚಿತವಾಗಿರುವಲ್ಲಿ, ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಅವರ ನಡುವೆ ವ್ಯವಹಾರದ ಹಂಚಿಕೆಯನ್ನು ವಿನಿಯಮಿಸಬಹುದು.

166. ಪರಿಹಾರಕ್ಕಾಗಿ ಅರ್ಜಿ:- (1) 165ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಅಪಘಾತಕ್ಕೆ ಸಂಬಂಧಿಸಿದ ಪರಿಹಾರಕ್ಕೆ ಸಲ್ಲಿಸುವ ಅರ್ಜಿಯನ್ನು,-

(ಎ) ಕ್ಷತಿ ಅನುಭವಿಸಿದ ವ್ಯಕ್ತಿಯು; ಅಥವಾ

(ಬಿ) ಸ್ವತ್ತಿನ ಒಡೆಯನು; ಅಥವಾ

(ಸಿ) ಅಪಘಾತದಿಂದ ಮರಣ ಉಂಟಾಗಿದ್ದರೆ, ಮೃತನ ಕಾನೂನುಸಮ್ಮತ ಎಲ್ಲಾ ಪ್ರತಿನಿಧಿಗಳು ಅಥವಾ ಅವರಲ್ಲಿ ಯಾರೇ ಒಬ್ಬನು; ಅಥವಾ

(ಡಿ) ಸಂದರ್ಭಾನುಸಾರ, ಕ್ಷತಿ ಹೊಂದಿದ ವ್ಯಕ್ತಿಯು ಅಥವಾ ಮೃತನ ಎಲ್ಲಾ ಕಾನೂನು ಸಮ್ಮತ ಪ್ರತಿನಿಧಿಗಳು ಅಥವಾ ಅವರಲ್ಲಿ ಯಾರೇ ಒಬ್ಬನು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾರೇ ಏಜೆಂಟನು ಸಲ್ಲಿಸಬಹುದು:

ಪರಂತು, ಪರಿಹಾರಕ್ಕಾಗಿ ಸಲ್ಲಿಸಿದ ಯಾವುದೇ ಅಂಥ ಅರ್ಜಿಯಲ್ಲಿ ಮೃತನ ಎಲ್ಲಾ ಕಾನೂನುಸಮ್ಮತ ಪ್ರತಿನಿಧಿಗಳು ಸೇರಿಕೊಂಡಿರುವಲ್ಲಿ, ಮೃತನ ಎಲ್ಲಾ ಕಾನೂನುಸಮ್ಮತ ಪ್ರತಿನಿಧಿಗಳೆಲ್ಲರ ಪರವಾಗಿ ಅಥವಾ ಅವರ ಪ್ರಯೋಜನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಹಾಗೆ ಸೇರಿಕೊಂಡಿಲ್ಲದ ಕಾನೂನುಸಮ್ಮತ ಪ್ರತಿನಿಧಿಗಳನ್ನು ಅರ್ಜಿಗೆ ಪ್ರತಿವಾದಿಗಳಾಗಿ ಸೇರಿಸಿಕೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು, ಅಪಘಾತವು ಸಂಭವಿಸಿದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕ್ಲೇಮುಗಳ ನ್ಯಾಯಾಧಿಕರಣಕ್ಕಾಗಲಿ ಅಥವಾ ಕ್ಲೇಮುದಾರನು ವಾಸಿಸುತ್ತಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಪ್ರದೇಶದ ಸ್ಥಳೀಯ ಪರಿಮಿತಿಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಥವಾ ಪ್ರತಿವಾದಿಯು ವಾಸಿಸುತ್ತಿರುವ ಪ್ರದೇಶದ ಸ್ಥಳೀಯ ಪರಿಮಿತಿಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕ್ಲೇಮುಗಳ ನ್ಯಾಯಾಧಿಕರಣಕ್ಕಾಗಲಿ ಕ್ಲೇಮುದಾರನ ಇಚ್ಛಾನುಸಾರ ಸಲ್ಲಿಸತಕ್ಕದ್ದು ಮತ್ತು ಅದು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಇರತಕ್ಕದ್ದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು:

ಪರಂತು, ಅಂಥ ಅರ್ಜಿಯಲ್ಲಿ 140ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಯಾವುದೇ ಕ್ಲೇಮನ್ನು ಮಾಡಿಲ್ಲದಿರುವಲ್ಲಿ, ಅರ್ಜಿದಾರನು ರುಜು ಹಾಕುವುದಕ್ಕೆ ಮೊದಲು ಆ ಬಗ್ಗೆ ಒಂದು ಪ್ರತ್ಯೇಕ ಹೇಳಿಕೆಯನ್ನು ಆ ಅರ್ಜಿಯು ಒಳಗೊಂಡಿರತಕ್ಕದ್ದು.

[(3) x x x x ]

(4) ಕ್ಲೇಮುಗಳ ನ್ಯಾಯಾಧಿಕರಣವು 158ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಲ್ಪಟ್ಟ ಅಪಘಾತಗಳ ಯಾವುದೇ ವರದಿಯನ್ನು ಈ ಅಧಿನಿಯಮದ ಮೇರೆಗೆ ಪರಿಹಾರಕ್ಕಾಗಿ ಸಲ್ಲಿಸಲಾದ ಅರ್ಜಿಯೆಂದು ಭಾವಿಸತಕ್ಕದ್ದು.

167. ಕೆಲವು ಸಂದರ್ಭಗಳಲ್ಲಿ ಪರಿಹಾರದ ಕ್ಲೇಮುಗಳ ಬಗ್ಗೆ ಆಯ್ಕೆ:- ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923 (1923ರ 3) ರಲ್ಲಿ ಏನೇ ಇದ್ದರೂ, ಯಾರೇ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಯು ಈ ಅಧಿನಿಯಮದ ಮೇರೆಗೆ ಮತ್ತು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923ರ ಮೇರೆಗೆ ಸಹ ಪರಿಹಾರದ ಕ್ಲೇಮು ಉಂಟಾಗುವಲ್ಲಿ, ಪರಿಹಾರಕ್ಕೆ ಹಕ್ಕುಳ್ಳ ವ್ಯಕ್ತಿಯು Xನೇ ಅಧ್ಯಾಯದ ಉಪಬಂಧಗಳಿಗೆ ಬಾಧಕವಾಗದಂತೆ ಅಂಥ ಪರಿಹಾರವನ್ನು ಆ ಅಧಿನಿಯಮಗಳ ಪೈಕಿ ಯಾವೊಂದರ ಮೇರೆಗೆ ಕ್ಲೇಮು ಮಾಡಬಹುದೇ ಹೊರತು, ಅವೆರಡೂ ಅಧಿನಿಯಮಗಳ ಮೇರೆಗೆ ಕ್ಲೇಮು ಮಾಡತಕ್ಕದ್ದಲ್ಲ.

168. ಕ್ಲೇಮುಗಳ ನ್ಯಾಯಾಧಿಕರಣದ ಐತೀರ್ಪು:- (1) 166ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಪರಿಹಾರದ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಕ್ಲೇಮು ನ್ಯಾಯಾಧಿಕರಣವು, ವಿಮಾಕಾರನಿಗೆ ಅರ್ಜಿಯ ಬಗ್ಗೆ ನೋಟೀಸನ್ನು ಕೊಟ್ಟ ತರುವಾಯ ಮತ್ತು ಪಕ್ಷಕಾರರಿಗೆ (ವಿಮಾಕಾರನೂ ಸೇರಿದಂತೆ) ಸುನಾವಣೆಯ ಅವಕಾಶವನ್ನು ಕೊಟ್ಟ ತರುವಾಯ ಕ್ಲೇಮಿನ ಬಗ್ಗೆ ಅಥವಾ ಸಂದರ್ಭಾನುಸಾರವಾಗಿ ಕ್ಲೇಮುಗಳ ಪೈಕಿ ಪ್ರತಿಯೊಂದರ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು 162ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ತನಗೆ ನ್ಯಾಯವೆಂದು ತೋರುವ ಪರಿಹಾರದ ಮೊಬಲಗನ್ನು ನಿರ್ಧರಿಸುತ್ತಾ ಮತ್ತು ಪರಿಹಾರವು ಸಂದಾಯವಾಗತಕ್ಕ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸುತ್ತಾ ಐತೀರ್ಪನ್ನು ನೀಡಬಹುದು ಮತ್ತು ಆ ಐತೀರ್ಪನ್ನು ನೀಡುವಾಗ, ಸಂದರ್ಭಾನುಸಾರ, ಅಪಘಾತಕ್ಕೆ ಒಳಗಾಗಿರುವ ವಾಹನದ ವಿಮಾಕಾರ ಅಥವಾ ಒಡೆಯ ಅಥವಾ ಚಾಲಕನು ಅಥವಾ ಅವರೆಲ್ಲರೂ ಅಥವಾ ಅವರಲ್ಲಿ ಯಾರಾದರೂ ಸಂದಾಯ ಮಾಡಬೇಕಾದ ಮೊತ್ತವನ್ನು ಕ್ಲೇಮು ನ್ಯಾಯಾಧಿಕರಣವು ನಿರ್ದಿಷ್ಟಪಡಿಸತಕ್ಕದ್ದು:

ಪರಂತು, ಅಂಥ ಅರ್ಜಿಯು ಯಾರೇ ವ್ಯಕ್ತಿಯ ಮರಣ ಅಥವಾ ಖಾಯಂ ಅಸಮರ್ಥತೆಯ ಬಗ್ಗೆ 140ನೇ ಪ್ರಕರಣದ ಮೇರೆಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಿರುವಲ್ಲಿ, ಅಂಥ ಮರಣ ಅಥವಾ ಖಾಯಂ ಅಸಮರ್ಥತೆಯ ಬಗ್ಗೆ ನಷ್ಟ ಪರಿಹಾರಕ್ಕಾಗಿ ಇರುವ ಅಂಥ ಕ್ಲೇಮು ಮತ್ತು ಇತರ ಯಾವುದೇ ಕ್ಲೇಮನ್ನು (ಅಂಥ ಅರ್ಜಿಯಲ್ಲಿ ಮಾಡಿರಲಿ ಅಥವಾ ಅನ್ಯಥಾ) Xನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು.

(2) ಕ್ಲೇಮುಗಳ ನ್ಯಾಯ ಮಂಡಲಿಯು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಐತೀರ್ಪಿನ ದಿನಾಂಕದಿಂದ 15 ದಿನಗಳೊಳಗಾಗಿ ಸಂಬಂಧಪಟ್ಟ ಪಕ್ಷಕಾರರಿಗೆ ಐತೀರ್ಪಿನ ಪ್ರತಿಗಳನ್ನು ತಲುಪಿಸಲು ತಕ್ಕ ಏರ್ಪಾಟು ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಐತೀರ್ಪನ್ನು ನೀಡಿದಾಗ, ಅಂಥ ಐತೀರ್ಪಿನ ನಿಬಂಧನೆಗಳಲ್ಲಿ ಯಾವುದೇ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಅಗತ್ಯಪಡಿಸಲಾದ ವ್ಯಕ್ತಿಯು, ಕ್ಲೇಮುಗಳ ನ್ಯಾಯ ಮಂಡಲಿಯ ಮೂಲಕ ಐತೀರ್ಪನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಕ್ಲೇಮುಗಳ ನ್ಯಾಯ ಮಂಡಲಿಯು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಐತೀರ್ಪು ನೀಡಿದ ಸಂಪೂರ್ಣ ಮೊಬಲಗನ್ನು ಠೇವಣಿ ಇಡತಕ್ಕದ್ದು.

169. ಕ್ಲೇಮು ನ್ಯಾಯ ಮಂಡಲಿಯ ಪ್ರಕ್ರಿಯೆ ಮತ್ತು ಅಧಿಕಾರಗಳು:- (1) 168ನೇ ಪ್ರಕರಣದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವಲ್ಲಿ, ಈ ಬಗ್ಗೆ ಮಾಡಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಕ್ಲೇಮುಗಳ ನ್ಯಾಯಮಂಡಲಿಯು ತಾನು ಸೂಕ್ತವೆಂದು ಪರಿಗಣಿಸುವಂಥ ಸಂಕ್ಷಿಪ್ತ ಪ್ರಕ್ರಿಯೆಯನ್ನು ಅನುಸರಿಸಬಹುದು.

(2) ಕ್ಲೇಮು ನ್ಯಾಯ ಮಂಡಲಿಯು, ಪ್ರಮಾಣದ ಮೇಲೆ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವ ಹಾಗೂ ದಸ್ತಾವೇಜುಗಳು ಮತ್ತು ಮುಖ್ಯ ವಸ್ತುಗಳ ಶೋಧನೆ ಮತ್ತು ಹಾಜರಾತಿಯನ್ನು ಒತ್ತಾಯಿಸಲು ಮತ್ತು ನಿಯಮಿಸಬಹುದಾದ ಇತರ ಉದ್ದೇಶಗಳಿಗಾಗಿ, ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಕ್ಲೇಮು ನ್ಯಾಯ ಮಂಡಲಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973 ರ (1974 ರ 2) 195ನೇ ಪ್ರಕರಣ ಮತ್ತು XXVIನೇ ಅಧ್ಯಾಯದ ಎಲ್ಲಾ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(3) ಈ ಬಗ್ಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಕ್ಲೇಮು ನ್ಯಾಯ ಮಂಡಲಿಯು, ನಷ್ಟ ಪರಿಹಾರದ ಯಾವುದೇ ಕ್ಲೇಮಿನ ಬಗ್ಗೆ ನ್ಯಾಯ ನಿರ್ಣಯ ನೀಡುವ ಉದ್ದೇಶಕ್ಕಾಗಿ ವಿಚಾರಣೆಗೆ ಸುಸಂಬದ್ಧವಾದ ಯಾವುದೇ ವಿಷಯದಲ್ಲಿ ವಿಶೇಷ ಜ್ಞಾನವನ್ನು ಪಡೆದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ವಿಚಾರಣೆಯನ್ನು ನಡೆಸುವಲ್ಲಿ ಸಹಾಯಮಾಡಲು ಆಯ್ಕೆ ಮಾಡಬಹುದು.

170. ಕೆಲವು ಸಂದರ್ಭಗಳಲ್ಲಿ ವಿಮಾಕಾರನನ್ನು ಪಕ್ಷಕಾರನನ್ನಾಗಿ ಸೇರಿಸುವುದು:- ಯಾವುದೇ ವಿಚಾರಣೆಯು ನಡೆಯುತ್ತಿರುವಾಗ,-

(ಎ) ಕ್ಲೇಮು ಮಾಡುವ ವ್ಯಕ್ತಿ ಮತ್ತು ಯಾರ ವಿರುದ್ಧವಾಗಿ ಕ್ಲೇಮು ಮಾಡಲಾಯಿತೋ ಆ ವ್ಯಕ್ತಿ ಇವರು ಷಾಮೀಲಾಗಿರುವರೆಂದು; ಅಥವಾ

(ಬಿ) ಯಾವ ವ್ಯಕ್ತಿಯ ವಿರುದ್ಧವಾಗಿ ಕ್ಲೇಮು ಮಾಡಲಾಯಿತೋ ಆ ವ್ಯಕ್ತಿಯ ಕ್ಲೇಮನ್ನು ವಿರೋಧಿಸಲು ತಪ್ಪಿರುವನೆಂದು

- ಕ್ಲೇಮು ನ್ಯಾಯಮಂಡಲಿಗೆ ಮನದಟ್ಟಾದರೆ, ಅದು ತಾನು ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ, ಅಂಥ ಕ್ಲೇಮಿಗೆ ಸಂಬಂಧಿಸಿದಂತೆ ಹೊಣೆಗಾರನಾಗಬಹುದಾದ ವಿಮಾಕಾರನನ್ನು ಆ ವ್ಯವಹರಣೆಗೆ ಒಬ್ಬ ಪಕ್ಷಕಾರನನ್ನಾಗಿ ಸೇರಿಸತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಹಾಗೆ ಪಕ್ಷಕಾರನನ್ನಾಗಿ ಸೇರಿಸಲಾದ ವಿಮಾಕಾರನು 149ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಯಾರ ವಿರುದ್ಧ ಕ್ಲೇಮು ಮಾಡಲಾಗಿದೆಯೋ ಆ ವ್ಯಕ್ತಿಗೆ ದೊರೆಯುವ ಎಲ್ಲಾ ಅಥವಾ ಯಾವುವೇ ಕಾರಣಗಳ ಮೇಲೆ ಕ್ಲೇಮನ್ನು ವಿರೋಧಿಸಲು ಹಕ್ಕು ಹೊಂದಿರತಕ್ಕದ್ದು.

171. ಯಾವುದೇ ಕ್ಲೇಮನ್ನು ಅಂಗೀಕರಿಸಿದಲ್ಲಿ ಬಡ್ಡಿ ಪಾವತಿಗೆ ಐತೀರ್ಪು ನೀಡುವುದು:- ಈ ಅಧಿನಿಯಮದ ಮೇರೆಗೆ ಮಾಡಲಾದ ನಷ್ಟ ಪರಿಹಾರದ ಕ್ಲೇಮನ್ನು ಯಾವುವೇ ಕ್ಲೇಮುಗಳ ನ್ಯಾಯ ಮಂಡಲಿಯು ಅಂಗೀಕರಿಸುವಲ್ಲಿ, ಅಂಥ ನ್ಯಾಯ ಮಂಡಲಿಯ ನಷ್ಟ ಪರಿಹಾರದ ಮೊಬಲಗಿನ ಜೊತೆಗೆ, ಈ ಬಗ್ಗೆ ಅದು ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಮತ್ತು ಕ್ಲೇಮು ಮಾಡಿದಂಥ ದಿನಾಂಕಕ್ಕೆ ಮುಂಚಿನದಲ್ಲದಂಥ ದಿನಾಂಕದಿಂದ ಸರಳ ಬಡ್ಡಿಯನ್ನು ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

172. ಕೆಲವು ಸಂದರ್ಭಗಳಲ್ಲಿ ನಷ್ಟ ಪರಿಹಾರ ಸಂಬಂಧವಾದ ಖರ್ಚುಗಳ ಬಗ್ಗೆ ಐತೀರ್ಪು ನೀಡುವುದು:- (1) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಷ್ಟ ಪರಿಹಾರದ ಕ್ಲೇಮಿನ ಬಗ್ಗೆ ನ್ಯಾಯ ನಿರ್ಣಯ ನೀಡುವ ಯಾವುದೇ ಕ್ಲೇಮು ನ್ಯಾಯ ಮಂಡಲಿಗೆ,-

(ಎ) ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವ ಸಂಗತಿಯನ್ನು ನಿರೂಪಿಸುವ ಮೂಲಕ ವಿಮಾ ಪಾಲಿಸಿಯನ್ನು ಪಡೆಯಲಾಗಿತ್ತೆಂಬ ಕಾರಣದಿಂದ ಅದು ಶೂನ್ಯವೆಂದು; ಅಥವಾ

(ಬಿ) ಯಾರೇ ಪಕ್ಷಕಾರನು ಅಥವಾ ವಿಮಾಕಾರನು ಸುಳ್ಳಾಗಿರುವ ಅಥವಾ ಕಿರುಕುಳಕಾರಕವಾದ ಕ್ಲೇಮನ್ನು ಅಥವಾ ಪ್ರತಿವಾದವನ್ನು ಮುಂದೊಡ್ಡಿದ್ದಾನೆಂದು

- ಮನದಟ್ಟಾದರೆ, ಅದು ಕಾರಣಗಳನ್ನು ದಾಖಲುಮಾಡಿ ಅಂಥ ನ್ಯಾಯ ಮಂಡಲಿಯ ತಪ್ಪು ನಿರೂಪಣೆಯ ಅಪರಾಧ ಮಾಡಿದ ಪಕ್ಷಕಾರ ಅಥವಾ ಅಂಥ ಕ್ಲೇಮು ಅಥವಾ ಪ್ರತಿವಾದವನ್ನು ಮುಂದೊಡ್ಡಿದ ವ್ಯಕ್ತಿಯು, ಸಂದರ್ಭಾನುಸಾರ, ವಿಮಾಕಾರನಿಗೆ ಅಥವಾ ಯಾರ ವಿರುದ್ಧ ಅಂಥ ಕ್ಲೇಮು ಅಥವಾ ಪ್ರತಿವಾದವನ್ನು ಮುಂದೊಡ್ಡಲಾಗಿದೆಯೋ ಆ ಪಕ್ಷಕಾರನಿಗೆ ನಷ್ಟ ಪರಿಹಾರದ ರೂಪದಲ್ಲಿ ವಿಶೇಷ ಖರ್ಚುಗಳನ್ನು ಸಂದಾಯ ಮಾಡಬೇಕೆಂದು ಆದೇಶ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಶೇಷ ಖರ್ಚುಗಳಿಗಾಗಿ ಸಾವಿರ ರೂಪಾಯಿಗಳಿಗಿಂತ ಹೆಚ್ಚಾದ ಯಾವುದೇ ಮೊಬಲಗಿಗಾಗಿ ಕ್ಲೇಮು ನ್ಯಾಯಮಂಡಲಿಯು ಆದೇಶವನ್ನು ಮಾಡತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಯಾರ ವಿರುದ್ಧವಾಗಿ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ವಿಮಾಕಾರನಿಗೆ, ಅದರ ಕಾರಣದಿಂದಾಗಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ತಪ್ಪು ನಿರೂಪಣೆ, ಕ್ಲೇಮು ಅಥವಾ ಪ್ರತಿವಾದಕ್ಕೆ ಸಂಬಂಧಿಸಿದ ಯಾವುದೇ ಆಪರಾಧಿಕ ಹೊಣೆಗಾರಿಕೆಯಿಂದ ವಿನಾಯಿತಿ ದೊರೆಯತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ, ಯಾವುದೇ ತಪ್ಪು ನಿರೂಪಣೆ, ಕ್ಲೇಮು ಅಥವಾ ಪ್ರತಿವಾದಕ್ಕೆ ಸಂಬಂಧಿಸಿದಂತೆ ನಷ್ಟ ಪರಿಹಾರದ ರೂಪದಲ್ಲಿ ಕೊಟ್ಟ ಯಾವುದೇ ಮೊಬಲಗನ್ನು ಅಂಥ ತಪ್ಪು ನಿರೂಪಣೆ, ಕ್ಲೇಮು ಅಥವಾ ಪ್ರತಿವಾದಕ್ಕೆ ಸಂಬಂಧಿಸಿದ ನಷ್ಟ ಪರಿಹಾರದ ಬಗೆಗಿನ ನಷ್ಟ ಭರ್ತಿಗಾಗಿ ಮಾಡಲಾದ ಆ ತರುವಾಯದ ಯಾವುದೇ ದಾವೆಯಲ್ಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

173. ಅಪೀಲುಗಳು:- (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕ್ಲೇಮು ನ್ಯಾಯಮಂಡಲಿಯ ಐತೀರ್ಪಿನಿಂದ ಬಾಧಿತನಾದ ಯಾರೇ ವ್ಯಕ್ತಿಯು, ಐತೀರ್ಪಿನ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಂಥ ಐತೀರ್ಪಿನ ನಿಬಂಧನೆಗನುಸಾರವಾಗಿ ಯಾವುದೇ ಮೊಬಲಗನ್ನು ಪಾವತಿ ಮಾಡುವುದರ ಬಗ್ಗೆ ಯಾರೇ ವ್ಯಕ್ತಿಯು ಉಚ್ಚ ನ್ಯಾಯಾಲಯವು ನಿರ್ದೇಶಿಸಿದ ರೀತಿಯಲ್ಲಿ ಇಪ್ಪತ್ತೈದು ಸಾವಿರ ರೂಪಾಯಿ ಅಥವಾ ಹಾಗೆ ನೀಡಿದ ಮೊಬಲಗಿನ ಶೇಕಡ ಐವತ್ತು, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಠೇವಣಿ ಇಟ್ಟ ಹೊರತು ಅವನ ಅಪೀಲನ್ನು ಉಚ್ಚ ನ್ಯಾಯಾಲಯವು ಸ್ವೀಕರಿಸತಕ್ಕದ್ದಲ್ಲ:

ಮತ್ತೂ ಪರಂತು, ಸಾಕಷ್ಟು ಕಾರಣಗಳಿಂದಾಗಿ ಅಪೀಲುದಾರನಿಗೆ ಸಕಾಲದಲ್ಲಿ ಅಪೀಲು ಸಲ್ಲಿಸಲು ಸಾಧ್ಯವಾಗಲಿಲ್ಲವೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ತೊಂಬತ್ತು ದಿನಗಳ ಅವಧಿ ಮುಗಿದ ಮೇಲೂ ಅಪೀಲನ್ನು ಸ್ವೀಕರಿಸಬಹುದು.

(2) ಅಪೀಲಿನಲ್ಲಿರುವ ವಿವಾದದ ಮೊಬಲಗು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದಲ್ಲಿ, ಕ್ಲೇಮು ನ್ಯಾಯ ಮಂಡಲಿಯ ಯಾವುದೇ ಐತೀರ್ಪಿನ ವಿರುದ್ಧ ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

174. ವಿಮಾಕಾರನಿಂದ ಹಣವನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವುದು:- ಐತೀರ್ಪಿನ ಮೇರೆಗೆ ಯಾರೇ ವ್ಯಕ್ತಿಯಿಂದ ಯಾವುದೇ ಮೊಬಲಗು ಬರಬೇಕಾಗಿರುವಲ್ಲಿ, ಕ್ಲೇಮು ನ್ಯಾಯ ಮಂಡಲಿಯು, ಆ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಯು ಮಾಡಿದ ಅರ್ಜಿಯ ಮೇಲೆ, ಆ ಮೊಬಲಗಿಗಾಗಿ ಕಲೆಕ್ಟರನಿಗೆ ಪ್ರಮಾಣ ಪತ್ರವನ್ನು ಕೊಡತಕ್ಕದ್ದು ಮತ್ತು ಆ ಕಲೆಕ್ಟರನು ಅದನ್ನು ಭೂ ಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

175. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ:- ಯಾವುದೇ ಪ್ರದೇಶಕ್ಕಾಗಿ ಯಾವುದೇ ಕ್ಲೇಮು ನ್ಯಾಯ ಮಂಡಲಿಯನ್ನು ರಚಿಸಿರುವಲ್ಲಿ, ಆ ಪ್ರದೇಶದ ಕ್ಲೇಮು ನ್ಯಾಯ ಮಂಡಲಿಯು ನ್ಯಾಯ ನಿರ್ಣಯ ನೀಡಬಹುದಾದ ನಷ್ಟ ಪರಿಹಾರದ ಯಾವುದೇ ಕ್ಲೇಮಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಸ್ವೀಕರಿಸಲು ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರತಕ್ಕದ್ದಲ್ಲ ಮತ್ತು ನಷ್ಟ ಪರಿಹಾರದ ಕ್ಲೇಮಿನ ಸಂಬಂಧದಲ್ಲಿ ಕ್ಲೇಮುಗಳ ನ್ಯಾಯ ಮಂಡಲಿಯಿಂದ ಅಥವಾ ಅದರ ಮುಂದೆ ಅಥವಾ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮದ ಬಗ್ಗೆ ಯಾವುದೇ ನಿರ್ಬಂಧಕಾಜ್ಞೆಯನ್ನು ಸಿವಿಲ್ ನ್ಯಾಯಾಲಯವು ಕೊಡತಕ್ಕದ್ದಲ್ಲ.

176. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ:- ರಾಜ್ಯ ಸರ್ಕಾರವು, 165 ರಿಂದ 174ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ನಿಯಮಗಳನ್ನು ರಚಿಸಬಹುದು ಮತ್ತು ವಿಶೇಷವಾಗಿ ಅಂತಹ ನಿಯಮಗಳು ಈ ಕೆಳಗಿನ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ನಷ್ಟ ಪರಿಹಾರದ ಕ್ಲೇಮಿನ ಅರ್ಜಿ ನಮೂನೆ ಮತ್ತು ಅದರಲ್ಲಿರಬಹುದಾದ ವಿವರಗಳು, ಮತ್ತು ಅಂತಹ ಅರ್ಜಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಫೀಜುಗಳು, ಯಾವುದಾದರೂ ಇದ್ದರೆ ಅವು;

(ಬಿ) ಈ ಅಧ್ಯಾಯದ ಮೇರೆಗೆ ವಿಚಾರಣೆಯನ್ನು ಕೈಗೊಳ್ಳುವಲ್ಲಿ ಕ್ಲೇಮು ನ್ಯಾಯ ಮಂಡಳಿಯು ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿದ್ದು ಕ್ಲೇಮು ನ್ಯಾಯ ಮಂಡಲಿಯು ಚಲಾಯಿಸಬಹುದಾದ ಅಧಿಕಾರಗಳು;

(ಡಿ) ಕ್ಲೇಮು ನ್ಯಾಯ ಮಂಡಲಿಯ ಐತೀರ್ಪಿನ ವಿರುದ್ಧ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಎಷ್ಟು ಫೀಜನ್ನು (ಯಾವುದಾದರೂ ಇದ್ದರೆ) ಸಂದಾಯ ಮಾಡಿ ಅಪೀಲನ್ನು ಸಲ್ಲಿಸಬಹುದು; ಮತ್ತು

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

## ಅಧ್ಯಾಯ - **XIII**

### ಅಪರಾಧಗಳು, ದಂಡನೆಗಳು ಮತ್ತು ಪ್ರಕ್ರಿಯೆ

177. ಅಪರಾಧಗಳ ಬಗ್ಗೆ ದಂಡನೆಗಾಗಿ ಸಾಮಾನ್ಯ ಉಪಬಂಧಗಳು:- ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ವಿನಿಯಮ ಅಥವಾ ಅಧಿಸೂಚನೆಯ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆ ಅಪರಾಧಕ್ಕೆ ಯಾವುದೇ ದಂಡನೆಯನ್ನು ಉಪಬಂಧಿಸಿರದಿದ್ದರೆ ಮೊದಲ ಅಪರಾಧಕ್ಕಾಗಿ ಒಂದು ನೂರು ರೂಪಾಯಿವರೆಗಿನ ಮತ್ತು ಯಾವುದೇ ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ಮೂರು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

178. ಪಾಸು ಅಥವಾ ಟಿಕೇಟು ಇಲ್ಲದೆ ಪ್ರಯಾಣ ಮಾಡುವುದಕ್ಕೆ ಮತ್ತು ನಿರ್ವಾಹಕನ ಕರ್ತವ್ಯ ಲೋಪಕ್ಕೆ ಮತ್ತು ಕರಾರು ವಾಹನ ಮುಂತಾದವುಗಳನ್ನು ನಡೆಸಲು ತಿರಸ್ಕರಿಸುವುದಕ್ಕೆ ದಂಡ:- (1) ಯಾರೇ ವ್ಯಕ್ತಿಯು ಮಜಲು ವಾಹನದಲ್ಲಿ ಯುಕ್ತ ಪಾಸು ಅಥವಾ ಟಿಕೇಟು ಇಲ್ಲದೆ ಪ್ರಯಾಣ ಮಾಡಿದರೆ ಅಥವಾ ಮಜಲು ವಾಹನದಲ್ಲಿದ್ದು ಅಥವಾ ಅದರಿಂದ ಇಳಿದು ಅವನ ಪಾಸು ಅಥವಾ ಟಿಕೇಟನ್ನು ಪರೀಕ್ಷಿಸುವುದಕ್ಕಾಗಿ ಕೊಡಲು ಅಥವಾ ಅದನ್ನು ಕೇಳಿದಾಗ ಕೂಡಲೇ ವಶಾವಣೆ ಮಾಡಲು ತಪ್ಪಿದಲ್ಲಿ ಅಥವಾ ನಿರಾಕರಿಸಿದಲ್ಲಿ ಅವನು 500 ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

ವಿವರಣೆ:- ಈ ಪ್ರಕರಣದಲ್ಲಿ "ಪಾಸು" ಮತ್ತು "ಟಿಕೇಟು" ಎಂಬ ಪದಗಳಿಗೆ 124ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥಗಳೇ ಇರತಕ್ಕದ್ದು.

(2) ಮಜಲು ವಾಹನದ ನಿರ್ವಾಹಕನು ಅಥವಾ ಅಂಥ ಮಜಲು ವಾಹನದಲ್ಲಿ ಚಾಲಕನು ನಿರ್ವಾಹಕನ ಪ್ರಕಾರ್ಯಗಳನ್ನು ನೆರವೇರಿಸುತ್ತಿರುವಲ್ಲಿ ಅಂಥ ಚಾಲಕನು,-

(ಎ) ಮಜಲು ವಾಹನದಲ್ಲಿ ಪ್ರಯಾಣ ಮಾಡುತ್ತಿರುವ ವ್ಯಕ್ತಿಗೆ ಪ್ರಯಾಣ ದರಗಳನ್ನು ಸಂದಾಯ ಮಾಡಿದ ಮೇಲೆ ಟಿಕೆಟ್ಟನ್ನು ಕೊಡುವುದು ಕರ್ತವ್ಯವಾಗಿದ್ದು, ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ,-

(i) ಹಾಸಲನ್ನು ಸ್ವೀಕರಿಸಲು ತಪ್ಪಿದರೆ ಅಥವಾ ನಿರಾಕರಿಸಿದರೆ; ಅಥವಾ

(ii) ಟಿಕೇಟು ನೀಡಲು ತಪ್ಪಿದರೆ ಅಥವಾ ನಿರಾಕರಿಸಿದರೆ; ಅಥವಾ

(iii) ಕಾನೂನು ಮಾನ್ಯವಲ್ಲದ ಟಿಕೇಟನ್ನು ನೀಡಿದರೆ; ಅಥವಾ

(iv) ಕಡಿಮೆ ಮೌಲ್ಯದ ಟಿಕೇಟನ್ನು ಕೊಟ್ಟರೆ; ಅಥವಾ

(ಬಿ) ಯಾವುದೇ ಪಾಸು ಅಥವಾ ಟಿಕೇಟನ್ನು ಪರಿಶೀಲಿಸುವ ಕರ್ತವ್ಯವನ್ನು ಹೊಂದಿದ್ದು ಹಾಗೆ ಮಾಡಲು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ತಪ್ಪಿದರೆ ಅಥವಾ ನಿರಾಕರಿಸಿದರೆ

- ಅವನು ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ಪರ್ಮಿಟ್ಟಿನ ಧಾರಕ ಅಥವಾ ಮಜಲು ವಾಹನದ ಚಾಲಕನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಜಲು ವಾಹನವನ್ನು ನಡೆಸಲು ಅಥವಾ ಪ್ರಯಾಣಿಕರನ್ನು ಒಯ್ಯಲು ನಿರಾಕರಿಸಿದರೆ; ಅವನು,-

(ಎ) ಎರಡು ಚಕ್ರ ಅಥವಾ ಮೂರು ಚಕ್ರದ ವಾಹನಗಳ ಸಂಬಂಧದಲ್ಲಿ ಐವತ್ತು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ ಇನ್ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

179. ಆದೇಶಗಳ ಉಲ್ಲಂಘನೆ, ಅಡ್ಡಿಪಡಿಸುವುದು ಮತ್ತು ಮಾಹಿತಿಯನ್ನು ಕೊಡಲು ನಿರಾಕರಿಸುವುದು:- (1) ಯಾವುದೇ ನಿರ್ದೇಶನವನ್ನು ಕೊಡಲು ಈ ಅಧಿನಿಯಮದ ಮೇರೆಗೆ ಅಧಿಕಾರ ಪಡೆದ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯು ಕಾನೂನುಬದ್ಧವಾಗಿ ಕೊಟ್ಟ ಅಂಥ ನಿರ್ದೇಶನವನ್ನು ಬುದ್ಧಿಪೂರ್ವಕವಾಗಿ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯು ನಿರ್ವಹಿಸಲು ಅಗತ್ಯಪಡಿಸಲಾದ ಅಥವಾ ಅಧಿಕಾರ ಕೊಟ್ಟ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಂಥ ವ್ಯಕ್ತಿ ಅಥವಾ ಪ್ರಾಧಿಕಾರಿಗೆ

ಅಡ್ಡಿಯನ್ನುಂಟುಮಾಡಿದರೆ, ಆ ಅಪರಾಧಕ್ಕೆ ಇನ್ನಾವುದೇ ದಂಡವನ್ನು ಉಪಬಂಧಿಸಿರದಿದ್ದರೆ, ಅವನು ಐದು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು, ಅಂಥ ಮಾಹಿತಿಯನ್ನು ಬುದ್ಧಿಪೂರ್ವಕವಾಗಿ ತಡೆಹಿಡಿದಿದ್ದರೆ ಅಥವಾ ಅವನು ಸುಳ್ಳೆಂದು ತಿಳಿದಿರುವ ಅಥವಾ ಅವನು ನಿಜವೆಂದು ನಂಬಿಲ್ಲದ ಮಾಹಿತಿಯನ್ನು ಕೊಟ್ಟರೆ, ಆ ಅಪರಾಧಕ್ಕಾಗಿ ಇನ್ನಾವುದೇ ದಂಡವನ್ನು ಉಪಬಂಧಿಸಿರದಿದ್ದರೆ, ಅವನು ಒಂದು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

180. ವಾಹನವನ್ನು ನಡೆಸುವುದಕ್ಕೆ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ಕೊಡುವುದು:- ಮೋಟಾರು ವಾಹನದ ಒಡೆಯನಾಗಿದ್ದು ಅಥವಾ ಅದರ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯಾಗಿದ್ದು, 3ನೇ ಪ್ರಕರಣ ಅಥವಾ 4ನೇ ಪ್ರಕರಣದ ಉಪಬಂಧಗಳನ್ನು ಈಡೇರಿಸದ ಯಾರೇ ಇತರ ವ್ಯಕ್ತಿಯು ವಾಹನವನ್ನು ನಡೆಸಲು ಕಾರಣನಾದರೆ ಅಥವಾ ಅವನಿಗೆ ಅನುಮತಿಸಿದರೆ, ಅವನು ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

181. 3ನೇ ಪ್ರಕರಣ ಅಥವಾ 4ನೇ ಪ್ರಕರಣವನ್ನು ಉಲ್ಲಂಘಿಸಿ ವಾಹನಗಳನ್ನು ನಡೆಸುವುದು:- 3ನೇ ಪ್ರಕರಣ ಅಥವಾ 4ನೇ ಪ್ರಕರಣವನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ನಡೆಸುವ ಯಾರೇ ಆಗಲಿ, ಮೂರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

182. ಲೈಸನ್ಸುಗಳಿಗೆ ಸಂಬಂಧಿಸಿದ ಅಪರಾಧಗಳು:- (1) ಈ ಅಧಿನಿಯಮದ ಮೇರೆಗೆ ಚಾಲನ ಲೈಸನ್ಸನ್ನು ಹೊಂದಲು ಅಥವಾ ಪಡೆಯಲು ಅನರ್ಹನಾಗಿರುವ ಯಾರೇ ವ್ಯಕ್ತಿಯು, ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸಿದರೆ ಅಥವಾ ಚಾಲನ ಲೈಸನ್ಸಿಗಾಗಿ ಅರ್ಜಿ ಸಲ್ಲಿಸಿದರೆ ಅಥವಾ ಅದನ್ನು ಪಡೆದರೆ ಅಥವಾ ಹಿಂಬರಹವಿಲ್ಲದ ಚಾಲನ ಲೈಸನ್ಸನ್ನು ಪಡೆಯಲು ಹಕ್ಕಿಲ್ಲದವನಾಗಿದ್ದು, ಹಿಂದೆ ಅವನು ಪಡೆದಿದ್ದ ಚಾಲನ ಲೈಸೆನ್ಸಿನ ಮೇಲೆ ಮಾಡಿರುವ ಹಿಂಬರಹಗಳನ್ನು ಬಹಿರಂಗಪಡಿಸದೆ ಚಾಲನ ಲೈಸನ್ಸಿಗಾಗಿ ಅರ್ಜಿ ಸಲ್ಲಿಸಿದರೆ ಅಥವಾ ಅದನ್ನು ಪಡೆದರೆ, ಅವನು ಮೂರು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅವನು ಹಾಗೆ ಪಡೆದಿರುವ ಯಾವುದೇ ಚಾಲನ ಲೈಸನ್ಸು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(2) ನಿರ್ವಾಹಕನ ಲೈಸನ್ಸನ್ನು ಹೊಂದಲು ಅಥವಾ ಪಡೆಯಲು ಈ ಅಧಿನಿಯಮದ ಮೇರೆಗೆ ಅನರ್ಹನಾಗಿರುವ ಯಾರೇ ವ್ಯಕ್ತಿಯು, ಸಾರ್ವಜನಿಕ ಸ್ಥಳದಲ್ಲಿ ಮಜಲು ವಾಹನದ ನಿರ್ವಾಹಕನಾಗಿ ಕೆಲಸ ಮಾಡಿದರೆ ಅಥವಾ ನಿರ್ವಾಹಕನ ಲೈಸನ್ಸಿಗಾಗಿ ಅರ್ಜಿ ಸಲ್ಲಿಸಿದರೆ ಅಥವಾ ಪಡೆದರೆ ಅಥವಾ ಹಿಂಬರಹವಿಲ್ಲದ ನಿರ್ವಾಹಕನ ಲೈಸನ್ಸನ್ನು ಪಡೆಯಲು ಹಕ್ಕಿಲ್ಲದವನಾಗಿದ್ದು ಹಿಂದೆ ಅವನು ಪಡೆದಿರುವ ನಿರ್ವಾಹಕನ ಲೈಸನ್ಸಿನ ಮೇಲೆ ಮಾಡಿರುವ ಹಿಂಬರಹವನ್ನು ಬಹಿರಂಗಪಡಿಸದೆಯೇ ನಿರ್ವಾಹಕನ ಲೈಸನ್ಸಿಗಾಗಿ ಅರ್ಜಿ ಸಲ್ಲಿಸಿದರೆ ಅಥವಾ ಅದನ್ನು ಪಡೆದರೆ, ಅವನು ಒಂದು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅವನು ಹಾಗೆ ಪಡೆದಿರುವ ಯಾವುದೇ ನಿರ್ವಾಹಕನ ಲೈಸೆನ್ಸು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

182ಎ. ವಾಹನಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಪಟ್ಟ ಅಪರಾಧಗಳಿಗೆ ದಂಡನೆ:- 109ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲನೇ ಅಪರಾಧಕ್ಕಾಗಿ ಒಂದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

183. ಮಿತಿಮೀರಿದ ವೇಗದಲ್ಲಿ ವಾಹನವನ್ನು ನಡೆಸುವುದು, ಇತ್ಯಾದಿ:- (1) 112ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ವೇಗದ ಮಿತಿಗಳನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ನಡೆಸುವ ಯಾರೇ ವ್ಯಕ್ತಿಯು ನಾಲ್ಕುನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಈ ಉಪಪ್ರಕರಣದ ಮೇರೆಗೆ ಒಂದು ಅಪರಾಧಕ್ಕಾಗಿ ಹಿಂದೆಯೇ ಅಪರಾಧಿಯೆಂದು ನಿರ್ಣೀತನಾಗಿದ್ದು, ಪುನ: ಈ ಉಪಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ತಾನು ನಿಯೋಜಿಸಿಕೊಂಡಿರುವ ಅಥವಾ ಮೋಟಾರು ವಾಹನವನ್ನು ನಡೆಸುವಲ್ಲಿ ತನ್ನ ನಿಯಂತ್ರಣಕ್ಕೊಳಪಟ್ಟಿರುವ ಯಾರೇ ವ್ಯಕ್ತಿಯನ್ನು 112ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ವೇಗಮಿತಿಯನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ನಡೆಸುವಂತೆ ಮಾಡಿದರೆ, ಅವನು ಮೂರು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವನು ಈ ಹಿಂದೆಯೇ ಈ ಉಪಪ್ರಕರಣದ ಮೇರೆಗಿನ ಒಂದು ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದು, ಪುನ: ಈ ಉಪಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ, ಐದುನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು, ಅವನು ಕಾನೂನು ವಿರುದ್ಧವಾದ ವೇಗದಲ್ಲಿ ವಾಹನವನ್ನು ನಡೆಸುತ್ತಿದ್ದನೆಂದು ಒಬ್ಬ ಸಾಕ್ಷಿಯು ಅಭಿಪ್ರಾಯಪಡುವಲ್ಲಿ, ಆ ಅಭಿಪ್ರಾಯವು ಯಾವುದಾದರೂ ಯಾಂತ್ರಿಕ ಸಾಧನವನ್ನು ಬಳಸುವ ಮೂಲಕ ಪಡೆದ ಅಂದಾಜಿನ ಮೇಲೆ ಆಧಾರಿತವಾಗಿದೆಯೆಂದು ತೋರಿಸಿಕೊಟ್ಟಿದ್ದ ಹೊರತು, ಆ ಸಾಕ್ಷಿಯ ಸಾಕ್ಷ್ಯದ ಮೇಲೆ ಮಾತ್ರವೇ ಅಪರಾಧಿಯೆಂದು ನಿರ್ಣಯಿಸತಕ್ಕದ್ದಲ್ಲ.

(4) ಯಾವ ವೇಳಾಪಟ್ಟಿಯ ಮೇರೆಗೆ ಅಥವಾ ನಿರ್ದೇಶನವನ್ನು ಕೊಡುವುದರ ಮೇರೆಗೆ ಯಾವುದೇ ಪ್ರಯಾಣವನ್ನು ಅಥವಾ ಪ್ರಯಾಣದ ಭಾಗವನ್ನು ನಿರ್ದಿಷ್ಟ ಕಾಲದಲ್ಲಿ ಮುಗಿಸಬೇಕಾಗಿದೆಯೋ ಆ ವೇಳಾಪಟ್ಟಿಯ ಪ್ರಕಟಣೆ ಅಥವಾ ನಿರ್ದೇಶನ ಕೊಡುವಿಕೆಯು, 112ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ವೇಗ ಮಿತಿಯನ್ನು ಉಲ್ಲಂಘಿಸದೆ ಆ ನಿರ್ದಿಷ್ಟ ಕಾಲದೊಳಗೆ ಆ ಪ್ರಯಾಣ ಅಥವಾ ಪ್ರಯಾಣದ ಭಾಗವನ್ನು ಮುಗಿಸುವುದು ಆ ಸಂದರ್ಭದ ಸನ್ನಿವೇಶಗಳಲ್ಲಿ ಕಾರ್ಯಸಾಧ್ಯವಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ವೇಳಾಪಟ್ಟಿಯನ್ನು ಪ್ರಕಟಿಸಿದ ಅಥವಾ ನಿರ್ದೇಶನವನ್ನು ಕೊಟ್ಟ ವ್ಯಕ್ತಿಯು (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿರುವನೆಂಬ ಬಗ್ಗೆ ಮೇಲ್ನೋಟದ ಸಾಕ್ಷ್ಯವಾಗಿರತಕ್ಕದ್ದು.

184. ಅಪಾಯಕರ ರೀತಿಯಲ್ಲಿ ವಾಹನವನ್ನು ನಡೆಸುವುದು:- ಮೋಟಾರು ವಾಹನವನ್ನು ನಡೆಸಲಾದ ಸ್ಥಳದ ಸ್ವರೂಪ, ಸ್ಥಿತಿ ಮತ್ತು ಉಪಯೋಗವನ್ನು ಮತ್ತು ಆ ಕಾಲದಲ್ಲಿ ಆ ಸ್ಥಳದಲ್ಲಿ ವಾಸ್ತವಿಕವಾಗಿ ಇರುವ ಅಥವಾ ಇರಬಹುದೆಂದು ಸಕಾರಣವಾಗಿ ನಿರೀಕ್ಷಿಸಬಹುದಾದ ವಾಹನ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಅಪಾಯಕಾರಿಯಾಗುವ ವೇಗದಲ್ಲಿ ಅಥವಾ ರೀತಿಯಲ್ಲಿ ವಾಹನವನ್ನು ನಡೆಸುವ ಯಾರೇ ವ್ಯಕ್ತಿಯು ಅಪರಾಧಕ್ಕಾಗಿ ಮೊದಲ ಬಾರಿ ಅಪರಾಧಿಯೆಂದು ನಿರ್ಣೀತನಾದರೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಯಾವುದೇ ಎರಡನೆಯ ಅಥವಾ ತರುವಾಯದ ಯಾವುದೇ ಅಪರಾಧವನ್ನು, ಇದೇ ರೀತಿಯ ಅಪರಾಧವನ್ನು ಮಾಡಿದ ಮೂರು ವರ್ಷಗಳೊಳಗೆ ಮಾಡಿದರೆ, ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

185. ಅಮಲೇರಿದ ವ್ಯಕ್ತಿಯು ಅಥವಾ ಔಷಧಗಳ ಪ್ರಭಾರದಲ್ಲಿರುವ ವ್ಯಕ್ತಿಯು ವಾಹನವನ್ನು ನಡೆಸುವುದು:- ಯಾರೇ ವ್ಯಕ್ತಿಯು, ಮೋಟಾರು ವಾಹನವನ್ನು ನಡೆಸುವಾಗ ಅಥವಾ ನಡೆಸಲು ಪ್ರಯತ್ನಿಸುತ್ತಿರುವಾಗ,-

(ಎ) ಉಸಿರಾಟ ವಿಶ್ಲೇಷಕ ಪರೀಕ್ಷೆಯಲ್ಲಿ ಪತ್ತೆ ಹಚ್ಚಲಾದ ಪ್ರತಿ 100 ಮಿ.ಲೀ. ರಕ್ತದಲ್ಲಿ 30 ಮಿ.ಲೀ.ಗ್ರಾಂನ್ನು ಮೀರಿದ ಮದ್ಯಸಾರ ಅವನ ರಕ್ತದಲ್ಲಿ ಇದ್ದರೆ;

(ಬಿ) ವಾಹನದ ಮೇಲೆ ಯುಕ್ತವಾದ ಹಿಡಿತವನ್ನು ಚಲಾಯಿಸಲು ಅಸಮರ್ಥವಾಗುವಷ್ಟು ಮಟ್ಟಿಗೆ ಔಷಧದ ಪ್ರಭಾವದಲ್ಲಿದ್ದರೆ

- ಅವನು ಮೊದಲನೆಯ ಅಪರಾಧಕ್ಕೆ ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ; ಮತ್ತು ಎರಡನೆಯ ಅಥವಾ ತರುವಾಯದ ಅಪರಾಧವನ್ನು ಹಿಂದೆ ಇದೇ ರೀತಿಯ ಅಪರಾಧವನ್ನು ಮಾಡಿದ ಮೂರು ವರ್ಷಗಳ ಒಳಗೆ ಮಾಡಿದರೆ, ಎರಡು ವರ್ಷಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಔಷಧ ಅಥವಾ ಔಷಧಗಳು ಮೋಟಾರು ವಾಹನದ ಮೇಲೆ ಯುಕ್ತವಾದ ಹಿಡಿತವನ್ನು ಚಲಾಯಿಸಲು ಅಸಮರ್ಥಗೊಳಿಸುತ್ತವೆ ಎಂದು ಭಾವಿಸತಕ್ಕದ್ದು.

186. ವಾಹನವನ್ನು ನಡೆಸಲು ಮಾನಸಿಕವಾಗಿ ಅಥವಾ ದೈಹಿಕವಾಗಿ ಅನರ್ಹನಾಗಿರುವಾಗ ವಾಹನವನ್ನು ನಡೆಸುವುದು:- ತಾನು ವಾಹನವನ್ನು ನಡೆಸುವುದು ಸಾರ್ವಜನಿಕರಿಗೆ ಅಪಾಯಕಾರಿಯಾಗುವ ಹಾಗೆ ಮಾಡುವಂಥ ಅನಾರೋಗ್ಯ ಅಥವಾ ಅಶಕ್ತತೆಯಿಂದ ನರಳುತ್ತಿರುವನೆಂದು ತನಗೆ ಅರಿವಿದ್ದು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ನಡೆಸುವ ಯಾರೇ ವ್ಯಕ್ತಿಯು, ಮೊದಲ ಬಾರಿಯ ಅಪರಾಧಕ್ಕಾಗಿ ಇನ್ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

187. ಅಪಘಾತಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ದಂಡನೆ:- 132ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡ ಅಥವಾ 133ನೇ ಪ್ರಕರಣ ಅಥವಾ 134ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ ಯಾರೇ ವ್ಯಕ್ತಿಯು, ಮೂರು ತಿಂಗಳುಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಹಿಂದೆಯೇ ಈ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ, ಆರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

188. ಕೆಲವು ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ:- 184ನೇ ಪ್ರಕರಣ, 185ನೇ ಪ್ರಕರಣ ಅಥವಾ 186ನೇ ಪ್ರಕರಣಗಳ ಮೇರೆಗಿನ ಅಪರಾಧವನ್ನು ಮಾಡಲು ದುಷ್ಪ್ರೇರಿಸುವ ಯಾರೇ ವ್ಯಕ್ತಿಯು, ಆ ಅಪರಾಧದ ಬಗ್ಗೆ ಉಪಬಂಧಿತವಾದ ದಂಡನೆಯಿಂದ ದಂಡನೀಯನಾಗತಕ್ಕದ್ದು.

189. ವೇಗ ಸ್ಪರ್ಧೆ ಮತ್ತು ವೇಗ ಪರೀಕ್ಷೆ:- ರಾಜ್ಯ ಸರ್ಕಾರದಿಂದ ಲಿಖಿತ ಸಮ್ಮತಿಯನ್ನು ಪಡೆಯದೆ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನಗಳ ನಡುವಣ ವೇಗಸ್ಪರ್ಧೆ ಅಥವಾ ವೇಗ ಪರೀಕ್ಷೆಗೆ ಅನುಮತಿಸುವ ಅಥವಾ ಅದರಲ್ಲಿ ಪಾಲುಗೊಳ್ಳುವ ಯಾರೇ ವ್ಯಕ್ತಿಯು, ಒಂದು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

190. ಸುರಕ್ಷಿತವಲ್ಲದ ಸ್ಥಿತಿಯಲ್ಲಿ ವಾಹನವನ್ನು ಉಪಯೋಗಿಸುವುದು:- (1) ಮೋಟಾರು ವಾಹನ ಅಥವಾ ಹಿಂಬಂಡಿಯ ಯಾವ ದೋಷವನ್ನೂ ಯಾರೇ ವ್ಯಕ್ತಿಯ ಸಾಮಾನ್ಯ ಎಚ್ಚರಿಕೆ ವಹಿಸುವ ಮೂಲಕ ತಿಳಿಯಬಹುದಾಗಿತ್ತೋ ಅಥವಾ ಕಂಡುಹಿಡಿಯಬಹುದಾಗಿತ್ತೋ ಮತ್ತು ಯಾವುದೇ ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವ ವ್ಯಕ್ತಿಗಳಿಗೂ, ವಾಹನಗಳಿಗೂ ಅಪಾಯಕಾರಿಯಾಗುವ ರೀತಿಯಲ್ಲಿ ವಾಹನವನ್ನು ನಡೆಸುವುದಕ್ಕೆ ಎಡೆಗೊಡುವುದೆಂದು ಭಾವಿಸಬಹುದೋ ಆ ದೋಷವನ್ನುಳ್ಳ ಮೋಟಾರು ವಾಹನ ಅಥವಾ ಹಿಂಬಂಡಿಯನ್ನು ಅಂಥ ಸ್ಥಳದಲ್ಲಿ ನಡೆಸಿದರೆ ಅಥವಾ ನಡೆಸಲು ಕಾರಣನಾದರೆ ಅಥವಾ ನಡೆಸಲು ಅವಕಾಶಕೊಟ್ಟರೆ, ಅವನು ಎರಡು ನೂರ ಐವತ್ತು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅಂಥ ದೋಷದ ಪರಿಣಾಮವಾಗಿ ದೈಹಿಕ ಕ್ಷತಿಯನ್ನು ಅಥವಾ ಸ್ವತ್ತಿಗೆ ಹಾನಿಯನ್ನು ಉಂಟುಮಾಡುವ ಅಪಘಾತವು ಸಂಭವಿಸಿದರೆ, ಮೂರು ತಿಂಗಳುಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಒಂದು ಮೋಟಾರು ವಾಹನವನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ರಸ್ತೆ ಸುರಕ್ಷತೆಗೆ, ಶಬ್ದ ನಿಯಂತ್ರಣ ಮತ್ತು ವಾಯು ಮಾಲಿನ್ಯ ಇವುಗಳಿಗೆ ಸಂಬಂಧಿಸಿ ನಿಯಮಿಸಿದ ಗುಣಮಟ್ಟಗಳನ್ನು ಉಲ್ಲಂಘಿಸಿ ವಾಹನವನ್ನು ನಡೆಸಿದರೆ ಅಥವಾ ನಡೆಸಲು ಕಾರಣನಾದರೆ ಅಥವಾ ನಡೆಸಲು ಅವಕಾಶ ಕೊಟ್ಟರೆ ಆ ಯಾರೇ ವ್ಯಕ್ತಿಯು ಮೊದಲ ಬಾರಿಯ ಅಪರಾಧಕ್ಕಾಗಿ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ಎರಡನೇ ಬಾರಿಯ ಅಥವಾ ತರುವಾಯದ ಅಪರಾಧಕ್ಕಾಗಿ ಎರಡು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ಅಪಾಯ ಅಥವಾ ಸಂಭವನೀಯ ಅಪಾಯಕಾರಿ ಸ್ವರೂಪದ ವಸ್ತುಗಳನ್ನು ಸರಕು ವಾಹನಗಳಲ್ಲಿ ಸಾಗಿಸುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ನಡೆಸಿದರೆ ಅಥವಾ ನಡೆಸಲು ಕಾರಣನಾದರೆ ಅಥವಾ ನಡೆಸಲು ಅವಕಾಶಕೊಟ್ಟರೆ, ಅಂಥ ಯಾರೇ ವ್ಯಕ್ತಿಯು ಮೊದಲ ಬಾರಿಯ ಅಪರಾಧಕ್ಕಾಗಿ ಮುನ್ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಯಾವುದೇ ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಮೂರು ವರ್ಷಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

191. ಈ ಅಧಿನಿಯಮವನ್ನು ಉಲ್ಲಂಘಿಸುವ ಸ್ಥಿತಿಯಲ್ಲಿರುವ ವಾಹನದ ಮಾರಾಟ ಅಥವಾ ಆ ಸ್ಥಿತಿಗೆ ಬರುವಂತೆ ವಾಹನದಲ್ಲಿ ಮಾರ್ಪಾಟು ಮಾಡುವುದು:- ಮೋಟಾರು ವಾಹನಗಳ ಆಮದುಕಾರ ಅಥವಾ ವ್ಯಾಪಾರಿಯಾಗಿರುವ ಯಾರೇ ವ್ಯಕ್ತಿಯು, ಸಾರ್ವಜನಿಕ ಸ್ಥಳದಲ್ಲಿ ಉಪಯೋಗಿಸುವುದರಿಂದ VII ನೇ ಅಧ್ಯಾಯ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸುವಂಥ ಸ್ಥಿತಿಯಲ್ಲಿರುವ ಮೋಟಾರು ವಾಹನ ಅಥವಾ ಹಿಂಬಂಡಿಯನ್ನು ಮಾರಿದರೆ ಅಥವಾ ವಶಾವಣೆ ಮಾಡಿದರೆ ಅಥವಾ ಮಾರಲು ಅಥವಾ ವಶಾವಣೆ ಮಾಡಲು ಕೊಡಮಾಡಿದರೆ ಅಥವಾ ಮೋಟಾರು ವಾಹನವನ್ನು ಅಥವಾ ಹಿಂಬಂಡಿಯನ್ನು ಸಾರ್ವಜನಿಕ ಸ್ಥಳದಲ್ಲಿ ಅದನ್ನು ಬಳಸುವುದರಿಂದ VII ನೇ ಅಧ್ಯಾಯವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸುವಂಥ ಸ್ಥಿತಿಗೆ ಬರುವಂತೆ ಮಾರ್ಪಾಟು ಮಾಡಿದರೆ, ಅವನು ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ವಾಹನವನ್ನು ಕಾನೂನುಬದ್ಧವಾಗಿ ಉಪಯೋಗಿಸುವಂಥ ಸ್ಥಿತಿಗೆ ತರುವವರೆಗೆ ಅದನ್ನು ಉಪಯೋಗಿಸುವುದಿಲ್ಲವೆಂದು ನಂಬಲು ಯುಕ್ತ ಕಾರಣವಿತ್ತೆಂದು ರುಜುವಾತು ಮಾಡುವ ಯಾರೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣಯಿಸತಕ್ಕದ್ದಲ್ಲ.

192. ನೋಂದಣಿಯಿಲ್ಲದೆ ವಾಹನವನ್ನು ಬಳಸುವುದು:- (1) 39ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ಚಾಲನೆ ಮಾಡುವ ಅಥವಾ ಮೋಟಾರು ವಾಹನವನ್ನು ಓಡಿಸುವಂತೆ ಮಾಡುವ ಅಥವಾ ಅದಕ್ಕೆ ಅವಕಾಶ ನೀಡುವ ಯಾರೇ ಆಗಲಿ, ಮೊದಲ ಅಪರಾಧಕ್ಕೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಆದರೆ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಾಗತಕ್ಕದ್ದಲ್ಲದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಆದರೆ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ಅದಕ್ಕಿಂತ ಕಡಿಮೆ ದಂಡನೆಯನ್ನು ವಿಧಿಸಬಹುದು.

(2) ಕಾಯಿಲೆಯಿರುವ ಅಥವಾ ಕ್ಷತಿಯಿಂದ ನರಳುತ್ತಿರುವ ವ್ಯಕ್ತಿಗಳನ್ನು ಒಯ್ಯುವುದಕ್ಕಾಗಿ ಅಥವಾ ಆಪತ್ತನ್ನು ನಿವಾರಿಸುವುದಕ್ಕಾಗಿ ಅಥವಾ ಅಂಥದೇ ಉದ್ದೇಶಕ್ಕಾಗಿ ಆಹಾರ ಅಥವಾ ಸಾಮಗ್ರಿಯನ್ನು ಅಥವಾ ವೈದ್ಯಕೀಯ ಸಾಮಗ್ರಿಯನ್ನು ಸಾಗಿಸುವುದಕ್ಕಾಗಿ ತುರ್ತು ಸಂದರ್ಭದಲ್ಲಿ ಮೋಟಾರು ವಾಹನವನ್ನು ಓಡಿಸುವುದಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ:

ಪರಂತು, ಅಂಥ ಉಪಯೋಗಕ್ಕಾಗಿ ವಾಹನವನ್ನು ಬಳಸುವ ವ್ಯಕ್ತಿಯು, ಹಾಗೆ ಬಳಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಆ ಸಂಗತಿಯನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಸ್ವರೂಪದ ಅಪರಾಧದ ಸಂದರ್ಭದಲ್ಲಿ ಯಾವುದೇ ಅಪರಾಧ ನಿರ್ಣಯದ ಮೇಲೆ ಯಾವ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಲು ಅವಕಾಶವಿದೆಯೋ, ಆ ನ್ಯಾಯಾಲಯವು ಯಾವ ಅಪರಾಧ ನಿರ್ಣಯದ ಸಂದರ್ಭದಲ್ಲಿ ಅಂಥ ಆದೇಶವನ್ನು ಮಾಡಲಾಗಿದೆಯೋ ಆ ಅಪರಾಧ ನಿರ್ಣಯದ ವಿರುದ್ಧ ಯಾವುದೇ ಅಪೀಲಿಗೆ ಅವಕಾಶವಿಲ್ಲದಿದ್ದರೂ ಕೆಳ ನ್ಯಾಯಾಲಯವು ಮಾಡಿದ ಯಾವುದೇ ಆದೇಶವನ್ನು ತಳ್ಳಿಹಾಕಬಹುದು ಅಥವಾ ಬದಲಾಯಿಸಬಹುದು.

192ಎ. ಪರ್ಮಿಟ್ಟಿಲ್ಲದೆ ವಾಹನವನ್ನು ಬಳಸುವುದು:- (1) 66ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಯಾವ ಮಾರ್ಗದ ಮೇಲೆ ಅಥವಾ ಯಾವ ಮಾರ್ಗಗಳ ಮೇಲೆ ಅಥವಾ ಯಾವ ಪ್ರದೇಶಗಳಲ್ಲಿ ಅಥವಾ ಯಾವ ಉದ್ದೇಶಕ್ಕಾಗಿ ವಾಹನವನ್ನು ಬಳಸಬಹುದೋ ಅವುಗಳಿಗೆ ಸಂಬಂಧಪಟ್ಟ ಪರ್ಮಿಟ್ಟಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ಚಾಲನೆ ಮಾಡುವ ಅಥವಾ ಮೋಟಾರು ವಾಹನವನ್ನು ಬಳಸುವಂತೆ ಮಾಡುವ ಅಥವಾ ಅದಕ್ಕೆ ಅವಕಾಶ ನೀಡುವ ಯಾರೇ ವ್ಯಕ್ತಿಯು ಮೊದಲ ಅಪರಾಧಕ್ಕೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಾಗತಕ್ಕದ್ದಲ್ಲದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಆದರೆ ಮೂರು ತಿಂಗಳಿಗೆ ಕಡಿಮೆಯಾಗತಕ್ಕದ್ದಲ್ಲದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ಅದಕ್ಕಿಂತ ಕಡಿಮೆಯ ದಂಡನೆಯನ್ನು ವಿಧಿಸಬಹುದು.

(2) ಕಾಯಿಲೆಯಿಂದ ಅಥವಾ ಕ್ಷತಿಯಿಂದ ನರಳುತ್ತಿರುವ ವ್ಯಕ್ತಿಗಳನ್ನು ಒಯ್ಯುವುದಕ್ಕಾಗಿ ಅಥವಾ ದುರಸ್ತಿಗಾಗಿ ಸಾಮಾನುಗಳನ್ನು ಅಥವಾ ಆಪತ್ತನ್ನು ನಿವಾರಿಸಲು ಅಥವಾ ಅಂಥದೇ ಉದ್ದೇಶಕ್ಕಾಗಿ ಆಹಾರ ಅಥವಾ ಸಾಮಗ್ರಿಯನ್ನು ಅಥವಾ ವೈದ್ಯಕೀಯ ಸಾಮಗ್ರಿಯನ್ನು ಸಾಗಿಸುವುದಕ್ಕಾಗಿ ತುರ್ತು ಸಂದರ್ಭದಲ್ಲಿ ಮೋಟಾರು ವಾಹನವನ್ನು ಬಳಸುವುದಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ:

ಪರಂತು, ಅಂಥ ಉಪಯೋಗಕ್ಕಾಗಿ ವಾಹನವನ್ನು ಬಳಸುವ ವ್ಯಕ್ತಿಯು, ಹಾಗೆ ಬಳಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಆ ಸಂಗತಿಯನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಸ್ವರೂಪದ ಅಪರಾಧದ ಸಂದರ್ಭದಲ್ಲಿ ಯಾವುದೇ ಅಪರಾಧ ನಿರ್ಣಯದ ಮೇಲೆ ಯಾವ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಲು ಅವಕಾಶವಿದೆಯೋ, ಆ ನ್ಯಾಯಾಲಯವು ಯಾವ ಅಪರಾಧ ನಿರ್ಣಯದ ಸಂದರ್ಭದಲ್ಲಿ ಅಂಥ ಆದೇಶವನ್ನು ಮಾಡಲಾಗಿದೆಯೋ ಆ ಅಪರಾಧ ನಿರ್ಣಯದ ವಿರುದ್ಧ ಯಾವುದೇ ಅಪೀಲಿಗೆ ಅವಕಾಶವಿಲ್ಲದಿದ್ದರೂ, ಕೆಳ ನ್ಯಾಯಾಲಯವು ಮಾಡಿದ ಯಾವುದೇ ಆದೇಶವನ್ನು ತಳ್ಳಿಹಾಕಬಹುದು ಅಥವಾ ಮಾರ್ಪಾಟು ಮಾಡಬಹುದು.

193. ಯುಕ್ತ ಅಧಿಕಾರವಿಲ್ಲದ ಏಜೆಂಟರುಗಳಿಗೆ ಮತ್ತು ಪ್ರಚಾರಕರಿಗೆ ದಂಡನೆ:- 93ನೇ ಪ್ರಕರಣದ ಉಪಬಂಧಗಳನ್ನು ಅಥವಾ ಅವುಗಳ ಮೇರೆಗೆ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿ ಏಜೆಂಟನಾಗಿ ಅಥವಾ ಪ್ರಚಾರಕನಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು, ಮೊದಲನೆಯ ಅಪರಾಧಕ್ಕಾಗಿ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಆರು ತಿಂಗಳುಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

194. ಅನುಮತಿಸಲಾದ ತೂಕಕ್ಕೆ ಮೀರಿದ ವಾಹನವನ್ನು ನಡೆಸುವುದು:- (1) 113ನೇ ಅಥವಾ 114ನೇ ಅಥವಾ 115ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ಚಾಲನೆ ಮಾಡುವ ಅಥವಾ ಮೋಟಾರು ವಾಹನವನ್ನು ಚಾಲನೆ ಮಾಡುವಂತೆ ಮಾಡುವ ಅಥವಾ ಚಾಲನೆ ಮಾಡಲು ಅವಕಾಶ ಕೊಡುವ ಯಾರೇ ವ್ಯಕ್ತಿಯು ಎರಡು ಸಾವಿರ ರೂಪಾಯಿಗಳ ಕನಿಷ್ಠ ಜುಲ್ಮಾನೆಯಿಂದ ಮತ್ತು ಹೆಚ್ಚುವರಿ ಭಾರವನ್ನು ಇಳಿಸುವ ವೆಚ್ಚವನ್ನು ಸಂದಾಯ ಮಾಡುವ ಹೊಣೆಗಾರಿಕೆಯೊಂದಿಗೆ ಹೆಚ್ಚುವರಿಯಾದ ಪ್ರತಿ ಟನ್ ಭಾರಕ್ಕೆ ಒಂದು ಸಾವಿರ ರೂಪಾಯಿ ಹೆಚ್ಚುವರಿ ಮೊಬಲಗಿನಿಂದ ದಂಡನೀಯನಾಗತಕ್ಕದ್ದು.

(2) 114ನೇ ಪ್ರಕರಣದ ಮೇರೆಗೆ ಈ ಸಂಬಂಧವಾಗಿ ಒಬ್ಬ ಅಧಿಕೃತ ಅಧಿಕಾರಿಯು ವಾಹನವನ್ನು ತೂಕ ಮಾಡಲು ನಿಲ್ಲಿಸುವಂತೆ ಮತ್ತು ವಾಹನವನ್ನು ಒಪ್ಪಿಸುವಂತೆ ನಿರ್ದೇಶಿಸಿದ ನಂತರವೂ ಹಾಗೆ ಮಾಡಲು ನಿರಾಕರಿಸುವ ಅಥವಾ ತೂಕ ಮಾಡುವುದಕ್ಕೆ ಮುಂಚೆ ಹೇರನ್ನು ಅಥವಾ ಅದರ ಭಾಗವನ್ನು ತೆಗೆಯುವ ಅಥವಾ ತೆಗೆಯುವಂತೆ ಮಾಡುವ ಯಾರೇ ಚಾಲಕನು ಮೂರು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

195. ಕೆಲವು ಸಂದರ್ಭಗಳಲ್ಲಿ ಕನಿಷ್ಠ ಜುಲ್ಮಾನೆಯನ್ನು ವಿಧಿಸುವುದು:- (1) ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾಗಿದ್ದು, ಹಿಂದಿನ ಇದೇ ರೀತಿಯ ಅಪರಾಧವನ್ನು ಮಾಡಿದ ಮೂರು ವರ್ಷಗಳ ಒಳಗೆ ಎರಡನೆಯ ಅಥವಾ ತರುವಾಯದ ಅಪರಾಧವನ್ನು ಮಾಡಿದರೆ, ಯಾವುದೇ ನ್ಯಾಯಾಲಯವು ಬರಹದಲ್ಲಿ ಕಾರಣಗಳನ್ನು ದಾಖಲ್ಮಾಡಿದ ಹೊರತು, ಅಂಥ ಅಪರಾಧಕ್ಕಾಗಿ ವಿಧಿಸಬಹುದಾದ ಗರಿಷ್ಠ ಮೊಬಲಗಿನ ನಾಲ್ಕನೇ ಒಂದು ಭಾಗಕ್ಕಿಂತ ಕಡಿಮೆ ಜುಲ್ಮಾನೆಯನ್ನು ಅವನಿಗೆ ವಿಧಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ, ಆ ಅಪರಾಧದ ಸಂಬಂಧದಲ್ಲಿ ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ಮಿತಿಯನ್ನು ಮೀರದಂತೆ ಮೊಕದ್ದಮೆಯ ಸಂದರ್ಭದಲ್ಲಿ ನ್ಯಾಯಾಲಯವು ಅವಶ್ಯವೆಂದು ಪರಿಗಣಿಸುವ ಕಾರಾವಾಸವನ್ನು ನೀಡುವ ಆ ನ್ಯಾಯಾಲಯದ ಅಧಿಕಾರವನ್ನು ನಿರ್ಬಂಧಿಸುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

196. ವಿಮೆ ಮಾಡದ ವಾಹನವನ್ನು ನಡೆಸುವುದು:- 146ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮೋಟಾರು ವಾಹನವನ್ನು ನಡೆಸುವ ಅಥವಾ ನಡೆಸುವಂತೆ ಮಾಡುವ ಅಥವಾ ನಡೆಸಲು ಅನುಮತಿಸುವ ಯಾರೇ ವ್ಯಕ್ತಿಯು, ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

197. ಅಧಿಕಾರವಿಲ್ಲದೆ ವಾಹನವನ್ನು ತೆಗೆದುಕೊಳ್ಳುವುದು:- (1) ಮೋಟಾರು ವಾಹನದ ಒಡೆಯನ ಅಥವಾ ಇತರ ಕಾನೂನುಸಮ್ಮತ ಅಧಿಕಾರಿಯ ಸಮ್ಮತಿಯನ್ನು ಪಡೆಯದೆ ಯಾವುದೇ ವಾಹನವನ್ನು ತೆಗೆದುಕೊಳ್ಳುವ ಮತ್ತು ನಡೆಸುವ ಯಾರೇ ವ್ಯಕ್ತಿಯು, ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು, ತಾನು ಕಾನೂನು ಸಮ್ಮತ ಅಧಿಕಾರವನ್ನು ಹೊಂದಿರುವನೆಂದು ಯುಕ್ತವಾದ ನಂಬಿಕೆಯಿಂದ ಅಥವಾ ಅದರ ಒಡೆಯನಿಗೆ ತಾನು ಸಮ್ಮತಿಯನ್ನು ಕೇಳಿದ್ದರೆ ಅವನು ಅದನ್ನು ಕೊಡಬಹುದಿತ್ತೆಂಬ ಯುಕ್ತವಾದ ನಂಬಿಕೆಯಿಂದ ಹಾಗೆ ವರ್ತಿಸಿದ್ದನೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಯಾರೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣಯಿಸತಕ್ಕದ್ದಲ್ಲ.

(2) ಕಾನೂನು ಬಾಹಿರವಾಗಿ ಬಲವಂತದಿಂದ ಅಥವಾ ಬಲವಂತದ ಬೆದರಿಕೆಯಿಂದ ಅಥವಾ ಯಾವುದೇ ಇತರ ಸ್ವರೂಪದ ಬೆದರಿಕೆಯಿಂದ ಮೋಟಾರು ವಾಹನವನ್ನು ಅಭಿಗ್ರಹಿಸುವ ಅಥವಾ ಅದರ ಮೇಲೆ ನಿಯಂತ್ರಣವನ್ನು ಚಲಾಯಿಸುವ ಯಾರೇ ವ್ಯಕ್ತಿಯು, ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಯಾವುದೇ ಮೋಟಾರು ವಾಹನಕ್ಕೆ ಸಂಬಂಧಿಸಿ (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಕಾರ್ಯಗಳಲ್ಲಿ ಯಾವೊಂದನ್ನು ಮಾಡಲು ಪ್ರಯತ್ನಿಸುವ ಅಥವಾ ಅಂಥ ಕಾರ್ಯವನ್ನು ಮಾಡುವಂತೆ ದುಷ್ಪ್ರೇರಿಸುವ ಯಾರೇ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ, (2)ನೇ ಉಪಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಿರುವುದಾಗಿ ಸಹ ಭಾವಿಸತಕ್ಕದ್ದು.

198. ವಾಹನದಲ್ಲಿ ಅನಧಿಕೃತ ಹಸ್ತಕ್ಷೇಪ:- ಕಾನೂನು ಸಮ್ಮತ ಅಧಿಕಾರವಿಲ್ಲದೆ ಅಥವಾ ಸೂಕ್ತ ಕಾರಣವಿಲ್ಲದೆ ನಿಂತಿರುವ ಯಾವುದೇ ವಾಹನವನ್ನು ಪ್ರವೇಶಿಸುವ ಅಥವಾ ಹತ್ತುವ ಅಥವಾ ಯಾವೊಂದು ಮೋಟಾರು ವಾಹನದ ಬ್ರೇಕು ಅಥವಾ ಯಂತ್ರ ವ್ಯವಸ್ಥೆಯ ಯಾವುದೇ ಭಾಗವನ್ನು ಕೆಡಿಸುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

199. ಕಂಪನಿಗಳಿಂದ ಅಪರಾಧಗಳು:- (1) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವನ್ನು ಮಾಡಲಾದ ಸಮಯದಲ್ಲಿ ಆ ಕಂಪನಿಯ ವ್ಯವಹಾರವನ್ನು ನಡೆಸಲು ಅದರ ಪ್ರಭಾರದಲ್ಲಿರುವ ಮತ್ತು ಅದಕ್ಕೆ ಹೊಣೆಗಾರನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಉಲ್ಲಂಘನೆಯ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ಎಸಗಲ್ಪಟ್ಟಿತೆಂದು ಅಥವಾ ಅದರ ಎಸಗುವಿಕೆಯನ್ನು ತಡೆಗಟ್ಟಲು ತಾನು ಎಲ್ಲ ಯಥೋಚಿತ ಎಚ್ಚರಿಕೆಯನ್ನು ವಹಿಸಿದ್ದೆನೆಂದು ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಲಾಗಿರುವ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಎಸಗಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಎಸಗಲ್ಪಟ್ಟಿತೆಂದು ಅಥವಾ ಅವರ ನಿರ್ಲಕ್ಷ್ಯಕ್ಕೆ ಆರೋಪಿಸಬಹುದಾಗಿದೆಯೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರದ ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಬಿ) ಫರ್ಮಿಗೆ ಸಂಬಂಧಿಸಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

200. ಕೆಲವು ಅಪರಾಧಗಳ ಬಗ್ಗೆ ರಾಜಿ:- (1) 177ನೇ ಪ್ರಕರಣ, 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣ, 181ನೇ ಪ್ರಕರಣ, 182ನೇ ಪ್ರಕರಣ, 183ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣ, 184ನೇ ಪ್ರಕರಣ, 186ನೇ ಪ್ರಕರಣ, 189ನೇ ಪ್ರಕರಣ, 190ನೇ ಪ್ರಕರಣದ (2)ನೇ ಉಪಪ್ರಕರಣ, 191ನೇ ಪ್ರಕರಣ, 192ನೇ ಪ್ರಕರಣ, 194ನೇ ಪ್ರಕರಣ, 196ನೇ ಪ್ರಕರಣ ಅಥವಾ 198ನೇ ಪ್ರಕರಣದ ಮೇರೆಗೆ ದಂಡನೀಯವಾಗಿದ್ದು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ಆ ತರುವಾಯವಾಗಲಿ ಎಸಗಲ್ಪಟ್ಟಿರುವ ಯಾವುದೇ ಅಪರಾಧದ ಸಂಬಂಧದಲ್ಲಿ ಪ್ರಾಸಿಕ್ಯೂಷನ್ನನ್ನು ಹೂಡುವುದಕ್ಕೆ ಮುಂಚೆ ಅಥವಾ ತರುವಾಯ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಅಂಥ ಮೊಬಲಗಿಗೆ ರಾಜಿ ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಪರಾಧದ ಸಂಬಂಧದಲ್ಲಿ ರಾಜಿಮಾಡಿಕೊಂಡಿರುವಲ್ಲಿ, ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ಅಪರಾಧಕ್ಕೆ ಸಂಬಂಧಿಸಿ ಅವನ ವಿರುದ್ಧ ಆ ತರುವಾಯ ಯಾವುದೇ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

201. ಮುಕ್ತ ಸಂಚಾರಕ್ಕೆ ಅಡ್ಡಿಯುಂಟು ಮಾಡುವುದಕ್ಕೆ ದಂಡನೆ:- (1) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಮುಕ್ತ ಸಂಚಾರಕ್ಕೆ ಅಡ್ಡಿಯುಂಟಾಗುವ ಹಾಗೆ ಕೆಟ್ಟುಹೋದ ವಾಹನವನ್ನು ಇಡುವ ಯಾರೇ ವ್ಯಕ್ತಿಯು, ಆ ವಾಹನವು ಆ ಸ್ಥಿತಿಯಲ್ಲಿ ಇರುವವರೆಗೂ ಪ್ರತಿ ಗಂಟೆಗೆ ಐವತ್ತು ರೂಪಾಯಿವರೆಗಿನ ದಂಡಕ್ಕೆ ಗುರಿಯಾಗತಕ್ಕದ್ದು:

ಪರಂತು, ಅಪಘಾತಗಳಲ್ಲಿ ಒಳಗೊಂಡ ವಾಹನವು, ಕಾನೂನು ಮೇರೆಗೆ ಪರಿಶೀಲನಾ ಔಪಚಾರಿಕತೆಗಳು ಪೂರ್ಣಗೊಂಡ ಸಮಯದಿಂದ ಮಾತ್ರ ದಂಡಕ್ಕೆ ಗುರಿಯಾಗತಕ್ಕದ್ದು:

ಮತ್ತೂ ಪರಂತು, ಸರ್ಕಾರಿ ಏಜೆನ್ಸಿಯ ಮೂಲಕ ಆ ವಾಹನವನ್ನು ಸ್ಥಳಾಂತರಿಸಲಾಗಿದ್ದರೆ ಎಳೆದೊಯ್ಯುವ ವೆಚ್ಚವನ್ನು ವಾಹನದ ಒಡೆಯ ಅಥವಾ ಅಂಥ ವಾಹನದ ಪ್ರಭಾರವನ್ನು ಹೊಂದಿರುವ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು.

(2) ದಂಡಗಳನ್ನು ಅಥವಾ ವಾಹನವನ್ನು ಎಳೆದೊಯ್ಯುವ ಚಾರ್ಜುಗಳನ್ನು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಅಧಿಕೃತಗೊಳಿಸಬಹುದಾದಂಥ ಅಧಿಕಾರಿ ಅಥವಾ ಪ್ರಾಧಿಕಾರವು ವಸೂಲು ಮಾಡತಕ್ಕದ್ದು.

202. ವಾರೆಂಟಿಲ್ಲದೆ ದಸ್ತಗಿರಿ ಮಾಡುವ ಅಧಿಕಾರ:- (1) ಸಮವಸ್ತ್ರದಲ್ಲಿರುವ ಪೊಲೀಸ್ ಅಧಿಕಾರಿಯು 184ನೇ ಪ್ರಕರಣ ಅಥವಾ 185ನೇ ಪ್ರಕರಣದ ಅಥವಾ 197ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ತನ್ನ ಸಮಕ್ಷಮದಲ್ಲಿ ಮಾಡುವ ಯಾರೇ ವ್ಯಕ್ತಿಯನ್ನು ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು:

ಪರಂತು, 185ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟ ಯಾರೇ ವ್ಯಕ್ತಿಯನ್ನು ಅವನ ದಸ್ತಗಿರಿಯ ಎರಡು ಗಂಟೆಗಳೊಳಗೆ ನೋಂದಾಯಿತ ವೈದ್ಯಕೀಯ ವೃತ್ತಿಗನಿಂದ 203ನೇ ಮತ್ತು 204ನೇ ಪ್ರಕರಣಗಳಲ್ಲಿ ಉಲ್ಲೇಖಿಸಿರುವ ವೈದ್ಯಕೀಯ ಪರೀಕ್ಷೆಗೆ ಒಳಪಡಿಸತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಅವನನ್ನು ಅಭಿರಕ್ಷೆಯಿಂದ ಬಿಡುಗಡೆ ಮಾಡತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ನೀಡಲು ನಿರಾಕರಿಸಿದರೆ, ಅಂಥ ವ್ಯಕ್ತಿಯನ್ನು ಸಮವಸ್ತ್ರದಲ್ಲಿರುವ ಪೊಲೀಸು ಅಧಿಕಾರಿಯು ವಾರೆಂಟಿಲ್ಲದೆ ಬಂಧಿಸಬಹುದು.

(3) ಮೋಟಾರು ವಾಹನದ ಚಾಲಕನನ್ನು ವಾರೆಂಟಿಲ್ಲದೆ ದಸ್ತಗಿರಿ ಮಾಡುವ ಪೊಲೀಸ್ ಅಧಿಕಾರಿಯು, ವಾಹನವನ್ನು ತಾತ್ಕಾಲಿಕ ವಿಲೆ ಮಾಡಲು ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಕ್ರಮಗಳನ್ನು ಕೈಗೊಳ್ಳುವುದನ್ನು ಅಥವಾ ಕೈಗೊಳ್ಳುವಂತೆ ಮಾಡುವುದನ್ನು ಪರಿಸ್ಥಿತಿಗಳು ಅಗತ್ಯಪಡಿಸಿದರೆ, ಹಾಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದು.

203. ಉಸಿರಾಟದ ಪರೀಕ್ಷೆ:- (1) ಸಮವಸ್ತ್ರದಲ್ಲಿರುವ ಪೊಲೀಸು ಅಧಿಕಾರಿಗೆ ಅಥವಾ ಮೋಟಾರು ವಾಹನಗಳ ಇಲಾಖೆಯು ಈ ಬಗ್ಗೆ ಅಧಿಕೃತಗೊಳಿಸಬಹುದಾದ ಆ ಇಲಾಖೆಯ ಅಧಿಕಾರಿಗೆ ಸಾರ್ವಜನಿಕ ಸ್ಥಳದಲ್ಲಿ ಮೋಟಾರು ವಾಹನವನ್ನು ಚಾಲನೆ ಮಾಡುತ್ತಿರುವ ಅಥವಾ ಚಾಲನೆ ಮಾಡಲು ಪ್ರಯತ್ನಿಸುತ್ತಿರುವ ಯಾರೇ ವ್ಯಕ್ತಿಯು 185ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದ್ದಾನೆ ಎಂದು ಶಂಕಿಸಲು ಅಂಥ ಪೊಲೀಸು ಅಧಿಕಾರಿಗೆ ಅಥವಾ ಅಧಿಕಾರಿಗೆ ಯಾವುದೇ ಯುಕ್ತ ಕಾರಣವಿದ್ದರೆ ಆ ವ್ಯಕ್ತಿಯನ್ನು ಅಲ್ಲಿಯೇ ಅಥವಾ ಅಲ್ಲಿಗೆ ಸಮೀಪದಲ್ಲಿ ಉಸಿರಾಟ ಪರೀಕ್ಷೆಗಾಗಿ ಉಸಿರಾಟದ ಒಂದು ಅಥವಾ ಹೆಚ್ಚು ಮಾದರಿಗಳನ್ನು ಒದಗಿಸುವಂತೆ ಅಗತ್ಯಪಡಿಸಬಹುದು:

ಪರಂತು, ಅಂಥ ಅಪರಾಧವನ್ನು ಮಾಡಿದ ಮೇಲೆ ಯುಕ್ತವಾಗಿ ಸಾಧ್ಯವಾದಷ್ಟು ಬೇಗನೆ ಉಸಿರಾಟದ ಪರೀಕ್ಷೆಯನ್ನು ಅಗತ್ಯಪಡಿಸಿದ ಹೊರತು, ಆ ಉಸಿರಾಟದ ಪರೀಕ್ಷೆಗಾಗಿ ಮಾದರಿಗಳನ್ನು ಒದಗಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ.

(2) ಸಾರ್ವಜನಿಕ ಸ್ಥಳದಲ್ಲಿ ಉಂಟಾದ ಅಪಘಾತದಲ್ಲಿ ಮೋಟಾರು ವಾಹನವು ಒಳಗೊಂಡಿದ್ದರೆ ಮತ್ತು ಅಪಘಾತದ ಸಮಯದಲ್ಲಿ ಮೋಟಾರು ವಾಹನವನ್ನು ಚಾಲನೆ ಮಾಡುತ್ತಿರುವ ವ್ಯಕ್ತಿಯು, ಅವನ ರಕ್ತದಲ್ಲಿ ಮದ್ಯಸಾರವಿತ್ತೆಂದು ಅಥವಾ 185ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಔಷಧದ ಪ್ರಭಾವದಲ್ಲಿದ್ದು ವಾಹನವನ್ನು ಚಾಲನೆ ಮಾಡುತ್ತಿದ್ದನೆಂದು, ಸಮವಸ್ತ್ರದಲ್ಲಿರುವ ಪೊಲೀಸ್ ಅಧಿಕಾರಿಗೆ ಸಂಶಯಪಡಲು ಯುಕ್ತ ಕಾರಣವಿದ್ದರೆ, ಅವನು ಹಾಗೆ ವಾಹನ ಚಾಲನೆ ಮಾಡುತ್ತಿರುವ ವ್ಯಕ್ತಿಯನ್ನು,-

(ಎ) ಆ ವ್ಯಕ್ತಿಯು ಆಸ್ಪತ್ರೆಯಲ್ಲಿ ಒಳರೋಗಿಯಾಗಿರುವ ಸಂದರ್ಭದಲ್ಲಿ, ಆಸ್ಪತ್ರೆಯಲ್ಲಿ;

(ಬಿ) ಯಾರೇ ಇತರ ವ್ಯಕ್ತಿಯ ಸಂದರ್ಭದಲ್ಲಿ ಯಾವ ಸ್ಥಳದಲ್ಲಿ ಹಾಗೆ ಅಗತ್ಯಪಡಿಸಲಾಯಿತೋ ಆ ಸ್ಥಳದಲ್ಲಿ ಅಥವಾ ಅದಕ್ಕೆ ಸಮೀಪದಲ್ಲಿ ಅಥವಾ ಪೊಲೀಸು ಅಧಿಕಾರಿಯು ಯುಕ್ತ ಎಂದು ಭಾವಿಸಿದಲ್ಲಿ ಆ ಪೊಲೀಸ್ ಅಧಿಕಾರಿಯು ನಿರ್ದಿಷ್ಟಪಡಿಸಿದ ಪೊಲೀಸ್ ಠಾಣೆಯಲ್ಲಿ

- ಉಸಿರಾಟದ ಪರೀಕ್ಷೆಗಾಗಿ ಉಸಿರಿನ ಮಾದರಿಗಳನ್ನು ಒದಗಿಸಲು ಅಗತ್ಯಪಡಿಸಬಹುದು:

ಪರಂತು, ಆ ವ್ಯಕ್ತಿಯು ಆಸ್ಪತ್ರೆಯಲ್ಲಿ ಒಳರೋಗಿಯಾಗಿರುವಾಗ ಅವನ ಶುಶ್ರೂಷೆಯ ನಿಕಟ ಮೇಲ್ವಿಚಾರಣೆಯನ್ನು ಹೊಂದಿರುವ ನೋಂದಾಯಿತ ವೈದ್ಯ ವೃತ್ತಿಗಾರನಿಗೆ ಅಂಥ ಅಗತ್ಯತೆಯ ಪ್ರಸ್ತಾವವನ್ನು ಮೊದಲು ತಿಳಿಸದಿದ್ದಲ್ಲಿ ಅಥವಾ ವೈದ್ಯ ವೃತ್ತಿಗಾರನು, ರೋಗಿಯ ಉಸಿರಾಟದ ಮಾದರಿಯನ್ನು ಒದಗಿಸುವುದರಿಂದ ಅಥವಾ ಅದನ್ನು ಒದಗಿಸುವಂತೆ ಅಗತ್ಯಪಡಿಸುವುದರಿಂದ ರೋಗಿಯ ಯುಕ್ತ ಆರೈಕೆ ಅಥವಾ ಶುಶ್ರೂಷೆಗೆ ಬಾಧಕವುಂಟಾಗುವುದು ಎಂಬ ಕಾರಣದ ಮೇಲೆ ಅಂಥ ಮಾದರಿಯನ್ನು ಒದಗಿಸುವುದಕ್ಕೆ ಆಕ್ಷೇಪಿಸಿದರೆ ಅವನನ್ನು ಅಂಥ ಮಾದರಿಯನ್ನು ಒದಗಿಸಲು ಅಗತ್ಯಪಡಿಸತಕ್ಕದ್ದಲ್ಲ.

(3) ಸಮವಸ್ತ್ರದಲ್ಲಿರುವ ಪೊಲೀಸು ಅಧಿಕಾರಿಗೆ, (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ತಾನು ನಡೆಸಿದ ಯಾರೇ ವ್ಯಕ್ತಿಯ ಉಸಿರಾಟದ ಪರೀಕ್ಷೆಯ ಪರಿಣಾಮವಾಗಿ, ಯಾವ ಸಾಧನದಿಂದ ಪರೀಕ್ಷೆ ನಡೆಸಲಾಯಿತೋ ಆ ಸಾಧನವು ಆ ವ್ಯಕ್ತಿಯ ರಕ್ತದಲ್ಲಿ ಮದ್ಯಸಾರ ಇರುವುದನ್ನು ಸೂಚಿಸುತ್ತದೆ ಎಂದು ಕಂಡುಬಂದರೆ, ಆ ಪೊಲೀಸ್ ಅಧಿಕಾರಿಯು ಆ ವ್ಯಕ್ತಿಯನ್ನು, ಅವನು ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದಾಗ ಹೊರತು, ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ, ಉಸಿರಾಟದ ಪರೀಕ್ಷೆಗೆ ಉಸಿರಿನ ಮಾದರಿಯನ್ನು ಒದಗಿಸಲು ಪೊಲೀಸ್ ಅಧಿಕಾರಿಯು ಅಗತ್ಯಪಡಿಸಿದ ವ್ಯಕ್ತಿಯು ಹಾಗೆ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ ಮತ್ತು ಪೊಲೀಸ್ ಅಧಿಕಾರಿಗೆ ಅವನ ರಕ್ತದಲ್ಲಿ ಮದ್ಯಸಾರವಿದೆ ಎಂದು ಸಂಶಯಪಡಲು ಯುಕ್ತ ಕಾರಣವಿದ್ದರೆ, ಪೊಲೀಸ್ ಅಧಿಕಾರಿಯು, ಆ ವ್ಯಕ್ತಿಯನ್ನು ಅವನು ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದಾಗ ಹೊರತು, ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು.

(5) ಈ ಪ್ರಕರಣದ ಮೇರೆಗೆ ದಸ್ತಗಿರಿ ಮಾಡಿದ ವ್ಯಕ್ತಿಗೆ, ಅವನು ಪೊಲೀಸ್ ಠಾಣೆಯಲ್ಲಿರುವಾಗ ಅಲ್ಲಿ ಉಸಿರಾಟದ ಪರೀಕ್ಷೆಗಾಗಿ ಉಸಿರಿನ ಮಾದರಿಯನ್ನು ಒದಗಿಸಲು ಅವಕಾಶ ನೀಡತಕ್ಕದ್ದು.

(6) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮಾಡಿದ ಉಸಿರಾಟದ ಪರೀಕ್ಷೆಯ ಫಲಿತಾಂಶಗಳು ಸಾಕ್ಷ್ಯದಲ್ಲಿ ಸ್ವೀಕಾರಾರ್ಹವಾಗಿರತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, "ಉಸಿರಾಟದ ಪರೀಕ್ಷೆ" ಎಂದರೆ ಒಬ್ಬ ವ್ಯಕ್ತಿಯ ರಕ್ತದಲ್ಲಿ ಮದ್ಯಸಾರ ಇರುವುದರ ಸೂಚನೆಯನ್ನು ಪಡೆಯುವ ಉದ್ದೇಶಕ್ಕಾಗಿ, ಆ ವ್ಯಕ್ತಿಯು ಒದಗಿಸಿದ ಒಂದು ಅಥವಾ ಹೆಚ್ಚಿನ ಉಸಿರಾಟದ ಮಾದರಿಗಳ ಮೇಲೆ ಅಂಥ ಪರೀಕ್ಷೆಯ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಮೋದಿಸಿದ ಪ್ರಕಾರದ ಸಾಧನದ ಮೂಲಕ ನಡೆಸಲಾಗುವ ಪರೀಕ್ಷೆ.

204. ಪ್ರಯೋಗಶಾಲಾ ಪರೀಕ್ಷೆ:- (1) 203ನೇ ಪ್ರಕರಣದ ಮೇರೆಗೆ ದಸ್ತಗಿರಿ ಮಾಡಿದ ವ್ಯಕ್ತಿಯನ್ನು, ಅವನು ಪೊಲೀಸು ಠಾಣೆಯಲ್ಲಿರುವಾಗ,-

(ಎ) ಅಂಥ ವ್ಯಕ್ತಿಯ ಸಂಬಂಧದಲ್ಲಿ ಉಸಿರಾಟದ ಪರೀಕ್ಷೆಗೆ ಬಳಸಲಾದ ಸಾಧನವು ಆ ವ್ಯಕ್ತಿಯ ರಕ್ತದಲ್ಲಿ ಮದ್ಯಸಾರ ಇರುವುದನ್ನು ಸೂಚಿಸುತ್ತದೆ ಎಂದು ಪೊಲೀಸು ಅಧಿಕಾರಿಗೆ ಕಂಡುಬಂದರೆ; ಅಥವಾ

(ಬಿ) ಅಂಥ ವ್ಯಕ್ತಿಗೆ ಉಸಿರಾಟದ ಪರೀಕ್ಷೆಗೆ ಒಳಗಾಗಲು ಅವಕಾಶ ಕೊಟ್ಟಿರುವಾಗ ಅವನು ಹಾಗೆ ಮಾಡಲು ನಿರಾಕರಿಸಿದರೆ, ಲೋಪಿಸಿದರೆ ಅಥವಾ ತಪ್ಪಿದರೆ

- ಪೊಲೀಸು ಅಧಿಕಾರಿಯು ಹಾಜರುಪಡಿಸಬಹುದಾದ ನೋಂದಾಯಿತ ವೈದ್ಯ ವೃತ್ತಿಗಾರನಿಗೆ ಪ್ರಯೋಗ ಶಾಲೆಯ ಪರೀಕ್ಷೆಗಾಗಿ ಅವನ ರಕ್ತದ ಮಾದರಿಯನ್ನು ಒದಗಿಸುವಂತೆ ಪೊಲೀಸು ಅಧಿಕಾರಿಯು ಅಗತ್ಯಪಡಿಸಬಹುದು:

ಪರಂತು, ಅಂಥ ಮಾದರಿಯನ್ನು ಒದಗಿಸಲು ಅಗತ್ಯಪಡಿಸಲಾದ ವ್ಯಕ್ತಿಯು ಮಹಿಳೆಯಾಗಿರುವಲ್ಲಿ ಮತ್ತು ಅಂಥ ಪೊಲೀಸು ಅಧಿಕಾರಿಯು ಹಾಜರುಪಡಿಸಿದ ನೋಂದಾಯಿತ ವೈದ್ಯ ವೃತ್ತಿಗಾರನು ಪುರುಷ ವೈದ್ಯ ವೃತ್ತಿಗಾರನಾಗಿದ್ದರೆ, ವೈದ್ಯ ವೃತ್ತಿಗಾರನಾಗಿರುವ ಅಥವಾ ಅಲ್ಲದ ಮಹಿಳೆಯ ಸಮಕ್ಷಮದಲ್ಲಿ ಮಾತ್ರ ಮಾದರಿಯನ್ನು ತೆಗೆದುಕೊಳ್ಳತಕ್ಕದ್ದು.

(2) ಒಬ್ಬ ವ್ಯಕ್ತಿಯನ್ನು, ಅವನು ಒಳರೋಗಿಯಾಗಿ ಆಸ್ಪತ್ರೆಯಲ್ಲಿರುವಾಗ,-

(ಎ) ಅಂಥ ವ್ಯಕ್ತಿಯ ಉಸಿರಾಟಕ್ಕೆ ಸಂಬಂಧಿಸಿ ಯಾವ ಸಾಧನದ ಮೂಲಕ ಪರೀಕ್ಷೆಯನ್ನು ನಡೆಸಲಾಯಿತೋ ಆ ಸಾಧನವು ಅಂಥ ವ್ಯಕ್ತಿಯ ರಕ್ತದಲ್ಲಿ ಮದ್ಯಸಾರವಿರುವುದನ್ನು ಸೂಚಿಸುವುದೆಂದು ಪೊಲೀಸ್ ಅಧಿಕಾರಿಗೆ ಕಂಡುಬಂದರೆ; ಅಥವಾ

(ಬಿ) ಉಸಿರಾಟದ ಪರೀಕ್ಷೆಗಾಗಿ ಉಸಿರಿನ ಮಾದರಿಯನ್ನು ಒದಗಿಸಲು ಅಗತ್ಯಪಡಿಸಲಾದ ವ್ಯಕ್ತಿಯು, ಅವನು ಆಸ್ಪತ್ರೆಯಲ್ಲಿರಲಿ ಅಥವಾ ಬೇರೆಡೆಯಲ್ಲಿರಲಿ, ಹಾಗೆ ಮಾಡಲು ನಿರಾಕರಿಸಿದರೆ, ಲೋಪಿಸಿದರೆ ಅಥವಾ ತಪ್ಪಿದರೆ ಮತ್ತು ಪೊಲೀಸ್ ಅಧಿಕಾರಿಗೆ ಅವನ ರಕ್ತದಲ್ಲಿ ಮದ್ಯಸಾರ ಇರುವುದಾಗಿ ಶಂಕಿಸಲು ಯುಕ್ತ ಕಾರಣವಿದ್ದರೆ

- ಪ್ರಯೋಗಶಾಲಾ ಪರೀಕ್ಷೆಗಾಗಿ ಅವನ ರಕ್ತದ ಮಾದರಿಯನ್ನು ಆಸ್ಪತ್ರೆಯಲ್ಲಿ ಒದಗಿಸುವಂತೆ ಪೊಲೀಸು ಅಧಿಕಾರಿಯು ಅಗತ್ಯಪಡಿಸಬಹುದು:

ಪರಂತು, ಆ ವ್ಯಕ್ತಿಯ ಶುಶ್ರೂಷೆಯ ನಿಕಟ ಮೇಲ್ವಿಚಾರಣೆಯನ್ನು ಹೊಂದಿರುವ ನೋಂದಾಯಿತ ವೈದ್ಯ ವೃತ್ತಿಗಾರನು ಅಂಥ ಅಗತ್ಯತೆಯ ಪ್ರಸ್ತಾವವನ್ನು ಮೊದಲು ತಿಳಿಸದಿದ್ದಲ್ಲಿ ಅಥವಾ ವೈದ್ಯ ವೃತ್ತಿಗಾರನು ರೋಗಿಯ ರಕ್ತದ ಮಾದರಿಯನ್ನು ಒದಗಿಸುವುದರಿಂದ ಅಥವಾ ಅದನ್ನು ಒದಗಿಸುವಂತೆ ಅಗತ್ಯಪಡಿಸುವುದರಿಂದ ರೋಗಿಯ ಯುಕ್ತ ಆರೈಕೆ ಅಥವಾ ಶುಶ್ರೂಷೆಗೆ ಬಾಧಕ ಉಂಟಾಗುವುದು ಎಂಬ ಕಾರಣದ ಮೇಲೆ ಅಂಥ ಮಾದರಿಯನ್ನು ಒದಗಿಸುವುದಕ್ಕೆ ಆಕ್ಷೇಪಿಸಿದರೆ, ಈ ಉಪಪ್ರಕರಣದ ಮೇರೆಗೆ ಪ್ರಯೋಗ ಶಾಲಾ ಪರೀಕ್ಷೆಗಾಗಿ ಆ ವ್ಯಕ್ತಿಯನ್ನು ಅವನ ರಕ್ತದ ಮಾದರಿಯನ್ನು ಒದಗಿಸಲು ಅಗತ್ಯಪಡಿಸತಕ್ಕದ್ದಲ್ಲ.

(3) ಈ ಪ್ರಕರಣದ ಅನುಸಾರವಾಗಿ ಮಾಡಿದ ಪ್ರಯೋಗ ಶಾಲಾ ಪರೀಕ್ಷೆಯ ಫಲಿತಾಂಶಗಳು ಸಾಕ್ಷ್ಯದಲ್ಲಿ ಸ್ವೀಕಾರಾರ್ಹವಾಗಿರತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ "ಪ್ರಯೋಗ ಶಾಲಾ ಪರೀಕ್ಷೆ" ಎಂದರೆ ಕೇಂದ್ರ ಸರ್ಕಾರವು ಅಥವಾ ಯಾವೊಂದು ರಾಜ್ಯ ಸರ್ಕಾರವು ಸ್ಥಾಪಿಸಿ ನಿರ್ವಹಿಸುತ್ತಿರುವ ಅಥವಾ ಮನ್ನಣೆ ನೀಡಲಾದ ಪ್ರಯೋಗ ಶಾಲೆಯಲ್ಲಿ ಮಾಡಿದ ರಕ್ತದ ಮಾದರಿಯ ವಿಶ್ಲೇಷಣೆ.

205. ವಾಹನ ನಡೆಸಲು ಅಸಮರ್ಥತೆಯ ಬಗ್ಗೆ ಪೂರ್ವಭಾವನೆ:- 185ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವೊಂದು ಅಪರಾಧದ ಬಗೆಗಿನ ಯಾವುದೇ ವ್ಯವಹರಣೆಯಲ್ಲಿ ಆಪಾದಿತನು, ಉಸಿರಾಟದ ಪರೀಕ್ಷೆಗಾಗಿ ಅವನ ಉಸಿರಿನ ಮಾದರಿಯನ್ನು ಅಥವಾ ಪ್ರಯೋಗಶಾಲಾ ಪರೀಕ್ಷೆಗಾಗಿ ಅವನ ರಕ್ತದ ಮಾದರಿಯನ್ನು ತೆಗೆದುಕೊಳ್ಳಲು ಅಥವಾ ಒದಗಿಸಲು, ಯಾವುದೇ ಸಮಯದಲ್ಲಿ ಪೊಲೀಸ್ ಅಧಿಕಾರಿಯು ಸಮ್ಮತಿ ನೀಡುವಂತೆ ಕೋರಿದಾಗ, ಹಾಗೆ ಮಾಡಲು ನಿರಾಕರಿಸಿದರೆ, ಲೋಪಿಸಿದರೆ ಅಥವಾ ತಪ್ಪಿದರೆ, ಅವನ ನಿರಾಕರಣೆ, ಲೋಪ ಅಥವಾ ತಪ್ಪುವಿಕೆಗೆ ಸಮಂಜಸವಾದ ಕಾರಣವನ್ನು ಕೊಟ್ಟ ಹೊರತು, ಅದು ಆ ಸಮಯದಲ್ಲಿ ಅವನ ಸ್ಥಿತಿಗೆ ಸಂಬಂಧಿಸಿ ಪ್ರಾಸಿಕ್ಯೂಷನ್ ಪರವಾಗಿ ಕೊಟ್ಟ ಯಾವುದೇ ಸಾಕ್ಷ್ಯವನ್ನು ಸಮರ್ಥಿಸುವ ಅಥವಾ ಪ್ರತಿವಾದದ ಪರವಾಗಿ ಕೊಟ್ಟ ಯಾವುದೇ ಸಾಕ್ಷ್ಯವನ್ನು ಖಂಡಿಸುವ ಪರಿಸ್ಥಿತಿಯಾಗಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

206. ದಸ್ತಾವೇಜನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಯ ಅಧಿಕಾರ:- (1) ಪೊಲೀಸ್ ಅಧಿಕಾರಿಯು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯು, ಮೋಟಾರು ವಾಹನದ ಚಾಲಕನು ಅಥವಾ ಅದರ ಪ್ರಭಾರ ಹೊಂದಿರುವ ವ್ಯಕ್ತಿಯು ಅವನ ಮುಂದೆ ಹಾಜರುಪಡಿಸಿದ ಮೋಟಾರು ವಾಹನದ ಮೇಲಿರುವ ಯಾವುದೇ ಗುರುತು ಚಿಹ್ನೆ ಅಥವಾ ಯಾವುದೇ ಲೈಸೆನ್ಸು, ಪರ್ಮಿಟ್ಟು, ನೋಂದಣಿ ಪ್ರಮಾಣ ಪತ್ರ ಅಥವಾ ಇತರ ದಸ್ತಾವೇಜು, ಭಾರತ

ದಂಡ ಸಂಹಿತೆಯ 464ನೇ ಪ್ರಕರಣದ ಅರ್ಥದಲ್ಲಿ ಸುಳ್ಳು ದಸ್ತಾವೇಜಾಗಿದ್ದರೆ, ಆ ಚಿಹ್ನೆ ಅಥವಾ ದಸ್ತಾವೇಜು ಅವನ ಸ್ವಾಧೀನದಲ್ಲಿರುವ ಬಗ್ಗೆ ಅಥವಾ ವಾಹನದಲ್ಲಿರುವ ಬಗ್ಗೆ ವಿವರಣೆಯನ್ನು ನೀಡಲು ಆ ವಾಹನದ ಚಾಲಕನನ್ನು ಅಥವಾ ಒಡೆಯನನ್ನು ಕೇಳಬಹುದು.

(2) ಪೊಲೀಸ್ ಅಧಿಕಾರಿಯು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ಆಪಾದಿತನಾದ ಮೋಟಾರು ವಾಹನದ ಚಾಲಕನು ತಲೆಮರೆಸಿಕೊಳ್ಳಬಹುದು ಅಥವಾ ಅನ್ಯಥಾ ಸಮನು ಜಾರಿ ಮಾಡುವುದನ್ನು ತಪ್ಪಿಸಿಕೊಳ್ಳಬಹುದು ಎಂದು ನಂಬಲು ಕಾರಣವಿದ್ದರೆ, ಅಂಥ ಚಾಲಕನು ಹೊಂದಿರುವ ಯಾವುದೇ ಲೈಸನ್ಸನ್ನು ವಶಪಡಿಸಿಕೊಳ್ಳಬಹುದು ಮತ್ತು ಅಪರಾಧದ ಬಗ್ಗೆ ಸಂಜ್ಞಾನ ತೆಗೆದುಕೊಳ್ಳುವ ನ್ಯಾಯಾಲಯಕ್ಕೆ ಅದನ್ನು ಕಳುಹಿಸಬಹುದು ಮತ್ತು ಸದರಿ ನ್ಯಾಯಾಲಯವು, ಅಂಥ ಚಾಲಕನು ಅದರ ಮುಂದೆ ಮೊದಲ ಬಾರಿ ಹಾಜರಾದ ಮೇಲೆ, 3ನೇ ಪ್ರಕರಣದ ಮೇರೆಗೆ ಕೊಡಲಾದ ತಾತ್ಕಾಲಿಕ ತಲುಪೊಪ್ಪಿಗೆ ಪಡೆದ ಮೇಲೆ ಆ ಲೈಸನ್ಸನ್ನು ಅವನಿಗೆ ಹಿಂದಿರುಗಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಲೈಸನ್ಸನ್ನು ವಶಪಡಿಸಿಕೊಳ್ಳುವ ಪೊಲೀಸು ಅಧಿಕಾರಿಯು ಅಥವಾ ಇತರ ವ್ಯಕ್ತಿಯು, ಲೈಸನ್ಸನ್ನು ಒಪ್ಪಿಸಿಕೊಡುವ ವ್ಯಕ್ತಿಗೆ ಆ ಬಗ್ಗೆ ಒಂದು ತಾತ್ಕಾಲಿಕ ತಲುಪೊಪ್ಪಿಗೆಯನ್ನು ಕೊಡತಕ್ಕದ್ದು ಮತ್ತು ಅಂಥ ತಲುಪೊಪ್ಪಿಗೆಯು ಲೈಸನ್ಸು ಧಾರಕನನ್ನು ಅವನಿಗೆ ಲೈಸನ್ಸು ಹಿಂದಿರುಗಿಸುವವರೆಗೆ ಅಥವಾ ಪೊಲೀಸು ಅಧಿಕಾರಿ ಅಥವಾ ಇತರ ವ್ಯಕ್ತಿಯು ಆ ತಲುಪೊಪ್ಪಿಗೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ವಾಹನವನ್ನು ನಡೆಸಲು ಅಧಿಕಾರ ಕೊಡತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟ್, ಪೊಲೀಸು ಅಧಿಕಾರಿ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯು ತನಗೆ ಸಲ್ಲಿಸಿದ ಅರ್ಜಿಯ ಮೇಲೆ ಲೈಸನ್ಸು ಧಾರಕನು ಜವಾಬ್ದಾರನಾಗಿಲ್ಲದ ಯಾವುದೇ ಕಾರಣಕ್ಕಾಗಿ ತಲುಪೊಪ್ಪಿಗೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಲೈಸನ್ಸನ್ನು ಆ ಲೈಸನ್ಸು ಧಾರಕನಿಗೆ ಹಿಂದಿರುಗಿಸಲು ಆಗುವುದಿಲ್ಲ ಅಥವಾ ಹಿಂದಿರುಗಿಸಲಾಗಿಲ್ಲವೆಂದು ಮನದಟ್ಟಾದರೆ, ಸಂದರ್ಭಾನುಸಾರ, ಆ ಮ್ಯಾಜಿಸ್ಟ್ರೇಟ್, ಪೊಲೀಸ್ ಅಧಿಕಾರಿ ಅಥವಾ ಇತರ ವ್ಯಕ್ತಿಯು ತಲುಪೊಪ್ಪಿಗೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದವರೆಗೆ ವಾಹನವನ್ನು ನಡೆಸಲು ಅಧಿಕೃತಗೊಳಿಸಿದ ಅವಧಿಯನ್ನು ವಿಸ್ತರಿಸಬಹುದು.

207. ನೋಂದಣಿ ಪ್ರಮಾಣ ಪತ್ರ, ಪರ್ಮಿಟ್ಟು, ಇತ್ಯಾದಿಗಳು ಇಲ್ಲದೆ ಉಪಯೋಗಿಸಲಾದ ವಾಹನಗಳನ್ನು ತಡೆಹಿಡಿದಿಡುವ ಅಧಿಕಾರ:- (1) ಪೊಲೀಸು ಅಧಿಕಾರಿ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಗೆ ಮೋಟಾರು ವಾಹನವನ್ನು 3ನೇ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 39ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ 66ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದ ಪರ್ಮಿಟ್ಟು ಇಲ್ಲದೆ ಅಥವಾ ವಾಹನವನ್ನು ಯಾವ ಮಾರ್ಗದಲ್ಲಿ ಅಥವಾ ಯಾವ ಪ್ರದೇಶದಲ್ಲಿ ಅಥವಾ ಯಾವ ಉದ್ದೇಶಕ್ಕಾಗಿ ಉಪಯೋಗಿಸಬಹುದೆಂಬುದಕ್ಕೆ ಸಂಬಂಧಿಸಿದಂತೆ ಪರ್ಮಿಟ್ಟಿನಲ್ಲಿರುವ ಯಾವುದೇ ಷರತ್ತನ್ನು ಉಲ್ಲಂಘಿಸಿ ಬಳಸಲಾಗಿದೆ ಅಥವಾ ಬಳಸಲಾಗುತ್ತಿದೆ ಎಂದು ನಂಬಲು ಕಾರಣವಿದ್ದರೆ, ಅವನು ಆ ವಾಹನವನ್ನು ವಶಪಡಿಸಿಕೊಳ್ಳಬಹುದು ಮತ್ತು ನಿಯಮಿಸಿದ ರೀತಿಯಲ್ಲಿ ತಡೆಹಿಡಿದಿಡಬಹುದು ಮತ್ತು ಈ ಉದ್ದೇಶಕ್ಕಾಗಿ ಅಥವಾ ವಾಹನದ ತಾತ್ಕಾಲಿಕ ಸುರಕ್ಷಿತ ಅಭಿರಕ್ಷೆಗಾಗಿ ತಾನು ಯುಕ್ತವೆಂದು ಪರ್ಯಾಲೋಚಿಸಬಹುದಾದ ಯಾವುವೇ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ಮಾಡಬಹುದು:

ಪರಂತು, ಅಂಥ ಯಾರೇ ಅಧಿಕಾರಿ ಅಥವಾ ವ್ಯಕ್ತಿಯು, ಮೋಟಾರು ವಾಹನವನ್ನು 3ನೇ ಪ್ರಕರಣ ಅಥವಾ 4ನೇ ಪ್ರಕರಣವನ್ನು ಉಲ್ಲಂಘಿಸಿ ಅಥವಾ 66ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದ ಪರ್ಮಿಟ್ಟು ಇಲ್ಲದೆ ಬಳಸಲಾಗಿದೆ ಅಥವಾ ಬಳಸಲಾಗುತ್ತಿದೆ ಎಂದು ನಂಬಲು ಕಾರಣವಿದ್ದರೆ, ಅವನು ಆ ವಾಹನವನ್ನು ವಶಪಡಿಸಿಕೊಳ್ಳುವುದಕ್ಕೆ ಬದಲಾಗಿ ವಾಹನದ ನೋಂದಣಿ ಪ್ರಮಾಣ ಪತ್ರವನ್ನು ವಶಪಡಿಸಿಕೊಳ್ಳಬಹುದು ಮತ್ತು ಆ ಬಗ್ಗೆ ಒಂದು ತಲುಪೊಪ್ಪಿಗೆಯನ್ನು ಕೊಡತಕ್ಕದ್ದು.

(2) ವಾಹನವನ್ನು (1)ನೇ ಉಪಪ್ರಕರಣದ ಮೇರೆಗೆ ವಶಪಡಿಸಿಕೊಂಡು ತಡೆಹಿಡಿದಿಟ್ಟಿರುವಲ್ಲಿ, ಆ ಮೋಟಾರು ವಾಹನದ ಒಡೆಯ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು ವಾಹನದ ಬಿಡುಗಡೆಗೆ ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ ಸಾರಿಗೆ ಪ್ರಾಧಿಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂಥ ಪ್ರಾಧಿಕಾರ ಅಥವಾ ಅಧಿಕಾರಿಯು ಅಂಥ ದಸ್ತಾವೇಜುಗಳನ್ನು ಪರಿಶೀಲಿಸಿದ ತರುವಾಯ, ಪ್ರಾಧಿಕಾರಿ ಅಥವಾ

ಅಧಿಕಾರಿಯು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಆದೇಶದ ಮೂಲಕ ವಾಹನವನ್ನು ಬಿಡುಗಡೆ ಮಾಡಬಹುದು.

208 ಪ್ರಕರಣಗಳ ಕ್ಷಿಪ್ರ ವಿಲೆ:- (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ (ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಪರಾಧವನ್ನು ಹೊರತುಪಡಿಸಿ) ಸಂಜ್ಞಾನವನ್ನು ತೆಗೆದುಕೊಳ್ಳುವ ನ್ಯಾಯಾಲಯವು, ಆಪಾದಿತ ವ್ಯಕ್ತಿಗೆ ಜಾರಿಮಾಡಬೇಕಾದ ಸಮನ್ಸಿನಲ್ಲಿ,-

(ಎ) ವಕೀಲನ ಮೂಲಕ ಅಥವಾ ಖುದ್ದಾಗಿ ಹಾಜರಾಗಬಹುದು; ಅಥವಾ

(ಬಿ) ಆರೋಪ ಸುನಾವಣೆಗಿಂತ ಮುಂಚೆ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ದೋಷಾರೋಪವನ್ನು ಒಪ್ಪಿಕೊಳ್ಳಬಹುದು ಮತ್ತು ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ (ಅಪರಾಧಕ್ಕೆ ವಿಧಿಸಬಹುದಾದ ಗರಿಷ್ಠ ಜುಲ್ಮಾನೆಯನ್ನು ಮೀರದ) ಮೊತ್ತವನ್ನು ಮನಿಆರ್ಡರ್ ಮೂಲಕ ನ್ಯಾಯಾಲಯಕ್ಕೆ ಸಂದಾಯ ಮಾಡಬಹುದು ಮತ್ತು ಮನಿ ಆರ್ಡರ್ ಕೂಪನ್ನಿನಲ್ಲೇ ದೋಷಿಯೆಂದು ಹೇಳಬಹುದೆಂದು,-

(i) ಅಪರಾಧವು ಈ ಅಧಿನಿಯಮದ ಮೇರೆಗೆ ಕಾರಾವಾಸದಿಂದ ದಂಡನೀಯವಾದ ಅಪರಾಧವಾಗಿದ್ದರೆ ತಿಳಿಸಬಹುದು; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ

- ತಿಳಿಸತಕ್ಕದ್ದು:

ಪರಂತು, ನ್ಯಾಯಾಲಯವು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧಗಳಲ್ಲಿ ಯಾವುದೇ ಅಪರಾಧದ ಸಂದರ್ಭದಲ್ಲಿ ಆಪಾದಿತ ವ್ಯಕ್ತಿಯು, ಅವನು ತಪ್ಪನ್ನು ಒಪ್ಪಿಕೊಂಡಿದ್ದರೆ, (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ತಪ್ಪನ್ನು ಒಪ್ಪಿಕೊಳ್ಳತಕ್ಕದ್ದು ಎಂದು ಸಮನುಗಳಲ್ಲಿ ತಿಳಿಸತಕ್ಕದ್ದು ಮತ್ತು ಅವನ ಚಾಲನ ಲೈಸನ್ಸನ್ನು ಹಾಗೆ ತಪ್ಪು ಒಪ್ಪಿಕೊಂಡಿರುವ ವಿಷಯವನ್ನು ಒಳಗೊಂಡಿರುವ ಪತ್ರದ ಸಮೇತ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

(2) (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ವ್ಯವಹರಿಸಲಾದ ಅಪರಾಧವು ಈ ಉಪಪ್ರಕರಣದ ಉದ್ದೇಶಗಳಿಗಾಗಿ ನಿಯಮಗಳ ಮೂಲಕ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಅಪರಾಧವಾಗಿರುವಲ್ಲಿ, ನ್ಯಾಯಾಲಯವು, ಆಪಾದಿತ ವ್ಯಕ್ತಿಯು ದೋಷಾರೋಪವನ್ನು ಒಪ್ಪಿಕೊಂಡಿದ್ದು, ತನ್ನ ಚಾಲನ ಲೈಸನ್ಸನ್ನು ತಾನು ತಪ್ಪು ಒಪ್ಪಿಕೊಂಡಿರುವ ವಿಷಯವನ್ನು ಒಳಗೊಂಡ ಪತ್ರದ ಸಮೇತ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟರೆ, ಅವನ ಚಾಲನ ಲೈಸೆನ್ಸಿನ ಮೇಲೆ ಅಂಥ ಅಪರಾಧ ನಿರ್ಣಯದ ಬಗ್ಗೆ ಹಿಂಬರೆಯತಕ್ಕದ್ದು.

(3) ಆಪಾದಿತ ವ್ಯಕ್ತಿಯು ತಪ್ಪೊಪ್ಪಿಕೊಂಡು, ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡಿ, (1)ನೇ ಉಪಪ್ರಕರಣ ಅಥವಾ ಸಂದರ್ಭಾನುಸಾರ (1) ಮತ್ತು (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಿರುವಲ್ಲಿ, ಆ ಅಪರಾಧಕ್ಕೆ ಸಂಬಂಧಿಸಿ ಅವನ ವಿರುದ್ಧ ಮುಂದಿನ ಯಾವುವೇ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಅವನು ತಪ್ಪೊಪ್ಪಿಕೊಂಡ ಕಾರಣದಿಂದಾಗಿ ಲೈಸನ್ಸನ್ನು ಹೊಂದಿರಲು ಅಥವಾ ಪಡೆಯಲು ಅವನು ಅನರ್ಹನಾಗುವುದಕ್ಕೆ ಬದ್ಧನಾಗತಕ್ಕದ್ದಲ್ಲ.

209. ಅಪರಾಧ ನಿರ್ಣಯದ ಮೇಲೆ ನಿರ್ಬಂಧ:- 183 ನೇ ಪ್ರಕರಣ ಅಥವಾ 184 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಪ್ರಾಸಿಕ್ಯೂಟ್ ಮಾಡಲಾದ ಯಾರೇ ವ್ಯಕ್ತಿಯನ್ನು,-

(ಎ) ಅವನನ್ನು ಪ್ರಾಸಿಕ್ಯೂಟ್ ಮಾಡುವ ಪ್ರಶ್ನೆಯನ್ನು ಪರ್ಯಾಲೋಚಿಸಲಾಗುವುದೆಂದು, ಅಪರಾಧವನ್ನು ಎಸಗಿದ ಸಮಯದಲ್ಲಿ ಅವನಿಗೆ ಎಚ್ಚರಿಕೆಯನ್ನು ಕೊಟ್ಟಿದ್ದ ಹೊರತು; ಅಥವಾ

(ಬಿ) ಅಪರಾಧವನ್ನು ಎಸಗಿದ ಹದಿನಾಲ್ಕು ದಿವಸಗಳೊಳಗೆ, ಅಪರಾಧದ ಸ್ವರೂಪ ಮತ್ತು ಸಮಯ ಮತ್ತು ಅದನ್ನು ಎಸಗಲಾಯಿತೆಂದು ಆಪಾದಿಸಲಾದ ಸ್ಥಳವನ್ನು ನಿರ್ದಿಷ್ಟಪಡಿಸುವ ಒಂದು ನೋಟೀಸನ್ನು ಅವನಿಗೆ ಅಥವಾ ಅಪರಾಧ ಎಸಗಿದ ಸಮಯದಲ್ಲಿ ವಾಹನದ ಒಡೆಯನೆಂದು ನೋಂದಾಯಿತನಾದ ವ್ಯಕ್ತಿಗೆ ಜಾರಿಮಾಡಿದ್ದ ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದ ಹೊರತು; ಅಥವಾ

(ಸಿ) ಅಪರಾಧ ಎಸಗಿದ ಇಪ್ಪತ್ತೆಂಟು ದಿನಗಳೊಳಗೆ, ಅವನಿಗೆ ಆ ಅಪರಾಧದ ಬಗ್ಗೆ ಸಮನು ಜಾರಿಮಾಡಿದ್ದ ಹೊರತು - ಅಪರಾಧಿಯೆಂದು ನಿರ್ಣಯಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ನ್ಯಾಯಾಲಯಕ್ಕೆ,-

(ಎ) ಸಕಾಲದಲ್ಲಿ ಆಪಾದಿತನ ಅಥವಾ ವಾಹನದ ನೋಂದಾಯಿತ ಒಡೆಯನ ಹೆಸರನ್ನು ಮತ್ತು ವಿಳಾಸವನ್ನು ಯುಕ್ತ ಶ್ರದ್ಧೆಯನ್ನು ವಹಿಸಿಯೂ ಖಚಿತಪಡಿಸಿಕೊಳ್ಳಲು ಆಗದಿದ್ದುದರಿಂದ ಈ ಉಪಪ್ರಕರಣದಲ್ಲಿ ಉಲ್ಲೇಖಿತವಾದ ನೋಟೀಸನ್ನು ಅಥವಾ ಸಮನನ್ನು ಜಾರಿಮಾಡಲಾಗಿಲ್ಲವೆಂದು; ಅಥವಾ

(ಬಿ) ಆಪಾದಿತನ ವರ್ತನೆಯಿಂದಾಗಿ ಹಾಗೆ ಮಾಡಲಾಗಲಿಲ್ಲವೆಂದು

- ಮನದಟ್ಟಾದರೆ, ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

210. ಅಪರಾಧ ನಿರ್ಣಯದ ಬಗ್ಗೆ ನ್ಯಾಯಾಲಯಗಳು ಮಾಹಿತಿಗಳನ್ನು ಕಳುಹಿಸುವುದು:- ಚಾಲನ ಲೈಸನ್ಸನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು, ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಥವಾ ಮೋಟಾರು ವಾಹನವನ್ನು ಬಳಸಿ ಮಾಡಿದ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣಯಿಸಿದ ಪ್ರತಿಯೊಂದು ನ್ಯಾಯಾಲಯವು,-

(ಎ) ಚಾಲನ ಲೈಸನ್ಸನ್ನು ಕೊಟ್ಟ ಲೈಸನ್ಸ್ ಪ್ರಾಧಿಕಾರಕ್ಕೂ; ಮತ್ತು

(ಬಿ) ಕೊನೆಯ ಸಲ ಲೈಸನ್ಸನ್ನು ನವೀಕರಿಸಿದ ಲೈಸನ್ಸ್ ಪ್ರಾಧಿಕಾರಕ್ಕೆ ಆ ಬಗ್ಗೆ ಮಾಹಿತಿಯನ್ನು ಕಳುಹಿಸತಕ್ಕದ್ದು

- ಮತ್ತು ಅಂಥ ಪ್ರತಿಯೊಂದು ಮಾಹಿತಿಯಲ್ಲಿ, ಲೈಸನ್ಸುದಾರನ ಹೆಸರು ಮತ್ತು ವಿಳಾಸ, ಲೈಸನ್ಸಿನ ಸಂಖ್ಯೆ, ಅದನ್ನು ಕೊಟ್ಟ ಮತ್ತು ನವೀಕರಿಸಿದ ದಿನಾಂಕ, ಅಪರಾಧದ ಸ್ವರೂಪ, ಅದಕ್ಕೆ ವಿಧಿಸಲಾದ ದಂಡನೆ ಮತ್ತು ನಿಯಮಿಸಬಹುದಾದ ಇತರ ವಿವರಗಳು ಇರತಕ್ಕದ್ದು.

## ಅಧ್ಯಾಯ - **XIV**

### ಸಂಕೀರ್ಣ

211. ಫೀಜನ್ನು ವಿಧಿಸುವ ಅಧಿಕಾರ:- ಯಾವ ನಿಯಮವನ್ನು ರಚಿಸಲು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಡಲಾಗಿದೆಯೋ ಆ ನಿಯಮವು ಹಾಗೆ ಮಾಡಲು ಯಾವುದೇ ವ್ಯಕ್ತ ಉಪಬಂಧವಿಲ್ಲದಿದ್ದರೂ, ಅರ್ಜಿಗಳು, ದಸ್ತಾವೇಜುಗಳ ತಿದ್ದುಪಡಿಗಳು, ಪ್ರಮಾಣ ಪತ್ರಗಳು, ಲೈಸನ್ಸುಗಳು ಮತ್ತು ಪರ್ಮಿಟ್ಟುಗಳ ನೀಡಿಕೆ, ಪರೀಕ್ಷೆಗಳು, ಹಿಂಬರಹಗಳು, ಬಿಲ್ಲೆಗಳು, ಪ್ಲೇಟುಗಳು, ಮೇಲು ರುಜುಗಳು, ಅಧಿಕಾರ ನೀಡಿಕೆ, ಅಂಕಿಅಂಶಗಳ ಅಥವಾ ದಸ್ತಾವೇಜುಗಳ ಅಥವಾ ಆದೇಶಗಳ ಪ್ರತಿಗಳನ್ನು ಒದಗಿಸುವುದು ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಗತ್ಯವೆಂದು ಪರಿಗಣಿಸಬಹುದಾದಂತೆ ಅಧಿಕಾರಿಗಳು ಅಥವಾ ಪ್ರಾಧಿಕಾರಿಗಳು ಸಲ್ಲಿಸುವ ಯಾವುದೇ ಸೇವೆಯನ್ನು ಒಳಗೊಂಡ ಇತರ ಯಾವುದೇ ಉದ್ದೇಶ ಅಥವಾ ವಿಷಯಕ್ಕೆ ಸಂಬಂಧಪಟ್ಟಂತೆ ಫೀಜುಗಳನ್ನು ವಿಧಿಸಲು ಉಪಬಂಧವನ್ನು ಕಲ್ಪಿಸಬಹುದು:

ಪರಂತು, ಸರ್ಕಾರವು ತಾನು ಸಾರ್ವಜನಿಕ ಹಿತದೃಷ್ಟಿಯಿಂದ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಯಾವುದೇ ಅಂಥ ಫೀಜನ್ನು ಪೂರ್ತಿಯಾಗಿ ಅಥವಾ ಭಾಗಶ: ಸಂದಾಯ ಮಾಡುವುದರಿಂದ ಯಾವುದೇ ವರ್ಗದ ವ್ಯಕ್ತಿಗಳಿಗೆ ವಿನಾಯಿತಿ ಕೊಡುವುದು ಅವಶ್ಯವೆಂದು ಪರಿಗಣಿಸಿದರೆ, ಹಾಗೆ ಮಾಡಬಹುದು.

212. ನಿಯಮಗಳ ಮತ್ತು ಅಧಿಸೂಚನೆಗಳ ಪ್ರಕಟಣೆ ಮತ್ತು ಪ್ರಾರಂಭ ಮತ್ತು ಮಂಡನೆ:- (1) ಈ ಅಧಿನಿಯಮದ ಮೇರೆಗಿನ ನಿಯಮಾವಳಿಗಳನ್ನು ರಚಿಸುವ ಅಧಿಕಾರವು ಆ ನಿಯಮಗಳನ್ನು ಪೂರ್ವ ಪ್ರಕಟಣೆಯಾದ ನಂತರ ರಚಿಸಬೇಕೆಂಬ ಷರತ್ತಿಗೆ ಒಳಪಟ್ಟಿದೆ.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲ ನಿಯಮಗಳನ್ನೂ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ತರುವಾಯದ ಒಂದು ದಿನಾಂಕವನ್ನು ಗೊತ್ತುಪಡಿಸಿದ್ದ ಹೊರತು, ಅವು ಅಂಥ ಪ್ರಕಟಣೆಯ ದಿನಾಂಕದಂದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಯಾವುದೇ ರಾಜ್ಯ ಸರ್ಕಾರವು ರಚಿಸಿದ ಎಲ್ಲ ನಿಯಮಗಳನ್ನು ಅವುಗಳನ್ನು ರಚಿಸಿದ ಅನಂತರ ಸಾಧ್ಯವಾದಷ್ಟು ಬೇಗ, ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, 75ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು 163ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರೂಪಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು 41ನೇ ಪ್ರಕರಣದ (4)ನೇ ಉಪಪ್ರಕರಣ, 58ನೇ ಪ್ರಕರಣದ (1)ನೇ ಉಪಪ್ರಕರಣ, 59ನೇ ಪ್ರಕರಣದ (1)ನೇ ಉಪಪ್ರಕರಣ, 163ಎ ಪ್ರಕರಣದ (4)ನೇ ಉಪಪ್ರಕರಣ ಮತ್ತು 213ನೇ ಪ್ರಕರಣದ (4)ನೇ ಉಪಪ್ರಕರಣದ ಪರಂತುಕದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನದ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ, ಯೋಜನೆಯಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಯೋಜನೆಯನ್ನು ರಚಿಸಕೂಡದೆಂದು ಅಥವಾ ಆ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮ, ಯೋಜನೆ ಅಥವಾ ಅಧಿಸೂಚನೆಯು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ, ಯೋಜನೆಯ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

213. ಮೋಟಾರು ವಾಹನ ಅಧಿಕಾರಿಗಳ ನೇಮಕ:- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಮೋಟಾರು ವಾಹನಗಳ ಇಲಾಖೆಯನ್ನು ಸ್ಥಾಪಿಸಬಹುದು ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ವ್ಯಕ್ತಿಗಳನ್ನು ಅದರ ಅಧಿಕಾರಿಗಳನ್ನಾಗಿ ನೇಮಕ ಮಾಡಬಹುದು.

(2) ಅಂಥ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ ಅರ್ಥವ್ಯಾಪ್ತಿಯಲ್ಲಿ ಸರ್ಕಾರಿ ನೌಕರನೆಂದು ಭಾವಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಮೋಟಾರು ವಾಹನಗಳ ಇಲಾಖೆಯ ಅಧಿಕಾರಿಗಳು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವ ಬಗ್ಗೆ ಮತ್ತು ವಿಶೇಷತ: ಅವರು ಧರಿಸಬೇಕಾದ ಸಮವಸ್ತ್ರವನ್ನು, ಅವರು ಯಾವ ಪ್ರಾಧಿಕಾರಿಗಳಿಗೆ ಅಧೀನರಾಗಿರಬೇಕೋ ಆ ಪ್ರಾಧಿಕಾರಿಗಳು, ಅವರು ನಿರ್ವಹಿಸಬೇಕಾದ ಕರ್ತವ್ಯಗಳು, ಅವರು ಚಲಾಯಿಸಬೇಕಾದ (ಈ ಅಧಿನಿಯಮದ ಮೇರೆಗೆ ಪೊಲೀಸು ಅಧಿಕಾರಿಗಳು ಚಲಾಯಿಸಬೇಕಾದ ಅಧಿಕಾರಗಳನ್ನೂ ಒಳಗೊಂಡು) ಅಧಿಕಾರಗಳು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅನ್ವಯಿಸುವ ಷರತ್ತುಗಳು ಇವುಗಳನ್ನು ನಿಯಮಿಸುವ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ನಿಯಮಗಳನ್ನು ರಚಿಸಬಹುದು.

(4) ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸದರಿ ಅಧಿಕಾರಿಗಳ ಅಥವಾ ಅಂಥ ಅಧಿಕಾರಿಗಳ ಯಾವುದೇ ವರ್ಗವು ಹಾಗೆ ನೇಮಕಗೊಳ್ಳಲು ಹೊಂದಿರತಕ್ಕ ಕನಿಷ್ಠ ಅರ್ಹತೆಯನ್ನು ನಿಗದಿಪಡಿಸಬಹುದು.

(5) ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕಾರ ಕೊಡಬಹುದಾದಂಥ ಅಧಿಕಾರಿಯು, (3)ನೇ ಉಪಪ್ರಕರಣದ ಮೇರೆಗೆ ಮೋಟಾರು ವಾಹನಗಳ ಇಲಾಖೆಯ ಯಾರೇ ಅಧಿಕಾರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳ ಜೊತೆಗೆ,-

(ಎ) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ಪರೀಕ್ಷೆ ಮತ್ತು ವಿಚಾರಣೆಯನ್ನು ಮಾಡಲು;

(ಬಿ) ತನಗೆ ಯುಕ್ತವೆಂದು ತೋರಿದಂಥ ಯಾವುದೇ ಸಹಾಯದೊಂದಿಗೆ ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಮಾಡಿರುವ ವ್ಯಕ್ತಿಯ ಅಧಿಭೋಗದಲ್ಲಿರುವ ಅಥವಾ ಅಂಥ ಅಪರಾಧಕ್ಕೆ ಸಂಬಂಧಿಸಿದ ಮೋಟಾರು ವಾಹನವನ್ನು ಇರಿಸಲಾಗಿದೆಯೆಂದು ನಂಬಲು ತನಗೆ ಕಾರಣವಿರುವ ಯಾವುದೇ ಆವರಣವನ್ನು ಪ್ರವೇಶಿಸಲು, ಪರಿಶೀಲಿಸಲು ಮತ್ತು ಶೋಧಿಸಲು - ಅಧಿಕಾರ ಹೊಂದಿರತಕ್ಕದ್ದು:

ಪರಂತು,-

(i) ವಾರೆಂಟಿಲ್ಲದೆಯೆ ಅಂಥ ಯಾವುದೇ ಶೋಧನೆಯನ್ನು ಗೆಜೆಟೆಡ್ ದರ್ಜೆಯ ಅಧಿಕಾರಿ ಮಾತ್ರವೇ ಮಾಡತಕ್ಕದ್ದು;

(ii) ಜುಲ್ಮಾನೆಯಿಂದ ಮಾತ್ರವೇ ದಂಡನೀಯವಾದ ಅಪರಾಧವಾಗಿರುವಲ್ಲಿ, ಸೂರ್ಯಾಸ್ತದ ಅನಂತರ ಮತ್ತು ಸೂರ್ಯೋದಯಕ್ಕೆ ಮುನ್ನ ಶೋಧನೆಯನ್ನು ಮಾಡತಕ್ಕದ್ದಲ್ಲ;

(iii) ವಾರೆಂಟಿಲ್ಲದೆ ಶೋಧನೆಯನ್ನು ಮಾಡಲಾಗಿರುವಲ್ಲಿ, ಸಂಬಂಧಪಟ್ಟ ಗೆಜೆಟೆಡ್ ಅಧಿಕಾರಿಯು ವಾರೆಂಟ್ ಪಡೆಯದೇ ಇರುವುದಕ್ಕೆ ಇರುವ ಕಾರಣಗಳನ್ನು ಬರಹದಲ್ಲಿ ದಾಖಲ್ಮಾಡತಕ್ಕದ್ದು ಮತ್ತು ಅಂಥ ಶೋಧನೆಯನ್ನು ಮಾಡಲಾಗಿದೆ ಎಂದು ತನ್ನ ನಿಕಟ ವರಿಷ್ಠಾಧಿಕಾರಿಗೆ ವರದಿ ಮಾಡತಕ್ಕದ್ದು ;

(ಸಿ) ಯಾರೇ ವ್ಯಕ್ತಿಯನ್ನು ವಿಚಾರಣೆ ಮಾಡಲು ಮತ್ತು ಈ ಅಧಿನಿಯಮಕ್ಕೆ ಅನುಸಾರವಾಗಿ ಇಟ್ಟ ಯಾವುದೇ ರಿಜಿಸ್ಟರು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ತಾನು ಅವಶ್ಯಕವೆಂದು ಪರಿಗಣಿಸಬಹುದಾದಂಥ ಯಾರೇ ವ್ಯಕ್ತಿಯ ಹೇಳಿಕೆಗಳನ್ನು ಆ ಸ್ಥಳದಲ್ಲಿಯೇ ಅಥವಾ ಅನ್ಯಥಾ ತೆಗೆದುಕೊಳ್ಳಲು;

(ಡಿ) ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಎಸಗಲಾಗಿದೆಯೆಂದು ಅವನು ನಂಬಲು ಕಾರಣವಿದೆಯೋ ಆ ಅಪರಾಧಕ್ಕೆ ಸಂಬಂಧಿಸಿದಂತೆ, ಸುಸಂಬದ್ಧವೆಂದು ತಾನು ಪರಿಗಣಿಸಬಹುದಾದ ಯಾವುವೇ ರಿಜಿಸ್ಟರುಗಳನ್ನು ಅಥವಾ ದಸ್ತಾವೇಜುಗಳನ್ನು ಅಥವಾ ಅದರ ಭಾಗಗಳನ್ನು ವಶಪಡಿಸಿಕೊಳ್ಳಲು ಅಥವಾ ಅದರ ಪ್ರತಿಗಳನ್ನು ತೆಗೆದುಕೊಳ್ಳಲು;

(ಇ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನನ್ನು ಹೂಡಲು ಮತ್ತು ಯಾವುದೇ ನ್ಯಾಯಾಲಯದ ಮುಂದೆ ಅಪರಾಧಿಯು ಹಾಜರಾಗುವುದನ್ನು ಖಚಿತಪಡಿಸುವುದಕ್ಕಾಗಿ ಬಂಧಪತ್ರವನ್ನು ತೆಗೆದುಕೊಳ್ಳಲು;

(ಎಫ್) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಲು

- ಅಧಿಕಾರ ಹೊಂದಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಯನ್ನೂ, ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ತನಗೆ ತಾನೇ ಅಪರಾಧಕ್ಕೆ ಸಿಕ್ಕಿಕೊಳ್ಳುವಂತೆ ಮಾಡುವ ಯಾವುದೇ ಹೇಳಿಕೆಯನ್ನು ಕೊಡಲು ಒತ್ತಾಯ ಮಾಡತಕ್ಕದ್ದಲ್ಲ.

(6) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಆ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ವಾರೆಂಟಿನ ಪ್ರಾಧಿಕಾರದ ಮೇರೆಗೆ ಯಾವುದೇ ಶೋಧನೆ ಅಥವಾ ಜಪ್ತಿಗೆ ಅನ್ವಯಿಸುವಂತೆ ಸಾಧ್ಯವಾಗಬಹುದಾದ ಮಟ್ಟಿಗೆ, ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆ ಅಥವಾ ಜಪ್ತಿಗೆ ಅನ್ವಯಿಸತಕ್ಕದ್ದು.

214. ಮೂಲ ಪ್ರಾಧಿಕಾರವು ಮಾಡಿದ ಆದೇಶಗಳ ಮೇಲೆ ಅಪೀಲಿನ ಮತ್ತು ಪುನರೀಕ್ಷಣೆಯ ಪರಿಣಾಮ:- (1) ಈ ಅಧಿನಿಯಮದ ಮೇರೆಗೆ ಮೂಲ ಪ್ರಾಧಿಕಾರವು ಮಾಡಿದ ಯಾವುದೇ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದ್ದರೆ ಅಥವಾ ಪುನರೀಕ್ಷಣೆಗಾಗಿ ಅರ್ಜಿ ಸಲ್ಲಿಸಿದ್ದರೆ, ಅಪೀಲು ಅಥವಾ ಪುನರೀಕ್ಷಣೆಯ ಅರ್ಜಿಯು ಮೂಲ ಪ್ರಾಧಿಕಾರವು ಮಾಡಿದ ಆದೇಶಕ್ಕೆ ತಡೆಯಾಗಿ ಪ್ರವರ್ತಿಸತಕ್ಕದ್ದಲ್ಲ ಮತ್ತು ಸಂದರ್ಭಾನುಸಾರ, ಆ ಅಪೀಲು ಮತ್ತು ಪುನರೀಕ್ಷಣೆಯ ಅರ್ಜಿಯ ವಿಲೆ ಆಗುವವರೆಗೆ ನಿಯಮಿಸಿದ ಅಪೀಲು ಪ್ರಾಧಿಕಾರಿಯು ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು ಅನ್ಯಥಾ ನಿರ್ದೇಶಿಸಿದ ಹೊರತು, ಅಂಥ ಆದೇಶವು ಜಾರಿಯಲ್ಲಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಪರ್ಮಿಟ್ಟಿನ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಮೂಲ ಪ್ರಾಧಿಕಾರಿಯು ತಿರಸ್ಕರಿಸಿದರೆ ಮತ್ತು ಅಂಥ ವ್ಯಕ್ತಿಯು ಅಂಥ ತಿರಸ್ಕರಣೆಯ ವಿರುದ್ಧವಾಗಿ ಈ ಅಧಿನಿಯಮದ ಮೇರೆಗೆ ಅಪೀಲನ್ನು ಅಥವಾ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಿದರೆ, ಸಂದರ್ಭಾನುಸಾರ, ಅಪೀಲು ಪ್ರಾಧಿಕಾರಿ ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು, ಆ ಪರ್ಮಿಟ್ಟು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಗಿದಿದ್ದರೂ ಅಪೀಲು ಅಥವಾ ಪುನರೀಕ್ಷಣಾ ಅರ್ಜಿ ವಿಲೆ ಆಗುವವರೆಗೂ ಕಾನೂನುಮಾನ್ಯವಾಗಿ ಮುಂದುವರಿಯತಕ್ಕದ್ದೆಂದು ಆದೇಶದ ಮೂಲಕ ನಿರ್ದೇಶಿಸಬಹುದು.

(3) ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ವ್ಯವಹರಣೆಗಳಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಅನಿಯತತೆಯಿಂದಾಗಿ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಅಂಥ ತಪ್ಪು, ಲೋಪ ಅಥವಾ ಅನಿಯತತೆಯು ವಾಸ್ತವವಾಗಿ ನ್ಯಾಯ ವಿಫಲತೆಗೆ ಕಾರಣವಾಗಿದೆ ಎಂದು ಸಂದರ್ಭಾನುಸಾರ, ನಿಯಮಿಸಲಾದ ಅಪೀಲು ಪ್ರಾಧಿಕಾರಿಗೆ ಅಥವಾ ಪುನರೀಕ್ಷಣಾ ಪ್ರಾಧಿಕಾರಿಗೆ ಕಂಡುಬಂದ ಹೊರತು ವಿಪರ್ಯಾಯ ಅಥವಾ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

215. ರಸ್ತೆ ಸುರಕ್ಷತಾ ಪರಿಷತ್ತುಗಳು ಮತ್ತು ಸಮಿತಿಗಳು:- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧ್ಯಕ್ಷ ಮತ್ತು ಆ ಸರ್ಕಾರವು ಅವಶ್ಯವೆಂದು ಭಾವಿಸುವಂಥ ಇತರ ಸದಸ್ಯರನ್ನೊಳಗೊಂಡ ಮತ್ತು ಆ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ರಾಷ್ಟ್ರಕ್ಕಾಗಿ ಒಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಪರಿಷತ್ತನ್ನು ರಚಿಸಬಹುದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ, ಅಧ್ಯಕ್ಷ ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವ ರೀತಿಯಲ್ಲಿ ಇತರ ಸದಸ್ಯರನ್ನೊಳಗೊಂಡ ಮತ್ತು ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತನ್ನು ರಚಿಸಬಹುದು.

(3) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಗೂ ಅಧ್ಯಕ್ಷ ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವ ರೀತಿಯಲ್ಲಿ ಅಂಥ ಇತರ ಸದಸ್ಯರನ್ನೊಳಗೊಂಡ ಮತ್ತು ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಪ್ರತಿಯೊಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯನ್ನು ರಚಿಸಬಹುದು.

(4) ಈ ಪ್ರಕರಣದಲ್ಲಿ ಉಲ್ಲೇಖಿಸಿರುವ ಪರಿಷತ್ತುಗಳು ಮತ್ತು ಸಮಿತಿಗಳು, ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ವಿಶೇಷವಾಗಿ ಈ ಅಧಿನಿಯಮದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ರಸ್ತೆ ಸುರಕ್ಷತಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು.

216. ತೊಂದರೆಗಳನ್ನು ನಿವಾರಿಸುವ ಅಧಿಕಾರ:- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ತೊಂದರೆಯ ನಿವಾರಣೆಗಾಗಿ ಅವಶ್ಯಕ ಅಥವಾ ವಿಹಿತವೆಂದು ಕಂಡುಬರುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಅಂಥ ಆದೇಶಗಳನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅವುಗಳನ್ನು ರಚಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

217. ನಿರಸನ ಮತ್ತು ಉಳಿಸುವಿಕೆಗಳು:- (1) ಮೋಟಾರು ವಾಹನಗಳ ಅಧಿನಿಯಮ, 1939 (1939ರ 4) ಮತ್ತು ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಆ ಅಧಿನಿಯಮಕ್ಕೆ ಸಂವಾದಿಯಾದ ಯಾವುದೇ ಕಾನೂನನ್ನು ಆ ರಾಜ್ಯದಲ್ಲಿ (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರಸಿತ ಅಧಿನಿಯಮಿತಿಯೆಂದು ಉಲ್ಲೇಖಿಸಲಾಗಿದೆ) ಈ ಮೂಲಕ ನಿರಸನಗೊಳಿಸಲಾಗಿದೆ.

(2) (1)ನೇ ಉಪಪ್ರಕರಣದ ಮೂಲಕ ಅಧಿನಿಯಮಿತಿಗಳು ನಿರಸನಗೊಂಡಿದ್ದಾಗ್ಯೂ,-

(ಎ) ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಮತ್ತು ನಿರಸಿತ ಅಧಿನಿಯಮಿತಿಗಳ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆ, ನಿಯಮ, ವಿನಿಯಮ, ಆದೇಶ ಅಥವಾ ನೋಟೀಸು ಅಥವಾ ಮಾಡಿದ ಯಾವುದೇ ನೇಮಕ ಅಥವಾ ಘೋಷಣೆ ಅಥವಾ ಕೊಟ್ಟ ಯಾವುದೇ ವಿನಾಯಿತಿ ಅಥವಾ ಮಾಡಿದ ಯಾವುದೇ ಜಫ್ತಿ ಅಥವಾ ವಿಧಿಸಿದ ಯಾವುದೇ ದಂಡನೆ ಅಥವಾ ಜುಲ್ಮಾನೆ, ಮಾಡಲಾದ ಯಾವುದೇ ಮುಟ್ಟುಗೋಲು, ರದ್ದಿಯಾತಿ ಅಥವಾ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಹೊರಡಿಸಲಾಗಿದೆ, ಮಾಡಲಾಗಿದೆ, ಕೊಡಲಾಗಿದೆ, ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ನಿರಸಿತವಾದ ಯಾವುದೇ ಅಧಿನಿಯಮಿತಿಯ ಮೇರೆಗೆ ನೀಡಲಾದ ಯಾವುದೇ ಅರ್ಹತಾ ಪ್ರಮಾಣ ಪತ್ರ ಅಥವಾ ನೋಂದಣಿ ಅಥವಾ ಲೈಸನ್ಸು ಅಥವಾ ನೀಡಿದ ಅಥವಾ ಮಂಜೂರಾದ ಪರ್ಮಿಟ್ಟು ಈ ಅಧಿನಿಯಮವನ್ನು ಹೊರಡಿಸದಿದ್ದರೆ ಹೇಗೋ ಹಾಗೆ ಅದೇ ಅವಧಿಗಾಗಿ ಮತ್ತು ಅವೇ ಷರತ್ತುಗಳ ಮೇರೆಗೆ ಅಂಥ ಪ್ರಾರಂಭದ ನಂತರ ಪರಿಣಾಮಕಾರಿಯಾಗಿ ಮುಂದುವರೆಯತಕ್ಕದ್ದು;

(ಸಿ) ಯಾವುದೇ ನಿರಸಿತ ಅಧಿನಿಯಮಿತಿಯ ಅಥವಾ ಅದರ ಉಪಬಂಧಗಳಿಗೆ ಉಲ್ಲಿಖಿತವಾಗುವ ಯಾವುದೇ ದಸ್ತಾವೇಜು, ಈ ಅಧಿನಿಯಮ ಅಥವಾ ಈ ಅಧಿನಿಯಮದ ಸಂವಾದಿ ಉಪಬಂಧಕ್ಕೆ ಉಲ್ಲಿಖಿತವಾಗುವುದೆಂದು ಅರ್ಥೈಸತಕ್ಕದ್ದು;

(ಡಿ) ನಿರಸಿತ ಅಧಿನಿಯಮಿತಿಯ ಉಪಬಂಧಗಳ ಅನುಸಾರವಾಗಿ ನೋಂದಣಿ ಅಧಿಕಾರಿಯು ವಿಭಿನ್ನತಾ ಗುರುತುಗಳನ್ನು ಕೊಡುವುದು ಮತ್ತು ಅವುಗಳನ್ನು ಮೋಟಾರು ವಾಹನಗಳ ಮೇಲೆ ಪ್ರದರ್ಶಿಸುವ ರೀತಿಯು, ಈ ಅಧಿನಿಯಮದ ಪ್ರಾರಂಭದ ತರುವಾಯ, ಈ ಅಧಿನಿಯಮದ 41ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆ ಹೊರಡಿಸುವವರೆಗೆ ಜಾರಿಯಲ್ಲಿ ಮುಂದುವರೆಯತಕ್ಕದ್ದು;

(ಇ) ಮೋಟಾರು ವಾಹನಗಳ ಅಧಿನಿಯಮ, 1939ರ 68ಸಿ ಪ್ರಕರಣದ ಮೇರೆಗೆ ಅಥವಾ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು, ಯಾವುದಾದರೂ ಇದ್ದರೆ ಅದರ ಮೇರೆಗೆ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಯೋಜನೆಯನ್ನು ಈ ಅಧಿನಿಯಮದ 100ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ವಿಲೆ ಮಾಡತಕ್ಕದ್ದು;

(ಎಫ್) ಮೋಟಾರು ವಾಹನಗಳ ಅಧಿನಿಯಮ, 1939ರ 68ಎಫ್ ಪ್ರಕರಣದ (1ಎ) ಉಪಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಉಪಬಂಧಗಳು ಯಾವುವಾದರೂ ಇದ್ದರೆ, ಅವುಗಳ ಮೇರೆಗೆ ನೀಡಲಾದ ಪರ್ಮಿಟ್ಟುಗಳು ಈ ಅಧಿನಿಯಮದ VIನೇ ಅಧ್ಯಾಯದ ಮೇರೆಗೆ ಅನುಮೋದಿತ ಯೋಜನೆಯು ಪ್ರಕಟವಾಗುವವರೆಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದು.

(3) ನಿರಸಿತವಾದ ಯಾವುದೇ ಅಧಿನಿಯಮಿತಿಯ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ದಂಡವನ್ನು, ನಿರಸಿತವಾದ ಅಧಿನಿಯಮದ ಮೇರೆಗೆ ಅಂಥ ದಂಡವನ್ನು ವಸೂಲು ಮಾಡಲು ಈಗಾಗಲೇ ಕೈಗೊಂಡ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ವಸೂಲು ಮಾಡಬಹುದು.

(4) ಈ ಪ್ರಕರಣದಲ್ಲಿ ನಿರ್ದಿಷ್ಟ ವಿಷಯಗಳನ್ನು ನಮೂದಿಸಿರುವುದು, ನಿರಸನಗಳ ಪರಿಣಾಮಗಳಿಗೆ ಸಂಬಂಧಿಸಿದಂತೆ, ಸಾಮಾನ್ಯ ಖಂಡಗಳ ಅಧಿನಿಯಮ, 1897ರ 6ನೇ ಪ್ರಕರಣದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗಿರುವುದೆಂದು ಅಥವಾ ಬಾಧಕವನ್ನುಂಟುಮಾಡುವುದೆಂದು ಭಾವಿಸತಕ್ಕದ್ದಲ್ಲ.

217ಎ. ಮೋಟಾರು ವಾಹನಗಳ ಅಧಿನಿಯಮ, 1939ರ ಮೇರೆಗೆ ಮಂಜೂರು ಮಾಡಲಾದ ಪರ್ಮಿಟ್‌ಗಳ, ಚಾಲನಾ ಲೈಸನ್ಸ್‌ಗಳ ಮತ್ತು ನೋಂದಣಿಯ ನವೀಕರಣ:- ಆ ಉಪಪ್ರಕರಣದಲ್ಲಿ 217ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿನಿಯಮಿತಿಗಳನ್ನು ಆ ಉಪಪ್ರಕರಣದ ಮೂಲಕ ನಿರಸನಗೊಳಿಸಿದ್ದರೂ, ಸದರಿ ಅಧಿನಿಯಮಿತಿಗಳ ಮೇರೆಗೆ ನೀಡಲಾದ ಅಥವಾ ಮಂಜೂರು ಮಾಡಲಾದ ಯಾವುದೇ ಸದೃಢತೆಯ ಅಥವಾ ನೋಂದಣಿಯ ಪ್ರಮಾಣ ಪತ್ರ ಅಥವಾ ಲೈಸೆನ್ಸ್ ಅಥವಾ ಪರ್ಮಿಟ್‌ನ್ನು ಈ ಅಧಿನಿಯಮದ ಮೇರೆಗೆ ನವೀಕರಿಸಬಹುದು.

ಮೊದಲನೇ ಅನುಸೂಚಿ


(116 ಮತ್ತು 119 ನೇ ಪ್ರಕರಣಗಳನ್ನು ನೋಡಿ)

ಸಂಚಾರ ಚಿಹ್ನೆಗಳು

ಭಾಗ - ಎ ಕಡ್ಡಾಯ ಚಿಹ್ನೆಗಳು

ಸಂಖ್ಯೆ - 1

ವೇಗಮಿತಿ




ಟಿಪ್ಪಣಿಗಳು : (1) ಅಂಕಿ 20 ನ್ನು ಕೇವಲ ಒಂದು ಉದಾಹರಣೆಯಾಗಿ ಕೊಡಲಾಗಿದೆ. ವಾಸ್ತವ ಅಂಕಿಗಳು ಈ ಚಿಹ್ನೆಯನ್ನು ಬಳಸುವ ಪ್ರತಿಯೊಂದು ಸಂದರ್ಭದಲ್ಲಿಯೂ ಗೊತ್ತುಮಾಡಿದ ಅಂಕಿಗಳಾಗಿರತಕ್ಕದ್ದು.


(2) ಕಂಬದ ಸಾಮಾನ್ಯ ವಿನ್ಯಾಸವನ್ನು ಮಾರ್ಗದರ್ಶನಕ್ಕಾಗಿ ನೀಡಲಾಗಿದೆ.


(3) ವೇಗಮಿತಿಯನ್ನು ಒಂದು ನಿರ್ದಿಷ್ಟ ವರ್ಗದ ಅಥವಾ ವರ್ಗಗಳ ಮೋಟಾರು ವಾಹನಗಳಿಗೆ ಮಾತ್ರವೇ ವಿಧಿಸಿರುವಲ್ಲಿ ಅಥವಾ ವಿಧಿಸಬೇಕಾಗಿರುವಲ್ಲಿ, ಆ ವರ್ಗ ಅಥವಾ ವರ್ಗಗಳನ್ನು "ವಿವರಣಾ ಫಲಕ"ದಲ್ಲಿ ನಿರ್ದಿಷ್ಟಪಡಿಸಲಾಗುವುದು. ಇತರ ಮೋಟಾರು ವಾಹನಗಳಿಗೆ ವಿಧಿಸಿರುವ ಸಾಮಾನ್ಯ ವೇಗಮಿತಿಯೊಂದಿಗೆ ನಿರ್ದಿಷ್ಟ ವರ್ಗ ಅಥವಾ ವರ್ಗಗಳ ಮೋಟಾರು ವಾಹನಗಳಿಗೆ ವಿಶೇಷ ವೇಗಮಿತಿಯನ್ನು ವಿಧಿಸಿರುವಲ್ಲಿ ಅಥವಾ ವಿಧಿಸಬೇಕಾಗಿರುವಲ್ಲಿ, ಸಾಮಾನ್ಯ ವೇಗಮಿತಿಯನ್ನು ಗುಂಡುಫಲಕದ ಮೇಲೆ ನಿರ್ದಿಷ್ಟಪಡಿಸಲಾಗುವುದು ಮತ್ತು ವಿಶೇಷ ವೇಗಮಿತಿಯನ್ನು ಅದು ಯಾವ ವರ್ಗದ ಅಥವಾ ವರ್ಗಗಳ ಮೋಟಾರು ವಾಹನಗಳಿಗೆ ಅನ್ವಯಿಸುವುದೋ ಅವುಗಳೊಂದಿಗೆ 'ವಿವರಣಾ ಫಲಕ'ದ ಮೇಲೆ ನಿರ್ದಿಷ್ಟಪಡಿಸಲಾಗುವುದು.

(4) ಸಂಚಾರ ಚಿಹ್ನೆಗಳ ಮೇಲೆ ಬಳಸಬೇಕಾದ ಬಣ್ಣಗಳು ಹೊಳೆಯುವಂಥದ್ದಾಗಿರಬೇಕು.

ಸಂಖ್ಯೆ - 2

ತೂಕದ ಮಿತಿ








ಸಂಖ್ಯೆ - 3

ಸಂಪೂರ್ಣ ನಿಷೇಧ


ಸಂಖ್ಯೆ - 4

ದಿಕ್ಸೂಚಿ ಚಿಹ್ನೆ



ಸಂಖ್ಯೆ - 5


ವಾಹನಗಳನ್ನು ನಿಲ್ಲಿಸಕೂಡದು




ಟಿಪ್ಪಣಿ :- ಈ ಭಾಗದ 1ನೇ ಚಿಹ್ನೆಯಲ್ಲಿ ವಿವರಿಸಿರುವ ಸಾಮಾನ್ಯ ಏರ್ಪಾಟಿನಂತೆ ಇಲ್ಲಿ ಹೇಳಿರುವಂತೆ ಚಿಹ್ನೆ ಸಂಖ್ಯೆ 5 ನ್ನು ಅದರ ಅಡಿಯಲ್ಲಿ ಇರಿಸಿದ ವಿವರಣಾ ಫಲಕದಲ್ಲಿ ಬರೆದ ಸೂಚನೆಗಳಿಂದ ವಿಶದಗೊಳಿಸಬಹುದು. ವಿವರಣಾ ಫಲಕದ ಮೇಲೆ ಯಾವ ಕಾಲಗಳಲ್ಲಿ ವಾಹನ ನಿಲ್ಲಿಸುವುದನ್ನು ನಿಷೇಧಿಸಲಾಗಿದೆ ಎಂಬುದನ್ನು ತಿಳಿಸಬಹುದು. ಇದೇ ರೀತಿ ವಿವರಣಾ ಫಲಕದ ಮೇಲೆ ಬರೆಯಲಾದ ಒಂದು ಬಾಣದ ತುದಿಯು, ಬಾಣದ ತುದಿಯು ನಿರ್ದೇಶಿಸುತ್ತಿರುವ ಚಿಹ್ನೆಯ ಪಕ್ಕದಲ್ಲಿ ಇರುವ ಬೀದಿಯ ಅಥವಾ ರಸ್ತೆಯ ಭಾಗದಲ್ಲಿ ವಾಹನ ನಿಲ್ಲಿಸುವುದನ್ನು ನಿಷೇಧಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.


ಸಂಖ್ಯೆ - 6

ಮುಂದಿನ ವಾಹನವನ್ನು
ದಾಟಿಹೋಗುವುದನ್ನು ನಿಷೇಧಿಸಲಾಗಿದೆ




ಸಂಖ್ಯೆ - 7


ಶಬ್ಧ ಸಂಕೇತಗಳ ಬಳಕೆಯನ್ನು
ನಿಷೇಧಿಸಲಾಗಿದೆ



| | | |
|---|---|---|
| ಅಡ್ಡ ಗುರುತು ಮತ್ತು ಅಂಚು | - | ಕೆಂಪು |
| ಹಿನ್ನೆಲೆ | - | ಬಿಳಿ |
| ಚಿತ್ರ | - | ಕಪ್ಪು |

ಸಂಖ್ಯೆ - 8

ಮುಂದೆ ಮುಖ್ಯ ರಸ್ತೆ




## ಭಾಗ - ಬಿ


## ಎಚ್ಚರಿಕೆ ಚಿಹ್ನೆಗಳು

**ಈ ಭಾಗದ ಚಿಹ್ನೆಗಳು ಕೆಂಪು ತ್ರಿಕೋನಾಕಾರದ ಫಲಕದ ಜೊತೆಯಲ್ಲಿ ಉಪಯೋಗಿಸತಕ್ಕದ್ದು. ಮತ್ತು ಅದರ ಮಧ್ಯ ಭಾಗವನ್ನು ಕೆಳಗೆ ಬರೆದ ಸಾಮಾನ್ಯ ರೇಖಾಚಿತ್ರದಲ್ಲಿ ತೋರಿಸಿದ ರೀತಿಯಲ್ಲಿ ಖಾಲಿ ಬಿಡಬಹುದು ಅಥವಾ ಬಿಳಿ ಬಣ್ಣ ಬಳಿದಿರಬೇಕು.**


ಸಾಮಾನ್ಯ ರೇಖಾಚಿತ್ರ




ಸಂಖ್ಯೆ 1
**ಒರಟು ದಾರಿ**





ಸಂಖ್ಯೆ 2
**ಅಂಕು ಡೊಂಕು**
**(ಬಲಕ್ಕೆ)**




ಸಂಖ್ಯೆ 2
**ಅಂಕು ಡೊಂಕು**
**(ಎಡಕ್ಕೆ)**





ಸಂಖ್ಯೆ 3
**ಅಡ್ಡ ರಸ್ತೆಗಳು**




ಸಂಖ್ಯೆ 4
**ರೈಲು ರಸ್ತೆ ದಾಟು ಜಾಗ**
**(ರಕ್ಷಿತ)**





ಸಂಖ್ಯೆ 5
**ರೈಲು ರಸ್ತೆ ದಾಟು ಜಾಗ**
**(ಅರಕ್ಷಿತ)**





ಸಂಖ್ಯೆ 6
**ಬಲಕ್ಕೆ ತಿರುಗಿ**





ಸಂಖ್ಯೆ 6
**ಎಡಕ್ಕೆ ತಿರುಗಿ**




ಸಂಖ್ಯೆ 7
**ಶಾಲೆ**





ಸಂಖ್ಯೆ 8
**ತುತ್ತ ತುದಿ ಅಡ್ಡ ರಸ್ತೆ**




ಸಂಖ್ಯೆ 9
**ಪಕ್ಕದ ರಸ್ತೆ (ಬಲಗಡೆ)**





ಸಂಖ್ಯೆ 9
**ಪಕ್ಕದ ರಸ್ತೆ (ಎಡಗಡೆ)**




ಸಂಖ್ಯೆ 10
**ಕಡಿದಾದ ಬೆಟ್ಟ**





ಸಂಖ್ಯೆ 11
**ಹಾಯ್ದಡ**




ಸಂಖ್ಯೆ 12
**ಹೇರ್‌ಪಿನ್ ತಿರುವು (ಬಲಕ್ಕೆ)**




ಸಂಖ್ಯೆ 12
**ಹೇರ್ ಪಿನ್ ತಿರುವು (ಎಡಕ್ಕೆ)**




ಸಂಖ್ಯೆ 13
**ಇಕ್ಕಟ್ಟಾದ ಸೇತುವೆ**




ಭಾಗ - ಸಿ

# ತಿಳಿವಳಿಕೆ ಕೊಡುವ ಚಿಹ್ನೆಗಳು


ಸಂಖ್ಯೆ 1
ಪ್ರವಾಹ ಮಾಪಕ ಪಕ್ಕದ ಎತ್ತರ





ಸಂಖ್ಯೆ 2
ರಸ್ತೆ ಕೂಡುದಾರಿ




ಸಂಖ್ಯೆ 3
ವೇಗದ ಮಿತಿಯ ಅಂತ್ಯ




ಸಂಖ್ಯೆ 4
ವಾಹನ ನಿಲ್ಲಿಸುವ ಸ್ಥಳದ ಚಿಹ್ನೆ



# ಎರಡನೇ ಅನುಸೂಚಿ

## (163 ಎ ಪ್ರಕರಣವನ್ನು ನೋಡಿ)

## ಮೂರನೇ ಪಕ್ಷಕಾರನ ಪ್ರಾಣಾಂತಿಕ ಅಪಘಾತಗಳು / ಕ್ಷತಿಯ ಪ್ರಕರಣಗಳ ನಷ್ಟ ಪರಿಹಾರದ ಅನುಸೂಚಿ

1. ಪ್ರಾಣಾಂತಿಕ ಅಪಘಾತಗಳು :

| ವಾರ್ಷಿಕ ಆದಾಯ | | ರೂ. 3000 | ರೂ. 4200 | ರೂ. 5400 | ರೂ. 6600 | ರೂ. 7800 | ರೂ. 9000 | ರೂ. 10200 | ರೂ. 11400 | ರೂ. 12000 | ರೂ. 18000 | ರೂ. 24000 | ರೂ. 36000 | ರೂ. 40000 |
|---|---|---|---|---|---|---|---|---|---|---|---|---|---|---|
| ಬಲಿಯಾದವನ ವಯಸ್ಸು | ಗುಣಕಗಳು | ಸಾವಿರ ರೂಪಾಯಿಗಳಲ್ಲಿ ಮರಣದ ಪ್ರಕರಣದಲ್ಲಿ ನಷ್ಟ ಪರಿಹಾರ | | | | | | | | | | | | |
| | | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. |
| 15 ವರ್ಷದವರೆಗೆ | 15 | 60 | 84 | 108 | 132 | 156 | 180 | 204 | 228 | 240 | 360 | 480 | 720 | 800 |
| 15 ವರ್ಷಕ್ಕೆ ಮೇಲ್ಪಟ್ಟಿದ್ದು 20 ವರ್ಷ ಮೀರದಿದ್ದರೆ | 16 | 57 | 79.8 | 102 | 125.4 | 148.2 | 171 | 193.8 | 216.6 | 228 | 342 | 456 | 684 | 760 |
| 20 ವರ್ಷಕ್ಕೆ ಮೇಲ್ಪಟ್ಟಿದ್ದು 25 ವರ್ಷ ಮೀರದಿದ್ದರೆ | 17 | 54 | 75.6 | 97.2 | 118.8 | 140.4 | 162 | 183.6 | 205.2 | 216 | 324 | 432 | 648 | 720 |
| 25 ವರ್ಷಕ್ಕೆ ಮೇಲ್ಪಟ್ಟಿದ್ದು 30 ವರ್ಷ ಮೀರದಿದ್ದರೆ | 18 | 51 | 71.4 | 91.8 | 112.2 | 132.6 | 153 | 173.4 | 193.8 | 204 | 306 | 408 | 612 | 680 |
| 30 ವರ್ಷಕ್ಕೆ ಮೇಲ್ಪಟ್ಟಿದ್ದು 35 ವರ್ಷ ಮೀರದಿದ್ದರೆ | 17 | 50 | 67.2 | 86.4 | 105.6 | 124.8 | 144 | 163.2 | 192.4 | 192 | 288 | 384 | 576 | 640 |
| 35 ವರ್ಷಕ್ಕೆ ಮೇಲ್ಪಟ್ಟಿದ್ದು 40 ವರ್ಷ ಮೀರದಿದ್ದರೆ | 16 | 50 | 63 | 81 | 99 | 117 | 135 | 153 | 171 | 180 | 270 | 380 | 540 | 600 |
| 40 ವರ್ಷಕ್ಕೆ ಮೇಲ್ಪಟ್ಟಿದ್ದು 45 ವರ್ಷ ಮೀರದಿದ್ದರೆ | 15 | 50 | 58.8 | 75.6 | 92.4 | 109.2 | 126 | 142.8 | 159.6 | 168 | 252 | 336 | 504 | 560 |
| 45 ವರ್ಷಕ್ಕೆ ಮೇಲ್ಪಟ್ಟಿದ್ದು 50 ವರ್ಷ ಮೀರದಿದ್ದರೆ | 13 | 50 | 50.4 | 64.8 | 79.2 | 93.6 | 108 | 122.4 | 136.8 | 144 | 216 | 286 | 432 | 480 |
| 50 ವರ್ಷಕ್ಕೆ ಮೇಲ್ಪಟ್ಟಿದ್ದು 55 ವರ್ಷ ಮೀರದಿದ್ದರೆ | 11 | 50 | 50 | 54 | 66 | 78 | 90 | 102 | 114 | 120 | 180 | 240 | 360 | 400 |
| 55 ವರ್ಷಕ್ಕೆ ಮೇಲ್ಪಟ್ಟಿದ್ದು 60 ವರ್ಷ ಮೀರದಿದ್ದರೆ | 8 | 50 | 50 | 50 | 52.8 | 62.4 | 72 | 81.6 | 91.2 | 96 | 144 | 192 | 286 | 320 |
| 60 ವರ್ಷಕ್ಕೆ ಮೇಲ್ಪಟ್ಟಿದ್ದು 65 ವರ್ಷ ಮೀರದಿದ್ದರೆ | 5 | 50 | 50 | 50 | 50 | 50 | 54 | 61.2 | 68.4 | 72 | 108 | 144 | 216 | 240 |
| 65 ವರ್ಷಕ್ಕೂ ಮೇಲ್ಪಟ್ಟು | 5 | 50 | 50 | 50 | 50 | 50 | 50 | 51 | 57 | 60 | 90 | 120 | 180 | 200 |

ಟಿಪ್ಪಣಿ : ಪ್ರಾಣಾಂತಿಕ ಅಪಘಾತದ ಕ್ಲೇಮುಗಳ ಸಂದರ್ಭದಲ್ಲಿ ನೀಡಲು ನಿರ್ಧರಿಸಲಾದ ಪರಿಹಾರದ ಮೊಬಲಗನ್ನು, ಅಪಘಾತಕ್ಕೆ ತುತ್ತಾದ ವ್ಯಕ್ತಿಯು ಜೀವಂತವಾಗಿದ್ದರೆ ತನ್ನನ್ನು ತಾನು ಪೋಷಿಸಿಕೊಳ್ಳಲು ತಗಲಬಹುದಾದ ವೆಚ್ಚವನ್ನು ಪರಿಗಣಿಸಿ 1/3 ಭಾಗದಷ್ಟು ಕಡಿಮೆ ಮಾಡತಕ್ಕದ್ದು.

2. ಪರಿಹಾರದ ಮೊಬಲಗು 50,000 ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ :

3. ಸಾಮಾನ್ಯ ನಷ್ಟ ಪರಿಹಾರ (ಮರಣದ ಸಂದರ್ಭದಲ್ಲಿ) :

ಮೇಲೆ ನಿರೂಪಿಸಲಾದ ಪರಿಹಾರಗಳ ಜೊತೆಗೆ ಈ ಕೆಳಕಂಡ ಸಾಮಾನ್ಯ ಪರಿಹಾರಗಳನ್ನು ಸಂದಾಯ ಮಾಡತಕ್ಕದ್ದು.

| | | |
|---|---|---|
| (i) | ಅಂತ್ಯ ಸಂಸ್ಕಾರ ವೆಚ್ಚಗಳು | 2,000 ರೂ.ಗಳು |
| (ii) | ಫಲಾನುಭವಿಯು ಪತಿ / ಪತ್ನಿಯಾಗಿದ್ದರೆ ದಾಂಪತ್ಯ ನಷ್ಟ | 5,000 ರೂ.ಗಳು |
| (iii) | ಸಂಪದ ನಷ್ಟ | 2,500 ರೂ.ಗಳು |
| (iv) | ವೈದ್ಯಕೀಯ ವೆಚ್ಚಗಳು - ಮರಣಕ್ಕೆ ಮುಂಚೆ ಮಾಡಿದ ವಾಸ್ತವಿಕ ವೆಚ್ಚಗಳಿಗೆ ಬಿಲ್ಲುಗಳು / ವೋಚರುಗಳನ್ನು ಹಾಜರುಪಡಿಸಬೇಕು ಆದರೆ ಅದರ ಗರಿಷ್ಟ ಮಿತಿ. | 15,000 ರೂ.ಗಳು |

4. ಕ್ಷತಿ ಮತ್ತು ಅಸಮರ್ಥತೆಗಳ ಸಂದರ್ಭದಲ್ಲಿ ಸಾಮಾನ್ಯ ಪರಿಹಾರ :

| | | |
|---|---|---|
| (i) | ನೋವು ಮತ್ತು ಬಳಲುವಿಕೆಗೆ | |
| (ಎ) | ತೀವ್ರತರ ಗಾಯಗಳು | 5,000 ರೂ.ಗಳು |
| (ಬಿ) | ತೀವ್ರತರವಲ್ಲದ ಗಾಯಗಳು | 1,000 ರೂ.ಗಳು |
| (ii) | ವೈದ್ಯಕೀಯ ವೆಚ್ಚಗಳು - ವಾಸ್ತವಿಕವಾಗಿ ಮಾಡಿದ ವೆಚ್ಚಗಳಿಗೆ ಬಿಲ್ಲುಗಳು / ವೋಚರುಗಳನ್ನು ಹಾಜರುಪಡಿಸಬೇಕು. ಒಂದು ಸಲದ ಸಂದಾಯಕ್ಕೆ ಗರಿಷ್ಠ ಮಿತಿ | 15,000 ರೂ.ಗಳು |

5. ಪ್ರಾಣಾಂತಿಕವಲ್ಲದ ಅಪಘಾತಗಳಲ್ಲಿ ಅಸಮರ್ಥತೆ:-

ಪ್ರಾಣಾಂತಿಕವಲ್ಲದ ಅಪಘಾತಗಳಿಂದ ಅಸಮರ್ಥತೆಗೆ ತುತ್ತಾದ ಸಂದರ್ಭದಲ್ಲಿ ಈ ಕೆಳಕಂಡಂತೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

ನಷ್ಟವೇನಾದರೂ ಉಂಟಾದ ಸಂದರ್ಭಗಳಲ್ಲಿ ಐವತ್ತೆರಡು ವಾರಗಳನ್ನು ಮೀರದ ವಾಸ್ತವಿಕ ಅಸಮರ್ಥತೆಯ ಅವಧಿಗೆ ಈ ಕೆಳಕಂಡವುಗಳ ಪೈಕಿ ಯಾವುದೇ ಒಂದು ಸಂದಾಯವಾಗತಕ್ಕದ್ದು :

(ಎ) ಖಾಯಂ ಆಗಿ ಸಂಪೂರ್ಣ ಅಸಮರ್ಥತೆ ಉಂಟಾದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು. ನಷ್ಟ ಪರಿಹಾರವನ್ನು ನಿರ್ಧರಿಸುವ ದಿನಾಂಕದಂದು ಇರುವ ಅವನ ವಯಸ್ಸಿಗೆ ಅನ್ವಯವಾಗುವ ಗುಣಕದಿಂದ ವಾರ್ಷಿಕ ಆದಾಯ ನಷ್ಟಕ್ಕೆ ಗುಣಿಸುವ ಮೂಲಕ ಬರುವ ಮೊತ್ತವು ಆಗಿರತಕ್ಕದ್ದು.

(ಬಿ) ಖಾಯಂ ಭಾಗಶಃ ಅಸಮರ್ಥತೆಯ ಸಂದರ್ಭದಲ್ಲಿ, ಮೇಲ್ಕಂಡ (ಎ) ಬಾಬ್ತಿನ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಖಾಯಂ ಸಂಪೂರ್ಣ ಅಸಮರ್ಥತೆ ಉಂಟಾದ ಸಂದರ್ಭದಲ್ಲಿ ಸಂದಾಯ ಮಾಡಬಹುದಾದ ನಷ್ಟ ಪರಿಹಾರದ ಶೇಕಡಾವಾರು.

ಖಾಯಂ ಪೂರ್ಣ ಅಸಮರ್ಥತೆ / ಖಾಯಂ ಭಾಗಶಃ ಅಸಮರ್ಥತೆ ಉಂಟಾಗಿದೆಯೆಂದು ಭಾವಿಸಲಾದ ಕ್ಷತಿಗಳಿಗೆ ಮತ್ತು ಗಳಿಕೆ ಸಾಮರ್ಥ್ಯದ ನಷ್ಟದ ಶೇಕಡಾವಾರು ಪ್ರಮಾಣವು ಅನುಸೂಚಿ I ರ ಪ್ರಕಾರ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923 ರ ಮೇರೆಗೆ ಇರತಕ್ಕದ್ದು.

6. ಅಪಘಾತಕ್ಕೆ ಮುಂಚೆ ಯಾವುದೇ ಆದಾಯವನ್ನು ಹೊಂದಿಲ್ಲದ ವ್ಯಕ್ತಿಗೆ ನಷ್ಟ ಪರಿಹಾರದ ಲೆಕ್ಕಹಾಕುವ ಸಲುವಾಗಿ ರಾಷ್ಟ್ರೀಯ ಆದಾಯ :-

ಪ್ರಾಣಾಂತಿಕ ಅಪಘಾತಗಳು ಮತ್ತು ಪ್ರಾಣಾಂತಿಕವಲ್ಲದ ಅಪಘಾತಗಳಲ್ಲಿ ಅಸಮರ್ಥತೆ:-

| | | |
|---|---|---|
| (ಎ) | ಗಳಿಕೆಯಲ್ಲಿ ವ್ಯಕ್ತಿಗಳು | ವಾರ್ಷಿಕ15,000 ರೂ.ಗಳು |
| (ಬಿ) | ಪತಿ / ಪತ್ನಿ | ಉಳಿದುಕೊಂಡಿರುವ ಪತಿ / ಪತ್ನಿಯ ಗಳಿಕೆಯ ಆದಾಯ 3 / 1 ರಷ್ಟು ಹಣ |

ಇತರ ಕ್ಷತಿಗಳ ಸಂದರ್ಭಧಲ್ಲಿ "ಸಾಮಾನ್ಯ ಹಾನಿಯ ಮಾನದಂಡ ಮಾತ್ರವೇ ಅನ್ವಯವಾಗುತ್ತದೆ."

* * * * *

Government Press, Peenya, Bangalore WD-LA - DTP - P3